# ಅಧ್ಯಾಯ 6

# ಬ್ಯಾಂಕಿಂಗ್, ಹಣಕಾಸು ವ್ಯವಹಾರ, ವ್ಯಾಪಾರ ಮತ್ತು ವಾಣಿಜ್ಯ

ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ, ಕೈಗಾರಿಕೆಗಳು, ಮುಖ್ಯ ಉತ್ಪಾದನಾ ಮೂಲಗಳಾದರೆ ಅವುಗಳಿಗೆ ಬೇಕಾಗುವ ಬಂಡವಾಳ, ಹಣಕಾಸು ಒದಗಿಸುವ ವ್ಯವಸ್ಥೆ, ಬ್ಯಾಂಕಿಂಗ್ ಹಾಗೂ ಪತ್ತಿನ ಮತ್ತು ಇತರ ಅನುಕೂಲಕ್ಕಾಗಿ ರೂಪಿಸಿದ ಸಹಕಾರ ವ್ಯವಸ್ಥೆ ಅಷ್ಟೇ ಮಹತ್ವದ ಅಂಶಗಳಾಗಿವೆ. ಉತ್ಪಾದಿತ ವಸ್ತುಗಳ ವಿತರಣೆ ಅಥವಾ ಬಳಕೆದಾರರಿಗೆ ಮುಟ್ಟಿಸುವ ವಾಣಿಜ್ಯ ವ್ಯವಸ್ಥೆ ಕೂಡ ಅಷ್ಟೇ ಗಣನೀಯವಾದುದು. ಪ್ರಸಕ್ತ ಅಧ್ಯಾಯದಲ್ಲಿ ಈ ಎಲ್ಲ ಸಂಗತಿಗಳ ವಿವಿಧ ಮುಖಗಳನ್ನು ಪರಿಚಯಿಸಲಾಗಿದೆ.

ಸುಸಂಘಟಿತ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು ಒಂದು ಪ್ರದೇಶದ ಆರ್ಥಿಕಾಭಿವೃದ್ಧಿಗೆ ಸಹಾಯಕವಾದರೆ ಅದಕ್ಕೆ ಪೂರಕವಾಗಿ ವ್ಯಾಪಾರ, ವಾಣಿಜ್ಯ ಮತ್ತು ಮಾರುಕಟ್ಟೆಯ ಚಟುವಟಿಕೆಗಳು ವೃದ್ಧಿಗೊಂಡು ಆಯಾ ಪ್ರದೇಶಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಜೀವನದ ಮೇಲೆ ತಮ್ಮದೇ ಆದ ಪ್ರಭಾವ ಬೀರುತ್ತವೆ. ಬದಲಾಗುತ್ತಿರುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳನ್ನನುಸರಿಸಿ ಇತ್ತೀಚಿನ ದಶಕಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ತನ್ನದೇ ಆದ ರೀತಿಯಲ್ಲಿ ಸ್ಪಂದಿಸುತ್ತಿರುವುದನ್ನೂ, ಹೊಸ ಆಯಾಮಗಳನ್ನು ಅಳವಡಿಸಿಕೊಳ್ಳುತ್ತಿರುವುದನ್ನೂ ರಾಜ್ಯದ ಇತರ ಭಾಗಗಳಲ್ಲಿ ಕಾಣುತ್ತಿರುವಂತೆ ಕೊಡಗು ಜಿಲ್ಲೆಯ ಅಧ್ಯಯನದಲ್ಲೂ ಕಾಣಬಹುದು.

## ಬ್ಯಾಂಕಿಂಗ್ ಮತ್ತು ಹಣಕಾಸು

ಇಪ್ಪತ್ತನೇಯ ಶತಮಾನದ ಆದಿಭಾಗದಲ್ಲಿ ಬೀಜಾಂಕುರಗೊಂಡ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ರೂಪಗೊಳ್ಳುವ ಮೊದಲು ದೇಶದ ಇತರ ಭಾಗಗಳಲ್ಲಿದ್ದಂತೆ ಇಲ್ಲಿಯೂ ಕೂಡ ಖಾಸಗೀ ಸಾಹುಕಾರರು, ವರ್ತಕರು, ಶ್ರೀಮಂತರು, ಜಮೀನುದಾರರು,ಅಧಿಕಾರ ವರ್ಗದವರು ರಾಜಪರಿವಾರದವರು ತಮ್ಮದೇ ಆದ ರೀತಿಯಲ್ಲಿ ಸ್ಥಾನಿಕವಾಗಿ ಲೇವಾದೇವಿ ವ್ಯವಹಾರದಲ್ಲಿ ತೊಡಗಿಸಿ ಕೊಂಡಿರುವುದು ಸರ್ವೇಸಾಮಾನ್ಯವಾಗಿತ್ತು. 1807ರಲ್ಲಿ ರಚಿತವಾದ ರಾಜೇಂದ್ರನಾಮೆಯಲ್ಲಿ ಲೇವಾದೇವಿ ವ್ಯವಹಾರವನ್ನು ಕುರಿತಂತೆ ಈ ರೀತಿ ಉಲ್ಲೇಖಿಸಲಾಗಿದೆ. "ಲೇವಾದೇವಿಯಲ್ಲಿ ಸುಳ್ಳು-ಸಟೆ ದಗಲಬಾಜಿ, ವಿಶ್ವಾಸಘಾತಕ,ಕಳ್ಳತನ, ತಂಟೆತಕರಾರು, ಚಾಡಿ, ಕ್ಷುದ್ರ ಹೇಳಿ ನ್ಯಾಯ ಮಾಡುವುದು, ಮುಂತಾದ ಅನ್ಯಾಯ ಮಾರ್ಗವಿಡಿದು ಹೋಗುವಂತ ಜನರ ಮೇಲೆ ನಮ್ಮ ದಯಾ ಒಳಿತಾಗಿ ಬರಲಿಕ್ಕಿಲ್ಲ" (ರಾಜೇಂದ್ರನಾಮೆ, ಪು. 234). ಈ ಮೇಲಿನ ಉಲ್ಲೇಖವು ಕೊಡಗಿನಲ್ಲಿದ್ದ ಲೇವಾದೇವಿಯ ವ್ಯವಹಾರವನ್ನು ಪ್ರಸ್ತಾಪಿಸುವುದಲ್ಲದೆ ಈ ಬಗ್ಗೆ ಪ್ರಭುತ್ವವು ಅನುಸರಿಸುತ್ತಿದ್ದ ನೀತಿಯನ್ನು ಸೂಚಿಸುತ್ತದೆ.

ಜಿಲ್ಲೆಗೆ ಅನ್ವಯಿಸುವಂತೆ 'ಬ್ಯಾಂಕಿಂಗ್ ಇನ್‌ಕ್ವಾಯರಿ ಕಮಿಟಿ (1931)' ಮತ್ತು 'ಕೊಡಗಿನ ಆರ್ಥಿಕ ಸಮೀಕ್ಷಾ

ವರದಿಗಳು (1935') ಲೇವಾದೇವಿ ವ್ಯವಹಾರದ ವಿವರಗಳನ್ನಾಗಲೀ ಅದರ ಅಸ್ತಿತ್ವವನ್ನಾಗಲೀ ಉಲ್ಲೇಖಿಸುವುದಿಲ್ಲ. ಜಿಲ್ಲೆಯ ಆರ್ಥಿಕ ವರದಿ ಉಲ್ಲೇಖಿಸುವಂತೆ "ಭಾರತದ ಇತರ ಭಾಗಗಳಿಗೆ ಹೋಲಿಸಿದರೆ ವೃತ್ತಿನಿರತ ಲೇವಾದೇವಿಗಾರರು ಈ ಭಾಗದಲ್ಲಿ ವಿರಳವೆಂದು ಹೇಳಬಹುದು. ಈ ಭಾಗದ ಖಾಸಗೀ ಸಾಹುಕಾರರು ಸಾಮಾನ್ಯವಾಗಿ ರೂಢಿಸಿಕೊಂಡಿದ್ದ ವೃತ್ತಿ ಮನೋಭಾವನೆಯಿಂದ ಹೊರತಾಗಿ, ಬಡವರನ್ನು, ಅಸಹಾಯಕರನ್ನು ದೋಚಿ ಶ್ರೀಮಂತರಾಗಿರುವ ಉದಾಹರಣೆಗಳು ಇಲ್ಲಿ ವಿರಳವೆಂದು ಹೇಳಬಹುದು. ಅಲ್ಲದೇ ಕೊಡಗಿನ ಲೇವಾದೇವಿಗಾರರು ಅಥವಾ ಖಾಸಗೀ ಸಾಹುಕಾರರು ವಿಧಿಸುತ್ತಿದ್ದ ಬಡ್ಡಿ ದರಗಳು ಸೌಮ್ಯಸ್ವರೂಪವಾಗಿದ್ದವು. ಮೈಸೂರು ಸೀಮೆಯ ಕೆಲವು ಖಾಸಗೀ ಸಾಹುಕಾರರು ಕೊಡಗಿನ ಉತ್ತರ ಭಾಗದಲ್ಲೂ ಹಣದ ಕೊಡು ಕೊಳ್ಳುವಿಕೆಯಲ್ಲೂ ತೊಡಗಿದ್ದರು". (ಕೊ.ಆ.ಸ.ವರದಿ 1935).

ಸಾಮಾನ್ಯವಾಗಿ ಉತ್ತರ ಕೊಡಗಿನಲ್ಲಿ ವೈಶ್ಯರು ಬಹು ಪಾಲು ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುತ್ತಿದ್ದರೆ ದಕ್ಷಿಣ ಕೊಡಗಿನಲ್ಲಿ ಹೊರಗಿನಿಂದ ಬಂದ ಜೈನರು, ಮಾರವಾಡಿಗಳು, ಮಾಪಿಳ್ಳೆಯವರು ಲೇವಾದೇವಿ ವ್ಯವಹಾರದಲ್ಲಿ ತೊಡಗಿದ ಅಂಶ ವ್ಯಕ್ತವಾಗುವುದು. ಹಣದ ವ್ಯವಹಾರದಲ್ಲಿ ನಂಬಿಕೆ, ಪ್ರಾಮಾಣಿಕತೆ ಬಹುಮುಖ್ಯವಾಗಿದ್ದವು. ಕೇವಲ ದೊಡ್ಡ ಪ್ರಮಾಣದ ಸಾಲಗಳಿಗೆ ಮಾತ್ರ ಸ್ಥಿರಾಸ್ತಿ, ಚಿನ್ನಾಭರಣ, ಬೆಳ್ಳಿ ಮುಂತಾದವುಗಳನ್ನು ಅಡವಾಗಿ ಇಟ್ಟುಕೊಂಡು ಸಾಲ ನೀಡಿದರೆ, ಸಣ್ಣಪುಟ್ಟ ಕೈಸಾಲಗಳಿಗೆ ಸಾಲಗಾರ ಮತ್ತು ಸಾಲಿಗರ ಮಧ್ಯದ ಪರಸ್ಪರ ನಂಬಿಕೆ, ವಿಶ್ವಾಸಗಳೇ ಬಂಡವಾಳವಾಗಿದ್ದವು. ಐವತ್ತು ರೂಪಾಯಿಗಳವರೆಗಿನ ಸಾಲಗಳಿಗೆ 'ಪ್ರೋನೋಟು' ಆಧಾರವಾಗಿರುತ್ತಿತ್ತು. ಆರ್ಥಿಕ ಮುಗ್ಗಟ್ಟಿನ ಸಂದರ್ಭಗಳಲ್ಲಿ ಶ್ರೀಮಂತ ವರ್ಗದ ಕೊಡವರು ಬಡವರಿಗೆ ಬತ್ತದ ರೂಪದಲ್ಲಿ ಸಾಲ ನೀಡುತ್ತಿದ್ದರು. ಕೊಡವರು ಲೇವಾದೇವಿಯನ್ನು ಒಂದು ವ್ಯವಹಾರವಾಗಿ ಇಟ್ಟುಕೊಳ್ಳದೇ ಬಹುಗುಟ್ಟಾಗಿ ಕೇವಲ ಆಪ್ತ ವರ್ಗದವರಲ್ಲಿ ಮಾತ್ರ ಮಾಡುತ್ತಿದ್ದರು ಎಂದು ಬಲ್ಲವರು ಹೇಳುವರು. ಲೇವಾದೇವಿ ವ್ಯವಹಾರಗಳು ಹೆಚ್ಚಾಗಿ ನಗದು ರೂಪದಲ್ಲಿ ನಡೆಯುತ್ತಿದ್ದರೂ ಅನೇಕ ಸಂದರ್ಭಗಳಲ್ಲಿ ದವಸ ಧಾನ್ಯಗಳ ಮೂಲಕವೂ ನಡೆಯುತ್ತಿದ್ದವು. ದವಸ ಧಾನ್ಯಗಳನ್ನು (ಬತ್ತ) ಹೆಚ್ಚು ಬೆಳೆದವರಿಂದ ಸಾಲದ ರೂಪದಲ್ಲಿ ಪಡೆದು ಅದಕ್ಕೆ ಬಡ್ಡಿಯ ರೂಪದಲ್ಲಿ ಸುಗ್ಗಿಯ ಕಾಲದಲ್ಲಿ ಧಾನ್ಯವನ್ನೇ ಹಿಂದಿರುಗಿಸುವುದು ರೂಢಿಯಲ್ಲಿತ್ತು.

ಒಂದು ವರದಿಯ ಪ್ರಕಾರ 1899–1908 ರ ಅವಧಿಯಲ್ಲಿ ಕೇರಳದ ಮಾಪಿಳ್ಳೆಗಳು ಕೊಡಗಿನಲ್ಲಿ ಬಹು ಪ್ರಮುಖವಾದ ಸಣ್ಣಪುಟ್ಟ ಲೇವಾದೇವಿಗಾರರಾಗಿದ್ದರು ಎಂದು ತಿಳಿದು ಬರುವುದಲ್ಲದೇ ಅವರು ವಿಧಿಸುತ್ತಿದ್ದ ಸಾಮಾನ್ಯ ಬಡ್ಡಿಯ ದರ ಸುಮಾರು ಶೇ. 250 ಆಗಿರುತ್ತಿತ್ತು ಎಂದು ನಮೂದಿಸಲಾಗಿದೆ. ಅವರು ವರ್ಷದ ಜುಲೈ ಆಗಸ್ಟ್ ತಿಂಗಳಲ್ಲಿ ನಾಲ್ಕು ರೂಪಾಯಿ ಸಾಲವಾಗಿ ನೀಡಿ ಅದಕ್ಕೆ ಪ್ರತಿಯಾಗಿ ಮೂರು ಬಟ್ಟಿಗಳಷ್ಟು ಬತ್ತವನ್ನು ಮುಂದಿನ ವರ್ಷದ ಫೆಬ್ರವರಿಯಲ್ಲಿ ಸಂಗ್ರಹಿಸುತ್ತಿದ್ದರು. ಒಂದು ಬಟ್ಟಿ ಬತ್ತದ ಅಂದಿನ ಬೆಲೆ ಸುಮಾರು ಮೂರು ರೂಪಾಯಿಯಾಗಿರುತ್ತಿತ್ತು.

ಸ್ವಾತಂತ್ರ್ಯಪೂರ್ವದಲ್ಲಿ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಜಾಲ, ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ, ವ್ಯಾಪಕವಾಗಿ ಹರಡುವ ಮುನ್ನ ಮತ್ತು ಹಣಕಾಸು ಸಂಸ್ಥೆಗಳು, ಖಾಸಗಿ ಸಾಹುಕಾರರು ವಿಧಿಸುವ ಬಡ್ಡಿದರಗಳು ಸರಕಾರದ ನಿಯಂತ್ರಣಕ್ಕೆ ಒಳಪಡುವುದರ ಮುನ್ನ ಸಾಮಾನ್ಯವಾಗಿ ಸಾಲದ ಮೇಲಿನ ಬಡ್ಡಿ ದರಗಳಲ್ಲೂ ಏಕರೂಪತೆ ಇರಲಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಬಡ್ಡಿ ದರಗಳಲ್ಲಿಯ ವ್ಯತ್ಯಾಸವನ್ನು ಕಾಣಬಹುದಾಗಿದೆ.

### ಆರ್ಥಿಕ ಸಮೀಕ್ಷೆ

ಆರ್ಥಿಕ ಸಮೀಕ್ಷಾ ವರದಿಗಳು ಒಂದು ಪ್ರದೇಶದ ಜನಾಂಗೀಯ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಮತ್ತು ಜೀವನ ಮಟ್ಟವನ್ನು ಸ್ಥೂಲವಾಗಿ ಪರಿಚಯಿಸಲು ಸಹಾಯಕವಾಗುತ್ತವೆ. ಕಳೆದ ಶತಮಾನದಲ್ಲಿ ಜಿಲ್ಲೆಯ ಹಣಕಾಸಿನ ಸಮೀಕ್ಷೆಯನ್ನು ಕುರಿತಂತೆ ಅನೇಕ ವರದಿಗಳು ಬಂದಿವೆ. "1865–1878 ರ ಒಂದು ವರದಿಯ ಪ್ರಕಾರ ಜಿಲ್ಲೆಯಾದ್ಯಂತ ಹಣಕಾಸಿನ ಸೌಲಭ್ಯಗಳು ಸುಗಮವಾಗಿ ಲಭ್ಯ ಇದ್ದು, ಯಾವುದೇ ಆರ್ಥಿಕ ಮುಗ್ಗಟ್ಟು ಇರಲಿಲ್ಲ. ಜನರಿಗೆ ಯಾವುದೇ ಆರ್ಥಿಕ ಮುಗ್ಗಟ್ಟು ಇರಲಿಲ್ಲ. ಜನರು ಯಾವುದೇ ಋಣ ಭಾರದ ಹೊರೆಯಿಂದ ಕೂಡಿದವರಾಗಿರಲಿಲ್ಲ. ಒಂದು ಅರ್ಥದಲ್ಲಿ ಈ ಅವಧಿಯನ್ನು ಸುಭಿಕ್ಷೆಯ ಕಾಲವೆಂದು ಪರಿಗಣಿಸಬಹುದು". ಆದರೆ ಇದು ತೀರ ಸರಳೀಕೃತ ಹೇಳಿಕೆ ಎನಿಸುತ್ತದೆ.

### ಸಾಲದ ಹೊರೆ (1899-1908)

ಸಾಮಾನ್ಯವಾಗಿ ಕೊಡಗಿನಲ್ಲಿ ಜನರಿಗೆ ಸಾಲದ ಹೊರೆ ಇದ್ದೇ ಇತ್ತು ಎಂದು ಹಾಲರ್‌ನ ವರದಿ ಹೇಳಿದೆ. ಕೊಡಗಿನಲ್ಲಿ

ಅದಕ್ಕೆ ಪ್ರಮುಖ ಕಾರಣಗಳಲ್ಲಿ ಕೊಡಗಿನ ಮುಖ್ಯ ಹಣದ ಬೆಳೆಯಾದ ಕಾಫಿ ಫಸಲಿನಲ್ಲಿ ಆಗಾಗ ಏರುಪೇರಾಗುತ್ತಿದ್ದುದು. ಸಾಮಾನ್ಯವಾಗಿ ಕೊಡವರು ದುಂದು ವೆಚ್ಚ ಪ್ರವೃತ್ತಿಯವರು ಮತ್ತು ಉಳಿತಾಯ ಮನೋಭಾವನೆಯನ್ನು ರೂಪಿಸಿಕೊಳ್ಳದೇ ಇರುವವರು ಎಂಬ ಅಭಿಪ್ರಾಯಗಳಿವೆ ; ಇದರಿಂದ ಸಾಲದ ಹೊರೆಗೆ ತುತ್ತಾಗುತ್ತಿದ್ದರು. ಕೊಡವರ ಜೀವನ ವೆಚ್ಚ ಕೊಡವರಲ್ಲದವರಿಗಿಂತ ಹೆಚ್ಚಾಗಿದೆ ಎಂದು ಸೂಚಿಸುತ್ತಾ ಅನೇಕ ಸಂದರ್ಭಗಳಲ್ಲಿ ಮದುವೆ ಮುಂತಾದವುಗಳಲ್ಲಿ ಅವರು ಧರಿಸುವ ಆಭರಣಗಳು ಎರವಲು ಪಡೆದವುಗಳಾಗಿದ್ದು, 1837ರ ಕೊಡಗಿನ ಬಂಡಾಯವನ್ನು ಹತ್ತಿಕ್ಕುವಲ್ಲಿ ಹೋರಾಡಿದ ಕೊಡವರು ಸಂಪಾದಿಸಿದ್ದ ಪದಕಗಳು, ಬಹು ಬೆಲೆಯ ವಸ್ತುಗಳೂ ಸಾಹುಕಾರರಲ್ಲಿ ಅನೇಕ ವರ್ಷಗಳಿಂದ ಗಿರವಿಯಾಗಿ ಬಿದ್ದಿರುವುದಾಗಿ ವರದಿ ಸೂಚಿಸಿದೆ. ಇದು ಸಾಲದ ಹೊರೆಯ ತೀವ್ರತೆಯನ್ನು ಹಾಗೂ ಗಂಭೀರತೆಯನ್ನು ಸೂಚಿಸುತ್ತದೆ. ವರದಿಯು ಮುಂದುವರಿಯುತ್ತ ಆಗಸ್ಟ್ ಸೆಪ್ಟಂಬರ್ ತಿಂಗಳುಗಳಲ್ಲಿ ಕೊಡವರು ದವಸ ಅಥವಾ ಹಣ ವನ್ನು ಮುಂದೆ ಬರುವ ಬೆಳೆಯ ಆಧಾರದ ಮೇಲೆ ಅತೀ ಹೆಚ್ಚಿನ ಬಡ್ಡಿಗೆ ಸಾಲ ಪಡೆಯುತ್ತಿದ್ದರು, ಎಂದು ನಮೂದಿಸಿದೆ. ಈ ಕಠಿಣ ಆರ್ಥಿಕ ಪರಿಸ್ಥಿತಿಯ ಪರಿಹಾರ ಕ್ರಮವಾಗಿ ಕೊಡವರಿಗೆ ಸೈನ್ಯದಲ್ಲಿ ಉದ್ಯೋಗ ಒದಗಿಸಲು ಭಾರತದಸೇನೆಯಲ್ಲಿ "ದಿ ಕೂರ್ಗ್ ರೆಜಿಮೆಂಟ್" ಎಂಬ ಕಂಪನಿಯನ್ನು 1902ರಲ್ಲಿ ಪ್ರಾರಂಭಿಸಲಾಯಿತು. ಆದರೆ ಅದಕ್ಕೂ ಉತ್ತಮ ಪ್ರತಿಕ್ರಿಯೆ ಬರಲಿಲ್ಲ ಎಂದು ವರದಿಯು ತಿಳಿಸುವುದು.

1834ರಲ್ಲಿ ಕೊಡಗು ರಾಜ್ಯವು ಸಂಪೂರ್ಣವಾಗಿ ಕಂಪನಿ ಸರ್ಕಾರದ ಆಡಳಿತಕ್ಕೆ ಒಳಪಟ್ಟ ನಂತರ, ಅಂದಿನ ಮೈಸೂರು ರಾಜ್ಯದಲ್ಲಿ ಜಾರಿಯಲ್ಲಿ ಇದ್ದ ಅನೇಕ ರೈತರ ಆರ್ಥಿಕ ಸುಧಾರಣಾ ಕಾನೂನುಗಳು ಕೊಡಗು ರಾಜ್ಯಕ್ಕೂ ಅನ್ವಯವಾದವು. ಅವುಗಳಲ್ಲಿ ಮುಖ್ಯವಾದವುಗಳು : ತಕಾವಿ ಸಾಲ ಕಾನೂನು 1876, ಭೂ ಅಭಿವೃದ್ಧಿ ಸಾಲ ಕಾನೂನು 1883 ಹಾಗೂ ವ್ಯವಸಾಯ ಸಾಲ ಕಾನೂನು 1887. ಈ ಕಾನೂನುಗಳ ಅನ್ವಯ ವ್ಯವಸಾಯಗಾರರಿಗೆ ಕಡಿಮೆ ಬಡ್ಡಿಯಲ್ಲಿ ದೀರ್ಘ ಕಾಲಾವಧಿಯ ಸಾಲ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿತ್ತು. ಕೊಡಗಿನಲ್ಲಿ ವ್ಯವಸಾಯ ಇಲಾಖೆಯನ್ನು 1907ರ ಸುಮಾರಿಗೆ ಪ್ರಾರಂಭಿಸಲಾಯಿತು. ಹಿಂದಿನಿಂದ 1904ರವರೆಗೆ ಜಿಲ್ಲೆಯಾದ್ಯಂತ ಸರ್ಕಾರ ನೀಡಿದ ವ್ಯವಸಾಯ ಸಾಲ ಮತ್ತು ಭೂ ಅಭಿವೃದ್ಧಿ ಸಾಲದ ಮೊತ್ತಗಳು ಅನುಕ್ರಮವಾಗಿ ರೂ. 49,000 ಮತ್ತು ರೂ. 40,000 ಎಂದು ದಾಖಲಾತಿಗಳು ಉಲ್ಲೇಖಿಸುತ್ತವೆ.

### ಆರ್ಥಿಕ ಸಮಿತಿ ವರದಿ 1935

ಜಿಲ್ಲೆಯಾದ್ಯಂತ ಇದ್ದ ಗ್ರಾಮೀಣರ ಬದುಕು, ಸಾಲದ ಹೊರೆ ಅದರ ನಿವಾರಣಾ ಉಪಾಯಗಳನ್ನು ಸೂಚಿಸುವ ಕೊಡಗು ಆರ್ಥಿಕ ಸಮಿತಿಯು ಅನೇಕ ವಿಷಯಗಳನ್ನು ಒಳಗೊಂಡಂತೆ ಸವಿವರವಾದ ಸಮೀಕ್ಷೆಯನ್ನು 1934–35 ರಲ್ಲಿ ನಡೆಸಿತು. ಈ ಸಮಿತಿ ರಚನೆಯ ಮುಖ್ಯ ಉದ್ದೇಶ ಕೊಡಗು ಪ್ರಾಂತ್ಯದಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಗ್ರಾಮೀಣ ಋಣದ ಒಟ್ಟು ಅಂದಾಜು ಕಂಡುಹಿಡಿದು ಆ ಋಣಭಾರದಿಂದ ರೈತರನ್ನು ಮುಕ್ತರನ್ನಾಗಿ ಮಾಡಲು ಸಹಾಯಕವಾಗುವಂತೆ ವಿವಿಧ ಮಾರ್ಗೋಪಾಯಗಳನ್ನು ಸೂಚಿಸುವುದು ಹಾಗೂ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕೈಗೊಳ್ಳಬೇಕಾದ ವಿಷಯವಾಗಿ ಸಲಹೆ ಸೂಚನೆ ಕೊಡುವುದಾಗಿತ್ತು.

ಸಮಿತಿಯು 1935 ರಲ್ಲಿ ನಡೆಸಿದ ಮಾದರಿ ಸಮೀಕ್ಷೆಯು ತಲಾವಾರು ಸಾಲದ ಆಧಾರದ ಮೇಲೆ ನೀಡಿದ ವರದಿಯ ಪ್ರಕಾರ ಒಟ್ಟಾರೆ ಜಿಲ್ಲೆಯ ಗ್ರಾಮೀಣ ಋಣವನ್ನು ಅಂದಾಜು ರೂ. 75 ಲಕ್ಷವೆಂದು ಪರಿಗಣಿಸಲಾಗಿತ್ತು. ಈ ಮೊತ್ತವು ಸರಕಾರಿ, ಸಹಕಾರಿ ಮತ್ತು ಖಾಸಗಿ ವಲಯದಿಂದ ಪಡೆದ ಸಾಲಗಳನ್ನು ಸೇರಿಸಿ ಅಂದಾಜು ಮಾಡಲಾಗಿತ್ತು. ಈ ಮಾದರಿ ಸಮೀಕ್ಷೆಯು 13 ಹಳ್ಳಿಗಳ 9,300 ಜನಸಂಖ್ಯೆಯನ್ನೊಳಗೊಂಡಿತ್ತು (ಜಿಲ್ಲೆಯ ಅಂದಿನ ಒಟ್ಟು ಜನಸಂಖ್ಯೆ 1,63,000). ಇದೇ ಸಮಿತಿಯು ಅನುಸರಿಸಿದ ಎರಡನೇಯ ವಿಧಾನದ ಪ್ರಕಾರ ಸಾಗುವಳಿಗೆ ಒಳಪಟ್ಟ ಜಮೀನು ಆಧಾರದ ಮೇಲೆ (ಕಾಫಿ ಎಸ್ಟೇಟುಗಳನ್ನು ಹೊರತುಪಡಿಸಿ) ಲೆಕ್ಕ ಹಾಕಿದ ಗ್ರಾಮೀಣ ಸಾಲದ ಅಂದಾಜು ಸಹ ಸುಮಾರು ರೂ. 70 ಲಕ್ಷ ಎಂದು ಸೂಚಿಸಲಾಗಿದೆ. ಈ ಮೊತ್ತದಲ್ಲಿ ಸಹಕಾರಿ ಸಂಘಗಳು ನೀಡಿದ್ದ ಸಾಲ ರೂ. 8,12,781 ಸಹ ಸೇರಿತ್ತು. ಸಮಿತಿಯು ಮತ್ತೊಂದು ವಿಧಾನದಂತೆ, ಅಂದರೆ 1931 ರ ಜನಗಣತಿಯ ಪ್ರಕಾರ ಮಾಡಿದ ಲೆಕ್ಕಾಚಾರ ಹೀಗಿತ್ತು : ಕೊಡಗು ಪ್ರಾಂತ್ಯದಲ್ಲಿ ವ್ಯವಸಾಯದಲ್ಲಿ ತೊಡಗಿದ್ದ ಗಂಡಸರ ಸಂಖ್ಯೆ 44,000 ಅದರ ಪೈಕಿ 11 ಸಾವಿರ ಜನರು ಮಾತ್ರ ಪಡೆದ ಒಟ್ಟು ಸಾಲ 17 ಲಕ್ಷ ರೂ. ಈ ಸರಾಸರಿ ಲೆಕ್ಕದಲ್ಲಿ 44,000 ಜನರು ತೆಗೆದುಕೊಂಡಿದ್ದ ಒಟ್ಟು ಮೊತ್ತ ಸುಮಾರು 68 ಲಕ್ಷ ರೂ.

ಇವಕ್ಕೆ ಹಿಂದಿನ ಬಾಕಿ ಸಾಲ 4 ಲಕ್ಷ ರೂ. ಸೇರಿಸಿದಾಗ ಒಟ್ಟು ಮೊತ್ತ ಸುಮಾರು 72 ಲಕ್ಷ. ಹೀಗೆ ಜಿಲ್ಲೆಯ ಒಟ್ಟು ಸಾಲದ ಮೊತ್ತ ಅಂದಾಜು 70 ರಿಂದ 80 ಲಕ್ಷ ರೂ.ಗಳು ಎಂದು ಸಮಿತಿಯು ಒಂದು ಸರ್ವಸಮ್ಮತ ಅಭಿಪ್ರಾಯಕ್ಕೆ ಬಂದಿತ್ತು. ಕೊಡಗು ಆರ್ಥಿಕ ಸಮೀಕ್ಷೆಯ ಸಮಿತಿಗಿಂತಲೂ ಐದು ವರ್ಷ ಪೂರ್ವದಲ್ಲಿ ಅಂದರೆ 1930 ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಬ್ಯಾಂಕಿಂಗ್ ವಿಚಾರಣಾಸಮಿತಿಯ ಕೊಡಗು ಉಪ ಸಮಿತಿಯು 14 ಹಳ್ಳಿಗಳನ್ನು ಒಳಗೊಂಡಂತೆ ನಡೆಸಿದ ಮಾದರಿ ಸಮೀಕ್ಷೆಯ ಆಧಾರದ ಮೇಲೆ ಜಿಲ್ಲೆಯ ಒಟ್ಟು ಗ್ರಾಮೀಣ ಋಣದ ಮೊತ್ತ ಸುಮಾರು 25 ರಿಂದ 30 ಲಕ್ಷ ರೂಪಾಯಿಗಳೆಂದು ಅವಾಸ್ತವವಾದ ಅಂದಾಜನ್ನು ಮಾಡಿತ್ತು. ಆದರೆ ಅಂದಿನ ಜಿಲ್ಲಾ ಮ್ಯಾಜಿಸ್ಟ್ರೇಟರು, ಈ ಅಂಕಿಅಂಶಗಳು ವಾಸ್ತವಾಂಶಗಳಿಂದ ಕೂಡಿರದೆ ತೀರಾ ಕನಿಷ್ಠ ಪ್ರಮಾಣದವು ಎಂದು ಅಭಿಪ್ರಾಯಪಟ್ಟರು. ಕಾರಣ ಮೇಲಿನ ಅಂದಾಜಿನಲ್ಲಿ ಕೇವಲ ಸಹಕಾರಿ ಸಂಘಗಳು ಮತ್ತು ಸರಕಾರ ನೀಡಿದ ಸಾಲದ ಮೊತ್ತವೇ ಸುಮಾರು 11 ಲಕ್ಷ ರೂ.ಗಳಷ್ಟು ಇತ್ತು. ಅವರು ಮಾಡಿದ ಅಂದಾಜಿನ ಪ್ರಕಾರ ಗ್ರಾಮೀಣ ಋಣದ ಮೊತ್ತವನ್ನು ಸುಮಾರು 40 ಲಕ್ಷ ರೂ. ಎಂದು ನಿಗದಿಗೊಳಿಸಲಾಗಿತ್ತು. 1935ರ ಆರ್ಥಿಕ ವರದಿಯಲ್ಲಿ ಸೂಚಿಸಿರುವಂತೆ ಅಂದಿನ ಸರ್ಕಾರಿ ಸಾಲದ ಬಡ್ಡಿ ದರ ಶೇ. 5 ರಂತೆ ಇದ್ದರೆ, ಖಾಸಗಿ ಸಾಹುಕಾರರ ಬಡ್ಡಿ ದರ ಶೇ. 25 ರಷ್ಟು, ಮತ್ತು ವಸ್ತು ರೂಪದಲ್ಲಿ (ಧಾನ್ಯ ಇತ್ಯಾದಿ) ಪಡೆದ ಸಾಲದ ಮೇಲೆ ಇದಕ್ಕೂ ಹೆಚ್ಚಿನ ದರ ವಿಧಿಸಲಾಗುತ್ತಿತ್ತು. ರೈತರ ಈ ಆರ್ಥಿಕ ಮುಗ್ಗಟ್ಟನ್ನು ಬಹುಮಟ್ಟಿಗೆ ಪರಿಹರಿಸಲು ಸಹಾಯಕವಾಗುವಂತೆ ಆರ್ಥಿಕ ಸಮಿತಿಯು ಅವಶ್ಯವಾಗಿ ಕೈಗೊಳ್ಳಬೇಕಾದ ಹಲವಾರು ಕ್ರಮಗಳನ್ನು ಸರ್ಕಾರಕ್ಕೆ ಸೂಚಿಸಿತ್ತು. ಅವುಗಳೆಂದರೆ, ರೈತರಿಗೆ ಒದಗಿಸುವ ವಿವಿಧ ಸಾಲಗಳ ಷರತ್ತುಗಳನ್ನು ಸುಲಭಗೊಳಿಸುವುದು ಮತ್ತು ಇದಕ್ಕೆ ಅನುಗುಣವಾಗಿ ದೀರ್ಘಕಾಲಾವಧಿಯ ಸಾಲ ಸೌಲಭ್ಯ ಒದಗಿಸಲು ಜಮೀನು ಅಭಿವೃದ್ಧಿ ಬ್ಯಾಂಕುಗಳನ್ನು ಪ್ರಾರಂಭ ಮಾಡುವುದು ; ಋಣ ಒಡಂಬಡಿಕೆ ಬೋರ್ಡುಗಳ (ಡೆಟ್ ರಿಕನ್ಸಿಲಿಯೇಶನ್ ಬೋರ್ಡ್) ರಚನೆ ಮುಂತಾದ ಕ್ರಮಗಳನ್ನು ಸೂಚಿಸಲಾಯಿತು ; ಮತ್ತು ಈ ಕ್ರಮಗಳನ್ನು ಜಾರಿಯಲ್ಲಿ ತರಲಾಯಿತು. ಈ ಜಿಲ್ಲೆಯಲ್ಲಿ ಸುಮಾರು 1935ರ ವರೆಗೆ ಈ ಋಣ ಒಡಂಬಡಿಕೆ ಸಮಿತಿಗಳು ಕಾರ್ಯ ನಿರ್ವಹಿಸುತ್ತಿದ್ದುದಾಗಿ ತಿಳಿದು ಬರುವುದು. 1930 ರ ದಶಕದ ಜಾಗತಿಕ ಆರ್ಥಿಕ ಹಿನ್ನಡೆಯ ಪರಿಣಾಮಗಳು ಈ ಜಿಲ್ಲೆಯ ಮೇಲೆಯೂ ಪ್ರಭಾವ ಬೀರದೇ ಇರಲಿಲ್ಲ. ಮುಂದಿನ ದಶಕಗಳಲ್ಲಿ ಸಹಕಾರಿ ಚಳವಳಿಯನ್ನು ವ್ಯಾಪಕಗೊಳಿಸಲಾಯಿತು ಮತ್ತು ರೈತರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು.

ಎಲ್ಲ ಆರ್ಥಿಕ ಸಮೀಕ್ಷೆಗಳು ಅನೇಕ ಇತಿಮಿತಿಗಳನ್ನು ಹೊಂದಿರುತ್ತವೆ; ಸಮೀಕ್ಷೆಗೆ ಒಳಪಟ್ಟ ಜನಸಮುದಾಯ ಅನೇಕ ವಾಸ್ತವಾಂಶಗಳನ್ನು ಮರೆ ಮಾಚುವ ಮತ್ತು ಸಾಲದಂಥ ಸಾಮಾನ್ಯ ವಿಷಯಗಳನ್ನು ಅತಿಶಯಿಸಿ ಹೇಳುವ ಮನೋಪ್ರವೃತ್ತಿಯನ್ನು ಹೊಂದಿರುತ್ತಾರೆ. ಅವರ ಹೇಳಿಕೆಗಳು ನಿಖರವಾದ ವಾಸ್ತವಾಂಶಗಳಿಂದ ಕೂಡಿರುವುದಿಲ್ಲ. ಈ ಸಂಗತಿಗಳು ಮೇಲ್ನೋಟದಲ್ಲಿ ಕಂಡು ಬಂದರೂ ಇಂತಹ ವರದಿ ಹಾಗೂ ಸಮೀಕ್ಷೆಗಳು ಅಧ್ಯಯನ ಶೀಲರಿಗೆ ವಿಷಯ ಗ್ರಹಣಕ್ಕೆ ನೆರವಾಗುವ ಪ್ರವೃತ್ತಿಗಳನ್ನು ಸೂಚಿಸುತ್ತವೆಂಬುದನ್ನು ಗಮನಿಸಬಹುದು.

**ಇತ್ತೀಚಿನ ಸಮೀಕ್ಷೆ:** 1961ರ ಜನಗಣತಿಯ ಅಂಗವಾಗಿ ಕೊಡಗು ಜಿಲ್ಲೆಯ ಎರಡು ಹಳ್ಳಿಗಳನ್ನು ಆಯ್ದುಕೊಂಡು ಆ ಹಳ್ಳಿಗಳ ವಿವಿಧ ಆರ್ಥಿಕ ಮತ್ತು ಸಾಮಾಜಿಕ ಅಂಶಗಳನ್ನು ಒಳಗೊಂಡಂತೆ ಸವಿವರವಾದ ಸಮೀಕ್ಷೆಯನ್ನು ನಡೆಸಲಾಯಿತು. ಈ ಸಮೀಕ್ಷೆಯಲ್ಲಿ ವಿವಿಧ ಆದಾಯ ಮಟ್ಟದ ಗ್ರಾಮೀಣ ಸಮುದಾಯಗಳ ಸಾಲದ ವಿವಿಧ ಮುಖಗಳ ಬಗ್ಗೆ ಅಧ್ಯಯನವನ್ನು ನಡೆಸಲಾಗಿದೆ. ಈ ಸಮೀಕ್ಷೆಯಲ್ಲಿ ಒಳಗೊಂಡ ಹಳ್ಳಿಗಳು : 1) ತಣ್ಣೀಮಾನಿ (ಮಡಿಕೇರಿ ತಾಲೂಕು) 2) ಹೆಬ್ಬಾಲೆ (ಸೋಮವಾರಪೇಟೆ ತಾಲೂಕು) ಈ ಎರಡು ಪ್ರತ್ಯೇಕ ಹಳ್ಳಿಗಳ ಆಯ್ಕೆ ಜಿಲ್ಲೆಯ ಭೌಗೋಳಿಕ ಸಾಮಾಜಿಕ ಆರ್ಥಿಕ, ವ್ಯವಸಾಯಿಕ ಮುಂತಾದ ಚಟುವಟಿಕೆಗಳ ಪ್ರಾತಿನಿಧಿಕ ಸ್ವರೂಪವನ್ನು ಸೂಚಿಸುತ್ತವೆ. ಗ್ರಾಮೀಣ ಸಾಲದ ಸ್ವರೂಪವನ್ನು ಕುರಿತಂತೆ 1961ರ ಸಮೀಕ್ಷೆಯ ಸಾರಾಂಶ ಈ ರೀತಿ ಇರುವುದು.

### ತಣ್ಣೀಮಾನಿ

ಭಾಗಮಂಡಲ ಪಂಚಾಯಿತಿಗೆ ಸೇರಿದ ತಣ್ಣೀಮಾನಿ ಹಳ್ಳಿಯ ಜನಸಂಖ್ಯೆ 669. ಅಲ್ಲಿನ 112 ಕುಟುಂಬಗಳಲ್ಲಿ 69 ಕುಟುಂಬಗಳು (ಶೇ. 62) ಸಾಲಗಾರರಾಗಿದ್ದರು. ಕುಟುಂಬಗಳಲ್ಲಿ ಬಹುಪಾಲು (90 ಕುಟುಂಬಗಳು) ಗೌಡ ಜಾತಿಗೆ ಸೇರಿದವರಾಗಿದ್ದರೆ, ಉಳಿದವರು ಆದಿಯ (9), ಕುಡಿಯ (4), ಮರಾಠಾ (4), ಬಂಟ (2), ಬ್ರಾಹ್ಮಣ (2) ಮತ್ತು ಬಿಲ್ಲವ (1) ಮುಂತಾದ ಜಾತಿಗೆ ಸೇರಿದವರಾಗಿದ್ದರು. ಸಾಲಗಾರ ಕುಟುಂಬಗಳು ಪಡೆದ ಸಾಮೂಹಿಕ ಸಾಲದ ಮೊತ್ತ ರೂ. 60,482; ಕುಟುಂಬದ ಸರಾಸರಿ ಸಾಲ ರೂ.

878 ಇದ್ದರೆ ಪ್ರತೀ ವ್ಯಕ್ತಿಯ ಸರಾಸರಿ ಸಾಲ ರೂ. 90. ಸಮೀಕ್ಷೆಯ ಪ್ರಕಾರ ಕಂಡು ಬರುವ ಮುಖ್ಯ ಅಂಶವೆಂದರೆ ಅತಿ ಕಡಿಮೆ ತಿಂಗಳ ಆದಾಯ ಹೊಂದಿದ್ದ (ರೂ. 25 ಮತ್ತು ಅದಕ್ಕೂ ಕಡಿಮೆ) ಕುಟುಂಬಗಳು ಯಾವ ರೀತಿಯ ಸಾಲವನ್ನೂ ಹೊಂದಿರಲಿಲ್ಲ. ಅದಕ್ಕೆ ಕಾರಣ ಅವರಿಗೆ ಸಾಲದ ಅವಶ್ಯಕತೆ ಇರಲಿಲ್ಲ ಎಂದಲ್ಲ. ಆದರೆ ಅವರಲ್ಲಿ ಅಂದು ಸಾಲಕ್ಕೆ ನೀಡಬಹುದಾದ ಯಾವುದೇ ಆಧಾರಗಳು ಇರಲಿಲ್ಲ. ಇಂತಹ ಜನರು ತಾವು ಅವಶ್ಯಕತೆಗೆ ಅನುಸಾರ ಕೈಸಾಲ ಪಡೆದು ಅದನ್ನು ಕೂಲಿಯ ರೂಪದಲ್ಲಿ ದುಡಿದು ತೀರಿಸುತ್ತಿದ್ದರೆ ಇದನ್ನು ಅವರು ಸಾಲವೆಂದು ಪರಿಗಣಿಸುತ್ತಿರಲಿಲ್ಲ.

ಹೆಚ್ಚು ಮಾಸಿಕ ಆದಾಯ ಹೊಂದಿದ ಕುಟುಂಬಗಳು ಆದಾಯದ ಏರಿಕೆಯ ಮಟ್ಟಕ್ಕೆ ಅನುಗುಣವಾಗಿ ಸಾಲ ಸೌಲಭ್ಯಗಳನ್ನು ಪಡೆದಿರುವುದನ್ನು ಸಮೀಕ್ಷೆಯ ಅಂಕಿಸಂಖ್ಯೆಗಳು ಸೂಚಿಸುತ್ತವೆ. ಅಂದರೆ ಉಳ್ಳವರು ತಮ್ಮಲ್ಲಿರುವ ಸ್ಥಿರ ಸೊತ್ತುಗಳನ್ನು ಆಧಾರವಾಗಿ ನೀಡಿ ಹಣಕಾಸು ಮತ್ತು ಇತರೇ ಸಂಸ್ಥೆಗಳಿಂದ ಸಾಲ ಪಡೆದಿರುವುದು ಗೋಚರವಾಗುವುದು. ಸಾಲದ ಮೂಲಗಳಲ್ಲಿ ತಕಾವಿಸಾಲ, ಸಹಕಾರಿ ಸಂಸ್ಥೆಗಳ ಸಾಲ ಹಾಗೂ ಖಾಸಗೀ ಮೂಲಗಳು ಸೇರಿವೆ. ಸಹಕಾರಿ ಸಾಲದ ಬಡ್ಡಿದರ ಶೇ. $8\frac{1}{2}$ ಆಗಿತ್ತು. ದವಸ ಭಂಡಾರಗಳಿಂದ ವಸ್ತು ರೂಪದಲ್ಲಿ ಪಡೆದ ಸಾಲದ ಬಡ್ಡಿ ದರ ಶೇ. 25 ಆಗಿತ್ತು. ಖಾಸಗಿ ಮೂಲಗಳಿಂದ ಪಡೆದ ಸಾಲದ ಬಡ್ಡಿ ದರ ಸಾಮಾನ್ಯವಾಗಿ ಶೇ. $12\frac{1}{2}$ ಮತ್ತು ಅದಕ್ಕೂ ಹೆಚ್ಚಾಗಿತ್ತು.

ಸಾಲದ ಮೊತ್ತದಲ್ಲಿ ಶೇ. 34ರಷ್ಟು ಸಾಲವನ್ನು ವ್ಯವಸಾಯ ಅಭಿವೃದ್ಧಿಗೆ, ಶೇ. 32 ವಾಸದ ಮನೆ ಕಟ್ಟಲು ಮತ್ತು ದುರಸ್ತಿಗೆ, ಶೇ.12 ಗೃಹಕೃತ್ಯಗಳಿಗೆ ಉಪಯೋಗಿಸಿಕೊಂಡರೆ, ಹಿಂದಿನ ಸಾಲ ತೀರಿಸಲು ಶೇ. 12, ಹಬ್ಬ ಹರಿದಿನ ಆಚರಣೆಗೆ ಶೇ. 4, ಇತರೇ ಶೇ. 4ರಷ್ಟು ವಿನಿಯೋಗಿಸಲಾಯಿತೆಂದು ಸಮೀಕ್ಷೆಯ ವರದಿ ತಿಳಿಸುವುದು. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಗ್ರಾಮೀಣ ಪ್ರದೇಶದಲ್ಲಿ ವಿನಿಯೋಗಿಸಿದ ಸಾಲದ ಮೊತ್ತದಲ್ಲಿ ಉದ್ದೇಶಿತ ಕಾರಣಕ್ಕೆ ವೆಚ್ಚವಾಗದೇ ಅದರ ಸಿಂಹಪಾಲು ಅನ್ಯ ಉದ್ದೇಶಗಳಿಗೆ ಬಳಕೆಯಾಗುತ್ತಿದ್ದುದು ಸ್ಪಷ್ಟವಾಗುವುದು.

**ಹೆಬ್ಬಾಲೆ**

ಸುಮಾರು 22 ಜಾತಿಗಳನ್ನು ಒಳಗೊಂಡ ದೊಡ್ಡ ಗ್ರಾಮವಾದ ಹೆಬ್ಬಾಲೆ 436 ಕುಟುಂಬಗಳನ್ನು ಒಳಗೊಂಡಂತೆ 2,229 ಜನಸಂಖ್ಯೆಯಿಂದ ಕೂಡಿದ, ಆರ್ಥಿಕವಾಗಿ ಹೆಚ್ಚು ಅನುಕೂಲತೆ ಹೊಂದಿರುವ, ಸಾಂಸ್ಕೃತಿಕವಾಗಿ ಮೈಸೂರು ಜಿಲ್ಲೆಯೊಂದಿಗೆ ಹೆಚ್ಚು ಸಂಪರ್ಕ ಪಡೆದ ಗಡಿಭಾಗದ ಒಂದು ಗ್ರಾಮ. ಗ್ರಾಮೀಣರಲ್ಲಿ ಬಹುಪಾಲು ಜನ ಸವರ್ಣೀಯರು ಮತ್ತು ದಲಿತರು. ವ್ಯವಸಾಯ ಇಲ್ಲಿನ ಮುಖ್ಯ ವೃತ್ತಿ. ಗ್ರಾಮದ 436 ಕುಟುಂಬಗಳಲ್ಲಿ 174 ಕುಟುಂಬಗಳು (ಶೇ. 40) ಹೊಂದಿದ್ದ ಸಾಲದ ಮೊತ್ತ ರೂ.1,12,325. ಸಾಲದ ಮೊತ್ತದಲ್ಲಿ ಬಹುಪಾಲು (ಶೇ. 52) ಹೆಚ್ಚಿನ ಆದಾಯ ಹೊಂದಿದ ಕುಟುಂಬಗಳದ್ದಾಗಿತ್ತು. ಅತೀ ಕಡಿಮೆ ಆದಾಯದ ಕುಟುಂಬಗಳು ಪಡೆದ ಸಾಲದ ಪ್ರಮಾಣ ಒಟ್ಟು ಸಾಲದಲ್ಲಿ ಶೇ. 5ರಷ್ಟು ಆಗಿತ್ತು. ಹೆಚ್ಚು ಹೆಚ್ಚು ಮಾಸಿಕ ಆದಾಯ ಹೊಂದಿದ್ದ ಕುಟುಂಬಗಳು ಸೂಕ್ತವಾದ ಆಧಾರಗಳನ್ನು ಸಾಲಕ್ಕೆ ಒದಗಿಸುವ ಸಾಮರ್ಥ್ಯ ಹೊಂದಿದ್ದರಿಂದ ಹೆಚ್ಚು ಸಾಲ ಪಡೆಯಲು ಶಕ್ತವಾಗಿದ್ದವು ಎಂಬುದು ಸಮೀಕ್ಷೆಯಿಂದ ವ್ಯಕ್ತವಾಗುವುದು.

ಸಾಲದ ಮೂಲಗಳಲ್ಲಿ ಸರ್ಕಾರಿ ಇಲಾಖೆ ಸಹಕಾರಿ ಸಂಸ್ಥೆಗಳಲ್ಲದೇ ಜೀವವಿಮಾ ನಿಗಮ ಹಾಗೂ ವಾಣಿಜ್ಯ ಬ್ಯಾಂಕುಗಳು ಸೇರಿದ್ದವು. "ಗೆಳೆಯರು ಮತ್ತು ಸಂಬಂಧಿಕರಿಂದ" ಪಡೆದ ಸಾಲವು ಒಟ್ಟು ಸಾಲದ ಹೆಚ್ಚಿನ ಭಾಗವಾಗಿತ್ತು ಎಂಬುದು ಇಲ್ಲಿ ಗಮನಾರ್ಹ. (ನೋಂದಾಯಿಸಬೇಕಾದ ಖಾಸಗಿ ಸಾಹುಕಾರರು ಸಾಲದ ಬಹುಭಾಗವನ್ನು ಪೂರೈಸಿದ್ದರು). ಸಾಲದ ವಿನಿಯೋಗದಲ್ಲಿ ಶೇ. 22 ಮದುವೆ ಮುಂತಾದವುಗಳಿಗೆ, ಶೇ. 11 ಗೃಹಕೃತ್ಯದ ಕೆಲಸ ಕಾರ್ಯಗಳಿಗೆ, ಶೇ. 18 ಮನೆ ಕಟ್ಟಲು, ಶೇ. 9 ಹಳೆಯ ಸಾಲ ತೀರಿಸಲು ಉಪಯೋಗಿಸಿದರೆ, ಶೇ. ಒಂದು, 15 ಮತ್ತು 8ರ ಪ್ರಮಾಣದಲ್ಲಿ ಶಿಕ್ಷಣ, ವ್ಯಾಜ್ಯ ಮತ್ತು ಭೂಮಿ ಖರೀದಿಸಲು ಎತ್ತು ಕೊಳ್ಳಲು ಅನುಕ್ರಮವಾಗಿ ವ್ಯಯ ಮಾಡಲಾಗಿತ್ತು. ವ್ಯಾಪಾರ ವ್ಯವಹಾರಕ್ಕೆ ಮತ್ತು ಭೂಮಿಯ ಸುಧಾರಣೆಗೆ ಸಾಲದ ಹಣದಲ್ಲಿ ಶೇ. 8 ರಂತೆ ಖರ್ಚು ಮಾಡಲಾಗಿತ್ತು.

ಈ ಮೇಲಿನ ಎರಡು ಗ್ರಾಮಗಳ ಪ್ರಾತಿನಿಧಿಕ ಆರ್ಥಿಕ ಸಮೀಕ್ಷಾ ವರದಿ ಇಡೀ ಜಿಲ್ಲೆಗೆ ಹೆಚ್ಚು ಕಡಿಮೆಯಾಗಿ ಅನ್ವಯವಾಗುವಂತೆ ಇದ್ದು, ಸುಮಾರು ಮೂರು ದಶಕಗಳಷ್ಟು ಹಳೆಯದಾದರೂ, ಇಂದಿಗೂ ಆರ್ಥಿಕ ಸಾಮಾಜಿಕ ಅಧ್ಯಯನ ದೃಷ್ಟಿಯಿಂದ ಹಲವಾರು ಮೂಲಭೂತ ಗ್ರಾಮೀಣ ಸಮಸ್ಯೆಗಳ ಮೇಲೆ ಬೆಳಕು ಬೀರುತ್ತಿದೆ.

ಇತ್ತೀಚಿನ ದಶಕಗಳಲ್ಲಿ (1970–90) ವಾಣಿಜ್ಯ ಬ್ಯಾಂಕು, ಗ್ರಾಮೀಣ ಬ್ಯಾಂಕು ಹಾಗೂ ಸಹಕಾರಿ ಸಂಘಗಳ

ಜಾಲ ಜಿಲ್ಲೆಯಲ್ಲಿ ವ್ಯಾಪಕವಾಗಿದೆ. ಅವು ಆದ್ಯತಾ ವಲಯಗಳನ್ನು ಗುರುತಿಸಿ ವಾಣಿಜ್ಯ ಹಾಗೂ ತೋಟದ ಬೆಳೆಗಳು ಮತ್ತು ಗ್ರಾಮೀಣ ಉದ್ಯೋಗ (ಜೇನು ಸಾಕಣೆ, ರೇಷ್ಮೆ ವ್ಯವಸಾಯ, ಕೈಕಸಬುಗಳು, ಹೈನುಗಾರಿಕೆ, ಕೋಳಿ ಸಾಕಣೆ) ಗಳಿಗೆ ಆದ್ಯತೆಯ ಮೇಲೆ ಸಾಲ ನೀಡುತ್ತವೆ. ಸಮಾಜದ ದುರ್ಬಲ ವರ್ಗಗಳಿಗೇ ವಿಶೇಷ ಆದ್ಯತೆ ನೀಡಲಾಗಿದೆ. ಜಿಲ್ಲಾ ಪರಿಷತ್ತಿನ ಮೂಲಕ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಂತೆ ದುರ್ಬಲ ವರ್ಗಗಳಿಗೆ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಮೂಲಕ ಸಾಲ ಒದಗಿಸುವುದು ಕಡ್ಡಾಯವಾಗಿದೆ.

### ಲೇವಾದೇವಿ ನಿಯಂತ್ರಣ ಕಾನೂನು

ಬಹು ಹಿಂದಿನಿಂದಲೂ ಕಾನೂನಿನ ಯಾವುದೇ ನಿಯಂತ್ರಣಕ್ಕೆ ಒಳಗಾಗದೇ ಸ್ವಚ್ಛಂದವಾಗಿ ತಮ್ಮ ವ್ಯವಹಾರವನ್ನು ಮುಂದುವರಿಸಿಕೊಂಡು ಬರುತ್ತಿದ್ದ ಲೇವಾದೇವಿಗಾರರು ಮತ್ತು ಗಿರವಿದಾರರ ವ್ಯವಹಾರಗಳನ್ನು ನಿಯಂತ್ರಿಸಲು ಮತ್ತು ನಿರಕ್ಷರಿ, ಅಸಹಾಯಕ ಸಾಲಗಾರರ ಶೋಷಣೆಯನ್ನು ತಪ್ಪಿಸಲು ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಅನಂತರದ ದಶಕಗಳಲ್ಲಿ ಸರ್ಕಾರ ಅನೇಕ ಕಾನೂನುಗಳನ್ನು ಜಾರಿಗೆ ತರಬೇಕಾಯಿತು. ಮೂಲಭೂತವಾಗಿ ಸಾಲಗಾರರ ಹಿತ ರಕ್ಷಣೆ ಮತ್ತು ಬಡ್ಡಿದರಗಳನ್ನು ನಿಯಂತ್ರಣದಲ್ಲಿ ಇಡುವುದು ಈ ಕಾನೂನುಗಳ ಮುಖ್ಯ ಉದ್ದೇಶವಾಗಿತ್ತು. ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸಲು ರಾಜ್ಯವ್ಯಾಪ್ತಿಯ ಒಂದೇ ಬಗೆಯ ಕಾನೂನುಗಳು 1961-1966ರಲ್ಲಿ ಜಾರಿಗೆ ಬರುವ ಮೊದಲು ಸಾಮಾನ್ಯವಾಗಿ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಇಂತಹ ನಿಯಂತ್ರಣ ಕಾನೂನುಗಳು ಕೊಡಗು ರಾಜ್ಯಕ್ಕೂ ಅನ್ವಯವಾಗುತ್ತಿದ್ದವು.

1915-16ರಲ್ಲಿ ವಿವಿಧ ಸಾಲಗಳ ಮೇಲಿನ ಬಡ್ಡಿ ದರಗಳು ಈ ರೀತಿ ಇದ್ದವು : ಅಡಮಾನ ಸಾಲ ಶೇ. 9, ಜಾಮೀನು ಸಾಲ ಶೇ. 10, ಮತ್ತು ಕೈಸಾಲ ಒಂದು ತಿಂಗಳ ಅವಧಿ ಮೀರದಂತೆ ಶೇ. 12. ಮೈಸೂರು ಲೇವಾದೇವಿಗಾರರ ಕಾನೂನು 1939 ಬಹು ಮುಖ್ಯವಾದುದು. ಈ ಕಾನೂನಿನ ಅನ್ವಯ ಸಾಲಿಗರು ಸಾಲದ ಸರಿಯಾದ ಲೆಕ್ಕಪತ್ರಗಳನ್ನು ಇಡಬೇಕಾಗಿತ್ತು ; ಮತ್ತು ಸಾಲಗಾರರು ಮರು ಪಾವತಿ ಮಾಡಿದ ಸಾಲದ ಹಣಕ್ಕೆ ಸೂಕ್ತ ರಸೀದಿಗಳನ್ನು ನೀಡುವುದು, ಬಾಕಿ ಉಳಿದಿರುವ ಸಾಲದ ಮೊತ್ತವನ್ನು ನಮೂದಿಸುವುದು, ಮುಂತಾದ ಸಂಗತಿಗಳು ಕಡ್ಡಾಯವಾಗಿದ್ದವು. ಅಲ್ಲದೇ ಜಾಮೀನು ಆಧಾರಿತ ಸಾಲಕ್ಕೆ ಶೇ. 9 ರಂತೆ ಮತ್ತು ಆಧಾರ ರಹಿತ ಸಾಲಕ್ಕೆ ಶೇ. 12ರಂತೆ ಸರಳ ಬಡ್ಡಿ ದರಗಳನ್ನು ಗೊತ್ತು ಮಾಡಲಾಗಿತ್ತು. ಇದೂ ಅಲ್ಲದೇ ಸಾಲ ಪಡೆದವರನ್ನು ಸಾಲಿಗರು ಯಾವುದೇ ರೀತಿಯ ಹಿಂಸೆಗೆ ಗುರಿಪಡಿಸುವುದನ್ನು ಕಾನೂನಿನ ಅನ್ವಯ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಗುತ್ತಿತ್ತು.

### 1956ರ ನಂತರ

ರಾಜ್ಯ ಪುನರ್ ಘಟನೆಯ ನಂತರ ಕೊಡಗನ್ನು ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯವಾಗುವ, ಹೆಚ್ಚು ವಿಸ್ತೃತವಾದ ಮತ್ತು ಏಕರೂಪದ ಕಾನೂನುಗಳಾದ 'ಕರ್ನಾಟಕ ಲೇವಾದೇವಿಗಾರರ ಕಾನೂನು 1961' ಮತ್ತು 'ಕರ್ನಾಟಕ ಗಿರವಿದಾರರ ಕಾನೂನು 1961' ಇವುಗಳನ್ನು ಅನುಕ್ರಮವಾಗಿ 1962 ಮತ್ತು 1966ರಲ್ಲಿ ಜಾರಿಗೆ ತರಲಾಯಿತು. ಲೇವಾದೇವಿ ವ್ಯವಹಾರಗಳನ್ನು ಮತ್ತು ಲೇವಾದೇವಿಗಾರರ ನಡವಳಿಕೆಗಳನ್ನು ವ್ಯವಸ್ಥಿತವಾಗಿ ನಿಯಂತ್ರಣದಲ್ಲಿ ಇಡಲು ಸಹಾಯವಾಗುವಂತೆ ಮೇಲಿನ ಕಾನೂನುಗಳಿಗೆ ಅನೇಕ ಸೂಕ್ತ ತಿದ್ದುಪಡಿಗಳನ್ನು ಇತ್ತೀಚೆಗೆ ಅಳವಡಿಸಲಾಗಿದೆ. ಪ್ರಚಲಿತ ಕಾನೂನಿನ ಅನ್ವಯ ಆಧಾರದ ಸಾಲದ ಮೇಲಿನ ಬಡ್ಡಿ ದರ ಶೇ. 18 ಇದ್ದರೆ ಆಧಾರ ರಹಿತ ಸಾಲದ ಮೇಲಿನ ಬಡ್ಡಿ ದರ ಶೇ. 21. ಜಿಲ್ಲಾ ಮಟ್ಟದಲ್ಲಿ ಸಹಕಾರಿ ಸಂಘಗಳ ಉಪನಿಬಂಧಕರು ಮತ್ತು ಕಂದಾಯ ಉಪವಿಭಾಗ ಮಟ್ಟದಲ್ಲಿ ಸಹಾಯಕ ನಿಬಂಧಕರು ಲೇವಾದೇವಿ ವ್ಯವಹಾರವನ್ನು ಅಲ್ಲದೇ ಚಿಟ್‌ಫಂಡ್ ಕಾನೂನು 1982, ಚಿಟ್‌ಫಂಡ್ (ಕರ್ನಾಟಕ) ನಿಯಮಾವಳಿ 1983 ಗಳನ್ನು ನಿಯಂತ್ರಿಸುವ ಕಾನೂನುದತ್ತ ಅಧಿಕಾರ ಹೊಂದಿರುವರು. ಅನುಜ್ಞೆ ಪಡೆದ ಲೇವಾದೇವಿಗಾರರಲ್ಲದೇ ಅನೇಕ ಜನ ನೋಂದಾಯಿಸದೇ ಇರುವ ಖಾಸಗಿ ಸಾಹುಕಾರರು, ದೊಡ್ಡ ಹಿಡುವಳಿದಾರರು, ಹಣವುಳ್ಳ ಶ್ರೀಮಂತರು ವ್ಯಾಪಾರಸ್ಥರು ಒಂದು ಪರಿಮಿತಿಯಲ್ಲಿ ಲೇವಾದೇವಿ ವ್ಯವಹಾರವನ್ನು ಗುಟ್ಟಾಗಿ ಮಾಡುವುದು ಸರ್ವೇಸಾಮಾನ್ಯ. ಅವರು ವಿಧಿಸುವ ಬಡ್ಡಿ ದರ ಸಾಮಾನ್ಯವಾಗಿ ತಿಂಗಳಿಗೆ ಶೇ. 2 ರಿಂದ 5ರ ವರೆಗೆ ಇರುವುದು. ಪರಸ್ಪರ ನಂಬುಗೆಯೇ ಇಂತಹ ಲೇವಾದೇವಿ ವ್ಯವಹಾರಕ್ಕೆ ಭದ್ರತೆ. ನಾನಾ ರೀತಿಯ 'ಕುರಿ' ಅಥವಾ ಚಿಟ್‌ಫಂಡ್ ವ್ಯವಹಾರಗಳು ವ್ಯಾಪಾರಿಗಳ ಸೀಮಿತ ವಲಯದಲ್ಲಿ ಇದ್ದವು.

ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರು ವರದಿ ಮಾಡಿರುವಂತೆ ಜಿಲ್ಲೆಯಾದ್ಯಂತ 1982 ರಲ್ಲಿ 23 ಜನ ನೋಂದಾಯಿತ ಲೇವಾದೇವಿಗಾರರು ಮತ್ತು ಮೂರು ಜನ ನೋಂದಾಯಿತ ಗಿರವಿ ವ್ಯವಹಾರದಾರರು ಇದ್ದು ಅವರು

ಅನುಕ್ರಮವಾಗಿ ಆ ವರ್ಷದ ನೀಡಿದ ಸಾಲದ ಮೊತ್ತ ರೂ. 21.15 ಲಕ್ಷ ಮತ್ತು ರೂ. 25,000. ಮುಂದೆ 1986 ರಲ್ಲಿ ಗಿರವಿದಾರರ ಸಂಖ್ಯೆ ದ್ವಿಗುಣಗೊಂಡು (6) ಲೇವಾದೇವಿಗಾರರ ಸಂಖ್ಯೆ 22ಕ್ಕೆ ಇಳಿಯಿತು. ಆ ವರ್ಷ ಲೇವಾದೇವಿ ಮತ್ತು ಗಿರವಿ ಸಾಲಗಳ ಮೊತ್ತ ಅನುಕ್ರಮವಾಗಿ ರೂ. 49.14 ಲಕ್ಷ, ಮತ್ತು ರೂ. 42,000 ಕ್ಕೆ ಹೆಚ್ಚಳಗೊಂಡಿತ್ತು. ಮುಂದಿನ ಮೂರು ವರ್ಷಗಳ ನಂತರ (1989 ರಲ್ಲಿ) ಲೇವಾದೇವಿಗಾರರ ಸಂಖ್ಯೆ 34ಕ್ಕೆ ಹೆಚ್ಚಳಗೊಂಡು, ಗಿರವಿದಾರರ ಸಂಖ್ಯೆ 1986 ರ ಪ್ರಮಾಣದಲ್ಲಿಯೇ (6) ಉಳಿಯಿತು. ಆ ವರ್ಷ ಲೇವಾದೇವಿಗಾರರು ಮತ್ತು ಗಿರವಿದಾರರು ನೀಡಿದ್ದ ಸಾಲ ಮುಂಗಡಗಳು ಅನುಕ್ರಮವಾಗಿ ರೂ. 56.88 ಲಕ್ಷ ಮತ್ತು ರೂ. 1.58 ಲಕ್ಷ ಎಂದು ವರದಿಯಲ್ಲಿ ತಿಳಿಸಲಾಗಿದೆ. ಲೇವಾದೇವಿ ವ್ಯವಹಾರಗಾರರು ಹೆಚ್ಚಾಗಿ ನಗರ ಪ್ರದೇಶ ಮತ್ತು ವ್ಯಾಪಾರ ಕೇಂದ್ರಗಳಲ್ಲಿ ಕೇಂದ್ರೀಕೃತರಾಗಿದ್ದು, ಇವರಲ್ಲಿ ಹೊರ ರಾಜ್ಯದವರೂ ಅನೇಕರಿರುವರು. ಇತ್ತೀಚಿನ ವರದಿಯಂತೆ 1991ರ ಕೊನೆಯಲ್ಲಿ ಜಿಲ್ಲೆಯಲ್ಲಿ ಇದ್ದ ನೋಂದಾಯಿತ ಲೇವಾದೇವಿಗಾರರ ಸಂಖ್ಯೆ 23, ಅವರು 1991 ರಲ್ಲಿ ನೀಡಿದ್ದ ಸಾಲದ ಮೊತ್ತ ರೂ. 17.28 ಲಕ್ಷ ಆಗಿತ್ತು. ವರದಿಯ ವರ್ಷದಲ್ಲಿ ಜಿಲ್ಲೆಯಲ್ಲಿ ಇದ್ದ ಗಿರವಿದಾರರ ಸಂಖ್ಯೆ 19 ಮತ್ತು ಅವರು ನೀಡಿದ ಸಾಲದ ಮೊತ್ತ ರೂ. 20.42 ಲಕ್ಷ ಎಂದು ವರದಿ ತಿಳಿಸುವುದು.

### ಹಣಕಾಸು ನಿಗಮಗಳು

ಯಾವುದೇ ಅಸಂಘಟಿತ ಹಣದ ಮಾರುಕಟ್ಟೆಯಲ್ಲಿ ಖಾಸಗಿ ಸಾವುಕಾರರು, ಗಿರವಿ ಸಾಲಿಗರಲ್ಲದೇ ಹಲವಾರು ಬ್ಯಾಂಕೇತರ ಹಣಕಾಸಿನ ಸಂಸ್ಥೆಗಳಾದ ನಿಧಿಗಳು, ಚಿಟ್‌ಫಂಡ್ (ಫೈನಾನ್ಸ್ ಕಾರ್ಪೋರೇಷನ್) ಮುಂತಾದವುಗಳು ಅನೇಕ ಪಟ್ಟಣಗಳಲ್ಲಿ, ವ್ಯಾಪಾರೀ ಕೇಂದ್ರಗಳಲ್ಲಿ ನೆಲೆ ನಿಂತು ಅಥವಾ ತಮ್ಮ ಶಾಖೆಗಳನ್ನು ಪ್ರಾರಂಭಿಸಿ ಸ್ಥಳೀಯವಾಗಿ ವ್ಯಾಪಾರ / ಉದ್ದಿಮೆಗೆ, ಕೈಗಾರಿಕೆಗೆ, ವಾಹನ ಖರೀದಿ ಮುಂತಾದ ವ್ಯವಹಾರಗಳಿಗೆ ಅಡಮಾನ ಸಾಲ ನೀಡುತ್ತವೆ. ಅನೇಕ ಸಂದರ್ಭಗಳಲ್ಲಿ ಇವು ಪರ್ಯಾಯ ಬ್ಯಾಂಕಿಂಗ್ ಸಂಸ್ಥೆಗಳಂತೆ ತಮ್ಮ ವ್ಯವಹಾರ ನಡೆಸುತ್ತವೆ. ಮಧ್ಯಮ ವರ್ಗದ ಜನರ ಉಳಿತಾಯವನ್ನು ಹಲವಾರು ಆಕರ್ಷಕ ಯೋಜನೆಗಳ ಮೂಲಕ, ಹೆಚ್ಚಿನ ಬಡ್ಡಿಯನ್ನು ಕೊಡುವ ಮೂಲಕ ಹಾಗೂ ನಗದು ಬಹುಮಾನ ಮುಂತಾದ ಆಮಿಷಗಳ ಮೂಲಕ ಈ ಸಂಸ್ಥೆಗಳು ಠೇವಣಿಯಾಗಿ ಸಂಗ್ರಹಿಸುವುವು. ಈ ನಿಗಮಗಳು ಜನ ಸಾಮಾನ್ಯರಲ್ಲಿ ಉಳಿತಾಯ ಮನೋಭಾವನೆಯನ್ನು ಬೆಳೆಸುವಲ್ಲಿ ಶಕ್ತವಾದರೂ ಅನೇಕ ಬಾರಿ ಅವುಗಳ ಅನಿರ್ಬಂಧಿತ ವ್ಯವಹಾರಗಳು ಅವುಗಳ ಪತನಕ್ಕೆ ಕಾರಣವಾಗುವುದಲ್ಲದೇ ಸಾರ್ವಜನಿಕರು ವಂಚನೆಗೆ ಗುರಿಯಾಗುವುದೂ ಉಂಟು. ಈ ಸಂಸ್ಥೆಗಳು 'ಭಾರತೀಯ ಪಾಲುಗಾರಿಕೆ ಕಾನೂನು 1932' ಅಥವಾ 'ಕಂಪನಿಕಾನೂನು 1956'ರ ಅನ್ವಯ ನೋಂದಾಯಿಸಲ್ಪಟ್ಟ ಸಂಸ್ಥೆಗಳಾಗಿದ್ದು, ಈ ಸಂಸ್ಥೆಗಳ ವ್ಯವಹಾರಗಳ ಮೇಲೆ ಸಹಕಾರಿ ಸಂಘಗಳ ಉಪನಿಬಂಧಕರು ಕರ್ನಾಟಕ ಲೇವಾದೇವಿ ಕಾನೂನು 1961ರ ಅನ್ವಯ ನಿಯಂತ್ರಣ ಹೊಂದಿರುವರು. ಕೊಡಗು ಜಿಲ್ಲೆಯಾದ್ಯಂತ 1982 ರಿಂದ 1991ರ ವರೆಗೆ ಎಂಟು ನೋಂದಾಯಿತ ಖಾಸಗಿ ಹಣಕಾಸು ನಿಗಮಗಳು ಕಾರ್ಯ ನಿರ್ವಹಿಸುತ್ತಿದ್ದವು. ಇವುಗಳಲ್ಲಿ ಹಲವು ಬೇರೆ ಜಿಲ್ಲೆಯವುಗಳಾದರೆ ಹಲವು ಇದೇ ಜಿಲ್ಲೆಯಲ್ಲಿ ನೋಂದಾಯಿತವಾದಂಥವುಗಳು. ಈ ನಿಗಮಗಳಲ್ಲಿ ನಾಲ್ಕು ಕುಶಾಲನಗರದಲ್ಲಿ, ಎರಡು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಇದ್ದರೆ ಉಳಿದ ಎರಡು ಸೋಮವಾರಪೇಟೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. 1991ರಲ್ಲಿ ಇವುಗಳ ಸಂಖ್ಯೆ 13ಕ್ಕೆ ಮುಟ್ಟಿತ್ತು. ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕರ ವರದಿಯಂತೆ 1982, 1986 ಮತ್ತು 1989ರಲ್ಲಿ ಈ ಸಂಸ್ಥೆಗಳು ಸಂಯುಕ್ತವಾಗಿ ಸಂಗ್ರಹಿಸಿದ ಠೇವಣಿಗಳ ಮೊತ್ತ ಅನುಕ್ರಮವಾಗಿ ರೂ. 1.5 ಲಕ್ಷ ರೂ. 2.17 ಲಕ್ಷ ಮತ್ತು ರೂ. 4.17 ಲಕ್ಷ ಆಗಿತ್ತು. 1991ರಲ್ಲಿ ಇಂಥ 13 ಸಂಸ್ಥೆಗಳು ನೀಡಿದ ಸಾಲ 57.93 ಲಕ್ಷ ರೂ; ಸಂಗ್ರಹಿಸಿದ ಠೇವಣಿ 21.28 ಲಕ್ಷ ರೂ.

### ದುರ್ಬಲ ವರ್ಗಗಳಿಗೆ ಆರ್ಥಿಕ ನೆರವು

ಆರ್ಥಿಕವಾಗಿ ಹಿಂದುಳಿದ ಕಡುಬಡವರಿಗೆ ಸುಲಭ ಬಡ್ಡಿದರದಲ್ಲಿ ಸಾಲವನ್ನು ಒದಗಿಸುವ ಸಲುವಾಗಿ 1973 ರಿಂದ ಸಾರ್ವಜನಿಕ ವಲಯದ ಬ್ಯಾಂಕುಗಳು, ಇತರ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು 'ವ್ಯತ್ಯಸ್ತ ಬಡ್ಡಿ ಸಾಲದ ಯೋಜನೆ' (ಡಿ.ಆಯ್.ಆರ್.)ಯನ್ನು ಅಳವಡಿಸಿಕೊಂಡು ಸಾಲ ಸೌಲಭ್ಯವನ್ನು ಒದಗಿಸುತ್ತಿವೆ. ಈ ಯೋಜನೆಯ ಮುಖ್ಯ ಉದ್ದೇಶ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರಿಗೆ, 1 ಎಕರೆ ನೀರಾವರಿ ಇಲ್ಲವೇ 2.5 ಎಕರೆ ಒಣಭೂಮಿ ಹೊಂದಿದ್ದ ಕಿರುಹಿಡುವಳಿದಾರರಿಗೆ, ಗ್ರಾಮೀಣ ಕುಶಲಕರ್ಮಿಗಳಿಗೆ ಹಾಗೂ ಜೀತಮುಕ್ತರಿಗೆ ಆರ್ಥಿಕ ಪೋಷಣೆಯ ನೆಲೆಗಟ್ಟನ್ನು ಒದಗಿಸುವುದು. ಆರಂಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ರೂ. 2,000 ಹಾಗೂ ನಗರ ಪ್ರದೇಶದಲ್ಲಿ

ರೂ. 3,000 ಇದ್ದ ಫಲಾನುಭವಿಗಳ ಆದಾಯ ಮಿತಿಯನ್ನು ಮುಂದೆ ಏರಿಸುತ್ತ ಹೋಗಿ, ಈಗ ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ರೂ. 6,400 ಮತ್ತು ಮಹಾನಗರಗಳಲ್ಲಿ ರೂ. 7,200ಕ್ಕೆ ಏರಿಸಿದೆ. ಈ ಸಾಲಕ್ಕೆ ಬ್ಯಾಂಕುಗಳ ಬಡ್ಡಿದರ ಶೇ. 4ರಂತೆ ; ಉಳಿದ ಬಡ್ಡಿ ಹಣವನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಕೊಡಗು ಜಿಲ್ಲೆಯಲ್ಲಿ 1987, 1988 ಮತ್ತು 1989 ಅವಧಿಯಲ್ಲಿ ಈ ಮೇಲಿನ ಸಾಲದ ಯೋಜನೆಯ ಅನ್ವಯ ವಿವಿಧ ಬ್ಯಾಂಕುಗಳು ನೀಡಿದ ಒಟ್ಟು ಸಾಲದ ಮೊತ್ತ ಅನುಕ್ರಮವಾಗಿ ರೂ. 284.32 ಲಕ್ಷ, ರೂ. 226.13 ಲಕ್ಷ ಮತ್ತು ರೂ. 208.96 ಲಕ್ಷ ಎಂದು ಜಿಲ್ಲಾ ಮಾರ್ಗದರ್ಶಿ ಬ್ಯಾಂಕಿನ ವರದಿ ತಿಳಿಸುತ್ತದೆ. ಆಯಾ ವರ್ಷಗಳ ಫಲಾನುಭವಿಗಳ ಸಂಖ್ಯೆ ಅನುಕ್ರಮವಾಗಿ 14,877 13,781 ಮತ್ತು 12,447. ಮೇಲಿನ ಸಾಲದಲ್ಲಿ ವಾಣಿಜ್ಯ ಬ್ಯಾಂಕುಗಳು ನೀಡಿದ ಪ್ರಮಾಣ ಅನುಕ್ರಮವಾಗಿ ಶೇ. 3.79, 2.92 ಮತ್ತು 2.45 ಎಂದು ವರದಿಯಾಗಿದೆ. (ಈ ಬ್ಯಾಂಕುಗಳಿಂದ ನೀಡುವ ಒಟ್ಟು ಸಾಲದಲ್ಲಿ ಈ ಬಗೆಯ ಸಾಲದ ಪ್ರಮಾಣ ಶೇ. ಒಂದಕ್ಕಿಂತ ಕಡಿಮೆ ಇರಕೂಡದು).

## ಜೀತಪದ್ಧತಿ

ರಾಜ್ಯದ ಇತರೇ ಜಿಲ್ಲೆಗಳಲ್ಲಿ ರೂಢಿಯಲ್ಲಿ ಇದ್ದಂತೆ ಕೊಡಗು ಪ್ರಾಂತ್ಯದಲ್ಲಿಯೂ ಬಹು ಹಿಂದಿನಿಂದಲೂ ಜೀತ ಪದ್ಧತಿಯು ರೂಢಿಯಲ್ಲಿ ಇದ್ದ ಬಗ್ಗೆ ದಾಖಲೆಗಳು ಉಂಟು. ಈ ಜಿಲ್ಲೆಯ ಭೌಗೋಳಿಕ ಪರಿಸರ, ವ್ಯವಸಾಯ ಕ್ರಮ, ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಹಿನ್ನೆಲೆ, ಮುಂತಾದವುಗಳು ಈ ವ್ಯವಸ್ಥೆ ಬೆಳೆದು ಬರಲು ಅನುಕೂಲವಾಗಿದ್ದವು. 1854ರ ನಂತರ ತೋಟದ ಬೆಳೆಗಳಾದ ಕಾಫಿ, ಏಲಕ್ಕಿ, ಮೆಣಸು ಮುಂತಾದ ಬೆಳೆಗಳ ಕೃಷಿ ಹೆಚ್ಚಾದಂತೆ ಈ ವ್ಯವಸ್ಥೆ ಸ್ಥಿರವಾದಂತೆ ತೋರುವುದು. ಪ್ರಾಚೀನ ಕಾಲದಲ್ಲಿ ಹಾಗೂ ಕೊಡಗಿನ ಅಳರಸರ ಕಾಲದಲ್ಲಿ (1600-1834) ಗುಲಾಮಗಿರಿ (ಜಮ್ಮದಾಳು) ಯು ಮುಂದುವರಿದುಕೊಂಡು ಬಂದು 1843ರಲ್ಲಿ ಗುಲಾಮಗಿರಿ ನಿರ್ಮೂಲನಾ ಕಾಯಿದೆಯನ್ನು ಬ್ರಿಟಿಷ್ ಸರ್ಕಾರದವರು ಇಡೀ ದೇಶದಲ್ಲಿ ಜಾರಿಗೆ ತಂದರೂ ಗುಲಾಮಗಿರಿಯು ಸಮಾಜದ ಕೆಳವರ್ಗದವರಲ್ಲಿ ಪ್ರಚಲಿತವಿತ್ತು. ಇದಲ್ಲದೆ 1860ರ ಒಪ್ಪಂದ ಉಲ್ಲಂಘನಾ ಕಾನೂನು ಸಹ ಜೀತ ಪದ್ಧತಿಯು ಮುಂದುವರೆಯಲು ಸಹಾಯಕವಾಯಿತು. ತದನಂತರವೂ ಗುಲಾಮರು ಒಂದಲ್ಲ ಒಂದು ರೂಪದಲ್ಲಿ ಜೀತ ಪದ್ಧತಿಯಲ್ಲಿ ಮುಂದುವರೆದುಕೊಂಡು ಬಂದು ಇಂಥ ಬಂಧನಗಳು ಇತ್ತೀಚಿನವರೆಗೂ ಜೀವಂತವಾಗಿದ್ದುದನ್ನು ಕಾಣಬಹುದು. ಜೀತಕ್ಕೆ ಒಳಗಾಗುವವರ ಆರ್ಥಿಕ ಮುಗ್ಗಟ್ಟೇ ಜೀತ ವ್ಯವಸ್ಥೆಗೆ ಮೂಲ.

ಚಿಕ್ಕವೀರ ರಾಜೇಂದ್ರನು (1820–34) ಕೊಡಗನ್ನು ಆಳುತ್ತಿದ್ದಾಗ ಅವನ ಅಂಕೆಯಲ್ಲಿ 6,089 ಜಮ್ಮದ ಆಳುಗಳು ಇದ್ದರು ಎಂದು ದಾಖಲೆಗಳು ಸೂಚಿಸುತ್ತವೆ. ಇವರುಗಳಲ್ಲಿ ರಾಜನ ಭೂಮಿ, ತೋಟ, ಸೇವೆಗಳಲ್ಲಿ ಇದ್ದವರು 1,750; ಉಳಿದವರು ಜಮ್ಮ ಭೂಮಿಯ ಒಡೆಯರ ಜೊತೆ ಸರಕಾರದಿಂದಲೇ ಕೊಡಲ್ಪಟ್ಟವರಾಗಿದ್ದರು. (ಜಮ್ಮದಾಳುಗಳ ವಿವರಕ್ಕೆ ಪು. 96 ನೋಡಿ). ಜಮ್ಮದಾಳುಗಳಲ್ಲಿ ಎರಡು ಬಗೆ – ಭೂಮಿ ಜಮ್ಮದಾಳು ಮತ್ತು ಒಕ್ಕಲು ಜಮ್ಮದಾಳು. ಭೂಮಿ ಜಮ್ಮದಾಳುಗಳು ತಾವಿದ್ದ ಭೂಮಿಗೆ ಮಾತ್ರ ಆಳುಗಳಾಗಿದ್ದು ಆ ಭೂಮಿಯ ಯಜಮಾನ ಬದಲಾದರೂ ಇವರು ಸಂಬಂಧಪಟ್ಟ ಭೂಮಿಯಲ್ಲಿಯೇ ವಾಸಿಸುತ್ತಿದ್ದರು. ಭೂಮಿ ಮಾರಾಟವಾದರೆ ಅದರ ಜೊತೆ ಇವರೂ ಮಾರಲ್ಪಡುತ್ತಿದ್ದರು. ಒಕ್ಕಲು ಜಮ್ಮದಾಳುಗಳು ಭೂಮಿಯ ಯಜಮಾನರ ಎಲ್ಲ ಭೂಮಿಗಳಲ್ಲಿ ದುಡಿಯಬೇಕಾಗುತ್ತಿತ್ತು. ಅವರು ಯಜಮಾನನನ್ನು ಆಶ್ರಯಿಸಿಕೊಂಡಿದ್ದರು. ಅವರನ್ನು ಯಜಮಾನನು ಬೇರೆಯವರಿಗೆ ಮಾರಬಹುದಾಗಿತ್ತು. ಸಾಮಾನ್ಯವಾಗಿ, ರಾಜರು ತಮಗೆ ಸಂದ ವಿಶೇಷ ಸೇವೆಗಳಿಗೆ ಅಥವಾ ಕೈಕೆಳಗಿನ ಅಧಿಕಾರಿಗಳಿಗೆ ಭೂಮಿಯನ್ನು ಉಂಬಳಿ ಅಥವಾ ಜಹಗೀರಾಗಿ ಕೊಟ್ಟಾಗ ಆ ಭೂಮಿಯ ವ್ಯವಸಾಯಕ್ಕೆ ತಮ್ಮ ಒಡೆತನದಲ್ಲಿದ್ದ ದಲಿತ ಅಥವಾ ಬುಡಕಟ್ಟುಗಳವರನ್ನು ಜಮ್ಮದಾಳುಗಳಾಗಿ ನೀಡುತ್ತಿದ್ದರು. ರಾಜನ ಪನ್ಯ ಅಥವಾ ಅರಮನೆ ಭೂಮಿಗಳಲ್ಲೂ ಜಮ್ಮದಾಳುಗಳು ಇದ್ದರು.ಜಮ್ಮದಾಳುಗಳಿಗೆ ತಾವಿದ್ದ ಭೂಮಿಯನ್ನು ಮತ್ತು ಒಡೆಯನನ್ನು ಬಿಟ್ಟು ಹೋಗುವ ಸ್ವಾತಂತ್ರ್ಯ ಇರಲಿಲ್ಲ. ಯಜಮಾನನು ಅವರನ್ನು ಮಾರಾಟ ಮಾಡಬಹುದಾಗಿತ್ತು. "ಆದರೆ ಕೊಡಗಿನಲ್ಲಿ ಇಂಥ ಮಾರಾಟವು ಅಪರೂಪವಾಗಿತ್ತು" ಎಂದು ಡಿ. ಎನ್. ಕೃಷ್ಣಯ್ಯ ಹೇಳಿದ್ದಾರೆ. ಜಮ್ಮದಾಳುಗಳು ಸಾಮಾನ್ಯವಾಗಿ 12 ಬಗೆಯ ಜಾತಿಗೆ ಸೇರಿದವರಾಗಿದ್ದರು. ಉದಾ : ಕೆಂಬಟ್ಟೆ ಹೊಲೆಯ, ಮಾರಂಗಿ ಹೊಲೆಯ, ಬೆಟ್ಟ ಕುರುಬ, ಜೇನು ಕುರುಬ, ಯೆರವ ಮುಂತಾದವರು. ಇಂಥ ಜಮ್ಮದಾಳುಗಳಲ್ಲಿ ಕೆಂಬಟ್ಟೆ ಹೊಲೆಯ ಮತ್ತು ಅವನ ಹೆಂಡತಿಗೆ ವರ್ಷದ ಕೂಲಿ ರೂ. 12 ಆದರೆ ಜೇನುಕುರುಬ ಮತ್ತು ಬೆಟ್ಟ ಕುರುಬರಿಗೆ ರೂ. 10 ಎಂದು ಹಳೆಯ ದಾಖಲೆಯಲ್ಲಿ ಕಂಡುಬರುವುದು.

ಬ್ರಿಟಿಷರು 1836ರಲ್ಲಿ ಜಮ್ಮದಾಳುಗಳಿಗೆ ಸ್ವಾತಂತ್ರ್ಯ ಕೊಡಲು ಬಯಸಿದಾಗ ಸ್ಥಳೀಯ ದಿವಾನರು, ಅಧಿಕಾರಿಗಳು,

ಭೂಮಾಲೀಕರು (ಜಮ್ಮ ಭೂಮಿಯ ಮಾಲಿಕರು) ಈ ಕ್ರಮವನ್ನು ತೀವ್ರವಾಗಿ ವಿರೋಧಿಸಿದರು. ಆದರೆ ಕಂಪೆನಿ ಸರ್ಕಾರದವರು 1843 ರಲ್ಲಿ ಗುಲಾಮಗಿರಿ ನಿರ್ಮೂಲನಾ ಕಾಯಿದೆಯನ್ನು ಜಾರಿಗೆ ತಂದರೂ ಜಮ್ಮದಾಳುಗಳು ಸ್ವತಂತ್ರರಾಗುವ ಸ್ಥಿತಿಯಲ್ಲಿ ಇರಲಿಲ್ಲ. ಆದರೆ ಜಮ್ಮದಾಳುಗಳ ಮೇಲಿನ ಬಂಧನಕಾರೀ ಶರತ್ತುಗಳನ್ನು ಎರಡು ತಲೆಮಾರಿನ ನಂತರ ತೆಗೆದು ಹಾಕಲಾಯಿತು. ಈ ಮುಂದುವರಿಕೆಗೆ ಅಂದಿನ ಸನ್ನಿವೇಶ ಹಾಗೂ ಭೂಮಾಲಿಕರ ಒತ್ತಾಯ ಕಾರಣವಾಗಿದ್ದವು. ಮುಂದೆ ಕಾಲಕ್ರಮೇಣ ಕೊಡಗಿನಲ್ಲಿ ತೋಟದ ಬೆಳೆಯ ವ್ಯವಸಾಯ ಆರಂಭಗೊಂಡ ನಂತರ ಜಮ್ಮದಾಳುಗಳು ಹೆಚ್ಚು ಕೂಲಿ ಕೊಡುತ್ತಿದ್ದ ಯುರೋಪಿಯನ್ ಕಾಫೀ ತೋಟಗಳಲ್ಲಿ ಆಳುಗಳಾಗಿ ಸೇರಿಕೊಂಡರು. ಈ ಸನ್ನಿವೇಶದಲ್ಲಿ ತಮ್ಮ ಮಾಲಿಕನ ಜೊತೆಗೇ ಮುಂದುವರಿದ ಜಮ್ಮದಾಳುಗಳಿಗೆ ಅವರ ಮಾಲಿಕರು ಹೆಚ್ಚಿನ ಕೂಲಿ, ಸ್ವಾತಂತ್ರ್ಯ ನೀಡುವಂತಾಯಿತು. ತೋಟದ ಮಾಲಿಕ ಅಥವಾ ಕೂಲಿಗಳನ್ನು ಒದಗಿಸುವ ಗುತ್ತಿಗೆದಾರನಿಂದ ಮುಂಗಡ ಸಾಲ ಪಡೆದು ನೂರಾರು ಕೂಲಿಗಾರರು ಹೊಸ ಬಗೆಯ ಜೀತಕ್ಕೆ ಬದ್ಧರಾದರು. ಕೊಡಗಿನಲ್ಲಿ ಇಂಥ ವ್ಯವಸ್ಥೆ ತೋಟಗಳಲ್ಲಿ ಇನ್ನೂ ಇದೆ ಎನ್ನುವವರಿದ್ದಾರೆ. ಆದರೆ ಗುಲಾಮಗಿರಿ ಅಂತ್ಯವಾದರೂ, ಹಲವಾರು ಹಿಂದಿನ ಜಮ್ಮದಾಳುಗಳು ತಮ್ಮ ಮಾಲಿಕರಲ್ಲೇ ಪರಂಪರಾನುಗತವಾಗಿ ಮುಂದುವರಿದರು. ಅವರು ಈಗ ಕೂಲಿಯಾಳುಗಳಾಗಿ ಇದ್ದಾರೆ.

### ಜೀತಪದ್ಧತಿ ನಿರ್ಮೂಲನಾ ಕಾನೂನು

1976ರಲ್ಲಿ ಪ್ರಪ್ರಥಮವಾಗಿ ಕೇಂದ್ರ ಸರ್ಕಾರ ಜೀತ ಪದ್ಧತಿ ನಿರ್ಮೂಲನಾ ಕಾನೂನು ಜಾರಿಯಲ್ಲಿ ತಂದು ಜೀತ ನಿರತರನ್ನು ಮುಕ್ತಗೊಳಿಸಲು ಕ್ರಮ ಕೈಗೊಂಡಿತು. ಅಲ್ಲದೆ ಅವರು ಪಡೆದ ಸಾಲ, ಬಡ್ಡಿ ಮುಂತಾದವುಗಳನ್ನು ಕಾನೂನಿನ ಪ್ರಕಾರ ವಜಾ ಮಾಡಲಾಯಿತು. ಜೀತ ವಿಮುಕ್ತರ ಪುನರ್ವಸತಿ ಯೋಜನೆಯ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಆರ್ಥಿಕ ಸಹಾಯ ಯೋಜನೆಗಳನ್ನು ರೂಪಿಸಿವೆ. ರಾಷ್ಟ್ರೀಕೃತ ಬ್ಯಾಂಕುಗಳು ಜೀತ ವಿಮುಕ್ತರ ಪುನರ್ವಸತಿ ಯೋಜನೆಯಲ್ಲಿ ವಿಮುಕ್ತರಿಗೆ ತಲಾರೂ. 6,250 ಮೊತ್ತದಲ್ಲಿ ಹೈನದ ದನಗಳ ಪೂರೈಕೆ, ಕುರಿ, ಕೋಳಿ, ಹಂದಿ ಸಾಕಣೆ, ಎತ್ತು ಗಾಡಿಗಳ ಖರೀದಿ, ಕೈಕಸಬುಗಳ ಪ್ರಾರಂಭ ಮುಂತಾದ ಸ್ವಯಂ ಉದ್ಯೋಗಗಳಿಗೆ ಆದಾಯ ಮೂಲದ ಸಾಮಗ್ರಿಗಳನ್ನು ಒದಗಿಸುವ ಮೂಲಕ ಸಹಾಯ ಮಾಡುತ್ತಿವೆ. ಜೀತದಾಳುಗಳ ಪುನರ್ವಸತಿ ಯೋಜನೆಯ ಅಡಿಯಲ್ಲಿ ರಾಜ್ಯ ಸರ್ಕಾರ ಮಾಡುವ ವೆಚ್ಚದಲ್ಲಿ ಶೇ. 50ರಷ್ಟನ್ನು ಕೇಂದ್ರ ಸರ್ಕಾರ 1979-80 ರಿಂದ ಭರಿಸುತ್ತಿದೆ. ಜೀತದಾಳುಗಳನ್ನು ಗುರುತಿಸಿ ಅವರ ಪುನರ್ವಸತಿ ಕೆಲಸವನ್ನು ಮಂಡಲ ಪಂಚಾಯತಿಗಳು, ಜಿಲ್ಲಾ ಪರಿಷತ್ತಿನ ಆಡಿಯಲ್ಲಿ ಮಾಡುತ್ತಿವೆ. ಈ ಜಿಲ್ಲೆಯ ಜೀತದಾಳುಗಳಲ್ಲಿ ಬಹುಪಾಲು ಸ್ಥಳೀಯ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಲ್ಲದೇ ಹೊರ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳದಿಂದ ಬಂದ ಕಾರ್ಮಿಕರೂ ಸೇರಿರುವರು. ಜೀತ ಪದ್ಧತಿಯನ್ನು ಆಚರಿಸುವುದು, ಜೀತಕ್ಕೆ ಮುಂಗಡ ಹಣ ನೀಡುವುದು, ಈ ವಿಧಾನಕ್ಕೆ ಪ್ರೋತ್ಸಾಹ ನೀಡುವುದು, ಮುಂತಾದವುಗಳು ಕಾನೂನಿನ ಅನ್ವಯ ಶಿಕ್ಷಾರ್ಹಅಪರಾಧಗಳೆಂದು ಸಾರಲಾಗಿದೆ. ಇಂತಹ ಅಪರಾಧಗಳಿಗೆ ಎರಡು ಸಾವಿರ ರೂಪಾಯಿಗಳವರೆಗೆ ದಂಡ ಮತ್ತು ಮೂರು ವರ್ಷದ ವರೆಗೆ ಶಿಕ್ಷೆ ವಿಧಿಸಬಹುದಾಗಿದೆ. ಜಿಲ್ಲಾಧಿಕಾರಿಗಳ ವರದಿ ತಿಳಿಸುವಂತೆ, 1990ರ ಕೊನೆಯವರೆಗೆ ಈ ಜಿಲ್ಲೆಯಲ್ಲಿ ಸೋಮವಾರಪೇಟೆ ತಾಲೂಕನ್ನು ಹೊರತುಪಡಿಸಿ ಬೇರೆ ಯಾವ ತಾಲೂಕಿನಿಂದಲೂ ಜೀತ ಪದ್ಧತಿಯ ಅಸ್ತಿತ್ವದ ಬಗ್ಗೆ ವರದಿಯಾಗಿಲ್ಲ. ಸೋಮವಾರಪೇಟೆ ತಾಲೂಕಿನಲ್ಲಿ ಕೇವಲ 56 ಜನರನ್ನು ಗುರುತಿಸಿ ಮರುವಸತಿ ಕಲ್ಪಿಸಲಾಗಿದೆ. ಅವರಲ್ಲಿ 38 ಜನರು ಪರಿಶಿಷ್ಟ ಜಾತಿಗೆ ಸೇರಿದ್ದರೆ 18 ಜನರು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿದ್ದರು.

### ಕರ್ನಾಟಕ ಋಣಪರಿಹಾರ ಕಾನೂನು 1976

ಹೊರಲಾರದ ಸಾಲದ ಹೊರೆಯಿಂದ ಬಳಲುತ್ತಿದ್ದ ಸಣ್ಣ ಭೂ ಹಿಡುವಳಿದಾರರು, ಭೂರಹಿತ ಬೇಸಾಯ ಕಾರ್ಮಿಕರು ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಪರಿಹಾರವನ್ನು ಒದಗಿಸುವ ಸದುದ್ದೇಶದಿಂದ ರಾಜ್ಯ ಸರ್ಕಾರವು 1976ರಲ್ಲಿ ಕರ್ನಾಟಕ ಋಣಪರಿಹಾರ ಕಾನೂನನ್ನು ಜಾರಿಗೆ ತಂದಿತು. ಈ ಕಾನೂನಿನ ಅನ್ವಯ ಪರಿಹಾರ ಪಡೆಯಲು ವ್ಯಕ್ತಿಯ ವಾರ್ಷಿಕ ಆದಾಯದ ಮಿತಿ ರೂ. 4,800 ಮೀರಕೂಡದು (1979 ನವೆಂಬರ್ 15 ರಿಂದ). ಆರಂಭದಲ್ಲಿ ಆದಾಯ ಮಿತಿ 2,400 ರೂ. ಇತ್ತು. ಈ ಕಾಯಿದೆಯ ಅನ್ವಯ ಮೇಲೆ ತಿಳಿಸಿದ ವರ್ಗದ ಸಾಲಗಾರರಿಂದ ಸಾಲದ ಮೊತ್ತ ಹಾಗೂ ಬಡ್ಡಿಯನ್ನು ಮರಳಿ ಪಡೆಯುವ ಅವಕಾಶಕ್ಕೆ ಸಾಲಿಗರು ಎರವಾದರಲ್ಲದೆ ಸಾಲಿಗರಿಗೆ ಆಧಾರವಾಗಿ ಒದಗಿಸಿದ್ದ ಚರಾಚರ ಸ್ವತ್ತುಗಳನ್ನು ಮರಳಿ ಸಾಲಗಾರರಿಗೇ ಕೊಡಿಸಲಾಯಿತು. ಹಾಗೂ ಸಾಲಿಗರು ಸಿವಿಲ್ ವ್ಯಾಜ್ಯದ ಮೂಲಕ ಹಣದ ಮರು ಪಾವತಿಗಾಗಿ ನ್ಯಾಯಾಲಯಗಳಿಂದ ಪಡೆದ ಎಲ್ಲಾ ಡಿಕ್ರಿಗಳನ್ನು ಕಾಯಿದೆ ಜಾರಿಯಾದಂದಿನಿಂದ ಅಸಿಂಧು

ವೆಂದು ಸಾರಲಾಯಿತು. ಆದರೆ ಈ ಕಾನೂನಿನ ಪರಿವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸಾರ್ವಜನಿಕ ಕಂಪೆನಿಗಳು ಮತ್ತು ಸಹಕಾರಿ ಸಂಘಗಳಿಂದ ಪಡೆದ ಸಾಲಗಳು ಒಳಪಡುವುದಿಲ್ಲ. ಈ ಕಾಯಿದೆಯ ಅಧಿನಿಯಮ 5ರ ಅನ್ವಯ, ಸಾಲಿಗನು ಸಾಲಗಾರನ ಅಡಮಾನದ ಸೊತ್ತನ್ನು ಹಿಂದಕ್ಕೆ ನೀಡಲು ತಪ್ಪಿದರೆ ರೂಪಾಯಿ ಒಂದು ಸಾವಿರದಿಂದ ಐದುಸಾವಿರವರೆಗೆ ಜುಲ್ಮಾನೆ ಮತ್ತು ಮೂರು ತಿಂಗಳಿಂದ ಒಂದು ವರ್ಷದವರೆಗಿನ ಜೈಲುವಾಸಕ್ಕೆ ಬಾಧ್ಯನಾಗುತ್ತಾನೆ.

ಋಣ ಪರಿಹಾರ ಕಾಯ್ದೆ ಅನ್ವಯ 1990ರ ಅಂತ್ಯದವರೆಗೆ ಪರಿಹಾರಕೋರಿ ಜಿಲ್ಲೆಯಲ್ಲಿ ಬಂದ ಅರ್ಜಿಗಳ ಸಂಖ್ಯೆ 691. ಅವುಗಳಲ್ಲಿ ಸೋಮವಾರಪೇಟೆ ತಾಲೂಕಿನಿಂದ 430 ಉಳಿದವುಗಳು (261). ವೀರರಾಜಪೇಟೆ ತಾಲೂಕಿನಿಂದ ಮಡಿಕೇರಿ ತಾಲೂಕಿನಿಂದ ಅಂತಹ ಯಾವುದೇ ಕೋರಿಕೆಗಳು ಬಂದಿಲ್ಲವೆಂದು ವರದಿಯಾಗಿದೆ. ಪರಿಹಾರ ಕೋರಿ ಬಂದ ಅರ್ಜಿಗಳಲ್ಲಿ ಅಡಕವಾಗಿರುವ ಋಣದ ಮೊತ್ತ ರೂ. 5.51 ಲಕ್ಷ, ಅದರಲ್ಲಿ ಸೋಮವಾರಪೇಟೆಯದೇ ಸಿಂಹಪಾಲು (ರೂ. 4.63 ಲಕ್ಷ) ; ಉಳಿದದ್ದು ರೂ. 88,200 ವೀರರಾಜಪೇಟೆಯದು ; ವಿಲೇವಾರಿಯಾದ ಅರ್ಜಿಗಳ ಸಂಖ್ಯೆ 571 ಆಗಿದ್ದರೆ ಅಡಕವಾದ ಮೊತ್ತ ರೂ. 1.24 ಲಕ್ಷ. (ವೀರರಾಜಪೇಟೆಯ ಎಲ್ಲಾ ಅರ್ಜಿಗಳು ವಿಲೇವಾರಿಯಾಗಿರುವುವು). ಪರಿಹಾರ ಪಡೆದವರಲ್ಲಿ ಪರಿಶಿಷ್ಟ ಜಾತಿ, ಬುಡಕಟ್ಟು ಮತ್ತಿತರ ಹಿಂದುಳಿದ ವರ್ಗಗಳಿಗೆ ಸೇರಿದವರ ಸಂಖ್ಯೆ ಈ ಎರಡು ತಾಲೂಕುಗಳಲ್ಲಿ ಪ್ರತೀ ತಾಲೂಕಿನಿಂದ 18 ಎಂದು ಜಿಲ್ಲಾಧಿಕಾರಿಗಳ ವರದಿ ತಿಳಿಸುವುದು.

## ವಾಣಿಜ್ಯ ಬ್ಯಾಂಕುಗಳು

ಕೊಡಗು ಜಿಲ್ಲೆಯ ಸಮಗ್ರ ಬ್ಯಾಂಕಿಂಗ್ ಇತಿಹಾಸ ಅಧ್ಯಯನದ ಅವಿಭಾಜ್ಯ ಅಂಗವಾದ ವಾಣಿಜ್ಯ ಬ್ಯಾಂಕುಗಳ ಇತಿಹಾಸವನ್ನು 1934 ರಿಂದಲೇ ಗುರುತಿಸಬಹುದು.* ಇದಕ್ಕೂ ಪೂರ್ವದಲ್ಲಿ ಅಂದರೆ 1922 ರಿಂದ ಕಾರ್ಯಾರಂಭ ಮಾಡಿದ ಅಂದಿನ ಕೊಡಗು ರಾಜ್ಯವ್ಯಾಪ್ತಿಯನ್ನು ಪಡೆದಿದ್ದ ಸದ್ಯದ ಕೊಡಗು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಸಾಲ ಸೌಲಭ್ಯಗಳನ್ನು ತನ್ನ ಶಾಖೆಗಳ ಮೂಲಕ ಒದಗಿಸುತ್ತಿತ್ತು ಮತ್ತು ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಂತೆ 1919 ರಿಂದಲೇ ಮೂಡಿ ಬಂದ ವ್ಯವಸಾಯ ಮತ್ತು ವ್ಯವಸಾಯೇತರ ಪತ್ತಿನ ಸಹಕಾರಿ ಸಂಸ್ಥೆಗಳು (ರೂರಲ್ ಬ್ಯಾಂಕ್ಸ್) ತಮ್ಮ ಸದಸ್ಯರಿಗೆ ಸಾಲದ ಸೌಲಭ್ಯವನ್ನು ಒದಗಿಸುತ್ತಿದ್ದವು. ಇದಲ್ಲದೆ ದೀರ್ಘಾವಧಿ ವ್ಯವಸಾಯ ಅಭಿವೃದ್ಧಿ ಸಾಲ ನೀಡುವ ಜಮೀನು ಅಭಿವೃದ್ಧಿ ಬ್ಯಾಂಕುಗಳು 1957–62ರಲ್ಲಿ ಮೂಡಿ ಬಂದವು. ಈ ಎಲ್ಲಾ ಕಾರಣಗಳಿಂದ ಸ್ಥಳೀಯವಾಗಿ ಸ್ವತಂತ್ರವಾದ ಯಾವುದೇ ವಾಣಿಜ್ಯ ಬ್ಯಾಂಕುಗಳು ಕೊಡಗು ಜಿಲ್ಲೆಯಿಂದ ರೂಪು ತಾಳಲು ಅವಕಾಶವಾಗಲಿಲ್ಲವೆಂದು ತೋರುವುದು.

ಕಾಲ ಕ್ರಮೇಣ, ಜಿಲ್ಲೆಯಾದ್ಯಂತ ತೋಟದ ಬೆಳೆಗಳಲ್ಲಿ ಬಹು ಮುಖ್ಯವಾದ ಕಾಫಿ, ಏಲಕ್ಕಿ, ಮೆಣಸು, ಕಿತ್ತಳೆ ಮುಂತಾದ ವಾಣಿಜ್ಯ ಬೆಳೆಗಾರರ ಹೆಚ್ಚುತ್ತಿರುವ ಸಾಲದ ಆವಶ್ಯಕತೆಗಳನ್ನು ಪೂರೈಸಲು ನೆರೆಯ ದಕ್ಷಿಣ ಕನ್ನಡ ಜಿಲ್ಲೆಯಿಂದ ಮತ್ತು ನೆರೆಯ ರಾಜ್ಯಗಳಾದ ಕೇರಳ, ತಮಿಳುನಾಡಿನ ಬ್ಯಾಂಕಿಂಗ್ ಕಂಪನಿಗಳು ಜಿಲ್ಲೆಯ ವ್ಯಾಪಾರದ ಆಯಕಟ್ಟಿನ ಸ್ಥಳಗಳಲ್ಲಿ ಶಾಖೆಗಳನ್ನು ತೆರೆಯುವ ಮೂಲಕ ವಾಣಿಜ್ಯ ಬ್ಯಾಂಕಿಂಗ್ ವ್ಯವಹಾರ ಜಿಲ್ಲೆಯಾದ್ಯಂತ ಹರಡಲು ಕಾರಣವಾದವು. 1934ರ ಪೂರ್ವದಲ್ಲಿ ಜಿಲ್ಲೆಯ ದೊಡ್ಡ ಬೆಳೆಗಾರರ, ವ್ಯಾಪಾರ ಉದ್ದಿಮೆದಾರರ, ಸಾಲದ ಆವಶ್ಯಕತೆಗಳನ್ನು ದೂರದ ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಕಣ್ಣಾನೂರಿನ ವಾಣಿಜ್ಯ ಬ್ಯಾಂಕುಗಳು ಪೂರೈಸುತ್ತಿದ್ದವು. ಈ ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕಿಂಗ್ ಪ್ರಾರಂಭವಾದ ಕಾಲ 1930–40ರ ಜಾಗತಿಕ ಆರ್ಥಿಕ ಹಿನ್ನಡೆಯ ಕಾಲ. ಬೆಳೆಗಾರರಿಗೆ ಪ್ರೋತ್ಸಾಹದಾಯಕ ಬೆಲೆ ಇಲ್ಲದೇ ಅವರುಗಳು ಸಂಕಷ್ಟಕ್ಕೆ ಒಳಗಾದ ಅವಧಿಯಿದು. ಈ ಸಂದರ್ಭದಲ್ಲಿ ದೀರ್ಘಾವಧಿಯ ಸಾಲಗಳನ್ನು ನೀಡುವ ಮೂಲಕ ವಾಣಿಜ್ಯ ಬ್ಯಾಂಕುಗಳು ಬೆಳೆಗಾರರ ಸಹಾಯಕ್ಕೆ ಬಂದವು. ಮುಂದೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ದೀರ್ಘಾವಧಿಸಾಲ ನೀಡುವ ಯೋಜನೆಯನ್ನು ಪ್ರಾರಂಭಿಸಿತು.

1934ರಲ್ಲಿ ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ ಇಂದಿನ ಕಾರ್ಪೊರೇಷನ್ ಬ್ಯಾಂಕ್ (ಉಡುಪಿ : 1906) ತನ್ನ ಶಾಖೆಯನ್ನು ಪ್ರಾರಂಭಿಸುವ ಮೂಲಕ ವಾಣಿಜ್ಯ ಬ್ಯಾಂಕಿಂಗ್ ಚಟುವಟಿಕೆಗಳು ಪ್ರಾರಂಭವಾದವು. ಸದರಿ ಬ್ಯಾಂಕು ಮುಂದಿನ ವರ್ಷ (1935) ವೀರರಾಜಪೇಟೆಯಲ್ಲಿ, ಜಿಲ್ಲೆಯಲ್ಲಿ ತನ್ನ ಎರಡನೇಯ ಶಾಖೆಯನ್ನು ಪ್ರಾರಂಭಿಸಿತು. ಇದಾದ 11 ವರ್ಷದ ನಂತರ 1946ರಲ್ಲಿ ವಿಜಯಾ ಬ್ಯಾಂಕ್

* ಇದಕ್ಕೂ ಮೊದಲೇ ಇಂಪೀರಿಯಲ್ ಬ್ಯಾಂಕ್‌ನ ಒಂದು ಶಾಖೆ ಕೊಡಗಿನಲ್ಲಿ ಇತ್ತೆಂದು ಒಂದು ಹೇಳಿಕೆಯಿದೆ.

(ಮಂಗಳೂರು : 1931) ಮಡಿಕೇರಿಯಲ್ಲಿ ತನ್ನ ಪ್ರಥಮ ಶಾಖೆಯನ್ನು ತೆರೆಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಜಿಲ್ಲೆ ಯಾದ್ಯಂತ ಇದ್ದಂಥ ವಾಣಿಜ್ಯ ಬ್ಯಾಂಕುಗಳ ಶಾಖೆಗಳು ಕೇವಲ ಮೂರು. ಸ್ವಾತಂತ್ರ್ಯಾನಂತರ ಜಿಲ್ಲೆಯ ಇತರ ಪ್ರಮುಖ ಕೇಂದ್ರಗಳಾದ ಪೊನ್ನಂಪೇಟೆ (1950), ಸೋಮ ವಾರಪೇಟೆ (1951), ಸುಂಟಿಕೊಪ್ಪ (1958), ಗೋಣಿ ಕೊಪ್ಪಲು (1959) ಮತ್ತು ಕುಶಾಲನಗರ (1960) ಗಳಲ್ಲಿ ವಾಣಿಜ್ಯ ಬ್ಯಾಂಕಿನ ಚಟುವಟಿಕೆಗಳು ಪ್ರಾರಂಭವಾದವು. ಈ ಮೇಲಿನ ಐದು ಸ್ಥಳಗಳಲ್ಲಿನ ಮೊದಲಿನ ಮೂರು ಸ್ಥಳ ಗಳಲ್ಲಿ ಕಾರ್ಪೊರೇಷನ್ ಬ್ಯಾಂಕು ತನ್ನ ಶಾಖೆಗಳನ್ನು ತೆರೆದರೆ ನಾಲ್ಕನೆಯ ಸ್ಥಳವಾದ ಸುಂಟಿಕೊಪ್ಪದಲ್ಲಿ ಕರ್ನಾಟಕ ಬ್ಯಾಂಕು ಮತ್ತು ಗೋಣಿಕೊಪ್ಪಲಿನಲ್ಲಿ ವಿಜಯಾ ಬ್ಯಾಂಕ್, ತಮ್ಮ ತಮ್ಮ ಶಾಖೆಗಳನ್ನು ತೆರೆಯುವ ಮೂಲಕ ಜಿಲ್ಲೆಯ ವಾಣಿಜ್ಯಕ್ಕೆ ಸಹಾಯಕವಾದವು. ಈ ಮಧ್ಯದಲ್ಲಿ (ಸರ್ಕಾರಿ ವಲಯದ) ಭಾರತೀಯ ಸ್ಟೇಟ್ ಬ್ಯಾಂಕ್ ಮಡಿಕೇರಿ (1955) ಮತ್ತು ವೀರರಾಜಪೇಟೆ (1956)ಗಳಲ್ಲಿ ಕ್ರಮ ವಾಗಿ ತನ್ನ ಎರಡು ಶಾಖೆಗಳನ್ನು ತೆರೆಯುವ ಮೂಲಕ ವಾಣಿಜ್ಯ ಬ್ಯಾಂಕಿಂಗ್ ವ್ಯವಹಾರಕ್ಕೆ ಹೊಸ ಚಾಲನೆಯನ್ನು ನೀಡಿತಲ್ಲದೇ ಗ್ರಾಮೀಣ ಅಭಿವೃದ್ಧಿ, ಸಣ್ಣ ಕೈಗಾರಿಕೆಗಳು, ವ್ಯವಸಾಯ ಮಾರುಕಟ್ಟೆ ಅಭಿವೃದ್ಧಿ ಮುಂತಾದ ಆರ್ಥಿಕ ಚಟುವಟಿಕೆಗಳಿಗೆ ಹೆಚ್ಚು ಉತ್ತೇಜನ ದೊರೆಯುವಂತಾ ಯಿತು. ಮಡಿಕೇರಿಯಲ್ಲಿ 1955ರ ಫೆಬ್ರವರಿಯಲ್ಲಿಯೇ ಇದ್ದ ಇಂಪೀರಿಯಲ್ ಬ್ಯಾಂಕಿನ ಶಾಖೆ 1955 ಜುಲೈನಿಂದ ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯಾಯಿತು.

ಕೊಡಗು ವಿಶಾಲ ಕರ್ನಾಟಕಕ್ಕೆ ಸೇರಿದ ನಂತರ 1957 ರಲ್ಲಿ ದೇಶದ ಇನ್ನೊಂದು ಪ್ರಮುಖ ಬ್ಯಾಂಕಾದ ಕೆನರಾ ಬ್ಯಾಂಕು (ಮಂಗಳೂರು : 1906) ಜಿಲ್ಲೆಯ ವಾಣಿಜ್ಯ ವ್ಯವಹಾರಕ್ಕೆ ಪಾದಾರ್ಪಣ ಮಾಡಿತು. ಹೆಚ್ಚುತ್ತಿರುವ ವಾಣಿಜ್ಯ ಬ್ಯಾಂಕುಗಳ ಶಾಖೆಗಳು ವಿಶೇಷವಾಗಿ ಜಿಲ್ಲೆಯ ಕಾಫಿ ಮತ್ತು ಇತರ ತೋಟದ ಬೆಳೆಗಾರರ, ವಾಣಿಜ್ಯ ಉದ್ಯಮಿಗಳ, ಸರಕು ಸಾಗಣೆದಾರರ ಮತ್ತು ಖಾಸಗಿ ಬಸ್ ಮಾಲಿಕರ ಸಾಲದ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮತ್ತು ಜನರಲ್ಲಿ ಬ್ಯಾಂಕಿಂಗ್ ಪ್ರವೃತ್ತಿ ಬೆಳೆಸಿ ಉಳಿತಾಯ ಮನೋಭಾವನೆಯನ್ನು ಬಿಂಬಿ ಸುವಲ್ಲಿ ಸಹಾಯಕವಾದವು.

1934 ರಿಂದ 1960ರ ವರೆಗಿನ ಸುಮಾರು ಎರಡೂವರೆ ದಶಕದಲ್ಲಿ ಜಿಲ್ಲೆಯ ಏಳು ಕೇಂದ್ರಗಳು ವಾಣಿಜ್ಯ ಬ್ಯಾಂಕಿನ ಸೌಲಭ್ಯ ಹೊಂದಿದ್ದವು. ಒಟ್ಟು ಶಾಖೆಗಳ ಸಂಖ್ಯೆ 11; ಅವುಗಳಲ್ಲಿ ನಾಲ್ಕು ಮಡಿಕೇರಿಯಲ್ಲಿ, ಎರಡು ವೀರರಾಜಪೇಟೆ ಯಲ್ಲಿದ್ದವು. ಉಳಿದವು ಬೇರೆ ಬೇರೆ ಸ್ಥಳಗಳಲ್ಲಿದ್ದವು.

ರಾಷ್ಟ್ರೀಕರಣ ಪೂರ್ವದ ಐದು ವರ್ಷ ಮೊದಲೇ ಅಂದರೆ 1964 ರಷ್ಟು ಹಿಂದೆಯೇ ಜಿಲ್ಲೆಯಾದ್ಯಂತ ಸಮರ್ಪಕವಾದ ಬ್ಯಾಂಕಿಂಗ್ ಸೇವೆಗಳ ಲಭ್ಯತೆಯನ್ನು ಕುರಿತು ಅಂಕಿ ಅಂಶ ಗಳು ಸಮರ್ಥನೆ ನೀಡುತ್ತವೆ. 1964ರಲ್ಲಿ ಜಿಲ್ಲೆಯಾದ್ಯಂತ ವಾಣಿಜ್ಯ ಬ್ಯಾಂಕುಗಳ 11 ಶಾಖೆಗಳು ಇದ್ದು, ಸರಾಸರಿ 32,000 ಜನಸಂಖ್ಯೆಗೆ ಒಂದರಂತೆ ಬ್ಯಾಂಕುಗಳ ಸೌಲಭ್ಯ ಇತ್ತು. ಭಾರತದಲ್ಲಿ ಈ ಪ್ರಮಾಣ ಆಗ ಸರಾಸರಿ 75,000 ಜನಸಂಖ್ಯೆಗೆ ಒಂದರಂತೆ ಇತ್ತು.

ರಾಷ್ಟ್ರೀಕರಣ ಪೂರ್ವದ ಐದು ವರ್ಷಗಳಲ್ಲಿ ಅಂದರೆ 1966 ರಿಂದ 1970ರ ವರೆಗೆ ಜಿಲ್ಲೆಯಾದ್ಯಂತ ವಾಣಿಜ್ಯ ಬ್ಯಾಂಕುಗಳು ಸಂಗ್ರಹಿಸಿದ್ದ ಠೇವಣಿ ಮತ್ತು ಸಾಲ ನೀಡಿಕೆ ಗಳು ಕೋಟಿ ರೂ.ಗಳಲ್ಲಿ ಅನುಕ್ರಮವಾಗಿ ಈ ಮುಂದಿನಂತೆ ಇದ್ದವು : 1966–4.19 (1.04), 1967–5.03 (1.51), 1968–5.53 (1.89), 1969–6.13 (2.54), 1970–6.37 (2.66) – ಆವರಣದಲ್ಲಿ ಸೂಚಿಸಿರುವ ಅಂಕಿಗಳು ಸಾಲ ಮುಂಗಡವನ್ನು ಸೂಚಿಸುತ್ತವೆ. 1970 ರಲ್ಲಿ ಜಿಲ್ಲೆಯಾದ್ಯಂತ ಇದ್ದಂಥ ಶಾಖೆಗಳ ಸಂಖ್ಯೆ 33. ಅವುಗಳಲ್ಲಿ 7 ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ, ತಾಲೂಕು ಕೇಂದ್ರಗಳಾದ ಸೋಮವಾರಪೇಟೆ ಮತ್ತು ವೀರರಾಜಪೇಟೆಯಲ್ಲಿ ತಲಾ ಮೂರು, ಪೊನ್ನಂಪೇಟೆಯಲ್ಲಿ ಎರಡು ಇದ್ದರೆ, ಉಳಿದ 18 ಶಾಖೆಗಳು ಜಿಲ್ಲೆಯ ವಿವಿಧ ಭಾಗಗಳಲ್ಲಿದ್ದವು.

ರಾಷ್ಟ್ರೀಕರಣದ ನಂತರದ ದಶಕಗಳಲ್ಲಿ ಜಿಲ್ಲೆಯಾದ್ಯಂತ ವಾಣಿಜ್ಯ ಬ್ಯಾಂಕುಗಳ ಶಾಖೆಗಳಲ್ಲಿ ಉಂಟಾದ ತೀವ್ರ ಹೆಚ್ಚಳ ವನ್ನು ಕಾಣಬಹುದಲ್ಲದೆ, ಅದೇ ಪ್ರಮಾಣಕ್ಕೆ ಅನುಗುಣವಾಗಿ ಠೇವಣಿ ಸಂಗ್ರಹಣೆ ಮತ್ತು ಠೇವಣಿಗಿಂತ ಹೆಚ್ಚಿನ ಪ್ರಮಾಣ ದಲ್ಲಿ ಅಭಿವೃದ್ಧಿ ಸಾಲಗಳ ನೀಡಿಕೆಯನ್ನು ಗಮನಿಸಬಹುದು. ಇತ್ತೀಚಿನ ವರ್ಷಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಸಾಲ ನೀಡಿಕೆಯ ನೀತಿ ನಿರೂಪಣೆಯಲ್ಲಿ ಅನೇಕ ಪ್ರಗತಿಪರ ಧೋರಣೆ ಗಳನ್ನು ಅಳವಡಿಸಿಕೊಂಡಿದ್ದು, ಸಾಲಗಾರನ ವ್ಯಕ್ತಿತ್ವಕ್ಕಿಂತ ಅವನು ಪಡೆಯುವ ಸಾಲದ ಉದ್ದೇಶ ಮತ್ತು ಅದರ ಬಳಕೆಯು ಮುಖ್ಯವೆಂದು ಪರಿಗಣಿಸಿ, ಗ್ರಾಮೀಣ ಪ್ರದೇಶ ಗಳಲ್ಲಿ ಸಾಮಾಜಿಕ-ಆರ್ಥಿಕ ಬದಲಾವಣೆಯನ್ನು ತರುವಲ್ಲಿ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವವರಲ್ಲಿ ಬ್ಯಾಂಕುಗಳು ಭರವಸೆಯ ಬೆಳಕನ್ನು ಮೂಡಿಸಿವೆ.

1970–80ರ ದಶಕದಲ್ಲಿ ಈ ಜಿಲ್ಲೆಯಲ್ಲಿ ಕಂಡುಬಂದ ಗಣನೀಯವಾದ ಬ್ಯಾಂಕಿಂಗ್ ಪ್ರಗತಿಯನ್ನು ಈ ಕೆಳಗಿನ ತಖ್ತೆಯಿಂದ ಗುರುತಿಸಬಹುದು.

(ಮೊತ್ತ ಕೋಟಿ ರೂ.ಗಳಲ್ಲಿ)

| | 1971 | 1973 | 1975 | 1977 | 1979 | 1981 | 1982 |
|---|---|---|---|---|---|---|---|
| ಶಾಖೆಗಳ ಸಂಖ್ಯೆ | 42 | 51 | 57 | 63 | 67 | 71 | 71 |
| ಠೇವಣಿಗಳು | 8 | 11 | 15 | 27 | 38 | 43 | 50 |
| ಮುಂಗಡಗಳು | 4 | 6 | 8 | 13 | 23 | 31 | 34 |

ರಾಷ್ಟ್ರೀಕರಣದ ನಂತರದ ದಶಕಗಳಲ್ಲಿ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಬೇಡಿಕೆ ಹೆಚ್ಚುತ್ತಿರುವ ಬ್ಯಾಂಕಿಂಗ್ ಸೇವೆಗಳನ್ನು ಪೂರೈಸಲು ನಮ್ಮ ರಾಜ್ಯದ ಮತ್ತು ನೆರೆಯ ರಾಜ್ಯಗಳ ಅನೇಕ ಬ್ಯಾಂಕಿಂಗ್ ಸಂಸ್ಥೆಗಳು ಹೊಸದಾಗಿ ಶಾಖೆಗಳನ್ನು ಪ್ರಾರಂಭಿಸುವ ಮೂಲಕ ಹಾಗೂ ಇದ್ದ ಶಾಖೆಗಳ ವ್ಯವಹಾರವನ್ನು ವಿಸ್ತರಿಸುವ ಮೂಲಕ ಬ್ಯಾಂಕಿಂಗ್ ಸೇವೆಗಳನ್ನು ವಿಶೇಷವಾಗಿ ವಿಸ್ತರಿಸಿವೆ. ಇತ್ತೀಚಿನ ವರ್ಷಗಳಲ್ಲಿ ಹೊಸದಾಗಿ ಜಿಲ್ಲೆಗೆ ಪಾದಾರ್ಪಣ ಮಾಡಿದ ರಾಜ್ಯದ ಬ್ಯಾಂಕುಗಳಲ್ಲಿ ಖಾಸಗಿ ವಲಯದ ವೈಶ್ಯಬ್ಯಾಂಕು (1976) ಮತ್ತು ಸಾರ್ವಜನಿಕ ವಲಯದ ಸ್ಟೇಟ್ ಬ್ಯಾಂಕ್ ಮೈಸೂರು, ಹೊರ ರಾಜ್ಯಗಳಲ್ಲಿ ಕೇಂದ್ರವನ್ನು ಹೊಂದಿರುವ ಬ್ಯಾಂಕುಗಳಲ್ಲಿ ಇಂಡಿಯನ್ ಬ್ಯಾಂಕ್, ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಸೌತ್ ಇಂಡಿಯನ್ ಬ್ಯಾಂಕ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (1967) ಮತ್ತು ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ ಸೇರಿವೆ.

ಕಾರ್ಪೊರೇಷನ್ ಬ್ಯಾಂಕ್ 1984ರಲ್ಲಿ ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕನ್ನು ಪ್ರವರ್ತಿಸುವ ಮೂಲಕ ಜಿಲ್ಲೆಯ ಗ್ರಾಮೀಣ ಬ್ಯಾಂಕಿಂಗ್ ಸೇವೆಯಲ್ಲಿ ಹೊಸ ಹೆಜ್ಜೆಗಳನ್ನು ಇರಿಸಿದಂತಾಗಿದೆ. ಗ್ರಾಮೀಣ ಮುನ್ನಡೆಗೆ ಇಂತಹ ಬ್ಯಾಂಕುಗಳಿಂದ ಹೆಚ್ಚಿನ ಕೊಡುಗೆಯನ್ನು ನಿರೀಕ್ಷಿಸಲಾಗಿದೆ. ಇಂದು ಜಿಲ್ಲೆಯಲ್ಲಿ ಗ್ರಾಮೀಣ ಬ್ಯಾಂಕನ್ನು ಸೇರಿಸಿ 15 ಬ್ಯಾಂಕಿಂಗ್ ಕಂಪನಿಗಳು ವ್ಯವಹಾರ ನಿರ್ವಹಿಸುತ್ತಿದ್ದು, 8 ಕಂಪನಿಗಳು ಕರ್ನಾಟಕದಿಂದ ಒಡಮೂಡಿದ್ದರೆ ಉಳಿದ 7 ಹೊರಗಿನವು.

1983 ರಿಂದ 1985ರ ಕೊನೆಯ ವರೆಗೆ ಜಿಲ್ಲೆಯಲ್ಲಿ 19 ವಾಣಿಜ್ಯ ಬ್ಯಾಂಕುಗಳ ಹೊಸ ಶಾಖೆಗಳು ಮತ್ತು 1984 1985ರ ಅವಧಿಯಲ್ಲಿ ಗ್ರಾಮೀಣ ಬ್ಯಾಂಕಿನ 18 ಶಾಖೆಗಳು ಹೊಸದಾಗಿ ಪ್ರಾರಂಭಿಸಲ್ಪಟ್ಟು, ಜಿಲ್ಲೆಯಲ್ಲಿ ಒಟ್ಟು ಬ್ಯಾಂಕುಗಳ ಶಾಖೆಯಲ್ಲಿ ಗಣನೀಯವಾದ ಹೆಚ್ಚಳ ಕಂಡು ಬಂತು. 1984ರ ಕೊನೆಯಲ್ಲಿ ಗ್ರಾಮೀಣ ಬ್ಯಾಂಕಿನ ಶಾಖೆಗಳು ಸೇರಿ, ಒಟ್ಟು ಶಾಖೆಗಳ ಸಂಖ್ಯೆ 99ಕ್ಕೆ ಏರಿತು. ಅದರಂತೆ ಠೇವಣಿಗಳು ವೃದ್ಧಿಸಿದವು. 1984ರಲ್ಲಿ 61.11 ಕೋಟಿ ರೂ. ಠೇವಣಿ 1985ರ ಕೊನೆಗೆ 71.08 ಕೋಟಿ ರೂ.ಗೆ ವೃದ್ಧಿಸಿತು. 1988–90ರ ಮೂರು ವರ್ಷದ ಅವಧಿಯಲ್ಲಿ ಜಿಲ್ಲೆಯಲ್ಲಿ ಬ್ಯಾಂಕುಗಳ ಶಾಖೆಗಳಲ್ಲಿ ಯಾವುದೇ ಹೆಚ್ಚಳವುಂಟಾಗಿಲ್ಲ.

1990ರಲ್ಲಿ ಜಿಲ್ಲೆಯಾದ್ಯಂತ ಇದ್ದ ಒಟ್ಟು ಬ್ಯಾಂಕುಗಳ ಶಾಖೆಗಳ ಸಂಖ್ಯೆ 108. ಅವುಗಳಲ್ಲಿ 87 (ಶೇ. 80) ಗ್ರಾಮೀಣ ಪ್ರದೇಶದಲ್ಲಿ ಕೆಲಸ ನಿರ್ವಹಿಸುತ್ತಿವೆ. ಉಳಿದವುಗಳು 21 ಅರೆನಗರ ಪ್ರದೇಶಗಳಲ್ಲಿ ಕೆಲಸ ಮಾಡುವಂತಹವುಗಳು. (ಭಾರತೀಯ ರಿಜರ್ವ್ ಬ್ಯಾಂಕ್ ಪ್ರಕಾರ 10,000 ಜನಸಂಖ್ಯೆ ಇರುವ ಪ್ರದೇಶದ ಶಾಖೆಗಳು ಗ್ರಾಮೀಣ ಶಾಖೆಗಳು, 10 ಸಾವಿರದಿಂದ 1 ಲಕ್ಷದ ಪ್ರದೇಶಗಳಲ್ಲಿ ಸೇವೆ ಮಾಡುವಂತವುಗಳು ಅರೆನಗರ ಪ್ರದೇಶದ ಶಾಖೆಗಳು). ಇತರ ಕಡೆಗೆ ಕಂಡು ಬರುವಂತೆ ಇಲ್ಲಿಯೂ ಭೌಗೋಳಿಕವಾಗಿ ಬ್ಯಾಂಕುಗಳ ಹರಡುವಿಕೆಯಲ್ಲಿ ಅಸಮಾನತೆಕಂಡು ಬರುವುದು. ಅದಕ್ಕೆ ತನ್ನದೇ ಆದ ಕಾರಣಗಳುಂಟು. ತಾಲೂಕು ಪ್ರಕಾರ ಬ್ಯಾಂಕುಗಳ ಹಂಚಿಕೆ ಈ ರೀತಿ ಇರುವುದು. ಮಡಿಕೇರಿ(37), ವೀರರಾಜಪೇಟೆ (39), ಮತ್ತು ಸೋಮವಾರಪೇಟೆ (32). 1981ರಲ್ಲಿ ಜಿಲ್ಲೆಯಲ್ಲಿ ಸರಾಸರಿ ಲೆಕ್ಕದಲ್ಲಿ ಪ್ರತೀ ಬ್ಯಾಂಕ್ ಶಾಖೆಗೆ 6,500 ಜನಸಂಖ್ಯೆ ಒಳಪಟ್ಟಿದ್ದರೆ 1991ರ ಜನಗಣತಿಯ ಪ್ರಕಾರ ಈ ಪ್ರಮಾಣ 4,500 ಇತ್ತು. ಕರ್ನಾಟಕದ ಇತರೇ ಜಿಲ್ಲೆಗಳಿಗೆ ಮತ್ತು ಮಲೆನಾಡಿನ ಗುಡ್ಡ

ಗಾಡು ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನಲ್ಲಿ ಬ್ಯಾಂಕಿಂಗ್ ಸೇವೆಗಳು ಬೇಡಿಕೆಗೆ ಅನುಗುಣವಾಗಿ ಸಮರ್ಪಕವಾಗಿವೆ ಯೆಂದು ಹೇಳಬಹುದು.

ಇಂದು ಜಿಲ್ಲೆಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ವಾಣಿಜ್ಯ ಬ್ಯಾಂಕುಗಳ ಸಿಬ್ಬಂದಿ ಸಂಖ್ಯೆ 1,147(ಗ್ರಾಮೀಣ ಬ್ಯಾಂಕ್ ಸೇರಿ), ಅವರಲ್ಲಿ 293 ಜನ ಅಧಿಕಾರಿಗಳು. (ವಾಣಿಜ್ಯ ಬ್ಯಾಂಕುಗಳು ಸಾಧಿಸಿದ ಪ್ರಗತಿಯ ವಿವರವಾದ ಪಟ್ಟಿಗೆ ಪುಟ 343 ನೋಡಿ)

### ಮಾರ್ಗದರ್ಶಿ ಬ್ಯಾಂಕ್

ಭಾರತೀಯ ರಿಜರ್ವ್ ಬ್ಯಾಂಕ್ ವರದಿಯ ಅನ್ವಯ 1969ರ ಕೊನೆಯಲ್ಲಿ ಜಾರಿಗೊಳಿಸಲಾದ ಮಾರ್ಗದರ್ಶಿ ಅಥವಾ ಲೀಡ್‌ಬ್ಯಾಂಕ್ ಯೋಜನೆಯ ಮುಖ್ಯ ಉದ್ದೇಶ, ವಿಶಾಲ ಅರ್ಥದಲ್ಲಿ ಪ್ರಾದೇಶಿಕ ಅಭಿವೃದ್ಧಿ ಸಾಧನೆಗೆ ಪೂರಕ ವಾಗುವಂತೆ ಬ್ಯಾಂಕಿಂಗ್ ಸೇವೆಗಳ ಸಂಯೋಜನೆ ಮತ್ತು ಸ್ಥಳೀಕರಣ. ಒಂದು ಪ್ರದೇಶದ (ಜಿಲ್ಲೆಯನ್ನು ಒಂದು ಘಟಕ ವೆಂದು ಪರಿಗಣಿಸಿ) ವಿವಿಧ ಆರ್ಥಿಕ ವಲಯಗಳಿಗೆ ಅವಶ್ಯವಾಗಿ ಬೇಕಾದ (ಕೊರತೆ ಇರುವ) ಸಾಲ ಸೌಲಭ್ಯಗಳ ಅಂದಾಜಿನ ಸಮೀಕ್ಷೆ ಮಾಡಿ ಜಿಲ್ಲಾ ಮಾರ್ಗದರ್ಶಿ ಬ್ಯಾಂಕಿನ ನೇತೃತ್ವದಲ್ಲಿ ಅದೇ ಜಿಲ್ಲೆಯಲ್ಲಿ ಕೆಲಸ ಮಾಡುವ ಇತರೇ ವಾಣಿಜ್ಯ ಬ್ಯಾಂಕು ಗಳು, ಸಹಕಾರಿ ವಲಯದ ಬ್ಯಾಂಕುಗಳು ಮತ್ತು ಸರ್ಕಾರದ ಹಣಕಾಸು ಸಂಸ್ಥೆಗಳು ಮುಂತಾದವುಗಳ ಜಂಟಿ ಆಶ್ರಯದಲ್ಲಿ ಜಿಲ್ಲೆಯ ವಿವಿಧ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಸಂಯೋಜಿತವಾಗಿ ನಿಗದಿತ ಯೋಜನೆಗಳಿಗೆ ಅದರಲ್ಲಿಯೂ ಆದ್ಯತಾವಲಯ ಮತ್ತು ದುರ್ಬಲ ವರ್ಗದವರಿಗೆ ನೀಡುವ ಸಾಲಗಳಿಗೆ ಹೆಚ್ಚು ಒತ್ತು ಕೊಟ್ಟು, ಆಯಾ ಪ್ರದೇಶದ ಸಂಪನ್ಮೂಲ ವೃದ್ಧಿಸಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸು ವುದು ಮುಂತಾದವುಗಳು ಸೇರಿವೆ. ಮಾರ್ಗದರ್ಶಿ ಬ್ಯಾಂಕಿಂಗ್ ಯೋಜನೆಯು ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಇದು ವರೆಗೆ ಕಂಡುಬಂದ ಬ್ಯಾಂಕಿಂಗ್ ಸೇವೆಗಳ ಅಸಮಾನತೆ ಯನ್ನು, ಅಸಮರ್ಪಕತೆಯನ್ನು ನಿವಾರಿಸುವಲ್ಲಿ ಬಹಳ ಸಹಾಯಕವಾಗಿದೆ. ಪ್ರದೇಶ/ಸ್ಥಳೀಯ ಅಭಿವೃದ್ಧಿ ಯೋಜನೆ ಯನ್ನು ಇನ್ನೂ ಹೆಚ್ಚು ಅರ್ಥವತ್ತಾಗಿ ಮಾಡಲು ಜಿಲ್ಲಾ ಪರಿಧಿಯಲ್ಲಿ ಒಂದು ಹಳ್ಳಿಯನ್ನು/ಗ್ರಾಮವನ್ನು ಒಂದು ಘಟಕವಾಗಿ ಪರಿಗಣಿಸಿ ಆ ಸ್ಥಳದ ಸರ್ವಾಂಗೀಣ ಆರ್ಥಿಕ ಅಭಿವೃದ್ಧಿಗೆ ಸ್ಥಳೀಯ ಬ್ಯಾಂಕುಗಳ ಶಾಖೆಗಳು ಮಾರ್ಗದರ್ಶಿ ಬ್ಯಾಂಕಿನ ನಿರ್ದೇಶನದಂತೆ ಶಾಖಾವಾರು ಸಾಲಯೋಜನೆ ಹಾಗೂ ಕ್ರಿಯಾ ಯೋಜನೆಯನ್ನು ತಯಾರಿಸಿ ಅವನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಲಾಗುತ್ತಿದೆ.

1984ರ ಮೇ ತಿಂಗಳಿಂದ ಕೊಡಗು ಜಿಲ್ಲೆಗೆ ಕಾರ್ಪೊರೇಶನ್ ಬ್ಯಾಂಕ್ ಮಾರ್ಗದರ್ಶಿ ಬ್ಯಾಂಕಾಗಿದ್ದು, ಅದಕ್ಕೂ ಪೂರ್ವದಲ್ಲಿ ಕೆನರಾ ಬ್ಯಾಂಕು ಈ ಕಾರ್ಯ ನಿರ್ವಹಿಸುತ್ತಿತ್ತು.

ಇಂದು 1991ರಲ್ಲಿ ಜಿಲ್ಲೆಯಲ್ಲಿ ಇರುವ ಒಟ್ಟು ಬ್ಯಾಂಕು ಗಳ ಶಾಖೆ (ಸಹಕಾರೀ ಬ್ಯಾಂಕು ಹೊರತುಪಡಿಸಿ ಹಾಗೂ ಗ್ರಾಮೀಣ ಬ್ಯಾಂಕ್ ಸೇರಿ) 108. ಜಿಲ್ಲೆಯ 288 ಜನ ವಸತಿ ಗ್ರಾಮಗಳನ್ನು, 15 ಬ್ಯಾಂಕುಗಳು ಸಾಲವಿತರಣಾ ಯೋಜನೆಯಲ್ಲಿ ಹಂಚಿಕೊಂಡಿವೆ. ಅವುಗಳಲ್ಲಿ ಬಹುಪಾಲು (66) ಗ್ರಾಮಗಳು ಕೆನರಾ ಬ್ಯಾಂಕಿಗೆ, 55 ಗ್ರಾಮಗಳು ಮಾರ್ಗದರ್ಶಿ ಬ್ಯಾಂಕಿಗೆ, 53 ಗ್ರಾಮಗಳು (ಚಿಕ್ಕಮಗಳೂರು-ಕೊಡಗು) ಗ್ರಾಮೀಣ ಬ್ಯಾಂಕಿಗೆ, 46 ಗ್ರಾಮಗಳು ವಿಜಯಾ ಬ್ಯಾಂಕಿಗೆ ನಿಯುಕ್ತವಾಗಿವೆ. ಜಿಲ್ಲೆಯ ವಿಸ್ತೀರ್ಣವಾನಕ್ಕೆ ಅನುಗುಣವಾಗಿ ಹೋಲಿಸಿದರೆ, ಇಲ್ಲಿ ಕೆಲಸ ಮಾಡುತ್ತಿರುವ ಬ್ಯಾಂಕುಗಳ ಶಾಖೆಗಳ ಸಂಖ್ಯೆ ಹೆಚ್ಚೆಂದು ಹೇಳಬಹುದು. ಸರಾಸರಿ ಲೆಕ್ಕದಲ್ಲಿ ಒಂದು ಬ್ಯಾಂಕ್ ಶಾಖೆಗೆ ಒಳಪಡುವ ಹಳ್ಳಿಗಳ ಸಂಖ್ಯೆ ಮೂರಕ್ಕಿಂತ ಕಡಿಮೆ.

ಮಾರ್ಗದರ್ಶಿ ಬ್ಯಾಂಕ್‌ನ ವರದಿಯಂತೆ 1986ನೇವರ್ಷದ ಕ್ರಿಯಾಯೋಜನೆಯಂತೆ ಜಿಲ್ಲೆಯಾದ್ಯಂತ ವಿವಿಧ ಬ್ಯಾಂಕಿಂಗ್ ಸಂಸ್ಥೆಗಳು ನೀಡಿದ ಒಟ್ಟು ಸಾಧನೆ–ಸಾಲ ನೀಡಿಕೆ ನಿಗದಿತ ವಾರ್ಷಿಕಗುರಿಯನ್ನು ಮೀರಿತ್ತು. ವಾರ್ಷಿಕ ಸಾಲದ ಗುರಿ ರೂ. 1,767 ಲಕ್ಷ (16,659 ಖಾತೆಗಳು) ಆಗಿದ್ದರೆ, ವಿತರಿಸಿದ ಸಾಲದ ಮೊತ್ತ ರೂ. 2,218 ಲಕ್ಷ (29,658 ಖಾತೆಗಳು) (ಸಾಧನೆ ಶೇ. 125). ಈ ವರ್ಷ ನೀಡಿದ ಸಾಲದಲ್ಲಿ 2/3 ಭಾಗ ವ್ಯವಸಾಯಕ್ಕೆ ಮೀಸಲಾಗಿದ್ದರೆ, ಸಾಧನೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೋರ್ ಎಲ್ಲಾ ಇತರ ಬ್ಯಾಂಕು ಗಳನ್ನು ಮೀರಿಸಿತ್ತು (ಗುರಿಯ ಶೇ. 357), ನಂತರದ ಸ್ಥಾನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಶೇ. 234) ಎಂದು ವರದಿ ತಿಳಿಸುವುದು.

1987ರ ಕ್ರಿಯಾ ಯೋಜನೆಯಂತೆ ಸದರಿ ವರ್ಷದಲ್ಲಿ ಜಿಲ್ಲೆಯಾದ್ಯಂತ ಬ್ಯಾಂಕುಗಳು ನೀಡಿದ ಸಾಲದ ಮೊತ್ತ ರೂ. 2,869 ಲಕ್ಷ ಆಗಿದ್ದು ಇದು ಯೋಜನೆಯ/ಗುರಿಯ(ರೂ. 2,120 ಲಕ್ಷ) ಶೇ. 135ರಷ್ಟು ಆಗಿತ್ತು. ಈ ವರ್ಷದಲ್ಲಿ

ಜಿಲ್ಲೆಯ ವಾಣಿಜ್ಯ ಬ್ಯಾಂಕುಗಳು ಇತ್ತೀಚಿನ ಕೆಲವು ವರ್ಷಗಳಲ್ಲಿ ಸಾಧಿಸಿದ ಪ್ರಗತಿ.

| ವಿವರಗಳು | ವರ್ಷದ ಅಂತ್ಯದಲ್ಲಿದ್ದಂತೆ (ಲಕ್ಷ ರೂ.ನಲ್ಲಿ) | | | | |
|---|---|---|---|---|---|
| | 1987 | 1988 | 1989 | 1990 | 1991 |
| ಶಾಖೆಗಳು (ಸಂಖ್ಯೆ) | 108 | 108 | 108 | 108 | 108 |
| ಠೇವಣಿಗಳು | 9,894.79 | 11,422.53 | 12,768.34 | 13,476.00 | 14,776.24 |
| ಮುಂಗಡ ಸಾಲಗಳು | 7,734.18 | 9,551.82 | 10,306.77 | 11,391.16 | 11,497.67 |
| ಸಾಲ-ಠೇವಣಿಗಳ ನಿಷ್ಪತ್ತಿ (ಶೇ.) | 78.16 | 83 62 | 80.72 | 84.53 | 77.81 |
| ಆದ್ಯತಾರಂಗದ ಸಾಲಗಳು | 5,685.85 | 6,527.60 | 7,591.42 | 8,114.80 | 8,008.16 |
| ಒಟ್ಟು ಮುಂಗಡ ಸಾಲದಲ್ಲಿ ಆದ್ಯತಾರಂಗಕ್ಕೆ ನೀಡಿದ ಸಾಲದ ಶೇಕಡಾವಾರು ಪ್ರಮಾಣ | 73.52 | 68.34 | 73.65 | 71.24 | 69 65 |
| ವ್ಯತ್ಯಸ್ತ ಬಡ್ಡಿಯ (ಡಿ.ಐ.ಆರ್.) ಸಾಲಗಳು | 248.32 | 226.13 | 208.96 | 153.36 | 151.00 |
| ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ.) ಸಾಲಗಳು | 195.83 | 292.03 | 374.99 | 373.24 | 454.78 |

ಆಧಾರ : ಮಾರ್ಗದರ್ಶಿ ಬ್ಯಾಂಕ್ ವರದಿ.

ಸ್ವಯಂ ಉದ್ಯೋಗ ಮತ್ತು ವೃತ್ತಿ ನಿರತರಿಗೆ ಅತಿ ಹೆಚ್ಚಿನ ಸಾಲವನ್ನು ನೀಡಲಾಯಿತು. ಅದರಲ್ಲಿ ಬಹುಸಂಖ್ಯಾತರು ಮಹಿಳೆಯರಾಗಿದ್ದರು.

1988ರ ಕ್ರಿಯಾ ಯೋಜನೆಯ ಅನ್ವಯ ವಿತರಿಸಲಾದ ಸಾಲದ ಮೊತ್ತ ರೂ. 29.45 ಕೋಟಿಗಳಾಗಿದ್ದರೆ (37,820 ಖಾತೆಗಳು) ಹಾಕಿಕೊಂಡ ಗುರಿ ರೂ. 26.05 ಕೋಟಿ (31,270ಖಾತೆಗಳು). ಈ ವಾರ್ಷಿಕಯೋಜನೆಯಲ್ಲಿ ಕೃಷಿಗೆ ನಿಗದಿ ಪಡಿಸಿದ ಹಣ ರೂ. 17.57 ಕೋಟಿ ಆಗಿದ್ದರೆ ಸಾಧನೆ ರೂ. 21.52 ಕೋಟಿಯಷ್ಟಾಗಿತ್ತು(ಶೇ. 122), ಸಣ್ಣ ಕೈಗಾರಿಕಾ ವಲಯಕ್ಕೆ ಹಂಚಿದ ಸಾಲ ನಿಗದಿತ ಗುರಿಗಿಂತ ಕಡಿಮೆಯಾಗಿತ್ತು ಅಂದರೆ ಗುರಿ ಪ್ರಮಾಣ ರೂ. 118 ಲಕ್ಷ ಆಗಿದ್ದರೆ ಸಾಧನೆ ರೂ. 85.12 ಲಕ್ಷ ಆಗಿತ್ತು. (ಶೇ. 72.14). ಇತರೆ ವಲಯಗಳಿಗೆ ನಿಗದಿಗೊಳಿಸಲಾದ ಸಾಲದ ಗುರಿ ರೂ. 730 ಲಕ್ಷ ಆಗಿದ್ದರೆ ಸಾಧನೆ ರೂ. 708 ಲಕ್ಷವಾಗಿತ್ತು (ಶೇ. 94).

### ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ

ಜಿಲ್ಲಾ ಪರಿಷತ್ ತಯಾರಿಸಿದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಂತೆ (ಅಧ್ಯಾಯ 8 ನೋಡಿ) 1986 ರಲ್ಲಿ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗೆ ಇದ್ದ ಕುಟುಂಬಗಳ ಸಂಖ್ಯೆ 41,799 ಎಂದು ಅಂದಾಜು ಮಾಡಲಾಗಿತ್ತು. ತಾಲೂಕು ಪ್ರಕಾರ ಅಂತಹ ಕುಟುಂಬಗಳ ವ್ಯಾಪ್ತಿ ಈ ರೀತಿ ಇತ್ತು : ವೀರರಾಜಪೇಟೆ 17,303, ಸೋಮವಾರಪೇಟೆ 15,382 ಮತ್ತು ಮಡಿಕೇರಿ 9,114. ಆರನೇಯ ಪಂಚವಾರ್ಷಿಕ ಯೋಜನೆಯಲ್ಲಿ (1980–85) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅನ್ವಯ 10,407 ಕುಟುಂಬಗಳಿಗೆ ಜಿಲ್ಲೆಯಲ್ಲಿ ಬ್ಯಾಂಕುಗಳು ಸಹಾಯ ಸೌಲಭ್ಯವನ್ನು ಒದಗಿಸಿದ್ದವು. ತಾಲೂಕು ಪ್ರಕಾರ ಸಹಾಯ ಪಡೆದ ಕುಟುಂಬಗಳ ಸಂಖ್ಯೆ ಈ ರೀತಿಯಾಗಿತ್ತು : ಮಡಿಕೇರಿ 2,461, ಸೋಮವಾರಪೇಟೆ 4,144 ಮತ್ತು ವೀರರಾಜಪೇಟೆ 3,802. 1986–87ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಬ್ಯಾಂಕುಗಳು ನೀಡಿದ ಸಾಲದ ಮೊತ್ತ ರೂ. 37.94 ಲಕ್ಷ ಆಗಿದ್ದರೆ, ಸಹಾಯ ಧನದ ಮೊತ್ತ ರೂ. 18.97 ಲಕ್ಷ ಆಗಿತ್ತು. ಅದರ ಮುಂದಿನ ವರ್ಷ (1987–88), ಈ ಅಂಕಿಸಂಖ್ಯೆಗಳು ಅನುಕ್ರಮವಾಗಿ ರೂ. 105.50 ಲಕ್ಷ ಮತ್ತು ರೂ. 52.75 ಲಕ್ಷ ಆಗಿತ್ತು. 1988–89ರಲ್ಲಿ ಸಾಲದ ಮೊತ್ತ ಮತ್ತು ಸಹಾಯ ಧನದ ಮೊತ್ತಗಳು ಅನುಕ್ರಮವಾಗಿ ರೂ. 92.26 ಲಕ್ಷ ಮತ್ತು ರೂ. 46.13 ಲಕ್ಷ ಆಗಿತ್ತು. ಅಂದರೆ ಸಾಮಾನ್ಯವಾಗಿ ಸಹಾಯಧನದ ಎರಡು ಪಟ್ಟು ಹಣವನ್ನು ಬ್ಯಾಂಕುಗಳು ಸಾಲವಾಗಿ ನೀಡಿದ್ದವು.

### ಗ್ರಾಮೀಣ ಬ್ಯಾಂಕು

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕಾನೂನು 1976ರ ಅನ್ವಯ, ಭಾರತ ಸರ್ಕಾರ, ಪ್ರವರ್ತಕ ಬ್ಯಾಂಕು ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವ ಬಂಡವಾಳದೊಂದಿಗೆ ಮೂಡಿಬಂದ ಈ ಹೊಸತಳಿಯ ಬ್ಯಾಂಕಿಂಗ್ ಸಂಸ್ಥೆಯ ಪ್ರವರ್ತಕ ಬ್ಯಾಂಕು ಮಾರ್ಗದರ್ಶಿ ಬ್ಯಾಂಕಾದ ಕಾರ್ಪೊರೇಷನ್ ಬ್ಯಾಂಕು. ಚಿಕ್ಕಮಗಳೂರು ಆಡಳಿತ ಕೇಂದ್ರವಾಗಿರುವ ಈ ಬ್ಯಾಂಕಿನ ಕಾರ್ಯವ್ಯಾಪ್ತಿ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಯನ್ನು ಹೊಂದಿರುವುದು. ಬ್ಯಾಂಕು ಸ್ಥಾಪನೆಯಾದ ವರ್ಷ 1984 ಏಪ್ರಿಲ್. ಈ ಬ್ಯಾಂಕಿನ ಹಲವಾರು ಧ್ಯೇಯೋದ್ದೇಶಗಳಲ್ಲಿ ಬಹು ಮುಖ್ಯವಾದವುಗಳು ಗ್ರಾಮೀಣ ಭಾಗದ ರೈತರಿಗೆ, ಅದರಲ್ಲಿಯೂ ಚಿಕ್ಕ ಮತ್ತು ಅತಿ ಚಿಕ್ಕ (ಮಾರ್ಜಿನಲ್) ಹಿಡುವಳಿದಾರರು, ಭೂರಹಿತ ಕೃಷಿ ಕಾರ್ಮಿಕರು, ಕುಶಲಕರ್ಮಿಗಳು ಮತ್ತು 20 ಅಂಶ ಕಾರ್ಯಕ್ರಮದ ಅಡಿಯಲ್ಲಿ ಗುರುತಿಸಲಾದ ಆರ್ಥಿಕ ದುರ್ಬಲರು ಮುಂತಾದವರಿಗೆ ಕಡಿಮೆ ಬಡ್ಡಿಯಲ್ಲಿ ಸಾಲದ ನೆರವನ್ನು ಒದಗಿಸುವುದು ಮತ್ತು ಗ್ರಾಮೀಣ ಭಾಗದಲ್ಲಿ ಸಹಕಾರಿ ಸಂಸ್ಥೆಗಳು ವಾಣಿಜ್ಯ ಬ್ಯಾಂಕುಗಳಿಗೆ ಪೂರಕವಾಗಿ ಬ್ಯಾಂಕಿಂಗ್ ಸೇವೆಯನ್ನು ಸಲ್ಲಿಸುವುದು, ಇವೇ ಮುಂತಾದವುಗಳು. ಈ ಬ್ಯಾಂಕುಗಳು ಠೇವಣಿಗಳ ಮೇಲೆ ವಾಣಿಜ್ಯ ಬ್ಯಾಂಕುಗಳಿಗಿಂತ ಸ್ವಲ್ಪ ಹೆಚ್ಚು ಬಡ್ಡಿಯನ್ನು ನೀಡುವುದರಿಂದ ಉಳಿತಾಯ ಮನೋಭಾವನೆಯನ್ನು ಪ್ರೇರೇಪಿಸುವಲ್ಲಿ ಸಹಾಯಕವಾಗಿವೆ.

ಈ ಜಿಲ್ಲೆಯಲ್ಲಿ ಗ್ರಾಮೀಣ ಬ್ಯಾಂಕಿನ ಮೊದಲನೇಯ ಶಾಖೆಯನ್ನು 1984 ಸೆಪ್ಟಂಬರ್ 26 ರಂದು ಸೋಮವಾರಪೇಟೆ ತಾಲೂಕಿನ ಗುಡ್ಡೆಹೊಸೂರಿನಲ್ಲಿ ಪ್ರಾರಂಭಿಸಲಾಯಿತು. ನಂತರ ಅದೇ ವರ್ಷದ ಕೊನೆಯ ಒಳಗೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಒಂಬತ್ತು ಶಾಖೆಗಳನ್ನು ತೆರೆಯಲಾಯಿತು. ಮುಂದಿನ ವರ್ಷ 1985ರಲ್ಲಿ ಎಂಟು ಹೊಸ ಶಾಖೆಗಳನ್ನು ಪ್ರಾರಂಭಿಸಲಾಯಿತು.

1991ರಲ್ಲಿ ಗ್ರಾಮೀಣ ಬ್ಯಾಂಕಿನ ಒಟ್ಟು 44 ಶಾಖೆಗಳಲ್ಲಿ 18 ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಮಡಿಕೇರಿ ತಾಲೂಕಿನಲ್ಲಿ 8, ವೀರರಾಜಪೇಟೆ ತಾಲೂಕಿನಲ್ಲಿ 6 ಮತ್ತು ಉಳಿದ ನಾಲ್ಕು ಸೋಮವಾರಪೇಟೆ ತಾಲೂಕಿನಲ್ಲಿವೆ.

ಜಿಲ್ಲೆಯಲ್ಲಿ ಗ್ರಾಮೀಣ ಬ್ಯಾಂಕುಗಳ ಶಾಖೆಗಳ ಪರಿವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಸಂಖ್ಯೆ 53. ಕಳೆದ ಆರು ವರ್ಷಗಳಿಂದ ಬ್ಯಾಂಕು ಪ್ರಗತಿಯತ್ತ ಮುನ್ನಡೆ ಸಾಧಿಸಿದೆ. ಈ ಬ್ಯಾಂಕಿನ ಠೇವಣಿಗಳಲ್ಲಿ ಕ್ಷೇಮನಿಧಿ ಯೋಜನೆಯು ಬಹು ಜನಪ್ರಿಯವಾಗಿದೆ.

1984-85ರಲ್ಲಿ ಬ್ಯಾಂಕು ಸಂಗ್ರಹಿಸಿದ ಠೇವಣಿ ಮೊತ್ತ ರೂ. 53.25 ಲಕ್ಷ ಆಗಿದ್ದರೆ ಸಾಲ ನೀಡಿಕೆ ರೂ. 71.20 ಲಕ್ಷ ಆಗಿತ್ತು. ಅದರ ಮುಂದಿನ ವರ್ಷ ಠೇವಣಿ ಮತ್ತು ಸಾಲ ನೀಡಿಕೆಗಳು ಕ್ರಮವಾಗಿ ರೂ. 84.60 ಲಕ್ಷ ಮತ್ತು ರೂ. 110.51ಕ್ಕೆ ವೃದ್ಧಿಗೊಂಡವು. 1987–88 ಮತ್ತು 1988–89ರಲ್ಲಿ ಠೇವಣಿಗಳು ಕ್ರಮವಾಗಿ ರೂ. 133.48 ಲಕ್ಷ ಮತ್ತು ರೂ. 196.79 ಲಕ್ಷಕ್ಕೆ ವೃದ್ಧಿಗೊಂಡರೆ, ಸಾಲ ಮುಂಗಡಗಳು ಕ್ರಮವಾಗಿ ರೂ. 155.08 ಲಕ್ಷ ಮತ್ತು ರೂ. 199.13 ಲಕ್ಷ ಎಂದು ಕಂಡುಬರುವುದು. 1989–90ಕ್ಕೆ ಅಂತ್ಯಗೊಂಡ ವರ್ಷದಲ್ಲಿ ಠೇವಣಿ ಮತ್ತು ಸಾಲ ಮುಂಗಡಗಳು ಕ್ರಮವಾಗಿ ರೂ. 222.93 ಲಕ್ಷ ಮತ್ತು ರೂ. 239.85 ಲಕ್ಷ ಎಂದು ವರದಿ ತಿಳಿಸುತ್ತದೆ. ಸಾಲ ವಸೂಲಾತಿಯು ಪ್ರಮಾಣ 1987–88ರಲ್ಲಿ ಶೇ. 68 ಮತ್ತು 69ರಷ್ಟು ಇದ್ದದ್ದು, ಮುಂದಿನ ವರ್ಷಗಳಲ್ಲಿ (1989 ಮತ್ತು 1990) ಶೇ. 53 ಮತ್ತು ಶೇ. 38ಕ್ಕೆ ಇಳಿಮುಖವಾಯಿತು. (ಸರ್ಕಾರದ ಋಣ ಪರಿಹಾರ ಘೋಷಣೆಯಿಂದ ಸಾಲ ಮರುಪಾವತಿ ಕುಂಠಿತಗೊಂಡಿತು). ಬ್ಯಾಂಕು ಕೊಡಮಾಡಿದ ಸಾಲಗಳಲ್ಲಿ 1990 ರಲ್ಲಿ ತೋಟದ ಬೆಳೆಗಳಿಗೆ (ಕಾಫಿ, ಏಲಕ್ಕಿ, ತೆಂಗು ಮುಂತಾದವುಗಳು) ರೂ. 21.95 ಲಕ್ಷ, ವ್ಯತ್ಯಸ್ತ ಬಡ್ಡಿದರ ಯೋಜನೆಯಲ್ಲಿ ರೂ. 1.25 ಲಕ್ಷ, ಪರಿಶಿಷ್ಟ ಜಾತಿ ಮತ್ತು ವರ್ಗಗಳವರಿಗೆ ರೂ. 17.73ಲಕ್ಷ; ಒಟ್ಟು ಫಲಾನುಭವಿಗಳ ಸಂಖ್ಯೆ 857. ಸಾಲ ಮುಂಗಡಗಳಲ್ಲಿ ಆದ್ಯತಾವಲಯ, ದುರ್ಬಲ ವರ್ಗ, 20 ಅಂಶಗಳ ಕಾರ್ಯಕ್ರಮ, ಅಂತ್ಯೋದಯ, ನೂರು ಬಾವಿಗಳ ಯೋಜನೆ, ಸಮಗ್ರ ಗ್ರಾಮೀಣ ಅಭಿವೃದ್ಧಿಯೋಜನೆ ಮುಂತಾದ ಬಡತನ ನಿವಾರಣಾಯೋಜನೆಗಳಿಗೆ ಆದ್ಯತೆಯನ್ನು ನೀಡಲಾಗಿದೆ. ಬ್ಯಾಂಕು ವಿವಿಧ ಸಾಲಗಳ ಮೇಲೆ ಶೇ. 10 ರಿಂದ 16ರ ವರೆಗೆ ಬಡ್ಡಿಯನ್ನು ಆಕರಿಸುವುದು.

1990 ಮಾರ್ಚ್ ಕೊನೆಯಲ್ಲಿ ಇದ್ದಂತೆ ಬ್ಯಾಂಕು ಅನುಭವಿಸಿದ ನಷ್ಟ ರೂ. 24.05 ಲಕ್ಷವಾದರೆ ಅದರ ಹಿಂದಿನ ವರ್ಷದ ನಷ್ಟ ರೂ. 15.97 ಲಕ್ಷಗಳಾಗಿತ್ತು. ನಷ್ಟದ ಪ್ರಮಾಣ ಹೆಚ್ಚಾಗಲು ದುರ್ಬಲ ವರ್ಗಗಳಿಗೆ ನೀಡಿದ ಮುಂಗಡಗಳ ಮೇಲಿನ ವಿಮಾ ಶುಲ್ಕದ ತೀವ್ರ ಹೆಚ್ಚುವರಿ ಮತ್ತು ಬ್ಯಾಂಕಿನ ಲಾಭ ನೀಡದ ('ನಾನ್‌ಪರ್‌ಫಾರ್ಮಿಂಗ್') ಆಸ್ತಿಗಳ ಮೇಲೆ ಮಾಡಿದ ವೆಚ್ಚ ಮುಖ್ಯ ಕಾರಣಗಳಾಗಿವೆ ಯೆಂದು ವಾರ್ಷಿಕ ವರದಿ ತಿಳಿಸುವುದು.

**ಸಾಲಮೇಳಗಳು**

ಕೆಲವು ದಶಕಗಳ ಹಿಂದೆ ಸಮಾಜದ ಕೆಲವೇ ವರ್ಗಗಳಿಗೆ ಮೀಸಲಾದ ಬ್ಯಾಂಕಿಂಗ್ ಸೇವೆಗಳನ್ನು ಸಾರ್ವತ್ರಿಕವಾಗಿ ಎಲ್ಲರಿಗೂ ತಲುಪಿಸುವ ಉದ್ದೇಶದಿಂದ ಸಾಲಮೇಳಗಳನ್ನು ಏರ್ಪಡಿಸಲಾಯಿತು. ಜಿಲ್ಲೆಯಾದ್ಯಂತ ಹಲವಾರು ಸ್ಥಳದಲ್ಲಿ 1986 ಮತ್ತು 87 ರಲ್ಲಿ ಸಾಲಮೇಳಗಳು ನಡೆದು ದೊಡ್ಡ ಪ್ರಮಾಣದಲ್ಲಿ ಸಾಲದ ವಿತರಣೆ ಆದದ್ದು ಉಂಟು. ಲಭ್ಯ ಇರುವ ವರದಿಗಳ ಪ್ರಕಾರ 1986 ಮತ್ತು 1987ನೇ ವರ್ಷದಲ್ಲಿ ವಿಜಯಾ ಬ್ಯಾಂಕ್ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ 8 ಸಾಲಮೇಳ ನಡೆಸಿ ವಿತರಿಸಿದ ಒಟ್ಟು ಸಾಲದ ಹಣ ರೂ. 224.73 ಲಕ್ಷ. ಫಲಾನುಭವಿಗಳ ಸಂಖ್ಯೆ 7,947. ಸಾಲ ಮರು ಪಾವತಿ ಪ್ರಮಾಣ ಶೇ. 33. ಅದರಂತೆ ಸ್ಟೇಟ್ ಬ್ಯಾಂಕ್ ಆಫ್ ಟ್ರಾವನ್‌ಕೋರ್ 1986 ರಲ್ಲಿ 10 ಜನರಿಗೆ ರೂ. 25,000 ಮತ್ತು ವೈಶ್ಯಬ್ಯಾಂಕ್ 1987 ರಲ್ಲಿ 14 ಜನರಿಗೆ ರೂ. 44,500 ಸಾಲ ವಿತರಿಸಿವೆ. ವೈಶ್ಯಬ್ಯಾಂಕಿನ ಮರುಪಾವತಿ ಪ್ರಮಾಣ ಶೇ. 57 ಎಂದು ವರದಿಯಾಗಿದೆ.

**20 ಅಂಶದ ಕಾರ್ಯಕ್ರಮದ ಸಾಲ ಯೋಜನೆ**

ಸಾರ್ವಜನಿಕ ವಲಯದ ಬ್ಯಾಂಕುಗಳು 20 ಅಂಶದ ಆರ್ಥಿಕ ಕಾರ್ಯಕ್ರಮದ ಅಡಿಯಲ್ಲಿ ಬರುವ ಹಲವಾರು ಅಂಶಗಳಿಗೆ ಅನುಗುಣವಾಗಿ ಸಾಲ ಸೌಲಭ್ಯವನ್ನು ಒದಗಿಸುತ್ತಿವೆ. ಈ ಯೋಜನೆಯ ಅಡಿಯಲ್ಲಿ ನೀಡುವ ಸಾಲದ ಮುಖ್ಯ ಉದ್ದೇಶ ಬಡತನ ನಿವಾರಣೆ ಸದರಿ ಯೋಜನೆಯಲ್ಲಿ ನೀರಾವರಿ ಪ್ರಯೋಜನದ ಸಮರ್ಪಕ ಬಳಕೆ, ಸಮೃದ್ಧವಾದ ಸುಗ್ಗಿ, ಸಮುದಾಯ ಆರೋಗ್ಯ, ಹರಿಜನರಿಗೆ ಗಿರಿಜನರಿಗೆ ಸಾಮಾಜಿಕ ನ್ಯಾಯ, ಮಹಿಳೆಯರ ಮುನ್ನಡೆ ಮತ್ತು ಕೊಳೆಗೇರಿಗಳ ಸುಧಾರಣೆ ಮುಂತಾದ ಕಾರ್ಯಕ್ರಮಗಳು ಅಡಕವಾಗಿದ್ದು ಬ್ಯಾಂಕುಗಳು ಇಂತಹ ಯೋಜನೆಗಳಿಗೆ ಸಾಲ ನೀಡುತ್ತಿವೆ. ಲಭ್ಯವಿರುವ ಮಾಹಿತಿ ಪ್ರಕಾರ 1989ನೇ ವರ್ಷದಲ್ಲಿ ಜಿಲ್ಲೆಯಲ್ಲಿ ಆಯಾ ಬ್ಯಾಂಕುಗಳು ಈ ಕಾರ್ಯಕ್ರಮದ ಅಡಿಯಲ್ಲಿ ವಿತರಿಸಿದ ಸಾಲದ ವಿವರ (ಲಕ್ಷ ರೂಪಾಯಿಗಳಲ್ಲಿ) : ಕೆನರಾ ಬ್ಯಾಂಕ್ (437.00), ವಿಜಯಾ ಬ್ಯಾಂಕ್ (267.33), ಕರ್ನಾಟಕ ಬ್ಯಾಂಕ್ (145.54), ವೈಶ್ಯ

ಬ್ಯಾಂಕ್ (3.12). ಮುಂದಿನ ವರ್ಷ (1990) ಗ್ರಾಮೀಣ ಬ್ಯಾಂಕ್ (615.01 ಲಕ್ಷ ರೂ.), ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (73.10 ಲಕ್ಷ ರೂ.) ಸಾಲ ನೀಡಿದ್ದವು.

**ಆಶಾಕಿರಣ**

ಅಸಂಘಟಿತ ಕಾರ್ಮಿಕರು ಅನಿರೀಕ್ಷಿತ ಅಪಘಾತದಿಂದ ಸಂಕಷ್ಟಕ್ಕೆ ಒಳಗಾದಾಗ ಅವರಿಗೆ ಅಥವಾ ಅವರನ್ನು ಅವಲಂಬಿಸಿದ ಕುಟುಂಬದವರಿಗೆ ಆರ್ಥಿಕ ನೆರವು ಒದಗಿಸುವ 'ಆಶಾಕಿರಣ' ಯೋಜನೆಯನ್ನು ದೇಶದಲ್ಲಿಯೇ ಪ್ರಪ್ರಥಮವಾಗಿ ಕರ್ನಾಟಕ ಸರ್ಕಾರವು 1982 ರಿಂದ ಜಾರಿಗೆ ತಂದಿದೆ. ಇದು ಬಡ ಕೃಷಿ ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳಲ್ಲಿರದ ಕ್ಷೇತ್ರದ ಕೆಲಸಗಾರರಿಗೆ ಸಾಮಾಜಿಕ ಭದ್ರತೆಯನ್ನೂ, ಸಾಮೂಹಿಕ ನೆಲೆಯಲ್ಲಿ ಅಪಘಾತ ವಿಮೆಯನ್ನೂ ದೊರಕಿಸುವ ಒಂದು ವಿಶಿಷ್ಟ ಯೋಜನೆಯಾಗಿದೆ. ಈ ಯೋಜನೆಯನ್ವಯ ಅಪಘಾತದ ಬಗೆಯನ್ನು ಪರಿಗಣಿಸಿ ನೊಂದವರಿಗೆ ಆರ್ಥಿಕ ಪರಿಹಾರಕ್ಕೆ ಅವಕಾಶವಿದೆ. 18 ರಿಂದ 60 ವರ್ಷಗಳ ಒಳಗಿನ, ವಾರ್ಷಿಕ ಆದಾಯ 7,200 ರೂ.ಗಳಿಗೆ ಮೀರದ ಈ ಮುಂದೆ ತಿಳಿಸಿದ ಕಸುಬುಗಳ ಶ್ರಮಜೀವಿಗಳು ಮತ್ತು ಅವರ ಅವಲಂಬಿಗಳು ಈ ಯೋಜನೆಯನ್ವಯ ಆರ್ಥಿಕ ನೆರವು ಪಡೆಯುತ್ತಾರೆ. ಇತರ ಯಾವುದೇ ಮೂಲಗಳಿಂದ ಪರಿಹಾರ ಪಡೆದಿರುವವರು ಆಶಾಕಿರಣ ಯೋಜನೆಗೆ ಅರ್ಹರಾಗುವುದಿಲ್ಲ. ಈ ಯೋಜನೆಯು ಅನ್ವಯಿಸುವ ಶ್ರಮಜೀವಿಗಳು : ಕೃಷಿ ಕಾರ್ಮಿಕರು, ಬೆಸ್ತರು, ಬೀಡಿ ಕಾರ್ಮಿಕರು, ಹೆಂಡ ಇಳಿಸುವವರು, ದೋಬಿಗಳು, ಮೋಚಿಗಳು, ಬಡಗಿಗಳು, ಗಾಡಿ ತಯಾರಿಸುವವರು, ಗ್ರಾಮಾಂತರ ಕಮ್ಮಾರರು, ಅಕ್ಕಸಾಲಿಗರು, ಲೋಹ ಕೆತ್ತನೆಗಾರರು, ಪ್ರಾಣಿಗಳು ಎಳೆಯುವ ವಾಹನಗಳ ಚಾಲಕರು, ಸೈಕಲ್ ರಿಕ್ಷಾ ಎಳೆಯುವವರು, ಕ್ಷೌರಿಕರು, ದರ್ಜಿಗಳು, ರಸ್ತೆಯಲ್ಲಿ ಕೂಗಿ ಮಾರುವವರು, ಕೈಗಾಡಿ ಎಳೆಯುವವರು, ಮಾಂಸ ಸಿದ್ಧಪಡಿಸುವವರು, ಗಾರೆ ಕೆಲಸಗಾರರು, ಹೆಂಚು ಕೆಲಸಗಾರರು, ಕೈಮಗ್ಗ ನೇಕಾರರು, ಗುಡ್ಡಗಾಡಿನ ಕಾರ್ಮಿಕರು, ಬುಟ್ಟಿ ಹೆಣೆಯುವವರು, ಜೆಲ್ಲಿ ಒಡೆಯುವವರು, ಗುಡಿಸಲು ಕಟ್ಟುವವರು, ಛಾವಣಿ ಹೊದೆಸುವವರು, ಬಾವಿ ತೋಡುವವರು, ಮುಂತಾದವರು.

ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಅಪಘಾತಗಳು ಯಾವುವೆಂದರೆ : ರೈಲು ಮತ್ತು ರಸ್ತೆ ಅಪಘಾತಗಳು, ವಿದ್ಯುಚ್ಛಕ್ತಿ ತಗಲಿ ಹಾನಿ, ಹಾವು ಕಚ್ಚುವಿಕೆ, ನೀರಿನಲ್ಲಿ ಮುಳುಗಿ ಸಾಯುವುದು, ಬೆಂಕಿ ಆಕಸ್ಮಿಕ, ಮರದ ಮೇಲಿಂದ ಬೀಳುವುದು, ಕ್ರೂರ ಮೃಗಗಳಿಂದಾಗುವ ಆಘಾತ, ಸಿಡಿಲು ಬಡಿದು ಸಾಯುವುದು, ಮುಂತಾದ ಆಕಸ್ಮಿಕ ಅನಾಹುತಗಳಲ್ಲಿ ನೊಂದವರಿಗೆ ಈ ಪರಿಹಾರ ಲಭ್ಯ. ಆದರೆ ಕಾನೂನು ಬಾಹಿರ ಕೃತ್ಯಗಳನ್ನೆಸಗುವಾಗ ಆಗುವ ಅಪಘಾತಗಳು, ಮದ್ಯ ಸೇವನೆ ಮತ್ತು ಔಷಧ ಸೇವನೆಯ ಅಮಲಿನಿಂದ ಉಂಟಾಗಬಹುದಾದ ಅಪಘಾತಗಳು, ನೈಸರ್ಗಿಕ ಮರಣ ರೋಗದಿಂದ ಮರಣ, ಆತ್ಮಹತ್ಯೆ, ತಾನೆ ಮಾಡಿಕೊಂಡ ಅಪಘಾತಗಳು ಮುಂತಾದವುಗಳಿಗೆ ಈ ಪರಿಹಾರ ದೊರೆಯುವುದಿಲ್ಲ. ಈ ಯೋಜನೆಯಂತೆ ಅಪಘಾತದಲ್ಲಿ ಕಾರ್ಮಿಕನ ಒಂದು ಅಂಗ ಊನವಾದರೆ, 2,500 ರೂಪಾಯಿ, ಎರಡು ಅಂಗಗಳ ಶಾಶ್ವತ ನಷ್ಟವುಂಟಾದರೆ 4,000 ರೂ. ಹಾಗೂ ಅಪಘಾತದಲ್ಲಿ ಕಾರ್ಮಿಕನ ಮರಣ ಸಂಭವಿಸಿದರೆ ವಾರಸುದಾರರಿಗೆ 5,000 ರೂ.ಗಳ ಪರಿಹಾರ ನೀಡಲಾಗುತ್ತದೆ.

ಆಶಾಕಿರಣ ಯೋಜನೆಯು ಕೊಡಗು ಜಿಲ್ಲೆಯಲ್ಲಿ ಕಾರ್ಯರೂಪಕ್ಕೆ ಬಂದಂದಿನಿಂದ (1982) 30-12-1989ರ ವರೆಗೆ ಒಟ್ಟು 43 ವ್ಯಕ್ತಿಗಳು 1.67 ಲಕ್ಷ ರೂಪಾಯಿ ಪರಿಹಾರ ಮೊತ್ತವನ್ನು ಸರ್ಕಾರದಿಂದ ಪಡೆದಿರುತ್ತಾರೆ. ತಾಲೂಕುವಾರು ವಿವರ ಈ ರೀತಿ ಇರುವುದು : ಮಡಿಕೇರಿ- 6 ಜನ-ಒಟ್ಟು ಮೊತ್ತ 20,000 ರೂ; ಸೋಮವಾರಪೇಟೆ- 31 ಜನ-ಒಟ್ಟು ಮೊತ್ತ 1.19 ಲಕ್ಷ ರೂಪಾಯಿ ; ವೀರರಾಜಪೇಟೆ-6 ಜನ-ಒಟ್ಟು ಮೊತ್ತ 28,000 ರೂ ; 1989 ರಲ್ಲಿ ಜಿಲ್ಲೆಯಲ್ಲಿ ನೀಡಲಾದ ಒಟ್ಟು ಪರಿಹಾರ ಮೊತ್ತ 83,000 ರೂಪಾಯಿಗಳಾಗಿತ್ತು.

1985ರಿಂದ ಕೇಂದ್ರ ಸರ್ಕಾರವು ಪ್ರಾರಂಭಿಸಿದ ಇಂತಹದೇ ವೈಯಕ್ತಿಕ ಅಪಘಾತ ವಿಮಾ ಯೋಜನೆಯೂ ಕೊಡಗು ಜಿಲ್ಲೆಯಲ್ಲಿ 1988 ರಿಂದ ಜಾರಿಯಲ್ಲಿ ಬಂದಿದ್ದು, ಈ ಯೋಜನೆಯನ್ವಯ ಬಡಕುಟುಂಬದಲ್ಲಿನ ದುಡಿಯುವ ವ್ಯಕ್ತಿಗೆ ಆಕಸ್ಮಿಕ ಮರಣ ಸಂಭವಿಸಿದರೆ, ವಾರಸುದಾರರಿಗೆ 3,000 ರೂಪಾಯಿಗಳ ಪರಿಹಾರ ನೀಡಲಾಗುವುದು. ಈ ಯೋಜನೆ ರಾಜ್ಯ ಸರ್ಕಾರದ ಆಶಾಕಿರಣ ಯೋಜನೆಗೆ ಪೂರಕ ಯೋಜನೆಯಾಗಿರುವುದರಿಂದ, ಆಶಾಕಿರಣ ಯೋಜನೆಯನ್ವಯ ರಾಜ್ಯ ಸರ್ಕಾರ ನೀಡುವ ಒಟ್ಟು 5000 ರೂ. ಪರಿಹಾರ ಮೊತ್ತವು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಭರಿಸಲಾಗುವ 3,000 ರೂ. ಸಹ ಒಳಗೊಂಡಿರುತ್ತದೆ.

**ಬೀಡಿ ಕಾರ್ಮಿಕರಿಗೆ ಗುಂಪುವಿಮೆ :** ಬೀಡಿ ಕಾರ್ಮಿಕರಿಗೆ ಅನ್ವಯವಾಗುವಂತೆ ಕೇಂದ್ರ ಸರ್ಕಾರವು 'ಗುಂಪು ವಿಮೆ'

ಯೋಜನೆಯನ್ನು 1992 ಏಪ್ರಿಲ್‌ನಿಂದ ಜಾರಿಗೆ ತಂದಿದೆ. ಇದು 18 ರಿಂದ 60 ವರ್ಷ ವಯಸ್ಸಿನ ಬೀಡಿ ಕಾರ್ಮಿಕರಿಗೆ ಅನ್ವಯವಾಗಲಿದ್ದು, ವಿಮೆಗೆ ಒಳಪಟ್ಟವರ ವಿಮಾ ಕಂತಿನ (ಪ್ರೀಮಿಯಂ) ಹಣವನ್ನು ಕಾರ್ಮಿಕ ಕಲ್ಯಾಣ ಇಲಾಖೆ ಹಾಗೂ ಜೀವವಿಮಾ ನಿಗಮದವರು ಭರಿಸುತ್ತಾರೆ. ವಿಮೆಗೆ ಒಳಗಾದವರು ಮೃತರಾದಾಗ, ಸಹಜ ಸಾವಾಗಿದ್ದರೆ 3,000 ರೂ.ಗಳನ್ನು ಅಪಘಾತದಿಂದ ಮೃತಪಟ್ಟಿದ್ದರೆ 6,000ರೂ. ಗಳನ್ನು, ಮೃತರ ವಾರಸುದಾರರಿಗೆ ನೀಡಲಾಗುವುದು.

**ಗುಡಿಸಲು ವಿಮಾ ಯೋಜನೆ :** ಅಗ್ನಿ ಅನಾಹುತದಿಂದ ಗುಡಿಸಲು ಹಾಗೂ ಇತರ ವಸ್ತುಗಳನ್ನು ಕಳೆದುಕೊಂಡ ಗ್ರಾಮೀಣ ಪ್ರದೇಶದ ಬಡಕುಟುಂಬಗಳಿಗೆ ಪರಿಹಾರ ನೀಡಲು ಕರ್ನಾಟಕ ಸರ್ಕಾರವು 'ಗುಡಿಸಲು ವಿಮೆ' ಯೋಜನೆಯನ್ನು 1988ರ ಮೇ 1 ರಿಂದ ಜಾರಿಗೆ ತಂದಿದೆ. ವಾರ್ಷಿಕ ವರಮಾನ 4,800 ರೂಪಾಯಿಗಳಿಗೆ ಮೀರದ ಭೂರಹಿತ ಕಾರ್ಮಿಕರು, ಕುಶಲಕರ್ಮಿಗಳು ಈ ಯೋಜನೆಯನ್ವಯ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. ಅಗ್ನಿ ಅನಾಹುತದಿಂದ ತೊಂದರೆಗೀಡಾದವರಿಗೆ ಈ ಯೋಜನೆಯನ್ವಯ ಗುಡಿಸಲಿಗಾಗಿ 1,000 ರೂಪಾಯಿಗಳ ಹಾಗೂ ಇತರ ವಸ್ತುಗಳಿಗಾಗಿ 500 ರೂ.ಗಳ ಪರಿಹಾರವನ್ನು ವಿಮಾ ಕಂಪನಿ ನೀಡುವುದು. ಇದರ ವಿತರಣೆಯ ಪ್ರಸಂಗವು ಈ ಜಿಲ್ಲೆಯಲ್ಲಿ ಈವರೆಗೆ ಬಂದಿಲ್ಲವೆಂದು ತಿಳಿಯುತ್ತದೆ.

**ರಾಷ್ಟ್ರೀಯ ಉಳಿತಾಯ ಯೋಜನೆ :** ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ ವಿವಿಧ ಯೋಜನೆಗಳ ಮೂಲಕ ಸಾರ್ವಜನಿಕರಲ್ಲಿ ಹಾಗೂ ಸಂಘ ಸಂಸ್ಥೆಗಳಲ್ಲಿ ಸಣ್ಣ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ಹಮ್ಮಿಕೊಂಡಿವೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು 1948ರಲ್ಲಿ ರಾಷ್ಟ್ರೀಯ ಉಳಿತಾಯ ಸಂಸ್ಥೆಯನ್ನು ಪ್ರಾರಂಭಿಸಿತು. ನಂತರ ಈ ಸಂಸ್ಥೆಯ ವಿಭಾಗೀಯ ಮತ್ತು ಜಿಲ್ಲಾ ಮಟ್ಟದ ಸಂಸ್ಥೆಗಳು ತೆರೆಯಲ್ಪಟ್ಟವು. ರಾಜ್ಯ ಸರ್ಕಾರವು ಸಣ್ಣ ಉಳಿತಾಯ ಯೋಜನೆಯನ್ನು ಹೆಚ್ಚು ಜನಪ್ರಿಯ ಮತ್ತು ವ್ಯಾಪಕಗೊಳಿಸಲು, ರಾಜ್ಯ ಲಾಟರಿ, ಮತ್ತು ಇತರ ಬಹುಮಾನ ಯೋಜನೆಗಳನ್ನು ಹಮ್ಮಿಕೊಂಡಿರುವುದು. ರಾಜ್ಯ ಸರ್ಕಾರ 1984ರಲ್ಲಿ ಜಿಲ್ಲಾ ಮಟ್ಟದಲ್ಲಿ ಸಹಾಯಕ ನಿರ್ದೇಶಕರ ಕಚೇರಿಯನ್ನು ಪ್ರಾರಂಭಿಸಿತು. ಇದರ ಕಾರ್ಯವ್ಯಾಪ್ತಿ ಇಡೀ ಜಿಲ್ಲೆಗೆ ಅನ್ವಯಿಸಿದೆ. ಈ ಜಿಲ್ಲೆಯಲ್ಲಿ ಒಟ್ಟು 213 ಅಂಚೆ ಕಚೇರಿಗಳಲ್ಲಿ ಉಳಿತಾಯ ಬ್ಯಾಂಕ್ ಖಾತೆಯ ಸೌಲಭ್ಯ ಇರುವುದು. ಇಂದಿರಾ ವಿಕಾಸ ಪತ್ರ ಯೋಜನೆಯಲ್ಲಿ ಪ್ರಾರಂಭದಿಂದ (19-11-86) 90-91ರ ವರೆಗೆ ಶೇಖರಣೆಯಾದ ಹಣ ರೂ. 4.25 ಕೋಟಿ, ರಾಷ್ಟ್ರೀಯ ಉಳಿತಾಯ ಯೋಜನೆ 87 ಇದರಡಿಯಲ್ಲಿ ಪ್ರಾರಂಭದಿಂದ (1987) ಮಾರ್ಚ್ 31-1991ರ ವರೆಗೆ ತೊಡಗಿಸಿದ ಹಣ ರೂ. 1.23 ಕೋಟಿ.

ಈ ಜಿಲ್ಲೆಯಲ್ಲಿ ಸಣ್ಣ ಉಳಿತಾಯ ಯೋಜನೆಯಲ್ಲಿ ನಿಗದಿತ ಗುರಿ ಸಾಧಿಸಲು ತನ್ನದೇ ಆದ ವಿಶೇಷ ಸಮಸ್ಯೆಗಳಿವೆ. ಅವುಗಳಲ್ಲಿ ಬಹು ಮುಖ್ಯವಾದದ್ದು, ಸಂಚಾರ ಸೌಲಭ್ಯ, ಸಂಪರ್ಕ ಸಾಧನಗಳ ಕೊರತೆ, ಬಹುಭಾಗ ತೋಟದ ಕಾರ್ಮಿಕರು ಮತ್ತು ಮಾಲಿಕರು ಉಳಿತಾಯ ಪ್ರವೃತ್ತಿಯನ್ನು ಇನ್ನೂ ಹೆಚ್ಚಾಗಿ ರೂಢಿಸಿಕೊಂಡಿಲ್ಲದಿರುವುದು, ಉಳಿತಾಯ ಕಾರ್ಯಕ್ರಮ ರೂಪಿಸಲು ವಿಶೇಷವಾದ ಆಂದೋಲನಗಳನ್ನು ನಡೆಸದೇ ಇರುವುದು, ಮುಂತಾದವು ಎಂದು ಬಲ್ಲವರ ಅಭಿಮತ. ಜನಸಾಮಾನ್ಯರಲ್ಲಿ ಉಳಿತಾಯ ಮನೋಭಾವನೆಯನ್ನು ವಿಶೇಷವಾಗಿ ಪ್ರೇರೇಪಿಸಲು ಈ ಜಿಲ್ಲೆಯನ್ನು 1961-62ರಲ್ಲಿ ರಾಷ್ಟ್ರೀಯ ಉಳಿತಾಯ ಸಂಸ್ಥೆಯು ಮಾದರಿ ಜಿಲ್ಲೆಯನ್ನಾಗಿ ಆಯ್ಕೆ ಮಾಡಿತ್ತು. ಇದರಂತೆ 1962ರ ಫೆಬ್ರವರಿವರೆಗೆ 13.70 ಲಕ್ಷ ಉಳಿತಾಯ ಸಂಚಯವಾಗಿತ್ತು. ಜಿಲ್ಲೆಯಲ್ಲಿ 89-90 ಮತ್ತು 90.91 ರಲ್ಲಿ ವಿವಿಧ ವಿನಿಯೋಗಗಳಲ್ಲಿ ಸಾಧಿಸಿದ ಪ್ರಗತಿಯ ತಖ್ತೆಯ ಪಟ್ಟಿಯನ್ನು ಮುಂದಿನ ಪುಟದಲ್ಲಿ ನೋಡಿ.

## ವಿಮೆ ವ್ಯವಹಾರ

### ಕರ್ನಾಟಕ ರಾಜ್ಯ ವಿಮಾ ಇಲಾಖೆ

ಒಂದುನೂರು ವರ್ಷಗಳ ಹಿಂದೆ 1891 ರಲ್ಲಿ ಅಂದಿನ ಮೈಸೂರು ಸರ್ಕಾರದಿಂದ ಪ್ರಾರಂಭಗೊಂಡು ಇಂದಿಗೂ ಮುಂದುವರೆದುಕೊಂಡು ಬರುತ್ತಿರುವ ರಾಜ್ಯ ವಿಮಾ ಇಲಾಖೆಯು (ಕೆ.ಜಿ.ಐ.ಡಿ.) ಕೇವಲ ಸರ್ಕಾರಿ ನೌಕರರಿಗೆ ಸಂಬಂಧ ಪಟ್ಟಂತೆ ಜೀವವಿಮಾ ವ್ಯವಹಾರವನ್ನು, ಸರ್ಕಾರ, ಸರ್ಕಾರಿ ನೌಕರರು ಮತ್ತು ಸರ್ಕಾರದ ನಿಗಮಗಳಿಗೆ ಸಂಬಂಧ ಪಟ್ಟಂತೆ ಮೋಟಾರ್ ವಾಹನ ವಿಮಾ ವ್ಯವಹಾರವನ್ನು ನಡೆಸುತ್ತಿರುವುದು. 1976ರಲ್ಲಿ ರಾಜ್ಯ ವಿಮಾ ಇಲಾಖೆಯ ಆಡಳಿತವನ್ನು ವಿಕೇಂದ್ರೀಕರಣಗೊಳಿಸಲಾಯಿತು. ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ವಿಮಾ ವ್ಯವಹಾರವನ್ನು ಹೆಚ್ಚಿಸಲು ಮತ್ತು ವಿಮಾದಾರರಿಗೆ ಶೀಘ್ರ ಮತ್ತು ಉತ್ತಮ ಸೇವೆಯನ್ನು ಸಲ್ಲಿಸಲು ಸಹಾಯವಾಗುವಂತೆ ಪ್ರತ್ಯೇಕವಾದ

(ಮೊತ್ತ ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | | 1989–90 ತೆರೆಯಲಾದ ಹೊಸ ಖಾತೆಗಳ ಸಂಖ್ಯೆ | 1989–90 ಒಟ್ಟು ಸಂಗ್ರಹಣೆ | 1989–90 ನಿವ್ವಳ ಸಂಗ್ರಹಣೆ | 1990–91 ತೆರೆಯಲಾದ ಹೊಸ ಖಾತೆಗಳ ಸಂಖ್ಯೆ | 1990–91 ಒಟ್ಟು ಸಂಗ್ರಹಣೆ | 1990–91 ನಿವ್ವಳ ಸಂಗ್ರಹಣೆ |
|---|---|---|---|---|---|---|---|
| 1. | ಅಂಚೆ ಕಛೇರಿಯ ಉಳಿತಾಯ ಖಾತೆಗಳು (ಪಿ.ಓ.ಎಸ್.ಬಿ.) | 1373 | 333.18 | (—)316.31 | 1,199 | 121.45 | (—)229.91 |
| 2. | ಅಂಚೆ ಕಛೇರಿಯ ಕಾಲಾವಧಿ ಠೇವಣಿ (ಟಿ.ಡಿ.) | 573 | 16.20 | (—) 70.65 | 491 | 27.31 | (—) 20.50 |
| 3. | ಅಂಚೆ ಕಛೇರಿಯ ಆವರ್ತಕ ಠೇವಣಿ (ಆರ್.ಡಿ.) | 215 | 113.61 | 14.13 | 8,316 | 135.60 | 17.66 |
| 4. | ಅಂಚೆ ಕಛೇರಿಯ ನಿಯತಕಾಲಿಕ ಠೇವಣಿ (ಸಿ.ಟಿ.ಡಿ.) | — | 3.82 | (—) 3.33 | — | 2.47 | (—) 8.21 |
| 5. | ರಾಷ್ಟ್ರೀಯ ಉಳಿತಾಯ ಪತ್ರ 2ನೇ ಮಾಲಿಕೆ | — | — | (—) 4.85 | — | — | — |
| 6. | ರಾಷ್ಟ್ರೀಯ ಉಳಿತಾಯ ಪತ್ರ 6ನೇ ಮಾಲಿಕೆ | — | 9.91 | (—) 45.00 | — | — | — |
| 7. | ರಾಷ್ಟ್ರೀಯ ಉಳಿತಾಯ ಪತ್ರ 7ನೇ ಮಾಲಿಕೆ | — | — | (—) 16.30 | — | — | — |
| 8. | ರಾಷ್ಟ್ರೀಯ ಉಳಿತಾಯ ಪತ್ರ 8ನೇ ಮಾಲಿಕೆ | — | 126.51 | 126.51 | — | 157.59 | 157.59 |
| 9. | ಸಾರ್ವಜನಿಕ ಭವಿಷ್ಯನಿಧಿ (ಪಿ.ಪಿ.ಎಫ್) | 29 | 44.35 | 44.34 | 5 | 42.41 | 42.41 |
| 10. | ಇಂದಿರಾ ವಿಕಾಸ ಪತ್ರಗಳು | — | 95.39 | 95.39 | — | 118.78 | 118.78 |
| 11. | ರಾಷ್ಟ್ರೀಯ ಉಳಿತಾಯ ಯೋಜನೆ 87 | 394 | 45.01 | 45.00 | 225 | 56.13 | 56.02 |
| 12. | ಮಾಸಿಕ ವರಮಾನ ಯೋಜನೆ (ಎಂ.ಐ.ಎಸ್.) | 55 | 16.10 | 16.10 | 71 | 16.10 | 13.85 |
| 13. | ಕಿಸಾನ್ ವಿಕಾಸ ಪತ್ರಗಳು (ಕೆ.ವಿ.ಪಿ.) | — | 27.92 | 27.92 | — | 55 38 | 55.38 |
| 14. | ಹಳೆಯ ತ್ಯಜಿಸಿದ ಸರ್ಟಿಫಿಕೇಟುಗಳು | — | — | (—) 8.07 | — | — | ( ) 87.82 |

ಜಿಲ್ಲಾ ವಿಮಾ ಕಛೇರಿಯನ್ನು 1979 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭಿಸಲಾಯಿತು. ಇದಕ್ಕೂ ಪೂರ್ವದಲ್ಲಿ 1976 ರಿಂದ ಜಿಲ್ಲೆಯ ವಿಮಾ ವ್ಯವಹಾರವನ್ನು ಮೈಸೂರಿನ ವಿಭಾಗೀಯ ಕಛೇರಿ ನಿರ್ವಹಿಸುತ್ತಿತ್ತು. 1990ರ ಕೊನೆಯಲ್ಲಿ ಇದ್ದಂತೆ 7,245 ಸರ್ಕಾರಿ ನೌಕರರಿಗೆ ಸಂಬಂಧ ಪಟ್ಟಂತೆ ಕೊಡಗು ಜಿಲ್ಲೆಯಲ್ಲಿ ಚಾಲ್ತಿಯಲ್ಲಿದ್ದ ವಿಮಾ ಪತ್ರಗಳ ಸಂಖ್ಯೆ 14,531. ವಿಮಾ ಕಂತುಗಳ ಮೂಲಕ ಸಂದಾಯವಾದ ಜಿಲ್ಲೆಯ ವಾರ್ಷಿಕ ಆದಾಯ ಈ ರೀತಿ ಇತ್ತು. 1987-88 ರೂ. 49.95 ಲಕ್ಷ; 88–89 ರೂ. 67.15 ಲಕ್ಷ; ಮತ್ತು 89–90 ರೂ. 70.59 ಲಕ್ಷ. ಜಿಲ್ಲೆಯಲ್ಲಿ ಇದ್ದ ಸರ್ಕಾರದ ಒಡೆತನದ ವಾಹನಗಳ ಸಂಖ್ಯೆ 109ರಲ್ಲಿ ವಿಮೆಗೆ ಒಳಪಟ್ಟ ವಾಹನಗಳ ಸಂಖ್ಯೆ 83. ಜಿಲ್ಲಾ ವಿಮಾ ಅಧಿಕಾರಿಯು ರೂ. 40,000 ರವರೆಗೆ ವ್ಯವಹರಿಸಲು (ವಿಮಾ ಪತ್ರ ನೀಡಿಕೆ ಹಕ್ಕುಗಳ ಮಂಜೂರಾತಿ ಮುಂತಾದವು) ಅಧಿಕಾರ ಹೊಂದಿರುವರು. ಜಿಲ್ಲೆಯಲ್ಲಿನ ನಗರಸಭೆಗಳು, ಸ್ಥಳೀಯ ಸಂಸ್ಥೆಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಒಳಗೊಂಡಂತೆ, ಸದರಿ ನೌಕರರ ಕುಟುಂಬ ಕಲ್ಯಾಣ ಯೋಜನಾ ನಿಧಿಯನ್ನು ವಿಮಾ ಇಲಾಖೆಯು 1977 ರಿಂದ ನಿರ್ವಹಿಸುತ್ತಿರುವುದು.

**ಅಂಚೆ ವಿಮಾ ಯೋಜನೆ :** ಭಾರತೀಯ ಜೀವವಿಮಾ ನಿಗಮ, ಕರ್ನಾಟಕ ಸರ್ಕಾರದ ವಿಮಾ ಇಲಾಖೆಯಲ್ಲದೇ ಅಂಚೆ ಇಲಾಖೆಯು 1883 ರಿಂದ 'ಅಂಚೆ ಜೀವವಿಮಾ' ವ್ಯವಹಾರವನ್ನು ನಡೆಸುತ್ತಿದೆ. ಪ್ರಾರಂಭದಲ್ಲಿ ಕೇವಲ ಅಂಚೆ ತಂತಿ ಇಲಾಖೆಯ ನೌಕರರಿಗೆ ಮೀಸಲಾಗಿದ್ದ ಈ ಯೋಜನೆಗೆ ಈಗ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನೌಕರರು, ಸಾರ್ವಜನಿಕ ಸಂಸ್ಥೆಗಳ ನೌಕರರೂ ಸಹ ಒಳಪಡಬಹುದಾಗಿದೆ. ಈ ವಿಮೆಯ ಬಗ್ಗೆ ಪ್ರತ್ಯೇಕವಾದ ಜಿಲ್ಲಾ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

ಜೀವ ವಿಮಾ ನಿಗಮ

ಭಾರತೀಯ ಜೀವವಿಮಾ ನಿಗಮವು (ಎಲ್. ಐ. ಸಿ.) 1956 ಸೆಪ್ಟಂಬರ್‌ದಲ್ಲಿ ರಚನೆಗೊಳ್ಳುವ ಪೂರ್ವದಲ್ಲಿ ಜಿಲ್ಲೆಯಲ್ಲಿ ಜೀವವಿಮಾ ಮತ್ತು ಸಾಮಾನ್ಯ ವಿಮಾ ವ್ಯವಹಾರವನ್ನು ಪ್ರೋತ್ಸಾಹಿಸಲು ಅನೇಕ ಖಾಸಗಿ ವಿಮಾ ಕಂಪನಿಗಳು (ಮೈಸೂರು, ಮಂಗಳೂರು, ಬೆಂಗಳೂರು–ಮದ್ರಾಸ್ ಮೂಲದ ಕಂಪನಿಗಳು) ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ತಮ್ಮದೇ ಆದ ಕಛೇರಿಗಳನ್ನೂ ಏಜಂಟರನ್ನೂ ಹೊಂದಿದ್ದವು. ಆ ದಿನಗಳಲ್ಲಿ ಇಂದಿನಷ್ಟು ವಿಮೆಯ ಬಗ್ಗೆ ಜನಸಾಮಾನ್ಯರಲ್ಲಿ ಪ್ರಜ್ಞೆ ಬೆಳೆದಿರಲಿಲ್ಲ. ಕೊಡಗು ಜಿಲ್ಲೆಯು ಭಾರತೀಯ ಜೀವ ವಿಮಾ ನಿಗಮದ ಮೈಸೂರು ವಿಭಾಗಕ್ಕೆ ಒಳಪಟ್ಟಿದ್ದು, ನಿಗಮದ ಮಡಿಕೇರಿ ಶಾಖಾ ಕಛೇರಿಯು 1962ರಲ್ಲಿ ಪ್ರಾರಂಭವಾಯಿತು. ಅಂದು ಅದರ ಕಾರ್ಯವ್ಯಾಪ್ತಿ ಇಡೀ ಜಿಲ್ಲೆಗೆ ಸೇರಿತ್ತು. ಕಾಲಕ್ರಮೇಣ ವಿಮಾ ವ್ಯವಹಾರ ಹೆಚ್ಚಿದಂತೆ ಮುಂದೆ 1986ರಲ್ಲಿ ಸೋಮವಾರಪೇಟೆ ಮತ್ತು ವೀರರಾಜಪೇಟೆ ತಾಲೂಕುಗಳಿಗೆ ಅನ್ವಯವಾಗುವಂತೆ ಪ್ರತ್ಯೇಕವಾದ ಶಾಖಾ ಕಛೇರಿಗಳು ತೆರೆಯಲ್ಪಟ್ಟವು.

1987–88, 88–89 ಮತ್ತು 89–90ರಲ್ಲಿ ಜಿಲ್ಲೆಯಾದ್ಯಂತ ಚಾಲ್ತಿಯಲ್ಲಿ ಇದ್ದ ವಿಮಾ ಪತ್ರಗಳ ಸಂಖ್ಯೆ ಕ್ರಮವಾಗಿ 41,228, 41,461 ಮತ್ತು 44,965, ಮತ್ತು ಸದರಿ ವರ್ಷಗಳಲ್ಲಿ ಸಂದಾಯವಾದ ವಿಮಾ ಕಂತಿನ (ಪ್ರೀಮಿಯಂ) ಆದಾಯ ಕ್ರಮವಾಗಿ ರೂ. 283.12 ಲಕ್ಷ, ರೂ. 383.74 ಲಕ್ಷ ಮತ್ತು ರೂ. 457.27 ಲಕ್ಷ ಆಗಿದ್ದಿತು. ವಿಮಾ ಏಜಂಟರ ಸಂಖ್ಯೆ 1987–88ರಲ್ಲಿ 357 ಇದ್ದದ್ದು ಮುಂದಿನ ವರ್ಷ 398ಕ್ಕೆ ಹೆಚ್ಚಳಗೊಂಡು ಅದರ ಮುಂದಿನ ವರ್ಷ 499ಕ್ಕೆ ಹೆಚ್ಚಳಗೊಂಡಿತು. 1990ರ ಮಾರ್ಚ್‌ಕೊನೆಯಲ್ಲಿ ಶಾಖಾವಾರು ಚಾಲ್ತಿಯಲ್ಲಿದ್ದ ವಿಮಾಪತ್ರಗಳ ಸಂಖ್ಯೆ ಮತ್ತು ವಾರ್ಷಿಕ ವಿಮಾ ಕಂತಿನ ಆದಾಯ ಈ ರೀತಿ ಇತ್ತು. ಮಡಿಕೇರಿ–24,738 ವಿಮಾ ಪತ್ರಗಳು (ರೂ. 181.32 ಲಕ್ಷ ಆದಾಯ) ; ಸೋಮವಾರಪೇಟೆ–10,773 (ರೂ. 88.19 ಲಕ್ಷ) ; ಹಾಗೂ ವೀರರಾಜಪೇಟೆ 13,908 (ರೂ. 187.76 ಲಕ್ಷ). ಶಾಖಾವಾರು ಏಜಂಟರ ಸಂಖ್ಯೆ : ಮಡಿಕೇರಿ 182 (7), ಸೋಮವಾರಪೇಟೆ 148 (7) ಮತ್ತು ವೀರರಾಜಪೇಟೆ 169 (8); ಆವರಣದ ಅಂಕಿಗಳು ವಿಮಾ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆಯನ್ನು ಸೂಚಿಸುವುದು. ಗುಂಪು ವಿಮಾ ಯೋಜನೆಯು ಜಿಲ್ಲೆಯಲ್ಲಿ 89–90 ರಿಂದ ಜಾರಿಯಲ್ಲಿ ಬಂದಿದ್ದು ಅದರಲ್ಲಿನ ವಿವಿಧ 11 ಯೋಜನೆಗಳ ಅನ್ವಯ ವಿಮೆಗೆ ಒಳಪಟ್ಟ ಸದಸ್ಯರ ಸಂಖ್ಯೆ 260.

## ನಾಣ್ಯಗಳು ಮತ್ತು ಹಣದ ಚಲಾವಣೆ

ಒಂದು ಪ್ರದೇಶದ ಆಡಳಿತ ಪ್ರಭುತ್ವವು ಬೇರೆ ಬೇರೆ ಅರಸು ಮನೆತನಗಳಿಗೆ ಒಳಪಡುತ್ತ ಹೋದಂತೆ, ಆ ಪ್ರದೇಶದಲ್ಲಿ ಚಲಾವಣೆಯಲ್ಲಿದ್ದ ಹಣದಲ್ಲಿಯೂ, ಅದರ ಅಳತೆ, ವಿನ್ಯಾಸ, ಹೊಳಪು, ನಾಣ್ಯಕ್ಕೆ ಉಪಯೋಗಿಸುವ ಲೋಹ, ಮುಂತಾದವುಗಳಲ್ಲಿಯೂ ಆಗುವ ಬದಲಾವಣೆಯನ್ನು ಇತಿಹಾಸದುದ್ದಕ್ಕೂ ಗಮನಿಸಬಹುದು. ಕೊಡಗಿನಲ್ಲಿ ದೊರೆತಿರುವ

ಅತಿ ಹಿಂದಿನ ನಾಣ್ಯಗಳು ತಲಕಾಡಿನ ಗಂಗಅರಸರಿಗೆ ಸಂಬಂಧ ಪಟ್ಟವುಗಳು (4 ರಿಂದ 10ನೇ ಶತಮಾನ). ಅವರ ಆಳ್ವಿಕೆಯಲ್ಲಿ ಐದು ಬಗೆಯ ಚಿನ್ನದ ಮತ್ತು ತಾಮ್ರದ ನಾಣ್ಯಗಳು, ರಾಜಲಾಂಛನ 'ಆನೆ'ಯೊಂದಿಗೆ ಟಂಕಿಸಲ್ಪಟ್ಟಿದ್ದವು. ಡಾ|| ಎಂ.ಎಚ್. ಕೃಷ್ಣ ಅವರು ಗಂಗರ ಚಿನ್ನದ ನಾಣ್ಯಗಳನ್ನು ವರಹ (ವರಾಹ)ಗಳಾಗಿದ್ದಿರಬಹುದೆಂದು ಅಭಿಪ್ರಾಯ ಪಡುವರು. ನಂತರದ ಹೊಯ್ಸಳರ ನಾಣ್ಯಗಳು ಚಿನ್ನದ ನಾಣ್ಯಗಳಾಗಿದ್ದು 'ಗದ್ಯಾಣ'ಗಳೆಂದು ಕರೆಯಲ್ಪಡುತ್ತಿದ್ದವು. ಅವುಗಳ ತೂಕ 62 ಗ್ರೇನ್ಸ್ ಆಗಿತ್ತು. ವಿಜಯನಗರ ಅರಸರ ಕಾಲದಲ್ಲಿ (1336–1565) ಚಿನ್ನ ಮತ್ತು ತಾಮ್ರದ ಉತ್ತಮ ಗುಣಮಟ್ಟದ (ಸ್ಟ್ಯಾಂಡರ್ಡ್) ಬಹು ಬಗೆಯ ವಿವಿಧ ಮೌಲ್ಯದ ನಾಣ್ಯಗಳು ಚಲಾವಣೆಯಲ್ಲಿದ್ದವು. ವರಹ ಅಥವಾ ಗದ್ಯಾಣ (52 ಗ್ರೇನ್ಸ್ ತೂಕ ಇವುಗಳನ್ನು ಪಗೋಡ/ಹೊನ್ನು ಎಂದೂ ಕರೆಯುತ್ತಿದ್ದರು), ಪ್ರತಾಪ (ಕಾಟಿ ಅಥವಾ ಅರ್ಧಗದ್ಯಾಣ), ಪಣ (1/10 ಗದ್ಯಾಣ), ಹಾಗು ತಾರ, ಜಿತ್ತಲ್ ಮತ್ತು ಕಾಸು ಮುಂತಾದವುಗಳು. ಕೊಡಗಿನ ಅರಸರು ತಮ್ಮ ಆಳ್ವಿಕೆಯ ಎರಡುನೂರು ವರ್ಷಗಳಲ್ಲಿ ಬಹುಸೀಮಿತವಾದ ಚಿಕ್ಕ ರಾಜ್ಯದಲ್ಲಿ ಯಾವುದೇ ಟಂಕಸಾಲೆಯನ್ನು ಪ್ರಾರಂಭಿಸಿದ ಬಗ್ಗೆ ಮತ್ತು ಸ್ವತಂತ್ರವಾಗಿ ಯಾವುದೇ ನಾಣ್ಯವನ್ನು ಚಲಾವಣೆಯಲ್ಲಿ ತಂದ ಬಗ್ಗೆ ಉಲ್ಲೇಖವಿರುವುದಿಲ್ಲ. ನೆರೆಯ ರಾಜ್ಯಗಳಾದ ಮೈಸೂರು, ಪಶ್ಚಿಮ ಕರಾವಳಿ, ಮಲಬಾರು ಮುಂತಾದ ಪ್ರದೇಶಗಳಲ್ಲಿದ್ದ ನಾಣ್ಯಗಳು ಇಲ್ಲಿಯೂ ಜಾರಿಯಲ್ಲಿದ್ದವು. ಈ ಹೊರನಾಡಿನ (ವಿದೇಶಿ) ನಾಣ್ಯಗಳನ್ನು ವರ್ತಕರು ಸ್ಥಳೀಯ ನಾಣ್ಯಕ್ಕೆ ರೂಢಿಯಲ್ಲಿದ್ದ ದರದಲ್ಲಿ ವಿನಿಮಯ ಮಾಡುತ್ತಿದ್ದರು. ಈ ಪದ್ಧತಿಯು ಹೆಚ್ಚು ಕಡಿಮೆ ಕೊಡಗು ಬ್ರಿಟಿಷರ ಅಧಿಪತ್ಯಕ್ಕೆ 1834ರಲ್ಲಿ ಸೇರುವವರೆಗೆ ಮತ್ತು ಅನಂತರವೂ ಮುಂದುವರೆದಿತ್ತು.

ಕಂಪನಿಯ ನಾಣ್ಯಗಳು ಬಳಕೆಯಲ್ಲಿ ಬಂದ ನಂತರವೂ ಸ್ಥಳೀಯ ನಾಣ್ಯಗಳ ವಿನಿಮಯ ಕೋಷ್ಟಕ ಈ ರೀತಿ ಇತ್ತು : ಒಂದು ಹಣಕ್ಕೆ ಕಂಪನಿಯ ಆರು ಆಣೆ ಐದು ಪೈ.ಗಳು (ಸುಮಾರು 30ಪೈಸೆ) ಸಮಾನವಾಗಿದ್ದವು; 10 ಹಣಕ್ಕೆ ಒಂದು ವರಹ ಸಮಾನವಾಗಿತ್ತು; ಒಂದು ವರಹಕ್ಕೆ ಕಂಪನಿಯ ನಾಲ್ಕು ರೂಪಾಯಿಗಳು ಸಮಾನವಾಗಿದ್ದವು.

ಮೈಸೂರು ಅರಸರು ತಮ್ಮ ಸುಧೀರ್ಘ ಆಳ್ವಿಕೆಯಲ್ಲಿ ವಿಜಯನಗರದ ನಾಣ್ಯ ಸಂಪ್ರದಾಯವನ್ನೇ ಬಹುಮಟ್ಟಿಗೆ ಮುಂದುವರೆಸಿದರೂ ಕೆಲವು ಬದಲಾವಣೆಗಳನ್ನು ತಂದರು. ಮೈಸೂರು ದೊರೆಗಳಲ್ಲಿ ಒಂದನೇ ಕಂಠೀರವ ನರಸರಾಜ ಒಡೆಯರ್ (1638–1658) ಪ್ರಪ್ರಥಮವಾಗಿ ಟಂಕಸಾಲೆಯನ್ನು ಪ್ರಾರಂಭಿಸಿದ್ದಲ್ಲದೇ ನಾಣ್ಯ ಮತ್ತು ಹಣದ ಚಲಾವಣೆಯಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಅವರ ಹೆಸರಿನಲ್ಲಿ 'ಕಂಠೀರಾಯಿ ಹಣ' ಮತ್ತು 'ಕಂಠೀರಾಯಿ ಪಗೋಡ' (ವರಹ) ಎಂಬ ಎರಡು ನಾಣ್ಯವನ್ನು ಚಲಾವಣೆಯಲ್ಲಿ ತರಲಾಯಿತು. ಕಂಠೀರಾಯಿ ಹಣವು ಪಗೋಡಾದ ಹತ್ತನೇಯ ಒಂದು ಭಾಗವಾಗಿತ್ತು. ಸದರಿ ನಾಣ್ಯಗಳು ಕೊಡಗಿನಲ್ಲಿಯೂ ವ್ಯಾಪಕವಾಗಿ ಪ್ರಚಾರದಲ್ಲಿದ್ದವು. ಪಗೋಡಾಗಳ ತೂಕ ವಿಜಯನಗರದಲ್ಲಿದ್ದಂತೆ 52 ಗ್ರೇನ್ಸ್ ಆಗಿತ್ತು. ಮೈಸೂರು ಅರಸರು ಅನೇಕ ತಾಮ್ರದ ನಾಣ್ಯಗಳನ್ನು ಬಳಕೆಯಲ್ಲಿ ತಂದಿದ್ದರು. ಇವುಗಳನ್ನು ಚಿಲ್ಲರೆ ನಾಣ್ಯಗಳನ್ನಾಗಿ ಬಳಸಲಾಗುತ್ತಿತ್ತು. ನೆರೆಯ ರಾಜ್ಯ ಕೆಳದಿಯ ಅರಸು ಸದಾಶಿವ ನಾಯಕ ಚಲಾವಣೆಯಲ್ಲಿ ತಂದಿದ್ದ ಇಕ್ಕೇರಿ ವರಹಗಳೂ ಚಲಾವಣೆಯಲ್ಲಿದ್ದವು. ಹೈದರನ ಆಳ್ವಿಕೆಯಲ್ಲಿ ಅವನು ಕೆಳದಿ ನಾಯಕರ ನಾಣ್ಯಗಳ ಮಾದರಿಯಲ್ಲಿಯೇ ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಚಲಾವಣೆಯಲ್ಲಿ ತಂದಿದ್ದನು. ಟಿಪ್ಪುವಿನ ಆಡಳಿತ ಕಾಲದಲ್ಲಿ (1782–1799), ಅವನು 16 ಬಗೆಯ ವಿವಿಧ ನಾಣ್ಯಗಳನ್ನು ಚಿನ್ನ, ಬೆಳ್ಳಿ, ತಾಮ್ರದಲ್ಲಿ ಮುದ್ರಿಸಿ ಚಲಾವಣೆಯಲ್ಲಿ ತಂದಿದ್ದನು.

1854ರವರೆಗೆ ಸರ್ಕಾರಿ ಲೆಕ್ಕಗಳನ್ನು ಕಂಠೀರಾಯಿ ಪಗೋಡಗಳಲ್ಲಿ ಮತ್ತು ಹೈದರನ್ನು ರೂಢಿಯಲ್ಲಿ ತಂದ ಸುಲ್ತಾನಿ ಅಥವಾ ಬಹಾದ್ದೂರಿ ಪಗೋಡಗಳಲ್ಲಿ ಇಡಲಾಗುತ್ತಿತ್ತು. ಮುಂದಿನ ವರ್ಷ 1855ರಲ್ಲಿ ಕಂಪನಿಯ ನಾಣ್ಯ 'ಕಂಪನಿ ರೂಪಾಯಿ'ಯನ್ನು ಚಲಾವಣೆಗೆತರಲಾಯಿತು ಮತ್ತು ಸರಕಾರಕ್ಕೆ ಸಲ್ಲಬೇಕಾದ ರಾಜಧನ, ರಾಜಸ್ವ, ಮುಂತಾದವುಗಳನ್ನು 'ಕಂಪನಿ ರೂಪಾಯಿ' ಲೆಕ್ಕದಲ್ಲಿ ಇಡಲಾಗುತ್ತಿತ್ತು. 1870ರಲ್ಲಿ 'ಭಾರತೀಯ ನಾಣ್ಯಗಳ ಕಾನೂನು 1870'ರ ಪರಿಮಿತಿಯನ್ನು ಮೈಸೂರು ರಾಜ್ಯಕ್ಕೆ ವಿಸ್ತರಿಸಿದ ಬಳಿಕ ಬ್ರಿಟಿಷ್ ಸರಕಾರದ ನಾಣ್ಯಗಳು ಮೈಸೂರು ಮತ್ತು ಕೊಡಗಿನಲ್ಲಿ ಚಲಾವಣೆಗೆ ಬಂದವು. 1879ರಲ್ಲಿ ಮದ್ರಾಸ್ ಸರ್ಕಾರದ ನೋಟುಗಳು ಕೊಡಗಿನಲ್ಲಿ ಜಾರಿಗೆ ಬಂದವು. ಬ್ರಿಟಿಷ್ ಸರ್ಕಾರದ ನಾಣ್ಯಗಳು ಬೆಳ್ಳಿಯಿಂದ, ತಾಮ್ರದಿಂದ ಮತ್ತು ಮಿಶ್ರಲೋಹದಿಂದ ಮಾಡಿದವುಗಳಾಗಿದ್ದವು. ಕಾಸು, ಪೈ, ಮೂರು ಕಾಸು (ಪಾವಾಣೆ) ಮತ್ತು ಅರ್ಧ ಆಣೆಗಳು ತಾಮ್ರದ ನಾಣ್ಯಗಳಾಗಿದ್ದರೆ, ಒಂದಾಣೆ, ಎರಡಾಣೆ ಮತ್ತು ಪಾವಲಿಗಳು (ಕಾಲು ರೂಪಾಯಿ) ಮಿಶ್ರಲೋಹದಿಂದ ಮಾಡಿ

ದವುಗಳಾಗಿದ್ದವು. ಚಲಾವಣೆಯಲ್ಲಿದ್ದ ಬೆಳ್ಳಿಯ ನಾಣ್ಯಗಳೆಂದರೆ ಎರಡಾಣೆ (ಅದೇಲಿ ಅಥವಾ ಚವಲಿ), ಪಾವಲಿ (ನಾಲ್ಕಾಣೆ), ಅರ್ಧ ರೂಪಾಯಿ ಮತ್ತು ರೂಪಾಯಿ. 1862ರಲ್ಲಿ ಬ್ರಿಟಿಷ್ ಸರ್ಕಾರವು ಕಾಗದದ ನೋಟುಗಳನ್ನು ಜಾರಿಯಲ್ಲಿ ತಂದ ನಂತರ ಅವು ಇಲ್ಲಿಯೂ ಜಾರಿಯಲ್ಲಿ ಬಂದವು. ಒಂದು ರೂಪಾಯಿಯನ್ನು 16 ಆಣೆಗಳನ್ನಾಗಿಯೂ, ಒಂದು ಆಣೆಯನ್ನು 12 ಪೈಗಳಾಗಿಯೂ ವಿಭಾಗಿಸಲಾಗಿತ್ತು. ಸ್ವಾತಂತ್ರ್ಯ ನಂತರ ಭಾರತ ಸರ್ಕಾರದ ಹೊಸ ಲಾಂಛನವು ಎಲ್ಲಾ ನಾಣ್ಯ ಮತ್ತು ನೋಟುಗಳ ಮೇಲೆ ಅರನೇ ಜಾರ್ಜ್ ಚಿತ್ರದ ಬದಲಾಗಿ ಮುದ್ರಿಸಲ್ಪಟ್ಟಿತು. 1957ರಲ್ಲಿ ನಾಣ್ಯ ಪದ್ಧತಿಯಲ್ಲಿ ದಶಮಾಂಶ ಪದ್ಧತಿಯನ್ನು ಅಳವಡಿಸಲಾಯಿತು.

## ಸಹಕಾರಿ ಚಳವಳಿ

ಕಳೆದ ಸುಮಾರು ಒಂಭತ್ತು ದಶಕಗಳ ಅವಧಿಯಲ್ಲಿ ಸಹಕಾರಿ ವಲಯವು ನಮ್ಮ ಆರ್ಥಿಕ ವ್ಯವಸ್ಥೆಯ ಒಂದು ಉಪಾಂಗವಾಗಿ ಬೆಳೆದು ಆರ್ಥಿಕ ವ್ಯವಸ್ಥೆಯಲ್ಲಿ ಅದರ ಆಳ ಮತ್ತು ವ್ಯಾಪ್ತಿಯನ್ನು ಗುರುತಿಸುವಂತೆ ಆಗಿದೆ. ಇಂದು ಸಹಕಾರಿ ವ್ಯವಸ್ಥೆಯು ಎಲ್ಲಾ ರಂಗಗಳಲ್ಲಿ ವ್ಯಾಪಿಸಿದ್ದು ಅದರ ಅಡಿಯಲ್ಲಿ ಬಾರದೆ ಇರುವ ಆರ್ಥಿಕ, ಸಾಮಾಜಿಕ ಚಟುವಟಿಕೆಗಳು ವಿರಳ. ಭಾರತದ ಸಹಕಾರಿ ಕಾನೂನು 1904 ಇತರ ರಾಜ್ಯಗಳಿಗೆ ವಿಸ್ತರಿಸಿದ್ದಂತೆ ಅಂದಿನ ಕೊಡಗು ರಾಜ್ಯಕ್ಕೂ 1905ರಲ್ಲಿ ವಿಸ್ತರಿಸುವದರ ಮೂಲಕ ಸಹಕಾರಿ ಆಂದೋಲನದ ಬೀಜಾಂಕುರವಾಯಿತು. ಇತರ ಕಡೆಗಳಂತೆ ಇಲ್ಲಿಯೂ ಮೊದಲು ಪ್ರಾಥಮಿಕ ವ್ಯವಸಾಯ ಪತ್ತಿನ ಸಂಘಗಳು ಆದ್ಯತೆಯ ಮೇಲೆ ಮೂಡಿ ಬಂದವು. 1905 ಮೇ 22 ರಂದು ಪ್ರಾರಂಭಿಸಲಾದ ತಳ್ತಾರೆ ಶೆಟ್ಟಳ್ಳಿ (ಸೋಮವಾರಪೇಟೆ ತಾಲೂಕು) ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರಿ ಸಂಘವು ಈ ಜಿಲ್ಲೆಯ ಮೊದಲನೇಯ ವ್ಯವಸಾಯ ಪತ್ತಿನ ಸಂಘವೆಂದು ಲಭ್ಯವಿರುವ ದಾಖಲಾತಿಗಳ ಮೂಲಕ ಹೇಳಬಹುದು. ಉಳಿದ ತಾಲೂಕುಗಳಲ್ಲಿ ಅಂದರೆ ಮಡಿಕೇರಿ ಮತ್ತು ವೀರರಾಜಪೇಟೆಗಳಲ್ಲಿ ಇಂತಹ ಸಂಘಗಳು 1919ರ ಸುಮಾರಿಗೆ ಹೆಚ್ಚು ಸಂಖ್ಯೆಯಲ್ಲಿ ಪ್ರಾರಂಭಿಸಲ್ಪಟ್ಟವು. ಉದಾ : ಬಲಮುರಿ, ಬೆಂಗೂರು, ಅರವತ್ತೊಕ್ಕಲು, ಬೆಟ್ಟಗೇರಿ, ನಾಪೋಕ್ಲು ಮತ್ತು ಕಿರುಂದಾಡು (ಮಡಿಕೇರಿ ತಾಲೂಕು). ಅದರಂತೆ ಕುಂದಾ, ಮತ್ತೂರು, ನಲ್ಲೂರು, ಬೆಸಗೂರು, ಬೇಗೂರು ಮತ್ತು ಕೊಟ್ಟೂರು (ವೀರರಾಜಪೇಟೆ ತಾಲೂಕು). ಒಂದು ವರದಿಯಂತೆ 1905-06ರಲ್ಲಿ ಜಿಲ್ಲೆಯಾದ್ಯಂತ ಆರು ಸಂಘಗಳು ರಚನೆಗೊಂಡಿದ್ದರೆ, ಮುಂದಿನ ವರ್ಷ ಸಂಘಗಳ ಸಂಖ್ಯೆ 11ಕ್ಕೆ ವೃದ್ಧಿಸಿ, 1907-08ರಲ್ಲಿ 12ಕ್ಕೆ ಹೆಚ್ಚಿತು. ಆ ವರ್ಷದಲ್ಲಿ ಸಹಕಾರಿ ಸಂಘಗಳ ಸದಸ್ಯತ್ವ 1,081, ಷೇರು ಬಂಡವಾಳ ರೂ. 13,206, ಠೇವಣಿ ಸಂಗ್ರಹಣ ರೂ. 4,140 ಆಗಿತ್ತು. ಅಲ್ಲದೆ ಈ ಸಂಘಗಳು ಸರ್ಕಾರದಿಂದ ಪಡೆದ ಸಹಾಯ ರೂ. 4,834 ಆಗಿತ್ತು. 1908-09ರಲ್ಲಿ ಸಹಕಾರ ಸಂಘಗಳ ಸಂಖ್ಯೆ 15ಕ್ಕೆ ಹೆಚ್ಚಳಗೊಂಡು, ಸದಸ್ಯರಸಂಖ್ಯೆ 1,210ಕ್ಕೆ ಏರಿ, ಷೇರು ಬಂಡವಾಳ ರೂ. 32,131ಕ್ಕೆ ಮುಟ್ಟಿತು.

ಈ ಸಂಘಗಳು ತಕ್ಕಮಟ್ಟಿಗೆ ರೈತರ ಸಾಲದ ಅವಶ್ಯಕತೆಗಳನ್ನು ಪೂರೈಸಿ ಅವರು ಖಾಸಗಿ ಲೇವಾದೇವಿಗಾರರಿಂದ ಶೋಷಣೆಗೆ ಒಳಗಾಗುತ್ತಿದ್ದ ಪರಿಸ್ಥಿತಿಯನ್ನು ತಕ್ಕಮಟ್ಟಿಗೆ ದೂರ ಮಾಡಿದವು. ರಾಜ್ಯದ ಇತರ ಕಡೆಯಂತೆ ಈ ಜಿಲ್ಲೆಯಲ್ಲಿಯೂ ಬಹುಸಂಖ್ಯೆಯ ರೈತರು ಚಿಕ್ಕ ಹಿಡುವಳಿದಾರರು. 1919–20ರಲ್ಲಿ ಜಿಲ್ಲೆಯಲ್ಲಿದ್ದ ಸಹಕಾರಿ ಸಂಘಗಳ ಸಂಖ್ಯೆ 109 ; ಅವುಗಳಲ್ಲಿ 103 ವ್ಯವಸಾಯ ಸಾಲದ ಸಂಘಗಳು ; ಉಳಿದ ಆರು ವ್ಯವಸಾಯೇತರ ಸಂಘಗಳಾಗಿದ್ದವು. ಈ ಎಲ್ಲಾ ಸಂಘಗಳಿಗೆ ಸೇರಿದಂತೆ ಸದಸ್ಯರ ಬಲ 5,181, ಷೇರು ಬಂಡವಾಳ ರೂ. 78,000 ಆಗಿತ್ತು. ಅಂದು ಕೊಡಗು ರಾಜ್ಯದಲ್ಲಿ ಪ್ರತೀ ಸಾವಿರದಲ್ಲಿ 25 ಜನ ಪ್ರಾಥಮಿಕ ಸಂಘಗಳ ಸದಸ್ಯತ್ವವನ್ನು ಹೊಂದಿದ್ದರು.

ಪ್ರಾಥಮಿಕ ವ್ಯವಸಾಯ ಸಾಲದ ಸಂಘಗಳ ಜೊತೆ ಜೊತೆಯಲ್ಲಿ ಈ ಜಿಲ್ಲೆಯಲ್ಲಿ 1918–1920ರ ಅವಧಿಯಲ್ಲಿ ಬಹುಸಂಖ್ಯೆಯಲ್ಲಿ ಧಾನ್ಯದ ರೂಪದಲ್ಲಿ ಷೇರು ಬಂಡವಾಳ ಸಂಗ್ರಹಿಸಿ ಸಾಲ ನೀಡಿ ಸಹಾಯ ಮಾಡುವ ದವಸ ಭಂಡಾರಗಳು (ಗ್ರೇನ್ ಬ್ಯಾಂಕ್) ಸಹಕಾರಿ ತತ್ವದ ಮೇಲೆ ಮೂಡಿ ಬಂದವು. ಇಂದಿಗೂ ಜಿಲ್ಲೆಯ ಒಟ್ಟು ಸಹಕಾರಿ ಸಂಘಗಳಲ್ಲಿ (463) ಈ ಸಂಘಗಳದೇ(128) ಬಹುಪಾಲು. ಈ ಜಿಲ್ಲೆಯಲ್ಲಿ ಇರುವಷ್ಟು ದವಸ ಭಂಡಾರಗಳು ಕರ್ನಾಟಕದ ಯಾವ ಜಿಲ್ಲೆಯಲ್ಲೂ ಕಾಣಸಿಗುವುದಿಲ್ಲ. ಈ ದವಸ ಭಂಡಾರಗಳ ಕಾರ್ಯವಿಧಾನದಲ್ಲೂ ಹಾಗೂ ನಡವಳಿಕೆಯಲ್ಲಿ ಗ್ರಾಮೀಣ ಜೀವನದ ನಿಜವಾದ ಸಹಕಾರ ಪರಂಪರೆಯನ್ನು ಗುರುತಿಸಬಹುದು. ದವಸ ಭಂಡಾರಗಳು ಸದಸ್ಯರಿಗೆ ಸಾಲದ ರೂಪದಲ್ಲಿ ಬತ್ತವನ್ನು ಸಕಾಲದಲ್ಲಿ ಒದಗಿಸಿ ಅವರು ದೊಡ್ಡ ದೊಡ್ಡ ಜಮೀನುದಾರರಿಗೆ ಸಾಲಕ್ಕೆ ಪ್ರತಿಯಾಗಿ ಶೇ. 250 ರಿಂದ 300ರ ವರೆಗೆ ಬತ್ತದ ರೂಪದಲ್ಲಿ ನೀಡುತ್ತಿದ್ದ ಸುಲಿಗೆ ಬಡ್ಡಿಯಿಂದ ರಕ್ಷಿಸುವಲ್ಲಿ ಸಹಾಯಕವಾದವು.

ಈ ಪುಟ್ಟದಾದ ಜಿಲ್ಲೆಯಲ್ಲಿ ಸಹಕಾರಿ ವ್ಯವಸ್ಥೆಯು ಪ್ರಾರಂಭದ ಎರಡು ದಶಕಗಳ ಕಾಲಾವಧಿಯಲ್ಲಿಯೇ ಹೆಚ್ಚು

ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿತ್ತು ಎಂಬ ಸಂಗತಿಯು ಈ ಕೆಳಗಿನ ವಿವರಣೆಯಿಂದ ಗೊತ್ತಾಗುವುದು. ಕೊಡಗಿನ ಗಣ್ಯರಾದ ರಾವ್ ಬಹದ್ದೂರ್ ಎಂ. ಮುತ್ತಣ್ಣ ಅವರು 1918ರ ಸುಮಾರಿಗೆ ಕೊಡಗಿನ ಸರ್ವಾಂಗೀಣ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ತನ್ನದೇ ಆದ ರಾಜ್ಯದ ಪ್ರವರ್ತಕ ಬ್ಯಾಂಕ್ 'ಕೊಡಗು ಸ್ಟೇಟ್ ಬ್ಯಾಂಕ್' ಒಂದನ್ನು ಆರಂಭಿಸುವ ಆವಶ್ಯಕತೆಯನ್ನು ಮನಗಂಡು ಬ್ರಿಟಿಷ್ ಕಮಿಷನರ್ ಅವರಿಗೆ ಮನವಿ ಸಲ್ಲಿಸಲಾಗಿ (ಜಿಲ್ಲೆಯಲ್ಲಿ) ತೃಪ್ತಿಕರವಾಗಿ ಪ್ರಗತಿಯನ್ನು ಸಾಧಿಸುತ್ತಿರುವ ಸಹಕಾರಿ ವಲಯದ ಕೆಲಸಕ್ಕೆ ಇದು (ಸ್ಟೇಟ್ ಬ್ಯಾಂಕ್) ಅಪಾಯಕಾರಿಯಾಗಬಹುದೆಂದು ಆ ಕೋರಿಕೆಯನ್ನು ತಳ್ಳಿ ಹಾಕಲಾಯಿತು.

ಪಟ್ಟಣ ಪ್ರದೇಶ ಮತ್ತು ಅರೆಪಟ್ಟಣ ಪ್ರದೇಶಗಳಲ್ಲಿ ವ್ಯವಸಾಯೇತರ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ಒದಗಿಸಲು ನೌಕರರ ಮತ್ತು ಇತರರ ಸಾಲ ಸಹಕಾರಿ ಸಂಘಗಳು ಬಹು ದೊಡ್ಡ ಪ್ರಮಾಣದಲ್ಲಿ ಈ ಜಿಲ್ಲೆಯಲ್ಲಿ ಮೂಡಿ ಬಂದುವು. ಇಂತಹ ಸಂಘಗಳಲ್ಲಿ 1919ರಲ್ಲಿ ಪ್ರಾರಂಭವಾದ ಕೂರ್ಗ್ ಸಹಕಾರಿ ನೌಕರರ ಸಂಘ ಮತ್ತು ಮಡಿಕೇರಿ ಟೌನ್ ಸಹಕಾರಿ ಸಂಘ ಮುಖ್ಯವಾದವುಗಳು (ಸದ್ಯ ಇವು ಸಮಾಪನೆಯ ಹಂತದಲ್ಲಿವೆ). ಆದರೆ 1922ರಲ್ಲಿ ಪ್ರಾರಂಭವಾದ ಕೊಡಗು ಪೋಲೀಸ್ ಅಧಿಕಾರಿಗಳ ಸಂಘ, ಮಡಿಕೇರಿ ಇನ್ನೂ ಮುಂದುವರೆದುಕೊಂಡು ಬರುತ್ತಿದೆ. ಇದೇ ಅವಧಿಯಲ್ಲಿ ಕುಶಾಲನಗರ (1921), ವೀರರಾಜಪೇಟೆ (1922), ಶನಿವಾರಸಂತೆ (1926), ಪೊನ್ನಂಪೇಟೆ (1928)ಗಳಲ್ಲಿ ಗ್ರಾಮೀಣ ಬ್ಯಾಂಕ್‌ಗಳು ಆರಂಭವಾದವು. ಈ ಸಂಸ್ಥೆಗಳು ಪ್ರಾರಂಭದಲ್ಲಿ ಪ್ರಾಥಮಿಕ ಪತ್ತಿನ ಸಂಘಗಳಾಗಿದ್ದು ವ್ಯವಸಾಯಕ್ಕೆ ಸಾಲ ನೀಡುತ್ತಿದ್ದವು. ಕಾಲ ಕ್ರಮೇಣ ಸಾಂಪತ್ತಿಕ ಸ್ಥಿತಿ ಸುಧಾರಿಸಿಕೊಂಡು ಬ್ಯಾಂಕ್‌ಗಳಾಗಿ ಪರಿವರ್ತನೆಗೊಂಡು ಅಲ್ಪಾವಧಿ, ಮಧ್ಯಮಾವಧಿ ಸಾಲ ನೀಡಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವಲ್ಲದೇ, ಗ್ರಾಮೀಣ ಪ್ರದೇಶಗಳ ಜನರಲ್ಲೂ ಉಳಿತಾಯ ಮನೋಭಾವನೆಯನ್ನು ಪ್ರೇರೇಪಿಸಿದವು. ಇಂದು ಜಿಲ್ಲೆಯಾದ್ಯಂತ ಸುಮಾರು 13 ಸಹಕಾರಿ ಗ್ರಾಮೀಣ ಬ್ಯಾಂಕ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಪರಿಶಿಷ್ಟ ಜಾತಿಯವರು ಮತ್ತು ಇತರೇ ಅಲ್ಪಸಂಖ್ಯಾತ ವರ್ಗದ ಜನ ಸಮುದಾಯ, ನಿವೃತ್ತ ಸೈನಿಕರು ಸೇರಿದಂತೆ ತಮ್ಮದೇ ಆದ ಸಾಲ ಸಹಕಾರಿ ಸಂಘಗಳನ್ನು ರಚಿಸಿಕೊಂಡರು. ಇವುಗಳಲ್ಲಿ ಮೊದಲನೇಯದು ಹರಿಜನ ಸಹಕಾರಿ ಸಂಘ, ಗೋವಿನ ಕೊಪ್ಪಲು (1936), ದಕ್ಷಿಣ ಕೊಡಗು ಮುಸ್ಲಿಂ ಸಹಕಾರಿ ಬ್ಯಾಂಕ್, ವೀರರಾಜಪೇಟೆ (1932), ಹವ್ಯಕ ಬ್ರಾಹ್ಮಣರ ಸಹಕಾರಿ ಸಂಘ, ವೀರರಾಜಪೇಟೆ (1939), ಬಿಳಗುಂದ ಹರಿಜನ ಸಹಕಾರಿ ಸಂಘ, ಅಮ್ಮತ್ತಿ (1940), ನೆಹರು ಹರಿಜನ ವೆಲ್‌ಫೇರ್ ಸಹಕಾರಿ ಸಂಘ, ಪೊನ್ನಂಪೇಟೆ (1951), ಮಾಜಿ ಸೈನಿಕರ ಸಹಕಾರಿ ಸಂಘ, ವೀರರಾಜಪೇಟೆ (1951) ಮುಖ್ಯವಾದವುಗಳು. ಈ ಮೇಲಿನವುಗಳಲ್ಲಿ ಮುಸ್ಲಿಂ ಬ್ಯಾಂಕ್ ಬಿಟ್ಟರೆ ಉಳಿದವುಗಳು ಕಾರ್ಯ ನಿರ್ವಹಿಸುತ್ತಿಲ್ಲ ಅಥವಾ ಸಮಾಪನ ಸ್ಥಿತಿಯಲ್ಲಿವೆ.

ಈ ಮಧ್ಯದಲ್ಲಿ 1922ರಲ್ಲಿ ಪ್ರಾರಂಭಿಸಲಾದ ಕೂರ್ಗ್ ಸೆಂಟ್ರಲ್ ಬ್ಯಾಂಕ್ (ಸದ್ಯದ ಜಿಲ್ಲಾ ಸಹಕಾರಿ ಬ್ಯಾಂಕ್) ಸಹಕಾರಿ ಚಳುವಳಿಗೆ ಹೆಚ್ಚು ದೃಢತೆಯನ್ನು, ಹೊಸಚಾಲನೆಯನ್ನು ಮತ್ತು ವ್ಯಾಪಕತೆಯನ್ನು ಒದಗಿಸಿತು. ಇದರಿಂದ ಅನೇಕ ಹೊಸ ಸಹಕಾರಿ ಸಂಸ್ಥೆಗಳು ಹುಟ್ಟಲು ಮತ್ತು ಸಹಕಾರಿ ಸಂಸ್ಥೆಗಳಿಗೆ ವ್ಯಾಪಕವಾದ ಹಣಕಾಸಿನ ನೆರವು ದೊರೆಯಲು ಸಾಧ್ಯವಾಯಿತು.

ಪ್ರಾದೇಶಿಕ ಆವಶ್ಯಕತೆಗಳನ್ನು ಗುರುತಿಸಿ ಅವುಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ಪೂರೈಸುವಲ್ಲಿ ಪ್ರಯತ್ನಗಳು ಈ ಜಿಲ್ಲೆಯಲ್ಲಿ ಬಹು ಹಿಂದೆಯೇ ಮೂಡಿಬಂದವು. ಇಂದಿಗೂ ಹೆಚ್ಚು ಪ್ರಚಲಿತವಾಗಿರದ ಜಾನುವಾರುಗಳ ಜೀವವಿಮೆಯನ್ನು ಸಹಕಾರಿ ರಂಗದಲ್ಲಿ 1915ರಷ್ಟು ಹಿಂದೆಯೇ ಸ್ಥಾಪಿಸಲು ಹಾಲರ್ ಎಂಬ ಅಧಿಕಾರಿ ಪ್ರಯತ್ನ ಪಟ್ಟರು. ದೇಶವನ್ನೆಲ್ಲಾ ಆವರಿಸಿಕೊಂಡಿದ್ದ 'ಲಂಟಾನಾ' ಕಳೆಯನ್ನು ಬೇರುಸಹಿತ ಕಿತ್ತುಹಾಕಲು ಸೂಕ್ತ ಮಸೂದೆಯನ್ನು 1906ರಲ್ಲಿ ಅಂದಿನ ಕೊಡಗಿನ ಕಮಿಶನರ್ ಎಲ್. ಟಿ. ಹ್ಯಾರಿಸ್ ಅವರ ಆಳ್ವಿಕೆಯಲ್ಲಿ ಜಾರಿಗೆ ತರಲಾಯಿತಲ್ಲದೇ ಮುಂದೆ ಲಂಟಾನಾ ನಿರ್ಮೂಲನಾ ಸಹಕಾರಿ ಸಂಘಗಳು ರಚನೆಗೊಂಡವು ಅದರಂತೆ 1932–49ರ ಅವಧಿಯಲ್ಲಿ ಲಂಟಾನಾ ನಿರ್ಮೂಲನೆ ಮತ್ತು ಮಲೇರಿಯಾ ನಿವಾರಣೆಯ ಪ್ರಯತ್ನಗಳನ್ನು ಸಹಕಾರಿ ರಂಗದಲ್ಲಿ ಕೈಗೊಳ್ಳಲಾಯಿತು ಎಂದು ಐ. ಎಮ್. ಮುತ್ತಣ್ಣ ಅವರು ತಿಳಿಸಿದ್ದಾರೆ.

ಬೆಳೆಯುತ್ತಿರುವ ಸಹಕಾರಿ ಚಳುವಳಿಯ ಸೂಕ್ತ ನಿಯಂತ್ರಣ, ಮಾರ್ಗದರ್ಶನ, ಸಹಕಾರಿ ತತ್ವಗಳ ಪ್ರಚಾರ, ಹೊಸ ಸಂಘಗಳ ರಚನೆ ಮುಂತಾದ ವಿಷಯಗಳ ಆವಶ್ಯಕತೆಯನ್ನು ಮನಗಂಡು ಸರ್ಕಾರ ನಾಡಮಟ್ಟದಲ್ಲಿ ಒಂದೊಂದರಂತೆ ಸೂಪರ್‌ವೈಜಿಂಗ್ ಯೂನಿಯನ್‌ಗಳನ್ನು ಪ್ರಾರಂಭ ಮಾಡಿತು. ಈ ಸಂಸ್ಥೆಗಳ ಮುಖ್ಯ ಉದ್ದೇಶ ಸಹಕಾರಿ ಚಳವಳಿಗೆ ಸೂಕ್ತ ಮಾರ್ಗದರ್ಶನ, ಸಹಾಯ, ಪ್ರಚಾರ

ನೀಡುವುದು ಆಗಿತ್ತು. ಈ ಯೂನಿಯನ್‌ಗಳಲ್ಲಿ ಗೌರವ ಸೂಪರ್‌ವೈಜರ್ ಅಲ್ಲದೇ ಜಿಲ್ಲಾ ಕೇಂದ್ರ ಬ್ಯಾಂಕಿನ ಒಬ್ಬ ನೌಕರರು ನಿಯೋಜಕರಂತೆ ಕೆಲಸ ಮಾಡುತ್ತಿದ್ದರು. ಈ ಯೂನಿಯನ್‌ಗಳು ಹೊಸದಾಗಿ ಸಹಕಾರ ಸಂಘ ಸ್ಥಾಪಿಸಲು ಸೂಕ್ತ ಮಾರ್ಗದರ್ಶನ ನೀಡುತ್ತಿದ್ದುದಲ್ಲದೇ ಹಾಲಿ ಸಂಘಗಳ ತಪಾಸಣೆ ಮಾಡುವ ಅಧಿಕಾರ ಹೊಂದಿದ್ದವು. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಸಹ ಭಾಗವಹಿಸುತ್ತಿದ್ದವು. ಯೂನಿಯನ್‌ಗಳ ಶಿಫಾರಸಿನ ಮೂಲಕವೇ ಕೇಂದ್ರ ಸಹಕಾರಿ ಬ್ಯಾಂಕ್ ಸಹಕಾರಿ ಸಂಸ್ಥೆಗಳಿಗೆ ಸಾಲದ ನೆರವನ್ನು ಒದಗಿಸುತ್ತಿತ್ತು. ಈ ಜಿಲ್ಲೆಯಲ್ಲಿ ಮೊದಲಿಗೆ ಯೂನಿಯನ್‌ಗಳು ಪ್ರಾರಂಭವಾದದ್ದು ಪೊನ್ನಂಪೇಟೆ ಯೂನಿಯನ್, ಶ್ರೀಮಂಗಳ (1923), ಶ್ರೀಮಂಗಳ ಯೂನಿಯನ್, ಹುದಿಕೇರಿ (1923) (ಎರಡೂ ವೀರರಾಜಪೇಟೆ ತಾಲೂಕು). ಮುಂದಿನ ವರ್ಷ 1924ರಲ್ಲಿ ಕಾರುಗುಂದ, ಪಾರಾಣೆ, ನಾಪೋಕ್ಲು, ಭಾಗಮಂಡಲ (ಎಲ್ಲಾ ಮಡಿಕೇರಿ ತಾ||) ಮುಂತಾದ ಸ್ಥಳಗಳಲ್ಲೂ ಸಹಕಾರಿ ಯೂನಿಯನ್‌ಗಳು ಪ್ರಾರಂಭವಾದವು.

ವ್ಯವಸಾಯಗಾರರಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯ, ವ್ಯವಸಾಯದ ಉಪಕರಣ, ಬೆಳೆಯ ಅಡಮಾನ ಸಾಲ, ರಸಗೊಬ್ಬರ, ಆಯುಧಗಳು, ಇವನ್ನೆಲ್ಲ ಪೂರೈಸಲು ವ್ಯಾಪಕವಾಗಿ ವ್ಯವಸಾಯ ಉತ್ಪನ್ನಗಳ ಮಾರಾಟ ಸಹಕಾರಿ ಸಂಘಗಳು 1920–30ರ ದಶಕದ ಅವಧಿಯಲ್ಲಿ ಪ್ರಾರಂಭವಾದವು. ರಾಜ್ಯದ ಇತರ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಒಂದು ತಾಲೂಕಿನ ವ್ಯಾಪ್ತಿಯನ್ನು ಹೊಂದಿರುವ ಈ ಸಂಸ್ಥೆಗಳು ಈ ಜಿಲ್ಲೆಯಲ್ಲಿ ಒಂದು ನಾಡಿನ ವ್ಯಾಪ್ತಿಯನ್ನು ಹೊಂದಿರುವವು. ಈ ಸಂಘಗಳಲ್ಲಿ ಬಹುಪಾಲು ಬತ್ತ ಮಾರಾಟ ಸಂಘಗಳು. 1924 ಆಗಸ್ಟ್ ತಿಂಗಳಲ್ಲಿ ಸ್ಥಾಪನೆಗೊಂಡ ಕಡಿಯತ್‌ನಾಡು (ಪಾರಾಣೆ, ಮಡಿಕೇರಿ ತಾಲೂಕು) ವ್ಯವಸಾಯ ಉತ್ಪನ್ನಮಾರುಕಟ್ಟೆ ಸಂಘ, ಜಿಲ್ಲೆಗೆ ಮೊದಲನೇಯದು (ಸದ್ಯದಲ್ಲಿ ವಿಸರ್ಜನಾ ಹಂತದಲ್ಲಿದೆ). ನಂತರ ಈ ಸಂಸ್ಥೆಗಳು ಜಿಲ್ಲೆಯ ಇತರ ಭಾಗಗಳಲ್ಲಿ ಸ್ಥಾಪಿತವಾದವು : ಪೊನ್ನಂಪೇಟೆ (1930), ವೀರರಾಜಪೇಟೆ (1931), ಅಮ್ಮತ್ತಿ (1935), ಶನಿವಾರಸಂತೆ (1936) ಕುಶಾಲನಗರ ಮತ್ತು ಸೋಮವಾರಪೇಟೆ (1943).

1936ರಲ್ಲಿ ಕೊಡಗಿನ ಶಾಸನ ಸಭೆಯು ಹೊಸದಾಗಿ "ಕೊಡಗಿನ ಸಹಕಾರ ಸಂಘಗಳ ಕಾನೂನು-II" 1936ನ್ನು ಅಳವಡಿಸಿಕೊಂಡಿತು. ಇದು ಕೊಡಗಿನ ಸ್ವತಂತ್ರವಾದ ಮೊದಲನೇಯ ಸಹಕಾರ ಕಾನೂನಾಗಿತ್ತು. ಅದುವರೆಗೆ ರಚಿತವಾದ ಎಲ್ಲಾ ಸಂಘಗಳು 1905ರ ಕಾನೂನಿನ ಅನ್ವಯ ನೋಂದಾಯಿಸಲ್ಪಟ್ಟಿದ್ದವು. ಈ ಜಿಲ್ಲೆಯ ವಿಶೇಷ ತೋಟದ ಬೆಳೆಗಳಾದ ಕಾಫಿ, ಏಲಕ್ಕಿ, ಕಿತ್ತಳೆ, ಮೆಣಸು, ಅಡಿಕೆ ಮುಂತಾದವುಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಬೆಳೆಗಾರರಿಗೆ ಸೂಕ್ತ ಸಾಲದ ಸಹಾಯ ಮತ್ತು ಇತರ ವ್ಯವಸಾಯದ ಪರಿಕರಗಳನ್ನು ಒದಗಿಸಲು ಪತ್ತು ಮತ್ತು ಮಾರಾಟ ಚಟುವಟಿಕೆಗಳನ್ನು ಪರಸ್ಪರ ಸಂಯೋಜಿಸಲು ಅನುಕೂಲವಾಗುವಂತೆ ಕೊಡಗು ಏಲಕ್ಕಿ ಸಹಕಾರ ಮಾರಾಟ ಸಂಘ, ಮಡಿಕೇರಿ (1939), ಕೊಡಗು ಜೇನು ಮತ್ತು ಮೇಣ ಉತ್ಪಾದಕರ ಸಹಕಾರ ಸಂಘ, ವೀರರಾಜಪೇಟೆ (1939), ಕಾವೇರಿ ಏಲಕ್ಕಿ ಸಂಘ, ಭಾಗಮಂಡಲ (1939), ಕಿತ್ತಳೆ ಬೆಳೆಗಾರರ ಮಾರಾಟ ಸಹಕಾರಿ ಸಂಘ, ಗೋಣಿಕೊಪ್ಪಲು, (1942), ಹಣ್ಣು ಮತ್ತು ತರಕಾರಿ ಸಂಸ್ಕರಣ ಸಂಘ ಕುಶಾಲನಗರ (1953), ಜೈಹಿಂದ್ ಅಡಿಕೆ ಮಾರಾಟ ಸಂಘ ಪೆರಾಜೆ (1954), ಕಾಫಿ ಬೆಳೆಗಾರರ ಸಂಘ, ಮಡಿಕೇರಿ (1956), ಪ್ರಗತಿಪರ ಜೇನು ಸಾಕಣೆ ಸಂಘ, ಭಾಗಮಂಡಲ (1959) ಮುಂತಾದವುಗಳು ಜಿಲ್ಲೆಯ ವ್ಯಾಪ್ತಿಯನ್ನು ಹೊಂದಿದ್ದು, ತೋಟದ ಬೆಳೆಗಾರರ ಬಹುಮುಟ್ಟಿನ ಅವಶ್ಯಕತೆಗಳನ್ನು ಪೂರೈಸಲು ಸಹಾಯಕವಾದವು.

ಈ ಮಧ್ಯೆ 1941ರಲ್ಲಿ ವೀರರಾಜಪೇಟೆಯಲ್ಲಿ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದ ಕೂರ್ಗ್ ಪ್ರಾಂತೀಯ ಸಹಕಾರಿ ಮಾರಾಟ ಮಂಡಳವನ್ನು ರಚಿಸುವ ಮೂಲಕ ಜಿಲ್ಲೆಯ ಇತರ ಭಾಗಗಳಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 15 ಬತ್ತ ಮಾರಾಟ ಸಂಘಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸಲಾಯಿತು. ಅಲ್ಲದೇ ಹೊರ ರಾಜ್ಯಗಳಿಗೆ ಬತ್ತದ ರಫ್ತು ವ್ಯಾಪಾರಕ್ಕೆ ಹೊಸ ಚಾಲನೆ ದೊರೆಯಿತು. ಮಾರಾಟ ಮಂಡಳವು ಇತರ ಪ್ರಾಥಮಿಕ ಮಾರಾಟ ಸಂಘಗಳ ಅವಶ್ಯಕತೆಗಳನ್ನು ಪೂರೈಸುವಲ್ಲಿ, ನಿಯಂತ್ರಿತ ವಸ್ತುಗಳನ್ನು, ರಸಗೊಬ್ಬರ, ಕಬ್ಬಿಣ, ಸಿಮೆಂಟ್, ಮುಂತಾದ ವಸ್ತುಗಳನ್ನು ಜಿಲ್ಲೆಯಾದ್ಯಂತ ಸರಬರಾಜು ಮಾಡುವಲ್ಲಿ ರಾಜ್ಯ ಸರ್ಕಾರದ ಏಜಂಟ್ ರೂಪದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಸಾಮಾನ್ಯ ಗ್ರಾಹಕರ ಮತ್ತು ವಿಶೇಷವಾಗಿ ವಿದ್ಯಾರ್ಥಿಗಳ ಸಹಕಾರಿ ಸಂಘಗಳು ಈ ಜಿಲ್ಲೆಯಲ್ಲಿ 1930–31ರಷ್ಟು ಹಿಂದೆಯೇ ಪ್ರಾರಂಭವಾದವು. ಗ್ರಾಹಕರ ಸಂಘಗಳಲ್ಲಿ ನಾಪೋಕ್ಲು ನಾಡಸಂಘ (ಮಡಿಕೇರಿ ತಾ||, 1930) ಮೊದಲನೇಯದು. ಅದರಂತೆ ವಿದ್ಯಾರ್ಥಿ ಸಹಕಾರಿ ಸಂಘಗಳಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಗ್ರಾಹಕರ ಸಂಘ 1931 ಮೊದಲನೇಯದು. ಈ ಜಿಲ್ಲೆಯ ಬಹುಪಾಲು ದೊಡ್ಡ ದೊಡ್ಡ ವಿದ್ಯಾ ಸಂಸ್ಥೆಗಳು ತಮ್ಮದೇ ಆದ ವಿದ್ಯಾರ್ಥಿ ಗ್ರಾಹಕರ ಸಂಘಗಳನ್ನು ಹೊಂದಿವೆ. 1940-50ರ ದಶಕದಲ್ಲಿ ಪ್ರತ್ಯೇಕವಾದ ಮಹಿಳಾ ಸಹಕಾರಿ ಸಂಘಗಳು ಸ್ಥಾಪನೆ

ಗೊಂಡು ಮಹಿಳೆಯರೂ ಸಹಕಾರಿ ರಂಗದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಅನೇಕ ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಈ ಬಗೆಯ ಸಂಘಗಳಲ್ಲಿ ಕೊಡಗು ಸಹಕಾರೀ ಮಹಿಳಾ ಸಮಾಜ, ವೀರರಾಜಪೇಟೆ (1941) ಮೊದಲನೇಯದು. ಮೂರು ವರ್ಷದ ನಂತರ 1944ರಲ್ಲಿ ಮಡಿಕೇರಿ, ನಾಪೋಕ್ಲು, ಸೋಮವಾರಪೇಟೆಗಳಲ್ಲಿ ಈ ಸಂಘಗಳು ಪ್ರಾರಂಭವಾದವು. ಕೊಡಲಿಪೇಟೆ ಮತ್ತು ಕುಶಾಲನಗರಗಳಲ್ಲಿ 1954ರಲ್ಲಿ ಮಹಿಳಾ ಸಮಾಜ ರಚನೆಗೊಂಡವು (ಈಗ ಅವು ಕಾರ್ಯನಿರ್ವಹಿಸುತ್ತಿವೆ).

ಸಹಕಾರಿ ಆಂದೋಲನ ಕೊಡಗಿನಲ್ಲಿ 1941ರ ದಶಕದಲ್ಲಿ ಸ್ಥಳೀಯ ಪ್ರಥಮ ಸಹಕಾರಿ ಸಂಘಗಳ ರಿಜಿಸ್ಟ್ರಾರ್ (ನಿಬಂಧಕರು) ಆಗಿದ್ದ ಪಿ. ಚಂಗಪ್ಪನವರು ಅಧಿಕಾರದ ಅವಧಿಯಲ್ಲಿ ವ್ಯಾಪಕವಾಗಿ ಬೆಳೆದುದು ಕಂಡುಬರುವುದು.

ಸ್ವಾತಂತ್ರ್ಯೋತ್ತರದ ದಶಕಗಳಲ್ಲಿ ಜನಪ್ರಿಯ ಸರ್ಕಾರದಲ್ಲಿ ಅನೇಕ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಸಹಕಾರಿ ಚಳವಳಿಯು ಜನತೆಯ ಚಳವಳಿಯಾಗಿ ರೂಪಗೊಂಡು ಮುಂದುವರಿಯಿತು. ಈ ಕೆಳಗಿನ ತಖ್ತೆಯು 1949 ರಿಂದ 1955 ರ ಅವಧಿಯಲ್ಲಿ ಜಿಲ್ಲೆಯ ಸಹಕಾರಿ ರಂಗದ ಪ್ರಗತಿಯನ್ನು ಸೂಚಿಸುವುದು.

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಸಂಘಗಳ ಸಂಖ್ಯೆ | ಸದಸ್ಯರ ಸಂಖ್ಯೆ | ಷೇರು ಬಂಡವಾಳ | ಠೇವಣಿ | ಕಾಯ್ದಿಟ್ಟ ಮತ್ತು ಇತರ ನಿಧಿಗಳು | ನಿವ್ವಳ ಲಾಭ | ಸ್ಥಿರಾಸ್ತಿಗಳು (ಕಟ್ಟಡ, ಯಂತ್ರೋಪಕರಣ ಸೇರಿ) |
|---|---|---|---|---|---|---|---|
| 1949 | 355 | 46,298 | 9.43 | 22.77 | 10.78 | .86 | 3.34 |
| 1952 | 390 | 56,101 | 12.67 | 27.18 | 14.15 | 1.33 | 4.33 |
| 1953 | 396 | 58,537 | 13.56 | 28.62 | 16.22 | 1.35 | 4.34 |
| 1954 | 402 | 62,687 | 14.84 | 33.19 | 17.56 | 1.73 | 4.53 |
| 1955 | 415 | 66,537 | 18.47 | 38.03 | 20.40 | 2.08 | 6.01 |

1941ರಲ್ಲಿ, 1936ರ ಕೊಡಗು ಸಹಕಾರಿ ಕಾನೂನಿಗೆ ಸೂಕ್ತ ತಿದ್ದುಪಡಿಗಳನ್ನು ತರಲಾಯಿತು ಮತ್ತು ಇದೇ 1941ರ ಕಾನೂನು ಸದ್ಯದ ಸಮಗ್ರ ಕರ್ನಾಟಕ ಸಹಕಾರಿ ಕಾನೂನು 1959ರಲ್ಲಿ ಜಾರಿಯಲ್ಲಿ ಬರುವವರೆಗೆ ಮುಂದುವರಿಯಿತು. ಇತರ ಸಹಕಾರಿ ಸಂಸ್ಥೆಗಳಾದ, ಜಾನುವಾರು ಪಾಲನೆ ಸಂಘಗಳು, ಹಾಲು ಉತ್ಪಾದಕರ ಸಂಘಗಳು, ವಿವಿಧ ಬೇಸಾಯ ಸಂಘಗಳು, ಗೃಹನಿರ್ಮಾಣ ನೇಕಾರರ ಸಂಘಗಳು, ಇತರ ಗ್ರಾಮೀಣ ಕೈಗಾರಿಕೆಗಳು, ಏತ ನೀರಾವರಿ ಸಹಕಾರಿ ಸಂಘಗಳು, ದೀರ್ಘಾವಧಿ ಸಾಲ ನೀಡುವ ಭೂ ಅಭಿವೃದ್ಧಿ ಬ್ಯಾಂಕ್‌ಗಳು, ಜಿಲ್ಲಾ ಕೇಂದ್ರ ಸಹಕಾರಿ ಸಗಟು ಮಾರಾಟ ಸಂಘ, ಇವೇ ಮುಂತಾದವುಗಳು 1960-80ರ ದಶಕಗಳಲ್ಲಿ ಮೂಡಿಬಂದವು. ಸಹಕಾರಿ ಸಂಘಗಳ ಸಂಖ್ಯೆ ಹೆಚ್ಚಿದಷ್ಟು ಸರ್ಕಾರದ ಬಂಡವಾಳ ಮತ್ತು ಇತರ ನೆರವಿನ ಪ್ರಮಾಣ ವರ್ಧಿಸಿದಂತೆ ಆಡಳಿತದಲ್ಲಿ ಹೆಚ್ಚಿನ ದಕ್ಷತೆಯನ್ನು ಸಾಧಿಸಲು ಸೂಕ್ತ ಬದಲಾವಣೆಗಳನ್ನು ಮಾಡಲಾಯಿತು. ಕೊಡಗು ಕರ್ನಾಟಕಕ್ಕೆ ಸೇರುವ ಪೂರ್ವದಲ್ಲಿ, 1953ರಲ್ಲಿ ಜಿಲ್ಲೆಯ ಸಹಕಾರ ಇಲಾಖೆಯನ್ನು ನೋಡಿಕೊಳ್ಳಲು ಇಲಾಖೆಯಲ್ಲಿ ಒಬ್ಬ ಉಪನಿಬಂಧಕರು, 13 ಸಹಕಾರಿ ಇನ್ಸ್‌ಪೆಕ್ಟರ್‌ಗಳು, 15 ಜನ ಸೂಪರ್‌ವೈಜರ್‌ಗಳು ನಿಯುಕ್ತರಾಗಿದ್ದರು.

1950-51ರಲ್ಲಿ ನೆರೆಯ ಇತರ ಪ್ರದೇಶಗಳಿಗೆ ಹೋಲಿಸಿದಾಗ ಕೊಡಗಿನಲ್ಲಿ ಸಹಕಾರಿ ಚಳವಳಿಯು ಸಾಕಷ್ಟು ಮುಂದುವರೆದಿದ್ದ ಅಂಶವನ್ನು ಮನಗಾಣಬಹುದು. ಮದ್ರಾಸ್ ಪ್ರಾಂತ್ಯ ಮತ್ತು ಮೈಸೂರು ಸಂಸ್ಥಾನಗಳಲ್ಲಿ ಅನುಕ್ರಮವಾಗಿ

ಸರಾಸರಿ ಒಂದು ಲಕ್ಷ ಜನಸಂಖ್ಯೆಗೆ 42 ಮತ್ತು 57 ರಂತೆ ಸಹಕಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದರೆ, ಕೊಡಗಿನಲ್ಲಿ ಪ್ರತೀ ಒಂದು ಲಕ್ಷ ಜನ ಸಮುದಾಯಕ್ಕೆ 178 ಸಹಕಾರಿ ಸಂಘಗಳಿದ್ದವು. ಅಲ್ಲದೇ ಪ್ರತೀ ಒಂದು ಸಾವಿರ ಜನಸಂಖ್ಯೆಯಲ್ಲಿ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಪಡೆದವರ ಸಂಖ್ಯೆ ಕೊಡಗಿನಲ್ಲಿ 241 ಇದ್ದರೆ (ಒಟ್ಟು ಜನಸಂಖ್ಯೆಯ ಶೇ. 25) ಮದ್ರಾಸ್ ಮತ್ತು ಮೈಸೂರುಗಳಲ್ಲಿ ಆ ಪ್ರಮಾಣ ಕ್ರಮವಾಗಿ 59 (ಶೇ. 6) ಮತ್ತು 54 (ಶೇ. 5) ಆಗಿತ್ತು. ಅದರೆ ಪ್ರತೀ ವ್ಯಕ್ತಿಯು ಸಹಕಾರಿ ಸಂಸ್ಥೆಗಳಿಂದ ಪಡೆದ ಸರಾಸರಿ ಸಾಲದ ಪ್ರಮಾಣ ಕೊಡಗಿನಲ್ಲಿ ರೂ. 49 ಆಗಿದ್ದರೆ, ಮದ್ರಾಸ್ ಮತ್ತು ಮೈಸೂರುಗಳಲ್ಲಿ ಅದರ ಪ್ರಮಾಣ ಅನುಕ್ರಮವಾಗಿ ರೂ. 64 ಮತ್ತು ರೂ. 37 ಆಗಿತ್ತು. 1951–52ರಲ್ಲಿ ಜಿಲ್ಲೆಯಲ್ಲಿ ಸಹಕಾರಿ ಸಂಘಗಳು ನೀಡಿದ ಸಾಲದ ಮೊತ್ತ ರೂ. 37 ಲಕ್ಷ ಆಗಿದ್ದರೆ, ದುಡಿಯುವ ಬಂಡವಾಳ ರೂ. 62 ಲಕ್ಷ ಇತ್ತು. ಸಹಕಾರಿ ಸಂಸ್ಥೆಗಳ ವಾರ್ಷಿಕ ವಹಿವಾಟು ಸುಮಾರು ಒಂದುವರೆ ಕೋಟಿ ರೂ.ಗಳನ್ನು ಮೀರಿತ್ತು ಎಂದು ಆ ವರ್ಷದ ಆಡಳಿತ ವರದಿ ಸೂಚಿಸುವುದು. ಕೊಡಗಿನಾದ್ಯಂತ ಸಹಕಾರಿ ಚಟುವಟಿಕೆಗಳನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ 1952ರಲ್ಲಿ ಎಂ. ಜಿ, ಮೇಕ್ರಿಯವರ (ನಿವೃತ್ತ ಉಪಗವರ್ನರ್, ಭಾರತೀಯ ರಿಜರ್ವ್ ಬ್ಯಾಂಕ್) ನೇತೃತ್ವದಲ್ಲಿ ಸರ್ಕಾರವು ಸಹಕಾರ ವಿಚಾರಣಾ ಆಯೋಗವನ್ನು ನೇಮಿಸಿತು. ಮತ್ತು ಆಯೋಗವು ಸೂಚಿಸಿದ ಸುಧಾರಣಾ ಕ್ರಮಗಳನ್ನು ಕಾರ್ಯ ರೂಪದಲ್ಲಿ ತರಲಾಯಿತು. ಇದರಿಂದ ಸಹಕಾರಿ ವ್ಯವಸ್ಥೆಗೆ ಹೆಚ್ಚಿನ ಪ್ರೋತ್ಸಾಹ ಸರ್ಕಾರದಿಂದ ದೊರೆಯಿತು. 1952 ರಲ್ಲಿ ಈ ಜಿಲ್ಲೆಯಲ್ಲಿದ್ದ 390 ಸಹಕಾರಿ ಸಂಘಗಳಲ್ಲಿ 195 ಅ ವರ್ಗಕ್ಕೆ, 132 ಬ ವರ್ಗಕ್ಕೆ ಸೇರಿದವುಗಳಾಗಿದ್ದವು. ಸುಮಾರು 234 ಸಂಸ್ಥೆಗಳು ತಮ್ಮದೇ ಆದ ಸ್ವಂತ ಕಟ್ಟಡವನ್ನು ಹೊಂದಿದ್ದವು.

### ಸಹಕಾರಿ ಆಡಳಿತ

ಕೊಡಗು ರಾಜ್ಯವು (ಇಂದಿನ ಜಿಲ್ಲೆ) ಕರ್ನಾಟಕಕ್ಕೆ ಸೇರುವ ಮೊದಲು ಸಹಕಾರಿ ಇಲಾಖೆಯು ಪ್ರತ್ಯೇಕವಾದ ನಿಬಂಧಕರ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಉತ್ತರ, ದಕ್ಷಿಣ ಕೊಡಗು ಎಂದು ವಿಂಗಡಿಸಿ ಪ್ರತೀ ವಿಭಾಗಕ್ಕೆ ಪ್ರತ್ಯೇಕವಾದ ವಲಯ ಇನ್ಸ್‌ಪೆಕ್ಟರ್‌ಗಳು ಇದ್ದರು. ಮಹಿಳಾ ಸಹಕಾರಿ ಸಂಘಗಳ ಸ್ಥಾಪನೆಗೆ ನೆರವಾಗಲು ಇಬ್ಬರು ಪ್ರತ್ಯೇಕ ವ್ಯವಸ್ಥಾಪಕರಿದ್ದರು (ಆರ್ಗನಯಜರ್ಸ್). ಜಿಲ್ಲೆಯನ್ನು 14 ವಲಯಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ವಲಯಕ್ಕೆ ಒಬ್ಬ ಇನ್ಸ್‌ಪೆಕ್ಟರ್ ಕಾರ್ಯ ನಿರ್ವಹಿಸುತ್ತಿದ್ದರು.

ಹೆಚ್ಚುತ್ತಿರುವ ಸಹಕಾರಿ ಸಂಘಗಳ ಸಂಖ್ಯೆ, ಸದಸ್ಯತ್ವ, ವೃದ್ಧಿಸುತ್ತಿರುವ ಸರ್ಕಾರದ ಪಾಲುಬಂಡವಾಳ, ಸಹಾಯಧನ, ಇದರೊಂದಿಗೆ ಬೆಳೆಯುತ್ತಿರುವ ಅನ್ಯವಹಾರದ ಪ್ರಮಾಣ ಮುಂತಾದವುಗಳನ್ನು ಗುರುತಿಸಿ, ಆಡಳಿತದಲ್ಲಿ ದಕ್ಷತೆ, ವಿಕೇಂದ್ರೀಕರಣ ಸಾಧಿಸಲು, 1971ರಲ್ಲಿ ಜಿಲ್ಲೆಯು ಚಿಕ್ಕದಾದರೂ ಪ್ರತ್ಯೇಕವಾದ ಉಪನಿಬಂಧಕರ ಕಛೇರಿಯನ್ನು ತೆರೆಯಲಾಗಿತ್ತು. ಇದಕ್ಕೂ ಪೂರ್ವದಲ್ಲಿ 1956ರಲ್ಲಿ ಸಹಾಯಕ ನಿಬಂಧಕರ ಕಚೇರಿಯನ್ನು ತೆರೆಯಲಾಗಿತ್ತು.

### 1950ರ ನಂತರದ ಮುನ್ನಡೆ

1951–56ರ ಅವಧಿಯು ಜಿಲ್ಲೆಯ ಇತಿಹಾಸದಲ್ಲಿ ಸಾಮಾನ್ಯವಾಗಿ, ಸಹಕಾರೀ ರಂಗದಲ್ಲಿ ವಿಶೇಷವಾಗಿ ಒಂದು ಮಹತ್ವದ ಘಟ್ಟವೆಂದು ಪರಿಗಣಿಸಬಹುದು. ಕಾರಣ ಈ ಅವಧಿಯಲ್ಲಿ ಜನಪ್ರಿಯ ಸರಕಾರಗಳು ರಚನೆಗೊಂಡು ಸಹಕಾರಿ ಚಳವಳಿಯು ನಿಜವಾದ ಅರ್ಥದಲ್ಲಿ ಜನ ಸಾಮಾನ್ಯರ ಚಳವಳಿಯಾಗಿ ಬೆಳೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಯಿತು ಮತ್ತು ಈ ಹಿಂದೇ ಮೇಕ್ರಿ ಸಮಿತಿಯು ಸಹಕಾರಿ ಚಳವಳಿಯು ಹೆಚ್ಚು ಪರಿಣಾಮಕಾರಿಯಾಗುವಂತೆ ಸೂಚಿಸಿದ ಸಲಹೆಗಳನ್ನು ಕಾರ್ಯ ರೂಪದಲ್ಲಿ ತರಲಾಯಿತು. 1951 ರಿಂದ ಪ್ರಾರಂಭವಾದ ಆರ್ಥಿಕ ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. ಅದರ ಅನ್ವಯ ಕೃಷಿ ಮತ್ತು ಕೃಷಿಯೇತರ ಸಾಲ ನೀಡುವ ಮತ್ತು ಸಾಲದ ವ್ಯವಹಾರ ಮಾಡದ ಸಹಕಾರಿ ಸಂಘಗಳನ್ನು ಸರ್ಕಾರದ ಸಕ್ರಿಯ ಸಹಾಯದಿಂದ ಅಭಿವೃದ್ಧಿ ಪಡಿಸಲಾಯಿತು. ಇದರಿಂದ ಮುಂದಿನ ದಶಕಗಳಲ್ಲಿ ಸಹಕಾರಿ ಅಂದೋಲನವು ಭೌಗೋಳಿಕವಾಗಿ ಹೆಚ್ಚು ವ್ಯಾಪಿಸಿಕೊಂಡಿತಲ್ಲದೇ ಗುಣಾತ್ಮಕವಾಗಿ ಬೆಳೆಯಲು ಸಹಾಯಕವಾಯಿತು. ಸರ್ಕಾರದ ಪ್ರೋತ್ಸಾಹವೂ ಹೆಚ್ಚುತ್ತ ಹೋಯಿತು. ಜಿಲ್ಲೆಯಲ್ಲಿ ಮೊದಲ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 44 ಹೊಸ ಸಂಘಗಳು, 14,136 ಜನ ಹೆಚ್ಚಿನ ಸದಸ್ಯರೊಂದಿಗೆ ಕಾಣಿಸಿಕೊಂಡವು. ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ಅಶಕ್ತ ದುರ್ಬಲ ಸಂಘಗಳ ಮತ್ತು ಬ್ಯಾಂಕುಗಳ ಪುನರ್ರಚನೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಯಿತು. ಈ ಯೋಜನೆಯಲ್ಲಿ 29 ಹೊಸ ಸಂಘಗಳು 6,722 ಸದಸ್ಯರೊಂದಿಗೆ ರಚನೆಗೊಂಡವು. ಎರಡು ಜಮೀನು ಅಭಿವೃದ್ಧಿ ಬ್ಯಾಂಕುಗಳು ಸ್ಥಾಪನೆಗೊಂಡವು; 20 ಹೊಸ ಸಹಕಾರೀ ದಾಸ್ತಾನು ಮಳಿಗೆಗಳು ನಿರ್ಮಾಣಗೊಂಡವು. ಎರಡನೇಯ

ಯೋಜನೆಯ ಕೊನೆಯಲ್ಲಿ ಜಿಲ್ಲೆಯ ಶೇ. 100ರಷ್ಟು ಹಳ್ಳಿಗಳು ಮತ್ತು ಶೇ. 87ರಷ್ಟು ವ್ಯವಸಾಯ ಕುಟುಂಬಗಳು ಸಹಕಾರಿ ಕಕ್ಷೆಯ ಅಡಿಯಲ್ಲಿ ಬಂದಿದ್ದವು. ಮೂರನೇಯ ಪಂಚವಾರ್ಷಿಕ ಯೋಜನೆಯಲ್ಲಿ ಶೇ. 98 ಗ್ರಾಮೀಣ ಜನ ಸಮುದಾಯವನ್ನು ಸಹಕಾರಿ ಪತ್ತಿಗೆ ಒಳಪಡುವಂತೆ, ಸಹಕಾರಿ ಮಾರುಕಟ್ಟೆ, ಸಂಸ್ಕರಣ ಮುಂತಾದವುಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವಂತೆ ಸಹಕಾರೀ ವ್ಯವಸ್ಥೆಯ ವಿಸ್ತರಣಾ ಕಾರ್ಯವನ್ನು ಕೈಗೊಳ್ಳಲಾಯಿತು.

1973 ರ ಜೂನ್ ಕೊನೆಯಲ್ಲಿ ಕೊಡಗು ಜಿಲ್ಲೆಯಲ್ಲಿದ್ದ ಒಟ್ಟು ಸಹಕಾರ ಸಂಘಗಳ ಸಂಖ್ಯೆ 489 ಇದ್ದು ಸದಸ್ಯರ ಸಂಖ್ಯೆ 1.46 ಲಕ್ಷ, ಪಾಲು ಬಂಡವಾಳ ರೂ. 220 ಲಕ್ಷ ಆಗಿತ್ತು. ಈ ಸಂಸ್ಥೆಗಳು ಸಂಗ್ರಹಿಸಿದ ಠೇವಣಿ ಮತ್ತು ನೀಡಿದ ಸಾಲ ಮುಂಗಡಗಳು ಕ್ರಮವಾಗಿ ರೂ. 242 ಲಕ್ಷ ಮತ್ತು 695 ಲಕ್ಷ ರೂ. ಆಗಿದ್ದು, ಖರೀದಿಸಿದ ಮತ್ತು ವಿಕ್ರಯಿಸಿದ ಸರಕುಗಳ ಮೌಲ್ಯ ಕ್ರಮವಾಗಿ ರೂ. 197 ಲಕ್ಷ ಮತ್ತು 198 ಲಕ್ಷ ರೂ. ಆಗಿತ್ತು. 1976 ರ ಜೂನ್ ಕೊನೆಯಲ್ಲಿ ಸಂಘಗಳ ಸಂಖ್ಯೆ 514ಕ್ಕೆ ಹೆಚ್ಚಳಗೊಂಡು ಸದಸ್ಯರ ಸಂಖ್ಯೆ 1.78 ಲಕ್ಷಕ್ಕೆ ಮತ್ತು ಷೇರು ಬಂಡವಾಳ ರೂ. 355 ಲಕ್ಷಕ್ಕೆ ವೃದ್ಧಿಸಿ ಅದರಲ್ಲಿ ಸರ್ಕಾರದ ಪಾಲು ಬಂಡವಾಳ ರೂ. 177 ಲಕ್ಷ ಆಗಿತ್ತು. ಈ ಸಂಸ್ಥೆಗಳು ರೂ. 728 ಲಕ್ಷ ಠೇವಣಿ ಸಂಗ್ರಹಿಸಿ ರೂ. 1,581 ಲಕ್ಷ ಸಾಲ ನೀಡಿದ್ದವು. ಈ ಸಂಸ್ಥೆಗಳು ಖರೀದಿಸಿದ ಮತ್ತು ಮಾರಾಟ ಮಾಡಿದ ಸರಕಿನ ಮೌಲ್ಯ ಕ್ರಮವಾಗಿ ರೂ 501 ಲಕ್ಷ ಮತ್ತು ರೂ. 476 ಲಕ್ಷ ಆಗಿದ್ದರೆ, ಈ ಸಂಘಗಳು ಪೈಕಿ 252 ಸಂಘಗಳು ಗಳಿಸಿದ ಲಾಭ ರೂ. 42 ಲಕ್ಷ ಹಾಗೂ 187 ಸಂಘಗಳು ಅನುಭವಿಸಿದ ನಷ್ಟದ ಮೊತ್ತ ರೂ. 105 ಲಕ್ಷ ಆಗಿತ್ತು.

1990ರಲ್ಲಿ ಕೊಡಗಿನಲ್ಲಿ 18 ಬಗೆಯ ವಿವಿಧ ಪ್ರಭೇದಗಳುಳ್ಳ ಸಹಕಾರೀ ಸಂಘಗಳನ್ನು ಗುರುತಿಸಬಹುದು. ನೋಂದಾಯಿಸಲಾದ ಸಹಕಾರಿ ಸಂಘಗಳ ಒಟ್ಟು ಸಂಖ್ಯೆ 463, ಸದಸ್ಯರ ಸಂಖ್ಯೆ 2.34 ಲಕ್ಷ, ತಾಲೂಕುವಾರು ಸಂಘಗಳ ಹಂಚಿಕೆ : ಮಡಿಕೇರಿ (179), ವೀರರಾಜಪೇಟೆ (161) ಮತ್ತು ಸೋಮವಾರಪೇಟೆ (123) ಒಟ್ಟು ಸಂಘಗಳಲ್ಲಿ 59 ಸಮಾಪನಗೊಂಡಿದ್ದು, ಅಂಥ ಸಂಘಗಳ ಆಸ್ತಿ ಮತ್ತು ಹೊಣೆಗಾರಿಗೆ ಕ್ರಮವಾಗಿ ರೂ. 70.27 ಲಕ್ಷ ಮತ್ತು ರೂ. 106.93 ಲಕ್ಷ. ಅವುಗಳ ತಾಲೂಕುವಾರು ಸಂಖ್ಯೆ ಈ ರೀತಿ ಇರುವುದು. ಮಡಿಕೇರಿ (28), ಸೋಮವಾರಪೇಟೆ (22) ಮತ್ತು ವೀರರಾಜಪೇಟೆ (9). ಜಿಲ್ಲೆಯಲ್ಲಿರುವ ವ್ಯವಸಾಯ ನಿರತ ಕುಟುಂಬಗಳ ಸಂಖ್ಯೆ 42,864, ಎಲ್ಲ ವ್ಯವಸಾಯ ಕುಟುಂಬಗಳು ಒಂದಲ್ಲ ಒಂದು ಪ್ರಾಥಮಿಕ ವ್ಯವಸಾಯ ಸಾಲದ ಸಂಘದ ಸದಸ್ಯರಾಗಿರುವರು. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. 50 ರಷ್ಟು ಸಹಕಾರೀ ಸಂಘಗಳ ಸದಸ್ಯತ್ವ ಪಡೆದಿರುವರು. ಮೇಲಿನ 463 ಸಂಘಗಳಲ್ಲಿ 47 ಸಂಘಗಳು ಹಲವಾರು ಕಾರಣಗಳಿಂದ ತಮ್ಮ ಚಟುವಟಿಕೆಗಳನ್ನು ಸ್ಥಗಿತಗೊಳಿಸಿವೆ ಎಂದು ವರದಿಯಾಗಿದೆ.

## ಸಹಕಾರಿ ಸಾಲ

ಜಿಲ್ಲೆಯಲ್ಲಿ ವ್ಯವಸಾಯಕ್ಕೆ ನೀಡಿದ ಸಾಲದಲ್ಲಿ ಸಹಕಾರಿ ಸಂಸ್ಥೆಗಳದೇ ಸಿಂಹಪಾಲು, 1969, 1971 ಮತ್ತು 1974 ರಲ್ಲಿ ಜಿಲ್ಲೆಯಲ್ಲಿ ಈ ಸಂಸ್ಥೆಗಳು ನೀಡಿದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದ ಒಟ್ಟು ಮೊತ್ತ ಕ್ರಮವಾಗಿ ರೂ. 178.10 ಲಕ್ಷ, ರೂ. 173.20 ಲಕ್ಷ ಮತ್ತು ರೂ. 373.5 ಲಕ್ಷ ಆಗಿದ್ದರೆ, ದೀರ್ಘಾವಧಿ ಸಾಲದ ಮೊತ್ತ ಕ್ರಮವಾಗಿ ರೂ120.90 ಲಕ್ಷ, ರೂ.81.80 ಲಕ್ಷ ಮತ್ತು ರೂ. 99.80 ಲಕ್ಷ ಆಗಿತ್ತು. ಇತ್ತೀಚಿನ ವರ್ಷದಲ್ಲಿ ಅಂದರೆ 1988-89 ರ ಸಹಕಾರಿ ವರ್ಷದಲ್ಲಿ ನೀಡಿದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳು ಅನುಕ್ರಮವಾಗಿ ಲಕ್ಷ ರೂ.ಗಳಲ್ಲಿ 1,020.21(950.00), 7.32 (25.00) ಮತ್ತು 62.08 (95.00) ಆಗಿದ್ದರೆ ಮುಂದಿನ ವರ್ಷ 1989–90 ರಲ್ಲಿ ಅವುಗಳ ಪ್ರಮಾಣ ಅನುಕ್ರಮವಾಗಿ ಲಕ್ಷ ರೂ.ಗಳಲ್ಲಿ 1,027.52 (1,100), 32.67 (5.00) ಮತ್ತು 40.26 (75.00) ಎಂದು ವರದಿಯಾಗಿದೆ. (ಆವರಣದಲ್ಲಿರುವ ಸಂಖ್ಯೆಗಳು ಗುರಿಯನ್ನು ಸೂಚಿಸುತ್ತವೆ). ಸಾಲ ವಸೂಲಾತಿ ಪ್ರಮಾಣ 1988–89ರಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದಲ್ಲಿ ಶೇ. 80ರಷ್ಟು ವಸೂಲಾಗಿದ್ದರೆ, ದೀರ್ಘಾವಧಿಯಲ್ಲಿ ಅದರ ಪ್ರಮಾಣ ಶೇ. 47 ಎಂದು ವರದಿಯಾಗಿದೆ. ಮುಂದಿನ ವರ್ಷ ಸಾಲ ವಸೂಲಾತಿ ಪ್ರಮಾಣದಲ್ಲಿ ಇಳಿಕೆ ಉಂಟಾಗಿದ್ದು, ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಕ್ಕೆ ಸಂಬಂಧಿಸಿದಂತೆ ಕ್ರಮವಾಗಿ ಶೇ. 43, 16 ಮತ್ತು 4 ಎಂದು ಕಂಡುಬರುವುದು.

ಜಿಲ್ಲೆಯಲ್ಲಿ 1989–90ರಲ್ಲಿ ಇದ್ದಂತೆ ಸಹಕಾರಿ ಸಂಸ್ಥೆಗಳ ಒಟ್ಟು ಪಾಲು (ಷೇರು) ಬಂಡವಾಳ 822.87 ಲಕ್ಷ ರೂ. ಆಗಿದ್ದರೆ, ಅದರಲ್ಲಿ ಸರ್ಕಾರದ ಪಾಲು 136.50 ಲಕ್ಷ.

ರೂ. ಆಗಿತ್ತು. 1988-89ರಲ್ಲಿ ಯೋಜನೆಯ ಅಂತರ್ಗತ ಈ ಜಿಲ್ಲೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ವಿವಿಧ ಯೋಜನೆಗಳಿಗೆ (ಗಿರಿಜನ ಉಪಯೋಜನೆ, ವಿಶೇಷ ಘಟಕ ಯೋಜನೆ, ಜಿಲ್ಲಾ ಪರಿಷತ್ ಯೋಜನೆ ಮತ್ತು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ, ಹಾಗೂ ಕೇಂದ್ರ ಯೋಜನೆಗಳು) ನಿಗದಿತವಾದ ಒಟ್ಟು ಹಣ ರೂ. 26.72 ಲಕ್ಷ ; ಆದರೆ ಸಾಧನೆ ಮಾತ್ರ ಕೇವಲ 5.44 ಲಕ್ಷ ರೂ. ಮುಂದಿನ ವರ್ಷ (89-90) ಯೋಜನೆಯಡಿಯಲ್ಲಿ ನಿಗದಿತವಾದ ಹಣ 18.15 ಲಕ್ಷ ರೂ ; ಆದರೆ ಸಾಧನೆ ಕೇವಲ 3.74 ಲಕ್ಷ ರೂ., ಎಂದು ಇಲಾಖಾವರದಿ ತಿಳಿಸುತ್ತದೆ.

ಇತ್ತೀಚೆಗೆ ರಾಜ್ಯ ಸರ್ಕಾರ ಕೈಗೊಂಡ ಸಹಕಾರಿ ಸಂಸ್ಥೆಗಳ ರೈತರ ಅವಧಿ ಸಾಲದ ಮೇಲಿನ ಸುಸ್ತಿ ಬಡ್ಡಿ ರಿಯಾಯತಿ ಯೋಜನೆಯ ಅನ್ವಯ ಜಿಲ್ಲೆಯಾದ್ಯಂತ 1982-83 ರಿಂದ 1987-88ರ ಅವಧಿಯಲ್ಲಿ ಪ್ರಯೋಜನ ಪಡೆದ ಸದಸ್ಯ ರೈತರ ಒಟ್ಟು ಸಂಖ್ಯೆ 62,528; ರಿಯಾಯತಿಯ ಬಡ್ಡಿ ಹಣದ ಮೊತ್ತ ರೂ. 322.63 ಲಕ್ಷ.

1989-90ರಲ್ಲಿ ಜಿಲ್ಲೆಯಲ್ಲಿ ವಿವಿಧ ಸಹಕಾರಿ ಸಂಸ್ಥೆಗಳಿಂದ ಹಣದ ದುರುಪಯೋಗದ 114 ಪ್ರಕರಣಗಳು ವರದಿಯಾಗಿದ್ದು ಅವರಲ್ಲಿ ತೊಡಗಿದ ಹಣ ರೂ. 28.96 ಲಕ್ಷ. ಇವರ ಪೈಕಿ 28 ಪ್ರಕರಣಗಳಲ್ಲಿ ಸಿವಿಲ್ ದಾವೆಯಿಂದ ರೂ. 3.07 ಲಕ್ಷ ವಸೂಲಾಗಿದ್ದು, ಉಳಿದಂತೆ ಮುಂದಿನ ಕಾನೂನಿನ ಕ್ರಮ ಜರುಗಿಸಲಾಗುತ್ತಿದೆ ಎಂದು ಜಿಲ್ಲಾ ಉಪ ನಿಬಂಧಕರ ವರದಿ ತಿಳಿಸುತ್ತದೆ.

ಈ ಜಿಲ್ಲೆಯ ಸಹಕಾರಿ ಚಳವಳಿಯ ಎರಡು ಪ್ರಮುಖ ವೈಶಿಷ್ಟ್ಯಗಳಲ್ಲಿ ಒಂದನೇಯದು ದವಸಭಂಡಾರಗಳ ವ್ಯವಸ್ಥೆ, ಎರಡನೇಯದು ಅನೇಕ ಪತ್ತಿನ ಹಾಗೂ ಇತರ ಸಹಕಾರಿ ಸಂಘಗಳು ಸದಸ್ಯರಿಗೆ ನೀಡುವ ಪ್ರತ್ಯೇಕವಾದ ಮರಣ ನಿಧಿಯ ವ್ಯವಸ್ಥೆ. ಇದು ಹೆಚ್ಚು ಕಡಿಮೆ ಜೀವವಿಮಾ ಮಾದರಿಯಲ್ಲಿ ನಡೆಯುತ್ತಿದ್ದು ನಿರ್ದಿಷ್ಟ ಪಡಿಸಿದ ವಯೋಮಿತಿಯಲ್ಲಿ ಬರುವ ಸದಸ್ಯರು ಇದಕ್ಕೆ ಪ್ರತ್ಯೇಕವಾದ ಗೊತ್ತಾದ ಪಾಲು ಹಣವನ್ನು ಪಾವತಿ ಮಾಡಬೇಕಾಗುವುದು. ಸದಸ್ಯರ ಮರಣಾನಂತರ ಅವರು ಸೂಚಿಸಿದ ವಾರಸುದಾರರಿಗೆ ('ನಾಮಿನಿ') ಮರಣೋತ್ತರ ನಿಧಿಯನ್ನು ನೀಡಲಾಗುವುದು. ದವಸ ಭಂಡಾರಗಳಲ್ಲಿ ಹಣದ ಬದಲಿಗೆ ಸದಸ್ಯರಿಗೆ ಬತ್ತವನ್ನು ಮರಣೋತ್ತರ ನಿಧಿಯಾಗಿ ನೀಡಲಾಗುವುದು.

## ಸಹಕಾರಿ ಸಂಘಗಳು ಮತ್ತು ಸದಸ್ಯತ್ವ

ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ಸಹಕಾರಿ ಸಂಘಗಳು ಮತ್ತು ಸದಸ್ಯರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳ ಉಂಟಾಗಿರುವುದನ್ನು ಕೆಳಗಿನ ವಿವರಣೆಯಿಂದ ಕಾಣಬಹುದು. ಆವರಣಗಳಲ್ಲಿ ಸದಸ್ಯತ್ವದ ಸಂಖ್ಯೆಯನ್ನು ಲಕ್ಷದಲ್ಲಿ ಸೂಚಿಸಲಾಗಿದೆ. 1977-78 – ಸಂಘಗಳ ಸಂಖ್ಯೆ 386 (1.71) ; 1979-80 – 374 (1.85) ; 1981-82 – 382 (2.05); 1983-84 – 384 (2.17); 1985-86 – 387 (2.29); 1987-88 – 391 (2.30); 1988-89 – 403 (2.34); 1989-90 – 463 (2.33) ಮತ್ತು 1990-91 – 416 (2.31).

1989 ರಲ್ಲಿ ಇದ್ದಂತೆ ಸಹಕಾರಿ ಚಳವಳಿಯ ಕೆಲವು ಪ್ರಮುಖ ಜಿಲ್ಲಾ ಸೂಚ್ಯಂಕಗಳು ಈ ಕೆಳಗಿನಂತೆ ಇರುವವು : ಪ್ರತೀ ಸಹಕಾರಿ ಸಂಘದ ಸರಾಸರಿ ಸದಸ್ಯರ ಸಂಖ್ಯೆ 579 ; ಪ್ರತೀ ಸಂಘದ ಸರಾಸರಿ ಶೇವಣಿ ಮೊತ್ತ ರೂ. 6.11 ಲಕ್ಷ ; ಪ್ರತೀ ಸದಸ್ಯರ ಶೇವಣಿ ರೂ.1,055; ಪ್ರತೀ ಸಂಘದ ಸರಾಸರಿ ಸಾಲ ಮುಂಗಡಗಳು ರೂ. 8.77 ಲಕ್ಷ ; ಪ್ರತೀ ಸದಸ್ಯರಿಗೆ ಸರಾಸರಿ ಸಾಲ ಮುಂಗಡ ರೂ. 1,521 ; ಮತ್ತು ಪ್ರತೀ ಸಹಕಾರಿ ಸಂಘದ ಸರಾಸರಿ ದುಡಿಯುವ ಬಂಡವಾಳ ರೂ. 16.72 ಲಕ್ಷ.

(ಸಹಕಾರಿ ಚಳವಳಿ ಪ್ರಗತಿಯ ವಿವರವಾದ ಪಟ್ಟಿಯನ್ನು ಪುಟ 358ರಲ್ಲಿ ಕೊಟ್ಟಿದೆ).

ಮುಂದಿನ ಪುಟಗಳಲ್ಲಿ ಜಿಲ್ಲೆಯ ವೈವಿಧ್ಯಮಯ ಸ್ವರೂಪದ ಸಹಕಾರಿ ಸಂಘಗಳಲ್ಲಿ ಕೆಲವು ಪ್ರಮುಖ ಸಂಸ್ಥೆಗಳನ್ನು ಆಯ್ದು ಅವುಗಳ ಪ್ರಗತಿ, ಸ್ಥಿತಿಗತಿಗಳನ್ನು ವಿವರಿಸಲಾಗಿದೆ ಮತ್ತು ಬೇರೆ ಬೇರೆ ವರ್ಗದ ಸಂಘಗಳಲ್ಲಿ ಕೆಲವೊಂದನ್ನು ಆಯ್ಕೆ ಮಾಡಿ ಮಾದರಿಗಾಗಿ ಅವುಗಳ ಸಾಧನೆಯನ್ನು ನಿರೂಪಿಸಿದೆ.

### ಕೊಡಗು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್

1921 ಜೂನ್‌ನಲ್ಲಿ ಕೊಡಗು ಸೆಂಟ್ರಲ್ ಬ್ಯಾಂಕ್ ಎಂದು ನೋಂದಾಯಿಸಲ್ಪಟ್ಟು ನಂತರ, 1946ರಲ್ಲಿ ಪ್ರಾಂತೀಯ ಸಹಕಾರಿ ಬ್ಯಾಂಕ್ ಎಂದೂ, 1956ರಲ್ಲಿ ಕೂರ್ಗ್ ಸ್ಟೇಟ್ ಸಹಕಾರಿ ಬ್ಯಾಂಕೆಂದೂ ಹೆಸರು ಬದಲಾಯಿ

ಈ ಕೆಳಗಿನ ತಖ್ತೆಯು ಇತ್ತೀಚಿನ ದಶಕಗಳಲ್ಲಿ ಜಿಲ್ಲೆಯ ಸಹಕಾರಿ ಚಳವಳಿಯ ಪ್ರಗತಿಯನ್ನು ವಿವರಿಸುವುದು.

(ಮೊತ್ತ ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ವಿವರಗಳು | 1979-80 | 1984-85 | 1988-89 | 1990-91 |
|---|---|---|---|---|---|
| 1. | ಒಟ್ಟು ಸಹಕಾರಿ ಸಂಘಗಳ ಸಂಖ್ಯೆ | 374 | 385 | 404 | 416 |
| 2. | ಸದಸ್ಯರ ಸಂಖ್ಯೆ | 1,85,193 | 2,23,638 | 2,33,986 | 2,31,599 |
| 3. | ಒಟ್ಟು ಪಾಲು ಬಂಡವಾಳ | 477.97 | 720.25 | 822.87 | 631.69 |
| 4. | ಅದರಲ್ಲಿ ಸರ್ಕಾರದ ಪಾಲು | 83.01 | 141.11 | 136.50 | 146.56 |
| 5. | ಕಾಯ್ದಿಟ್ಟ, ಇತರ ನಿಧಿಗಳು | 323.75 | 412.45 | 509.67 | 631.66 |
| 6. | ಠೇವಣಿಗಳು | 842 24 | 1,482.45 | 2,469.41 | 1,150.59 |
| 7. | ಸಾಲ ಮುಂಗಡಗಳು (ಬರಬೇಕಾದದ್ದು) | 1,163.25 | 3,021.65 | 3,968.24 | 1,178.05 |
| 8. | ದುಡಿಯುವ ಬಂಡವಾಳ | 2,551.49 | 4,639.94 | 6,755.88 | 5,461.49 |
| 9. | ಆಯಾ ವರ್ಷ ನೀಡಿದ ಸಾಲ | 1,254.92 | 2,515.41 | 3,543.80 | 1,829.95 |
| 10. | ವಸೂಲಾದ ಸಾಲ | 1,071.01 | 2,689.79 | 3,310.06 | 995.57 |
| 11. | ಇತರ ಸಂಸ್ಥೆಗಳಿಂದ ಪಡೆದ ಸಾಲ | 1,116.90 | 2,024.79 | 2,748.67 | 2,999.19 |
| 12. | ಸುಸ್ತಿ ಸಾಲ | 407.10 | 917.11 | 776.13 | 281.24 |
| 13. | ಲಾಭದಲ್ಲಿ ಇರುವ ಸಂಘಗಳ ಸಂಖ್ಯೆ | 197 | 210 | 229 | 235 |
| 14. | ಒಟ್ಟು ಲಾಭ | 31.76 | 56.69 | 72.61 | 30.79 |
| 15. | ನಷ್ಟದಲ್ಲಿರುವ ಸಂಘಗಳ ಸಂಖ್ಯೆ | 97 | 90 | 108 | 72 |
| 16. | ಒಟ್ಟು ನಷ್ಟ | 22.64 | 15.33 | 61.10 | 158.97 |
| 17. | ಸರಕು ಖರೀದಿ | 936.49 | 1,020.20 | 1,489.42 | 1,273.28 |
| 18. | ಸರಕು ಮಾರಾಟ | 1,105 59 | 1,365.84 | 2,397.13 | 922.72 |

ಸಿಕೊಂಡು, ಜಿಲ್ಲಾ ಮಟ್ಟದಲ್ಲಿ ಸಹಕಾರಿ ಸಂಸ್ಥೆಗಳ ಶೃಂಗ ಸಂಸ್ಥೆಯೆಂದು ಪರಿಗಣಿಸಲ್ಪಡುವ ಕೊಡಗು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ (ಮಡಿಕೇರಿ) 1922 ರಿಂದ ಕಾರ್ಯಾರಂಭ ಮಾಡಿತು. ಈ ಸಂಸ್ಥೆಯ ಪ್ರಾರಂಭಕ್ಕೆ ಕಾರಣ ಕರ್ತರಾದ ಹಲವಾರು ಅಧಿಕಾರೇತರ ಮತ್ತು ಅಧಿಕಾರಿ ವರ್ಗದ ಸಕ್ರಿಯ ಸಹಕಾರಿಗಳಲ್ಲಿ ಕೊಡಂದೇರ ಕುಟ್ಟಯ್ಯ, ಪುಲಿಯಂಡ ತಿಮ್ಮಯ್ಯ, ಕುಪ್ಪಂಡ ಬೆಳ್ಯಪ್ಪ, ಉದಿಯಂಡ ಮಾಚಯ್ಯ ಮುಂತಾದವರ ಹೆಸರುಗಳು ಪ್ರಮುಖವಾದವುಗಳು. ಪ್ರಾರಂಭದಲ್ಲಿ (1922) ಈ ಸಂಸ್ಥೆ 64 ಜನ ಸದಸ್ಯರು ಮತ್ತು ರೂ. 4,400 ಪಾಲು ಬಂಡವಾಳ ಹೊಂದಿದ್ದು 1957ರಲ್ಲಿ ಅದರ ಸದಸ್ಯರ ಸಂಖ್ಯೆ 1,075ಕ್ಕೆ ವೃದ್ಧಿಗೊಂಡಿತು. ಅದರಲ್ಲಿ 659 ವ್ಯಕ್ತಿ ಸದಸ್ಯರು ಮತ್ತು 416 ಸಾಂಸ್ಥಿಕ ಸದಸ್ಯರು. ಪಾಲು ಬಂಡವಾಳ ರೂ. 7.36 ಲಕ್ಷದಲ್ಲಿ ಸರ್ಕಾರದ ಕೊಡುಗೆ ರೂ. 3 ಲಕ್ಷ. ಆ ವರ್ಷ ಬ್ಯಾಂಕು ನೀಡಿದ ಸಾಲವಲ್ಲಿ ರೂ. 34.27 ಲಕ್ಷ ಸಹಕಾರಿ ಸಂಘಗಳಿಗೆ ಮೀಸಲಾಗಿತ್ತು, ಮತ್ತು ಗಳಿಸಿದ ನಿವ್ವಳ ಲಾಭ ರೂ. 83,000, ಎಂದು ಬ್ಯಾಂಕಿನ ಹಿಂದಿನ ವರದಿಗಳು ತಿಳಿಸುತ್ತವೆ. 1963ರ ಸಹಕಾರಿ ವರ್ಷದ

ಕೊನೆಯಲ್ಲಿ ಸದಸ್ಯರಸಂಖ್ಯೆ 1,008ಕ್ಕೆ ಇಳಿದು ಪಾಲುಬಂಡವಾಳ ರೂ. 6 ಲಕ್ಷವಾಗಿದ್ದರೆ, ಬ್ಯಾಂಕಿನ ಸದಸ್ಯ ಸಂಘಗಳು ಹೊಂದಿದ ಬಂಡವಾಳ ರೂ. 11.65 ಲಕ್ಷವಾಗಿತ್ತು. ಉಳಿದ ರೂ. 81,000 ವ್ಯಕ್ತಿಗಳು (603) ಹೊಂದಿದ್ದ ಬಂಡವಾಳವಾಗಿತ್ತು. 1963ರಲ್ಲಿ ಬ್ಯಾಂಕು ಸಂಗ್ರಹಿಸಿದ ಒಟ್ಟು ಠೇವಣಿಗಳಲ್ಲಿ ರೂ. 18.16 ಲಕ್ಷ ಸಂಘಗಳಿಂದ ಸಂಗ್ರಹಿಸಿದ್ದಾದರೆ ಸದಸ್ಯರ ಮೂಲಕ ಸಂಗ್ರಹವಾದ ಠೇವಣಿ ಮೊತ್ತ ರೂ. 10.60 ಲಕ್ಷವಾಗಿತ್ತು. ಆ ವರ್ಷ ಬ್ಯಾಂಕ್ ಕೊಡಮಾಡಿದ ಸಾಲ ಮುಂಗಡಗಳ ಮೊತ್ತ ರೂ. 97.32 ಲಕ್ಷ ಮತ್ತು ದುಡಿಯುವ ಬಂಡವಾಳ ರೂ. 138.70 ಲಕ್ಷ ಎಂದು ತಿಳಿದು ಬರುವುದು.

1929–30ರ ಜಾಗತಿಕ ಆರ್ಥಿಕ ಹಿನ್ನಡೆಯಲ್ಲಿ ಇತರೆಡೆಯಂತೆ ಕೊಡಗಿನ ರೈತರು ಕುಸಿಯುತ್ತಿರುವ ಬೆಲೆಗಳಿಂದ ಮತ್ತು ವ್ಯವಸಾಯೋತ್ಪನ್ನಗಳಿಗೆ ಕುಗ್ಗುತ್ತಿರುವ ಬೇಡಿಕೆಗಳಿಂದ ಆರ್ಥಿಕ ಸಂಕಷ್ಟಗಳಿಂದ ಬಳಲುತ್ತಿದ್ದಾಗ ಬ್ಯಾಂಕು ತನ್ನದೇ ಆದ ಸಾಲತಿರುವಳಿ ಸಮಿತಿಯನ್ನು (ಋಣ ಒಡಂಬಡಿಕೆ ಸಮಿತಿ) ನೇಮಿಸಿ 1934 ರಿಂದ 45 ರ ಅವಧಿಯಲ್ಲಿ ಸುಮಾರು ರೂ. 1.19 ಲಕ್ಷದಷ್ಟು ಸಾಲವನ್ನು ರೈತರ ಪರವಾಗಿ ಖಾಸಗಿ ಸಾಲಿಗರಿಗೆ ಪಾವತಿ ಮಾಡಿ ಸದರಿ ಸಾಲವನ್ನು 5 ರಿಂದ 10 ವರ್ಷದ ಕಂತುಗಳಲ್ಲಿ ಸುಲಭ ಬಡ್ಡಿಯೊಂದಿಗೆ ಬ್ಯಾಂಕಿಗೆ ಮರುಪಾವತಿ ಮಾಡುವಂತೆ ಯೋಜನೆ ರೂಪಿಸಿ ರೈತರಿಗೆ ಸಂಕಷ್ಟದಲ್ಲಿ ನಿಜವಾದ ಸಹಕಾರಿ ಆಯಿತು. 1951 ರಿಂದ ದೀರ್ಘಾವಧಿ ಸಾಲದ ಯೋಜನೆಯನ್ನು (25 ವರ್ಷ) ಪ್ರಾರಂಭಿಸಿ ಕೊಡಗಿನಲ್ಲಿ ಹೊಸ ಕಾಫಿ ತೋಟಗಳನ್ನು ಪ್ರಾರಂಭಿಸಲು ನೆರವಾಯಿತು. ಈ ಯೋಜನೆಯನ್ನು ಸಾಕಾರಗೊಳಿಸಲು ಅಂದಿನ ಕೊಡಗಿನ ಸರ್ಕಾರವು 12 ಲಕ್ಷ ರೂ.ಗಳನ್ನು ಸಾಲವಾಗಿ ಬ್ಯಾಂಕಿಗೆ ನೀಡಿತ್ತು. ಸದಸ್ಯ ಸಂಸ್ಥೆಗಳಿಗೆ ಬ್ಯಾಂಕಿನ ಸೇವೆಗಳು ಜಿಲ್ಲೆಯಾದ್ಯಂತ ಲಭ್ಯವಾಗಲು ಅನುಕೂಲವಾಗುವಂತೆ ಇಂದು ಬ್ಯಾಂಕು 11 ಶಾಖೆಗಳನ್ನು ಹೊಂದಿದೆ. ಮೊದಲನೇಯ ಶಾಖೆ 1963 ರಲ್ಲಿ ವೀರರಾಜಪೇಟೆಯಲ್ಲಿ, ಎರಡನೇಯದು ಕುಟ್ಟದಲ್ಲಿ 1965 ರಲ್ಲಿ ಪ್ರಾರಂಭವಾದವು. 1951 ರಿಂದ 1956 ರ ಅವಧಿಯಲ್ಲಿ ಲಭ್ಯವಾದ ಸರ್ಕಾರದ ವಿಶೇಷ ನೆರವಿನೊಂದಿಗೆ ಮತ್ತು ನಿರೀಕ್ಷೆ ಮೀರಿ ವೃದ್ಧಿಗೊಂಡ ಠೇವಣಿಯಿಂದ ಬ್ಯಾಂಕು ತಾನು ಸದಸ್ಯರಿಗೆ ಸಾಲ ನೀಡುವ ಮತ್ತು ಕೇಂದ್ರಿಯ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಸರ್ಕಾರದ ಷೇರು ಬಂಡವಾಳವನ್ನು ಪಡೆದುಕೊಂಡು ಹೆಚ್ಚು ದೃಢತೆಯಿಂದ ಮುನ್ನಡೆಯಿತು.

1983 ನೇ ವರ್ಷದಲ್ಲಿ ಸದಸ್ಯರ ಸಂಖ್ಯೆ (ಕೇವಲ ಸಂಸ್ಥೆಗಳು) 311 ಇದ್ದು ಪಾಲು ಬಂಡವಾಳ ಮತ್ತು ಠೇವಣಿಗಳು ಕ್ರಮವಾಗಿ ರೂ. 108.63 ಲಕ್ಷ ಮತ್ತು ರೂ. 637.32 ಲಕ್ಷ ಆಗಿತ್ತು. ಆ ವರ್ಷ ನೀಡಿದ ಸಾಲ ರೂ. 1,290.78 ಲಕ್ಷ ಮತ್ತು ಗಳಿಸಿದ ನಿವ್ವಳ ಲಾಭ ರೂ. 3.31 ಲಕ್ಷ ಆಗಿತ್ತು. ಇಂದು ಬ್ಯಾಂಕು ತನ್ನ ಸದಸ್ಯ ಸಂಸ್ಥೆಗಳ ಮೂಲಕ ಹಲವಾರು ಉದ್ದೇಶಗಳಿಗೆ ಬಹು ವ್ಯಾಪಕವಾದ ಸಾಲ ನೀಡುವ ವ್ಯವಸ್ಥೆಯನ್ನು ಹೊಂದಿದ್ದು, ಬ್ಯಾಂಕಿನ ಸಾಲದಲ್ಲಿ ಭತ್ತ, ರಾಗಿ, ಕಾಫಿ, ಏಲಕ್ಕಿ, ಕಿತ್ತಳೆ, ತೆಂಗು ಇತ್ಯಾದಿ ಬೆಳೆಗಳಿಗೆ ಬೆಳೆ ಸಾಲ, ಫಸಲು ಮಾರಾಟದ ಅಲ್ಪಾವಧಿ ಸಾಲ, ವ್ಯಾಪಾರಕ್ಕೆ, ವ್ಯವಸಾಯ ಅಭಿವೃದ್ಧಿಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ, ಚಿನ್ನಾಭರಣಗಳ ಮೇಲೆ ಸಾಲ, ಮುಂತಾದವುಗಳು ಮುಖ್ಯವಾದವುಗಳು. 1987–88, 88–89, 1989–90ರಲ್ಲಿ ಸದಸ್ಯತ್ವದ ಸಂಖ್ಯೆ ಕ್ರಮವಾಗಿ 319, 299, 299 ಇದ್ದು (ಸರ್ಕಾರದ ಸದಸ್ಯತ್ವವನ್ನು ಹೊರತು ಪಡಿಸಿ) ಷೇರು ಬಂಡವಾಳ ಕ್ರಮವಾಗಿ ರೂ. 140.65, 149.22 ಮತ್ತು 159.64 ಲಕ್ಷ ಆಗಿತ್ತು. ಇದರಲ್ಲಿ ಸರ್ಕಾರದ ಬಂಡವಾಳ 11 ಲಕ್ಷ ಸೇರಿದೆ. ಈ ಮೇಲಿನ ವರ್ಷಗಳಲ್ಲಿ ಸಂಗ್ರಹಿಸಿದ ಠೇವಣಿಗಳ ಮೊತ್ತ ಕ್ರಮವಾಗಿ 1,142.37, 1,409.22 ಮತ್ತು 1,191.65 ಲಕ್ಷ ರೂ. ಆಗಿದ್ದರೆ, ಅಪೆಕ್ಸ್ ಬ್ಯಾಂಕ್ ಮತ್ತು ಸರ್ಕಾರದಿಂದ ಪಡೆದ ಸಾಲಗಳು ಕ್ರಮವಾಗಿ 539.91, 623.44 ಮತ್ತು 934.74 ಲಕ್ಷ ರೂ. ಆಗಿತ್ತು. ಆಯಾ ವರ್ಷಗಳಲ್ಲಿ ಬ್ಯಾಂಕು ವಿವಿಧ ಚಟುವಟಿಕೆಗಳಿಗೆ ನೀಡಿದ ಸಾಲದ ಮೊತ್ತ ಈ ರೀತಿ ಇತ್ತು : 1989.90 (ಮಾರ್ಚ್ ಕೊನೆಯವರೆಗೆ) 18,24.36 ಲಕ್ಷ, 1988-89 31,154.48 ಲಕ್ಷ ಮತ್ತು 1987-88–23,776.60 ಲಕ್ಷ ರೂ. ಈ ಮೇಲಿನ ವರ್ಷದಲ್ಲಿ ಸಾಲ ವಸೂಲಾತಿಯ ಪ್ರಮಾಣ ಶೇ. 71 ರಿಂದ 81ರಷ್ಟು ಇದ್ದು 1987–88ರಲ್ಲಿ ಬ್ಯಾಂಕ್ ಗಳಿಸಿದ ನಿವ್ವಳಲಾಭ ರೂ. 5.26 ಲಕ್ಷ ಮತ್ತು ಅದರ ಮುಂದಿನ ವರ್ಷ ರೂ. 4.06 ಲಕ್ಷ ಎಂದು ವರದಿಯಾಗಿದೆ.

1972ರಲ್ಲಿ ಸಂಸ್ಥೆಯು ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿತು. ಸದ್ಯದ ಆಡಳಿತ ಕಛೇರಿಯ ಕಟ್ಟಡವನ್ನು 1950ರಲ್ಲಿ ಕಟ್ಟಲಾಯಿತು; ಮತ್ತು 1963ರಲ್ಲಿ ಮುಖ್ಯ ಕಟ್ಟಡಕ್ಕೆ ಹೊಂದಿಕೊಂಡಂತೆ ಅತಿಥಿಗೃಹದ ಕಟ್ಟಡವನ್ನು ವಿಸ್ತರಿಸಲಾಯಿತು. 1983ರಲ್ಲಿ ಬ್ಯಾಂಕು ಹೊಂದಿದ ಒಟ್ಟು ಆಸ್ತಿಗಳ ಮೌಲ್ಯ (ಕಟ್ಟಡ ನಿವೇಶನ ಸೇರಿ) 23 ಲಕ್ಷ ರೂ. ಬ್ಯಾಂಕಿನ ಈಗಿನ ನೌಕರರ ಒಟ್ಟು ಸಂಖ್ಯೆ 151.

ಇತ್ತೀಚಿನ ದಶಕದ ಕೆಲವು ವರ್ಷಗಳಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸಾಧಿಸಿದ ಪ್ರಗತಿಯನ್ನು ಈ ಕೆಳಗಿನ ತಖ್ತೆಯಲ್ಲಿ ತೋರಿಸಲಾಗಿದೆ

| ಸಹಕಾರಿ ವರ್ಷ | ಸದಸ್ಯತ್ವ | ಪಾಲು ಬಂಡವಾಳ | ಶೇಖರಿಸಿದ ಠೇವಣಾತಿಗಳು | ಅಪೆಕ್ಸ್ ಬ್ಯಾಂಕ್ ಮತ್ತು ಸರಕಾರದ ಸಾಲ | ವ್ಯವಹಾರ ಧನ | ವರ್ಷದಲ್ಲಿಯ ಸಾಲ ಬಟವಾಡೆ | ವರ್ಷಾಂತ್ಯಕ್ಕೆ ಸಂಘಗಳ ಮೇಲೆ ನಿಂತ ಸಾಲ | ವರ್ಷದ ನಿವ್ವಳ ಲಾಭ |
|---|---|---|---|---|---|---|---|---|
| 1979–80 | 308 | 79.75 | 495.18 | 100.00 | 78.28 | 801.62 | 511.54 | 1.50 |
| 1982–83 | 312 | 108.63 | 637.32 | 346.31 | 1,149.87 | 1,290.78 | 921.99 | 3.31 |
| 1985–86 | 316 | 130.61 | 916.32 | 394.38 | 1,604.74 | 1,409.83 | 1,112.00 | 5.05 |
| 1988–89 | 300 | 149.22 | 1,409.22 | 623.44 | 2,493.81 | 1,806.83 | 1,314.26 | 4.07 |
| 1989–90 | 300 | 159.64 | 1,191.65 | 934.74 | 2,580.26 | 1,737.90 | 1,623.25 | ತಿಳಿದಿಲ್ಲ |
| 1990–91 | 299 | 169.12 | 1,426.39 | 781.87 | 2,634.74 | 1,787.35 | 1,619.26 | 5.30 |

### ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳು

ಸಹಕಾರಿ ವ್ಯವಸ್ಥೆಯಲ್ಲಿ ಈ ಅಂಗ ಸಂಸ್ಥೆಗಳ ಪಾತ್ರ ತುಂಬಾ ಹಿರಿದಾಗಿದ್ದು ಇವುಗಳು ಅಡಿಪಾಯದ ಸಂಸ್ಥೆಗಳಾಗಿದ್ದು ಸಹಕಾರದ ಜೀವನಾಡಿಯಂತೆ ಕಾರ್ಯನಿರ್ವಹಿಸುತ್ತಿವೆ. ಸಹಕಾರಿ ವ್ಯವಸ್ಥೆಯಲ್ಲಿ ಬೆಳೆ ಸಾಲ, ಇತರೇ ಅವಧಿ ಸಾಲಗಳು, ವ್ಯವಸಾಯ ಪರಿಕರಗಳು, ರಸಗೊಬ್ಬರ, ಜೀವನಾವಶ್ಯಕ ವಸ್ತುಗಳು ಮುಂತಾದವುಗಳು ಮುಖ್ಯವಾಗಿ ಪ್ರವಹಿಸುವುದು ಈ ಜೀವನಾಡಿ ಸಹಕಾರಿ ಸಂಸ್ಥೆಗಳ ಮೂಲಕವೇ.

1951ರಲ್ಲಿ ಜಿಲ್ಲೆಯಲ್ಲಿ ಒಟ್ಟು 21,597 ಸದಸ್ಯರ ಬಲವನ್ನು ಹೊಂದಿದ್ದ 190 ವ್ಯವಸಾಯ ಸಹಕಾರಿ ಸಂಘಗಳು ಇದ್ದು, 1956ಕ್ಕೆ ಅವುಗಳಸಂಖ್ಯೆ 210ಕ್ಕೆ ಹೆಚ್ಚಳಗೊಂಡು ಒಟ್ಟು ಸದಸ್ಯರ ಸಂಖ್ಯೆ 25,627ಕ್ಕೆ ವೃದ್ಧಿಸಿತು. 1951ರಲ್ಲಿ ಈ ಸಂಘಗಳು ರೂ. 7 ಲಕ್ಷ ಮೊತ್ತದ ಅಲ್ಪಾವಧಿ ಸಾಲ ನೀಡಿದ್ದರೆ 1956ರಲ್ಲಿ ನೀಡಿದ ಸಾಲ ರೂ. 12 ಲಕ್ಷ ಆಗಿತ್ತು. ಈ ಜಿಲ್ಲೆಯಲ್ಲಿ ಪ್ರಥಮವಾಗಿ 1954ರಲ್ಲಿ ಬೆಳೆ ಸಾಲ ಯೋಜನೆಯನ್ನು ಪ್ರಾರಂಭಿಸಲಾಯಿತು. 1974-75ರಲ್ಲಿ ಇಂಥ ಸಂಘಗಳ ಸಂಖ್ಯೆ 174ಕ್ಕೆ ಇಳಿದು ಇವುಗಳು ಹೊಂದಿದ್ದ ಒಟ್ಟು ಸದಸ್ಯರ ಸಂಖ್ಯೆ 56,000 ಇತ್ತು; ಒಟ್ಟು ಸದಸ್ಯರಲ್ಲಿ ಸಾಲ ಪಡೆದ ಸದಸ್ಯರ ಸಂಖ್ಯೆ 18,000 (ಶೇ. 32) ಇತ್ತು. ಪ್ರತೀ ಸಂಘದ ಮತ್ತು ಸದಸ್ಯರ ಸರಾಸರಿ ಪಾಲು ಬಂಡವಾಳ ಕ್ರಮವಾಗಿ ರೂ. 54,351 ಮತ್ತು 169 ರೂ. ಎಂದು ಕಂಡು ಬರುವುದು ಮತ್ತು ಇದೇ ಅವಧಿಯಲ್ಲಿ (74-75) ಪ್ರತೀ ಸಂಘವು ವಿತರಿಸಿದ ಸರಾಸರಿ ಸಾಲದ ಪ್ರಮಾಣ (ಅಲ್ಪಾವಧಿ ಮತ್ತು ಮಧ್ಯಮಾವಧಿ ಸೇರಿ) ರೂ. 1.90 ಲಕ್ಷ ಎಂದು ಮತ್ತು ಪ್ರತೀ ಸದಸ್ಯರ ಸರಾಸರಿ ಸಾಲ ರೂ. 1,841 ಎಂದು ವರದಿ ತಿಳಿಸುವುದು.

1976ರಲ್ಲಿ ರಾಜ್ಯ ಸರ್ಕಾರವು ಅಶಕ್ತವಾದ, ದುರ್ಬಲವಾದ ಇಂತಹ ಸಂಘಗಳನ್ನು ಪುನಶ್ಚೇತನಗೊಳಿಸುವ ದಿಶೆಯಲ್ಲಿ ಹಮ್ಮಿಕೊಳ್ಳಲಾದ ಯೋಜನೆಯ ಅನ್ವಯ ಅನೇಕ ಸಂಘಗಳನ್ನು ವಿಲೀನೀಕರಣಗೊಳಿಸಿ ಅವುಗಳನ್ನು ಪುನರ್ರಚಿಸಿ ಹೆಚ್ಚು ಬಲ ಪಡಿಸಲಾಯಿತು. ಇದರಿಂದ ಈ ಸಂಸ್ಥೆಗಳ ಸಂಖ್ಯೆಯಲ್ಲಿ ಇಳಿಮುಖವಾಯಿತು.

1977-78ರಲ್ಲಿ ಜಿಲ್ಲೆಯಾದ್ಯಂತ 74 ಇಂತಹ ಸಂಘಗಳು ಇದ್ದು ಅವುಗಳು 65,636ರಷ್ಟು ಸದಸ್ಯರ ಬಲವನ್ನು ಹೊಂದಿದ್ದವು. 1981-82ರಲ್ಲಿ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳ ಸಂಖ್ಯೆ 72 ಇದ್ದು ಇವುಗಳು ಹೊಂದಿದ್ದ ಸದಸ್ಯರ ಸಂಖ್ಯೆ 77,000 ವಾಗಿದ್ದರೆ, ಇವುಗಳು ಹೊಂದಿದ್ದ ಪಾಲು ಬಂಡವಾಳವು (ಸರ್ಕಾರದ ಪಾಲು ರೂ. 14.07 ಲಕ್ಷ ಸೇರಿದಂತೆ) ರೂ. 196.93 ಲಕ್ಷ ಆಗಿತ್ತು. ಈ ಸಂಸ್ಥೆಗಳು ಎತ್ತಿದ ಸಾಲದ ಹಣ ರೂ. 671.30 ಲಕ್ಷ ಆಗಿದ್ದರೆ, ನೀಡಿದ ಸಾಲ ರೂ. 806.13 ಲಕ್ಷ, ವಸೂಲಿ ಮಾಡಿದ ಸಾಲ ರೂ. 813.52 ಲಕ್ಷ ಆಗಿತ್ತು. ಈ ಸಂಸ್ಥೆಗಳು ವಿಕ್ರಯಿಸಿದ ಬಳಕೆ ವಸ್ತುಗಳು ಮತ್ತು ರಸಗೊಬ್ಬರಗಳ ಮೌಲ್ಯ ಕ್ರಮವಾಗಿ ರೂ. 114.80 ಲಕ್ಷ ಮತ್ತು ರೂ. 242.83 ಲಕ್ಷ ಆಗಿತ್ತು. ಈ ಗುಂಪಿನ ಸಂಘಗಳಲ್ಲಿ 49 ಸಂಘಗಳು ಗಳಿಸಿದ ಒಟ್ಟು ಲಾಭ ರೂ. 41.38 ಲಕ್ಷ ಆಗಿದ್ದರೆ 22 ಸಂಘಗಳು ಸೇರಿ ಅನುಭವಿಸಿದ ನಷ್ಟ ರೂ. 4.34 ಲಕ್ಷ ಆಗಿತ್ತು. ಇದೇ ವರ್ಷದಲ್ಲಿ ಈ ಸಂಸ್ಥೆಗಳು ಸದಸ್ಯರಿಂದ ಸಂಗ್ರಹಿಸಿದ ಠೇವಣಿಗಳ ಮೊತ್ತ ರೂ. 268.5 ಲಕ್ಷ ಎಂದು ವರದಿಯಾಗಿದೆ.

1987-88ರಲ್ಲಿ, 73 ಸಂಘಗಳು ಹೊಂದಿದ್ದ ಸದಸ್ಯರ ಬಲ 91,733ರಷ್ಟು ಇತ್ತು. 1989 ಜೂನ್ ಅಂತ್ಯದಲ್ಲಿ ಈ ಪ್ರಭೇದದಲ್ಲಿ ಬರುವ 74 ಸಂಘಗಳ ಸದಸ್ಯರ ಸಂಖ್ಯೆ 92,538 ಇದ್ದು ಅವುಗಳು ಹೊಂದಿದ್ದ ಪಾಲು ಬಂಡವಾಳ 362.79 ಲಕ್ಷ ರೂ. ಆಗಿತ್ತು. ಅದರಲ್ಲಿ ಸರ್ಕಾರದ ಪಾಲು ರೂ. 64.11 ಲಕ್ಷ ಆಗಿತ್ತು. ಈ ಸಂಸ್ಥೆಗಳು ಸಂಗ್ರಹಿಸಿದ ಠೇವಣಿ ಮೊತ್ತ 746.17 ಲಕ್ಷ ರೂ. ಆಗಿದ್ದರೆ ಇವು ಸರ್ಕಾರ ಮತ್ತು ಕೇಂದ್ರೀಯ ಹಾಗೂ ಇತರೇ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲ ಕ್ರಮವಾಗಿ ರೂ. 91.73 ಲಕ್ಷ ಮತ್ತು ರೂ. 1,219.19 ಲಕ್ಷ ಆಗಿತ್ತು. ಈ ಸಂಸ್ಥೆಗಳು ನೀಡಿದ ಒಟ್ಟು ಸಾಲದ ಮೊತ್ತ ರೂ. 1,457.39 ಲಕ್ಷ ಆಗಿತ್ತು ಎಂದು ಇಲಾಖಾ ವರದಿ ತಿಳಿಸುತ್ತದೆ.

ಜಿಲ್ಲೆಯಾದ್ಯಂತ 1991ರಲ್ಲಿ 74 ಇಂಥ ಪ್ರಾಥಮಿಕ ಪತ್ತಿನ ಸಂಘಗಳು ಇದ್ದು ಅವುಗಳ ತಾಲೂಕುವಾರು ವಿಂಗಡನೆ ಈ ರೀತಿ ಇರುವುದು : ವೀರರಾಜಪೇಟೆ (29), ಸೋಮವಾರಪೇಟೆ (23) ಮತ್ತು ಮಡಿಕೇರಿ (22). ಈ ಗುಂಪಿನ 74 ಸಹಕಾರಿ ಸಂಸ್ಥೆಗಳಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘಗಳು 54, ಸೇವಾ ಸಹಕಾರಿ ಸಂಘಗಳು 9, ವ್ಯವಸಾಯ ಬ್ಯಾಂಕುಗಳು 6, ದೊಡ್ಡ ಪ್ರಮಾಣದ ವ್ಯವಸಾಯ ವಿವಿಧೋದ್ದೇಶ ಸಂಘಗಳು ('ಲ್ಯಾಂಪ್ಸ್') 3,

ರೈತರ ಸೇವಾ ಸಹಕಾರ ಸಂಘ ಒಂದು ಮತ್ತು ಕಾಫಿ ಬೆಳೆಗಾರರ ಸಂಘ ಒಂದು (ಮಡಿಕೇರಿ) ಸೇರಿವೆ.

'ಲ್ಯಾಂಪ್ಸ್' (ಲಾರ್ಜ್ ಸೈಜ್‌ಡ್ ಮಲ್ಟಿಪರ್ಪಸ್ ಸೊಸೈಟಿ) ಸಂಘಗಳು ತಾಲೂಕಿಗೆ ಒಂದರಂತೆ ಇದ್ದು ಅವು ಗುಡ್ಡೇಹೊಸೂರು (ಸೋ. ಪೇ. ತಾ॥ 1979), ಭಾಗಮಂಡಲ (ಮಡಿಕೇರಿ ತಾ॥, 1982) ಮತ್ತು ತಿತಿಮತಿ (ವೀರರಾಜಪೇಟೆ ತಾ॥ 1976) ಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಗಳು ವಿಶೇಷವಾಗಿ ಕೇಂದ್ರ ಸರ್ಕಾರದ ನೆರವಿನಿಂದ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ರಚಿತವಾಗಿದ್ದು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ ಮುನ್ನಡೆಗೆ ಶ್ರಮಿಸುತ್ತಿವೆ. 1989ರ ಜೂನ್ ಕೊನೆಯಲ್ಲಿ ಮೂರು 'ಲ್ಯಾಂಪ್ಸ್' ಸಂಘಗಳು ಹೊಂದಿದ್ದ ಸದಸ್ಯರ ಸಂಖ್ಯೆ 8,151 ಹಾಗೂ ಪಾಲು ಬಂಡವಾಳ 6.62 ಲಕ್ಷ ರೂ. ಅದರಲ್ಲಿ ಸರ್ಕಾರದ ಪಾಲುಗಾರಿಕೆ 5.18 ಲಕ್ಷ ರೂ. ಈ ಸಂಘಗಳು ಸರ್ಕಾರದಿಂದ ಪಡೆದ ಸಾಲದ ಮೊತ್ತ 14.64 ಲಕ್ಷ ರೂ, ಸದಸ್ಯರಿಗೆ ನೀಡಿದ ಸಾಲ 21,000 ರೂ.

ರೈತರ ಸೇವಾ ಸಹಕಾರಿ ಸಂಘ, ಪಾರಾಣೆ (1972, ಮಡಿಕೇರಿ ತಾ॥) ಜಿಲ್ಲೆಯ ಒಂದೇ ಒಂದು ಈ ರೀತಿಯ ವಿವಿಧೋದ್ದೇಶ ಸಂಘವಾಗಿದೆ. 1989ರಲ್ಲಿ ಇದರ ಸದಸ್ಯರ ಸಂಖ್ಯೆ 1,293, ಪಾಲು ಬಂಡವಾಳ 5.37 ಲಕ್ಷ ರೂ. ಅದರಲ್ಲಿ ಸರ್ಕಾರದ ಪಾಲು ರೂ. 1.61 ಲಕ್ಷ, ಕೇಂದ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲ 25.59 ಲಕ್ಷ ರೂ. ಆಗಿದ್ದರೆ ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ನೀಡಿದ ಸಾಲದ ಮೊತ್ತ ರೂ. 13.45 ಲಕ್ಷ ಆಗಿತ್ತು.

ಆರು ವ್ಯವಸಾಯ ಬ್ಯಾಂಕುಗಳಲ್ಲಿ ಮೂರು ಸೋಮವಾರಪೇಟೆ ತಾಲೂಕಿನಲ್ಲಿ (ಗೌಡಳ್ಳಿ 1956, ಕುಶಾಲನಗರ 1921, ಶನಿವಾರಸಂತೆ 1926), ವೀರರಾಜಪೇಟೆಯಲ್ಲಿ ಎರಡು (ಬಾಳೆಲೆ 1957 ಮತ್ತು ಗೋಣಿಕೊಪ್ಪಲು 1958) ಮತ್ತು ಮಡಿಕೇರಿ ತಾಲೂಕಿನಲ್ಲಿ ಒಂದು (ಹಾಕತ್ತೂರು 1973) ಇವೆ. ಈ ಬ್ಯಾಂಕುಗಳ ಕಾರ್ಯವ್ಯಾಪ್ತಿ ತಾಲೂಕು ಮಟ್ಟಕ್ಕಿಂತ ಕಡಿಮೆ. ಇವುಗಳು ಪ್ರಾರಂಭದಲ್ಲಿ ಪ್ರಾಥಮಿಕ ಪತ್ತಿನ ಸಂಘಗಳಾಗಿದ್ದು ನಂತರ ವ್ಯವಸಾಯ ಬ್ಯಾಂಕುಗಳಾಗಿ ಮಾರ್ಪಾಡಾಗಿ ಪಟ್ಟಣ ಸಹಕಾರಿ ಬ್ಯಾಂಕುಗಳಂತೆ (ಭಾರತೀಯ ರಿಜರ್ವ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಡದೆ) ಕಾರ್ಯ ನಿರ್ವಹಿಸುತ್ತಿವೆ. 1951 ರಲ್ಲಿ ಜಿಲ್ಲೆಯಲ್ಲಿ ಇಂಥ ಬ್ಯಾಂಕುಗಳ ಸಂಖ್ಯೆ 10 ಇದ್ದು ಅವುಗಳ ಒಟ್ಟು ಪಾಲು ಬಂಡವಾಳ 1.68 ಲಕ್ಷ ರೂ. ಆಗಿತ್ತು ಮತ್ತು ಅವುಗಳು ಸಂಗ್ರಹಿಸಿದ ಠೇವಣಿ ಮೊತ್ತ ಒಟ್ಟು 7.16 ಲಕ್ಷ ರೂ. ಆಗಿತ್ತು. 1955-56 ರಲ್ಲಿ ಅವುಗಳ ಸಂಖ್ಯೆ 14ಕ್ಕೆ ಹೆಚ್ಚಳಗೊಂಡು ಅವುಗಳು ಹೊಂದಿದ್ದ ಒಟ್ಟು ಷೇರು ಬಂಡವಾಳ ಮತ್ತು ಠೇವಣಿ ಸಂಗ್ರಹಣೆ ಕ್ರಮವಾಗಿ ರೂ. 2.9 ಲಕ್ಷ ಮತ್ತು ರೂ. 12 ಲಕ್ಷ ಎಂದು ಕಂಡುಬರುವುದು.

**ವ್ಯವಸಾಯ ಸೇವಾ ಸಹಕಾರ ಸಂಘ, ಸೋಮವಾರಪೇಟೆ**

1919ರಲ್ಲಿ ವ್ಯವಸಾಯೇತರ ಪತ್ತಿನ ಸಹಕಾರಿ ಸಂಘವಾಗಿ ನೋಂದಾಯಿಸಲ್ಪಡುವ ಮೂಲಕ ಸೋಮವಾರಪೇಟೆಯ ವ್ಯವಸಾಯ ಸೇವಾ ಸಹಕಾರ ಸಂಘವು ತನ್ನ ಚಟುವಟಿಕೆಗಳನ್ನು ಆರಂಭಿಸಿತು. ಮುಂದೆ 1943ರಲ್ಲಿ 'ಸೋಮವಾರಪೇಟೆ ಟೌನ್ ಸಹಕಾರ ಸಂಘ' ಎಂದು ಪುನರ್ನಾಮಕರಣವಾಯಿತು. 1949 ರಲ್ಲಿ 'ಸಹಕಾರಿ ಬ್ಯಾಂಕು' ಎಂದು ಪುನಃ ನೋಂದಾಯಿಸಲ್ಪಟ್ಟು ಅಂತಿಮವಾಗಿ 1976-77ರಲ್ಲಿ ಪ್ರಾಥಮಿಕ ಸಹಕಾರಿ ಸಂಘಗಳು ಪುನರ್ರಚನೆಗೊಂಡಾಗ ಸೋಮವಾರಪೇಟೆಯ ಸುತ್ತ ಮುತ್ತಲಿನ ಒಂಬತ್ತು ಹಳ್ಳಿಗಳ ಕಾರ್ಯವ್ಯಾಪ್ತಿಯನ್ನು ಹೊಂದಿ ವ್ಯವಸಾಯ ಸೇವಾ ಸಹಕಾರ ಸಂಘವಾಗಿ ಪರಿವರ್ತಿತವಾಯಿತು.

1944ರಲ್ಲಿ ಈ ಸಂಸ್ಥೆ ಹೊಂದಿದ್ದ ಸದಸ್ಯರ ಸಂಖ್ಯೆ 100 ಆಗಿದ್ದು ಪಾಲು ಬಂಡವಾಳ ರೂ. 6,073 ಆಗಿತ್ತು. ಆ ವರ್ಷ ಸಂಗ್ರಹಿಸಿದ ಠೇವಣಿ ಮತ್ತು ಸದಸ್ಯರಿಗೆ ನೀಡಿದ ಸಾಲದ ಮೊತ್ತ ಕ್ರಮವಾಗಿ ರೂ. 3,193 ಮತ್ತು ರೂ. 17,890 ಆಗಿದ್ದರೆ ಗಳಿಸಿದ ನಿವ್ವಳ ಲಾಭ ರೂ. 344. 1949ರಲ್ಲಿ ಗ್ರಾಮೀಣ ಬ್ಯಾಂಕಾಗಿ ಪರಿವರ್ತನೆ ಗೊಂಡಾಗ ಅದರ ಸದಸ್ಯರ ಸಂಖ್ಯೆ 251ಕ್ಕೆ ಹೆಚ್ಚಿಸಲ್ಪಟ್ಟು ಷೇರುಬಂಡವಾಳ ರೂ. 16,439 ಆಗಿದ್ದರೆ, ಸಂಗ್ರಹಿಸಿದ ಠೇವಣಿ ಮೊತ್ತ ರೂ. 24,675 ಆಗಿತ್ತು. 1974ರಲ್ಲಿ ಸಂಘದ ಸದಸ್ಯತ್ವವು 1,392ಕ್ಕೆ ಹೆಚ್ಚಳಗೊಂಡು ಷೇರು ಬಂಡವಾಳ ರೂ. 6.89 ಲಕ್ಷ, ಠೇವಣಿಗಳು ರೂ. 14.78 ಲಕ್ಷಕ್ಕೆ ಏರಿದ್ದವು. ಆ ವರ್ಷ ಬ್ಯಾಂಕಿಗೆ ಸದಸ್ಯರಿಂದ ಬರಬೇಕಾದ ಸಾಲ ರೂ. 34.76 ಲಕ್ಷ ಆಗಿದ್ದು ಗಳಿಸಿದ ನಿವ್ವಳ ಲಾಭ ರೂ. 1.05 ಲಕ್ಷ ಆಗಿತ್ತು. 1957 ರಿಂದ ಗೊಬ್ಬರದ ಮಾರಾಟವನ್ನು, 1961 ರಿಂದ ಬೆಳೆಸಾಲ ಯೋಜನೆಗಳನ್ನು ಬ್ಯಾಂಕು ಅಳವಡಿಸಿಕೊಂಡಿತು. 1991ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಸದಸ್ಯರ ಸಂಖ್ಯೆ 2,327, ಪಾಲು ಬಂಡವಾಳ ರೂ.

14.75 ಲಕ್ಷ, ಇವರಲ್ಲಿ ಸರಕಾರೀ ಪಾಲು ರೂ. 62,500 ಇದ್ದವು.

ಸೀಮಿತ ರೀತಿಯಲ್ಲಿ 'ಅರ್ಬನ್ ಬ್ಯಾಂಕಿಂಗ್' ವ್ಯವಹಾರ ವನ್ನು ಸಂಘವು ನಡೆಸುವುದಲ್ಲದೇ ವ್ಯವಸಾಯಕ್ಕೆ ಬೇಕಾಗುವ ಬೆಳೆಸಾಲವನ್ನು ನೀಡುವುದರೊಂದಿಗೆ ವ್ಯವಸಾಯಕ್ಕೆ ಅವಶ್ಯ ಕವಾದ ರಸಗೊಬ್ಬರ, ಕ್ರಿಮಿನಾಶಕ ಮುಂತಾದವುಗಳನ್ನು ಪೂರೈಸುತ್ತದೆ. 1991-82ರಲ್ಲಿ ಬ್ಯಾಂಕು ನೀಡಿದ ಬೆಳೆಸಾಲ ಗೊಬ್ಬರ ಸಾಲಗಳು ಕ್ರಮವಾಗಿ ರೂ. 49.60 ಲಕ್ಷ ಮತ್ತು ರೂ. 5.28 ಲಕ್ಷ ಎಂದು ವರದಿಯಾಗಿದೆ.

1988-89, 89-90, 90-91ರಲ್ಲಿ ಸಂಘವು ಸದಸ್ಯರಿಂದ ಮತ್ತು ಸದಸ್ಯೇತರರಿಂದಸಂಗ್ರಹಿಸಿದ ಠೇವಣಿಗಳ ಮೊತ್ತ ಕ್ರಮವಾಗಿ ರೂ. 60.83 ಲಕ್ಷ, ರೂ. 56.17 ಲಕ್ಷ ಮತ್ತು ರೂ. 60.98 ಲಕ್ಷ ಆಗಿದ್ದರೆ - ಸದರಿ ವರ್ಷ ಗಳಲ್ಲಿ ನೀಡಿದ ಸಾಲ ಮುಂಗಡಗಳು ಕ್ರಮವಾಗಿ ರೂ. 72.56 ಲಕ್ಷ, ರೂ. 26.03 ಲಕ್ಷ ಮತ್ತು ರೂ. 72.62 ಲಕ್ಷ ಆಗಿತ್ತು. 1990-91ರ ಸಾಲ ಮುಂಗಡಗಳಲ್ಲಿ ರೂ. 48.46 ಲಕ್ಷ ಬೆಳೆ ಸಾಲ ನೀಡದಿದ್ದರೆ, ರೂ. 13.22 ಲಕ್ಷ ಚಿನ್ನಾಭರಣಗಳ ಮೇಲಿನ ಸಾಲವಾಗಿತ್ತು. ರೈತರಿಗೆ ರಸ ಗೊಬ್ಬರ ಕೊಳ್ಳಲು ನೀಡಿದ ಸಾಲ ರೂ. 4.63 ಲಕ್ಷ. 1990-91ರಲ್ಲಿ ಸಂಘಕ್ಕೆ ಬರಬೇಕಾದ ವಿವಿಧ ಸಾಲಗಳ ಹಳೇ ಬಾಕಿ ಮೊತ್ತ ರೂ. 38.23 ಲಕ್ಷ ಇದ್ದರೆ ಅವರ ಹಿಂದಿನ ಎರಡು ವರ್ಷಗಳಲ್ಲಿ ಕ್ರಮವಾಗಿ ರೂ. 46.65 ಲಕ್ಷ (89-90) ಮತ್ತು ರೂ. 70.28 ಲಕ್ಷ (88-89) ಆಗಿತ್ತು. 1988-89ರಲ್ಲಿ ಸಂಘವು ತಾನು ಖರೀದಿಸಿ ಸದಸ್ಯರಿಗೆ ಮಾರಾಟ ಮಾಡಿದ ಸರಕುಗಳ (ರಸಗೊಬ್ಬರ, ಕ್ರಿಮಿನಾಶಕ ಮುಂತಾದವು) ಮೌಲ್ಯ ಕ್ರಮವಾಗಿ ರೂ. 27.29 ಲಕ್ಷ ಮತ್ತು ರೂ. 27.27 ಲಕ್ಷ ಆಗಿತ್ತು. ಅದರ ಮುಂದಿನ ವರ್ಷದ ವಹಿವಾಟು ಕ್ರಮವಾಗಿ ರೂ. 20.37 ಲಕ್ಷ ಮತ್ತು ರೂ. 16.84 ಲಕ್ಷ ಇತ್ತು. 1990-91ರಲ್ಲಿ ಕೊಂಡ ಸರಕಿನ ಬೆಲೆ ರೂ.46.40 ಲಕ್ಷ ಆಗಿದ್ದರೆ ಮಾರಾಟ ಮಾಡಿದ ಸರಕಿನ ಮೌಲ್ಯ ರೂ. 42.98 ಲಕ್ಷ ಆಗಿತ್ತು. ಸಂಘವು ಕಾಫಿ ಸಂಸ್ಕರಣ ಮತ್ತು ರಫ್ತು ಕಂಪನಿ, ಕೊಪ್ಪ ಇವರ ಪ್ರತಿನಿಧಿಯಂತೆ ಕೂಡ ಕಾರ್ಯ ನಿರ್ವಹಿಸುತ್ತಿತ್ತು (1986-91). ಸಂಘವು ತನ್ನದೇ ಆದ ಕಚೇರಿ ಕಟ್ಟಡ, ದಾಸ್ತಾನು ಮಳಿಗೆ, ವ್ಯಾಪಾರಿ ಮಳಿಗೆಗಳು ಅತಿಥಿಗೃಹ ಮುಂತಾದ ಸ್ಥಿರಾಸ್ತಿಗಳನ್ನು ಹೊಂದಿದ್ದು ಅವು ಗಳ ಮೌಲ್ಯ ರೂ. 14.07 ಲಕ್ಷ (ಮಾರ್ಚ್ 1991). ಸಂಘದ ಸುವರ್ಣ ಮಹೋತ್ಸವವು 1975ರಲ್ಲಿ ಆಚರಿಸ ಲ್ಪಟ್ಟಿತು. 1988-89, 89-90 ಮತ್ತು 90-91ರಲ್ಲಿ ಸಂಘ ಗಳಿಸಿದ ನಿವ್ವಳ ಲಾಭ ಅನುಕ್ರಮವಾಗಿ ರೂ. 2.02 ಲಕ್ಷ, 1.07 ಲಕ್ಷ, ಮತ್ತು ರೂ. 2.42 ಲಕ್ಷ ಆಗಿತ್ತು. ಸಂಘದ ನೌಕರರ ಸಂಖ್ಯೆ 24 ಇದ್ದು 90-91ರಲ್ಲಿ ಸಿಬ್ಬಂದಿ ಗಾಗಿ ಮಾಡಿದ ವೆಚ್ಚ ರೂ. 5.20 ಲಕ್ಷ ಆಗಿತ್ತು.

**ಸಹಕಾರಿ ದವಸ ಭಂಡಾರಗಳು**

ಆಹಾರದ ಬೆಳೆಗಳಲ್ಲಿ ಬತ್ತವು ಕೊಡಗಿನ ಮುಖ್ಯ ಬೆಳೆ. ಸುಗ್ಗಿಯ ಪೂರ್ವದ ಕೆಲವು ತಿಂಗಳ ಮೊದಲು (ಜೂನ್‌ನಿಂದ ಸೆಪ್ಟಂಬರ್) ಸಾಮಾನ್ಯವಾಗಿ ಚಿಕ್ಕ ಹಿಡುವಳಿದಾರರು, ವ್ಯವಸಾಯ ಕಾರ್ಮಿಕರು ಮತ್ತು ಇತರರು, ದೊಡ್ಡ ದೊಡ್ಡ ಜಮೀನ್ದಾರರಿಂದ ಬತ್ತವನ್ನು ಸಾಲದ ರೂಪದಲ್ಲಿ ಪಡೆದು ಅದನ್ನು ಸುಗ್ಗಿಯ ನಂತರ ಬತ್ತದ ರೂಪದಲ್ಲಿ ಒಂದು ಬಟ್ಟಿ ಬತ್ತಕ್ಕೆ ಪ್ರತಿಯಾಗಿ ಎರಡುವರೆಯಿಂದ ಮೂರು ಬಟ್ಟಿ ಹಿಂದಕ್ಕೆ ಕೊಡುವುದು ಬಹು ಹಿಂದಿನಿಂದ ಆಚರಣೆಯಲ್ಲಿ ಇದ್ದ ಪದ್ಧತಿ. ಇದು ಸಾಲಿಯಾನ ಶೇಕಡಾ 250 ರಿಂದ 300ರ ವರೆಗಿನ ಬಡ್ಡಿ ದರಕ್ಕೆ ಸಮಾನವಾಗಿದ್ದು ಒಂದು ರೀತಿಯ ಹೊರಲಾರದ ಋಣಭಾರದ ವ್ಯವಸ್ಥೆಯೇ ಆಗಿತ್ತು. ಈ ಸಮಸ್ಯೆಗೆ ಪರಿಹಾರ ರೂಪವಾಗಿ ಸಹಕಾರಿ ವಲಯದಲ್ಲಿ ದವಸದ ಬ್ಯಾಂಕ್‌ಗಳು ಜಿಲ್ಲೆಯಾದ್ಯಂತ ಬಹು ದೊಡ್ಡ ಪ್ರಮಾಣದಲ್ಲಿ ಬಹಳ ಹಿಂದೆಯೇ ಮೂಡಿಬಂದವು. ಈ ಜಿಲ್ಲೆಯ ಮೊದಲನೇಯ ದವಸ ಭಂಡಾರ ಮಡಿಕೇರಿ ತಾಲೂಕಿನ ಭಾಗಮಂಡಲದಲ್ಲಿ 1918 ರಲ್ಲಿ ಹುಟ್ಟಿತು. ಮಡಿಕೇರಿ ತಾ॥ನ ನಾಪೋಕ್ಲು ಗ್ರಾಮದಲ್ಲಿ 1920ರಲ್ಲಿಯೂ, ಹಾಗೂ ವೀರರಾಜಪೇಟೆ ತಾಲೂಕಿನ ದೇವಣಗೇರಿ, ಮಾಲ್ದಾರೆ, ಬಿಟ್ಟಂಗಾಲ ಮತ್ತು ಪಾಳಂಗಳಗಳಲ್ಲಿ ಈ ಸಂಘಗಳು ರಚನೆ ಗೊಂಡವು. 1925 ರಲ್ಲಿ ಸೋಮವಾರಪೇಟೆ ತಾಲೂಕಿನ ಶಿರಂಗಾಲದಲ್ಲಿ, ನಂತರ 1928 ರಲ್ಲಿ ಅದೇ ತಾಲೂಕಿನ ಮಾದಾಪುರ ಮತ್ತು ಸಂತೇಶಾಂತಳ್ಳಿಯಲ್ಲೂ ಇವು ರಚನೆ ಗೊಂಡವು. ಈ ಮೇಲಿನವು ಜಿಲ್ಲೆಯ ಅತೀ ಹಳೆಯ ದವಸ ಬ್ಯಾಂಕ್‌ಗಳು. ಇಂದು ಕೊಡಗಿನ ಒಟ್ಟು ಸಹಕಾರಿ ಸಂಘ ಗಳಲ್ಲಿ ಈ ಸಂಘಗಳದೇ ಬಹು ದೊಡ್ಡ ಸಂಖ್ಯೆ (128); ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚು(74) ಮಡಿಕೇರಿ ತಾಲೂಕಿನಲ್ಲಿ ಇದ್ದರೆ, ವೀರರಾಜಪೇಟೆ ತಾಲೂಕಿನಲ್ಲಿ 38 ಮತ್ತು ಸೋಮ ವಾರಪೇಟೆ ತಾಲೂಕಿನಲ್ಲಿ 16 ಸಂಘಗಳು ಇವೆ. ಒಟ್ಟು ಸಂಘಗಳಲ್ಲಿ ಕೇವಲ ಐದು ನಿಷ್ಕ್ರಿಯಗೊಂಡಿದ್ದರೆ ಮೂರು ವಿಸರ್ಜನೆಗೊಳ್ಳುವ ಸ್ಥಿತಿಯಲ್ಲಿ ಇವೆ. ಈ ದವಸ ಭಂಡಾರ ಗಳ ಕಾರ್ಯ ವಿಧಾನದಲ್ಲಿ ಮತ್ತು ಲೆಕ್ಕ ಪತ್ರದಲ್ಲಿ ಪ್ರತೀ

ಒಂದನ್ನೂ ಬತ್ತದ ರೂಪದಲ್ಲಿ ಮಾಪನ ಮಾಡಲಾಗುವುದು. ಸದಸ್ಯರ ಪಾಲು ಬಂಡವಾಳ, ಸಾಲದ ಮೇಲಿನ ಬಡ್ಡಿ, ಲಾಭಾಂಶ, ಮರಣೋತ್ತರ ನಿಧಿ, ಇತರ ನಿಧಿಗಳು, ಲಾಭ–ನಷ್ಟ, ಆಸ್ತಿ – ಹೊಣೆಗಾರಿಕೆ, ಇವೆಲ್ಲವನ್ನು ವಿಶೇಷವಾಗಿ ಬತ್ತದ ರೂಪದಲ್ಲಿಯೇ ಗಣಿಸಲಾಗುವುದು, ಹಣದ ಬಳಕೆ ತುಂಬಾ ಕಡಿಮೆ. ಪ್ರತೀಯೊಂದು ಪಾಲುಗಾರಿಕೆ (ಷೇರು)ಯ ದರ ಒಂದು ಬಟ್ಟಿ(ಬುಟ್ಟಿ) ಬತ್ತ (ಸ್ಥಳೀಯ 80ಸೇರುಗಳು). ಸಾಮಾನ್ಯವಾಗಿ ಜೂನ್‌ನಿಂದ ಸೆಪ್ಟಂಬರ್ ಅವಧಿಯಲ್ಲಿ ಈ ಸಂಘಗಳು ಸದಸ್ಯರಿಗೆ ಧಾನ್ಯರೂಪದಲ್ಲಿ ಸಾಲ ನೀಡುವವು. ಸಾಮಾನ್ಯವಾಗಿ ವಿಧಿಸುವ ಬಡ್ಡಿ ದರ ಕಾಲು ಭಾಗ, ಎಂದರೆ ಒಂದು ಬಟ್ಟಿ ಸಾಲಕ್ಕೆ ಒಂದೂ ಕಾಲು ಬಟ್ಟಿ ಮರಳಿಸಬೇಕು. ಸಾಮಾನ್ಯವಾಗಿ ಸದಸ್ಯರಿಗೆ ಪ್ರತೀ ವರ್ಷ ಡಿವಿಡೆಂಡ್ ಕೊಡದೇ ಬಡ್ಡಿರೂಪದಲ್ಲಿ ಸಂಗ್ರಹವಾದ ಬತ್ತವನ್ನು ಶೇಖರಿಸಿ ಇಟ್ಟು ಸದಸ್ಯರ ಮರಣ ಸಂಭವಿಸಿದಾಗ ಅಂಥ ಕುಟುಂಬಕ್ಕೆ ಉಚಿತವಾಗಿ ಬತ್ತದ ರೂಪದಲ್ಲಿ ಮರಣೋತ್ತರ ನಿಧಿಯನ್ನು ಅರ್ಪಿಸಲಾಗುವುದು.

1949–50ರಲ್ಲಿ ಜಿಲ್ಲೆಯಲ್ಲಿ 84 ದವಸ ಭಂಡಾರಗಳಿದ್ದವು. ಸದಸ್ಯರ ಸಂಖ್ಯೆ 7,967ಕ್ಕೆ ಹೆಚ್ಚಳಗೊಂಡು, ಈ ಸಂಸ್ಥೆಗಳು ವರ್ಷದ ಕೊನೆಯಲ್ಲಿ ಹೊಂದಿದ್ದ ಬತ್ತದ ಸಂಗ್ರಹ 24,396 ಬಟ್ಟಿ, ಹಣದ ರೂಪದಲ್ಲಿ ಅದರ ಬೆಲೆ ಬಟ್ಟಿಗೆ ಒಂಬತ್ತು ರೂ.ಯಂತೆ ರೂ. 2.20 ಲಕ್ಷ ಆಗಿತ್ತು, ಎಂದು ವರದಿ ತಿಳಿಸುವುದು. 1955–56ರಲ್ಲಿ ಜಿಲ್ಲೆಯಾದ್ಯಂತ 104 ದವಸ ಭಂಡಾರಗಳು, 33,065 ಬಟ್ಟಿಗಳಷ್ಟು ಬತ್ತವನ್ನು (ಹಣದ ರೂಪದಲ್ಲಿ ಮೌಲ್ಯ ರೂ. 3.97 ಲಕ್ಷ) ಸಾಲ ನೀಡಿದ್ದವು. ಈ ಎಲ್ಲಾ ಸಂಸ್ಥೆಗಳ ಒಟ್ಟು ಸದಸ್ಯತ್ವದ ಬಲ 10,973 ಎಂದು ವರದಿ ತಿಳಿಸುವುದು.

1977-78ರಲ್ಲಿ ಜಿಲ್ಲೆಯಾದ್ಯಂತ 120 ಭಂಡಾರಗಳು ಹೊಂದಿದ್ದ ಸದಸ್ಯರ ಸಂಖ್ಯೆ 19,145 ಆಗಿದ್ದರೆ, 1983–84ರಲ್ಲಿ 124 ದವಸ ಬ್ಯಾಂಕುಗಳ ಸದಸ್ಯತ್ವವು 21,148ಕ್ಕೆ ಹೆಚ್ಚಳಗೊಂಡಿತ್ತು. ಮುಂದೆ 1987–88ರಲ್ಲಿ 125 ದವಸ ಭಂಡಾರಗಳಲ್ಲಿ 22,860 ಜನರು ಸದಸ್ಯತ್ವ ಪಡೆದಿದ್ದರು. ಸಾಮಾನ್ಯವಾಗಿ ಪ್ರತೀಯೊಂದು ವ್ಯವಸಾಯ ಕುಟುಂಬವು ದವಸ ಭಂಡಾರದ ಸದಸ್ಯತ್ವ ಹೊಂದಿರುವುದು. 1989ರ ಸಹಕಾರಿ ವರ್ಷದ ಕೊನೆಯಲ್ಲಿ ಜಿಲ್ಲೆಯಲ್ಲಿ 128 ದವಸ ಭಂಡಾರಗಳು 23,014 ಸದಸ್ಯರ ಬಲವನ್ನು ಹೊಂದಿದ್ದವು. ಅವುಗಳು ಹೊಂದಿದ್ದ ಷೇರು ಬಂಡವಾಳ ಹಣದ ರೂಪದಲ್ಲಿ ರೂ. 120.59 ಲಕ್ಷ ಆಗಿದ್ದರೆ, ಅವುಗಳು ಹೊಂದಿದ್ದ ಕಾಯ್ದಿಟ್ಟ ನಿಧಿಗಳು ರೂ. 63.72 ಲಕ್ಷ, ಠೇವಣಿಗಳು ರೂ. 3.74ಲಕ್ಷ ಇತ್ತು. ಸರ್ಕಾರವು ಈ ಸಂಸ್ಥೆಗಳಿಗೆ ನೀಡಿದ ಸಹಾಯ ರೂ. 3.57 ಲಕ್ಷ. ಈ ಸಂಸ್ಥೆಗಳು ಸಾಲ ನೀಡಿದ ಬತ್ತದ ಬೆಲೆ ರೂ. 19.42 ಲಕ್ಷ ಎಂದು ವರದಿ ತಿಳಿಸುವುದು. 1989ರಲ್ಲಿ ಈ ಸಂಸ್ಥೆಗಳಲ್ಲಿ 86 ಸಂಸ್ಥೆಗಳು ಗಳಿಸಿದ ಲಾಭ ರೂ. 4.12 ಲಕ್ಷ ಆಗಿದ್ದರೆ, 34 ಸಂಸ್ಥೆಗಳು ಅನುಭವಿಸಿದ ನಷ್ಟದ ಮೊತ್ತ ರೂ.66,000. ಈ ಸಂಸ್ಥೆಗಳು ಖರೀದಿಸಿದ ಮತ್ತು ಮಾರಾಟ ಮಾಡಿದ ಸರಕುಗಳ ಬೆಲೆ ಕ್ರಮವಾಗಿ ರೂ. 25.19 ಲಕ್ಷ ಮತ್ತು ರೂ. 26.86 ಲಕ್ಷ ಆಗಿತ್ತು.

### ದವಸ ಭಂಡಾರ, ನಾಪೋಕ್ಲು

ನಾಪೋಕ್ಲು ಸಹಕಾರ ದವಸ ಭಂಡಾರ (1929), ಜಿಲ್ಲೆಯ ಉತ್ತಮ ಭಂಡಾರಗಳಲ್ಲಿ ಒಂದಾಗಿದ್ದು ಇಂದಿಗೂ ಕಾರ್ಯ ನಿರ್ವಹಿಸುತ್ತಿದೆ. ಸಂಘದ ಚಟುವಟಿಕೆಗಳು ನಾಪೋಕ್ಲು ಗ್ರಾಮಕ್ಕೆ ಮಾತ್ರ ಸೀಮಿತವಾಗಿದ್ದು ಸದರಿ ಪ್ರದೇಶದಲ್ಲಿ ಜಮೀನು ಹೊಂದಿದ ಬತ್ತ ಬೆಳೆಯುವವರು ಈ ಸಂಘದ ಸದಸ್ಯರಾಗಬಹುದು. ಸಂಘದ ಸದಸ್ಯರಲ್ಲಿ ಬಹು ಪಾಲು ಚಿಕ್ಕ ಹಿಡುವಳಿದಾರರು. ಸಂಘವು 1991ರಲ್ಲಿ 611 ಜನ ಸದಸ್ಯರನ್ನು 528ಕ್ವಿಂಟಾಲ್ ಬತ್ತವನ್ನು ಷೇರು ಬಂಡವಾಳವಾಗಿ ಹೊಂದಿತ್ತು. ಈ ಸಂಖ್ಯೆಯ ಸದ್ಯದ ಒಂದು ಷೇರಿನ ಬೆಲೆ ದವಸದ ರೂಪದಲ್ಲಿ ಒಂದು ಕ್ವಿಂಟಾಲ್ ಬತ್ತ; ಸದಸ್ಯರು ಒಂದಕ್ಕಿಂತ ಹೆಚ್ಚು ಷೇರುಗಳನ್ನು ಹೊಂದಲು ಅವಕಾಶ ಇರುವುದಿಲ್ಲ.

ಸಂಘವು ಬತ್ತದ ರೂಪದಲ್ಲಿ 1990–91ರಲ್ಲಿ ಸದಸ್ಯರಿಗೆ ನೀಡಿದ ಸಾಲ 381 ಕ್ವಿಂಟಾಲ್. ಪ್ರತೀ ಸದಸ್ಯರು ಇನ್ನೊಬ್ಬ (ಪುರುಷ) ಸದಸ್ಯರ ಜಾಮೀನಿನ ಮೇಲೆ ಗರಿಷ್ಠ ಏಳು ಕ್ವಿಂಟಾಲ್‌ವರೆಗೆ ಬತ್ತದ ಸಾಲವನ್ನು ಪಡೆಯಬಹುದು. ಸಾಲ ಮರುಪಾವತಿಯಲ್ಲಿ ಹೆಚ್ಚಿಗೆ ನೀಡಬೇಕಾದ ಹೆಚ್ಚುವರಿ ಬತ್ತದ ಪ್ರಮಾಣ ಶೇ. 20. ಅಂದರೆ ಪ್ರತಿ ಕ್ವಿಂಟಾಲ್ ಬತ್ತದ ಸಾಲಕ್ಕೆ ಮರಳಿ ಕೊಡುವ ಬತ್ತದ ಪ್ರಮಾಣ ಒಂದು ಕ್ವಿಂಟಾಲ್ 20 ಸೇರು (ಸದ್ಯದ ದರ). ಸಂಸ್ಥೆಗೆ 1991 ಮಾರ್ಚ್ ಕೊನೆಯಲ್ಲಿ ಸಾಲದ ರೂಪದಲ್ಲಿ ಸದಸ್ಯರಿಂದ ಬರಬೇಕಾಗಿದ್ದ ಬತ್ತದ ಪ್ರಮಾಣ 895 ಕ್ವಿಂಟಾಲ್ ಆಗಿದ್ದರೆ ಸದರಿ ವರ್ಷದಲ್ಲಿ ವಸೂಲಾದ ಸಾಲ 340 ಕ್ವಿಂಟಾಲ್. ಸಂಘವು ಹೊಂದಿದ ಆಸ್ತಿಗಳ ಮೌಲ್ಯ (ಕಟ್ಟಡ) ಬತ್ತದ ರೂಪದಲ್ಲಿ 490 ಕ್ವಿಂ, ಆಗಿದ್ದರೆ ಇನ್ನುಳಿದ ಇತರೇ ಆಸ್ತಿಗಳ ಮೌಲ್ಯ 79 ಕ್ವಿಂ. ಎಂದು ವರದಿಯಾಗಿದೆ.

ಸಂಘವು 1987–88 ಮತ್ತು 88–89ನೇ ಸಾಲಿನಲ್ಲಿ ಗಳಿಸಿದ ಲಾಭ ಕ್ರಮವಾಗಿ 137 ಕ್ವಿಂ. ಮತ್ತು 128 ಕ್ವಿಂ. ಆಗಿದ್ದರೆ 90–91 ರಲ್ಲಿ ಗಳಿಸಿದ ಲಾಭ 31 ಕ್ವಿಂ. ಎಂದು ವರದಿಯಾಗಿದೆ. ಸದರಿ ವರ್ಷದಲ್ಲಿ (90–91) ಸಂಘದ ಸುಸ್ತಿ ಬಾಕಿ ಪ್ರಮಾಣ ಶೇ. 60 ಇತ್ತು. ಸಂಘವು ಪ್ರತ್ಯೇಕವಾದ ಸದಸ್ಯರ ಮರಣನಿಧಿ ಯೋಜನೆಯನ್ನು ರೂಪಿಸಿದ್ದು ಪ್ರತೀ ಸದಸ್ಯನು ಸದಸ್ಯತ್ವವನ್ನು ಪಡೆಯುವ ಸಮಯದಲ್ಲಿ ಒಂದು ಗೊತ್ತಾದ ಪ್ರಮಾಣದ ಬತ್ತವನ್ನು ನಿಧಿಗೆ ನೀಡಬೇಕಾಗುವುದು (ಸದ್ಯ 29 ಕಿಲೋ). ಸದಸ್ಯರ ಮರಣ ಸಂಭವಿಸಿದಾಗ ವಾರಸುದಾರರಿಗೆ ಮರಣ ನಿಧಿಯಾಗಿ ನಾಲ್ಕು ಕ್ವಿಂಟಾಲ್ ಬತ್ತವನ್ನು ನೀಡಲಾಗುವುದು, ಸಂಘದ ಸದಸ್ಯರು ಮರಣ ನಿಧಿಗೆ ಸದಸ್ಯತ್ವವನ್ನು ಹೊಂದುವುದು ಕಡ್ಡಾಯ. ಸಂಘವು ಸಾಮಾನ್ಯವಾಗಿ ಜೂನ್‌ನಿಂದ ನವೆಂಬರ್ ವರೆಗೆ ಸಂಗ್ರಹಿಸಿದ ಬತ್ತದಿಂದ ಸದಸ್ಯರಿಗೆ ಸಾಲ ನೀಡುವುದು. ಸುಗ್ಗಿಯ ನಂತರ ಜನವರಿಯಿಂದ ಏಪ್ರಿಲ್‌ವರೆಗೆ ಸಾಲ ವಸೂಲಾತಿ. ಪ್ರತೀ ವರ್ಷ ಡಿಸೆಂಬರ್ 15ರ ನಂತರ ಸಾಲ ನೀಡಿ ಹೆಚ್ಚಾಗಿ ಉಳಿದ ಬತ್ತವನ್ನು ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಲಾಗುವುದು. ಸಂಘವು ಇನ್ನುಳಿದ ವ್ಯವಹಾರವನ್ನು ನಗದು ರೂಪದಲ್ಲಿಯೂ ಮಾಡುವುದು. ಲೆಕ್ಕಪತ್ರಗಳನ್ನು ಧಾನ್ಯದ ಪರಿಮಾಣದಲ್ಲಿ ಮತ್ತು ಅದರ ಪರಿವರ್ತಿತ ಬೆಲೆಗನುಸಾರ ರೂಪಾಯಿ ಮೌಲ್ಯದಲ್ಲಿಯೂ ಇಡಲಾಗುವುದು.

ಬತ್ತದ ಸಂಗ್ರಹವು ಕೆಡದಂತೆ ಇಡಲು ಸಂಸ್ಥೆಯು 300 ಕ್ವಿಂಟಾಲ್ ಸಾಮರ್ಥ್ಯದ ಮರದ ಕಣಜಗಳನ್ನು ಹೊಂದಿರುವುದು. ಆವಶ್ಯವೆಂದು ಕಂಡುಬಂದಲ್ಲಿ ಬತ್ತದ ಮೌಲ್ಯವನ್ನು ಮಾರುಕಟ್ಟೆಯ ದರದಲ್ಲಿ (ಸದ್ಯ 300 ರೂ. ಕ್ವಿಂಟಾಲಿನಂತೆ) ಪರಿವರ್ತಿಸಿ ಸದಸ್ಯರಿಂದ ಬರಬೇಕಾದ ಮತ್ತು ಇತರ ಸಾಲ ಬಾಕಿಯನ್ನು ವಸೂಲಿ ಮಾಡಲಾಗುವುದು. ಸಂಘವು ಲಾಭಾಂಶದಲ್ಲಿ ನಿಗದಿತ ಭಾಗವನ್ನು ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಕವಾಗುವಂತೆ ಉಪಯೋಗಿಸುವುದಲ್ಲದೇ, 'ಸಾಮೂಹಿಕ ಪ್ರಯೋಜನಾ ನಿಧಿ', 'ಗ್ರಾಮಾಭಿವೃದ್ಧಿ ನಿಧಿ' ಮುಂತಾದ ಜನೋಪಯೋಗೀ ನಿಧಿಗಳನ್ನು ಸಹ ಹೊಂದಿರುವುದು. 88–89ರಲ್ಲಿ ವಿದ್ಯಾರ್ಜನೆ ಸಲುವಾಗಿ 30 ಜನ ಸದಸ್ಯರ ಮಕ್ಕಳಿಗೆ 16 ಕ್ವಿಂ ಬತ್ತದ ಮೌಲ್ಯವನ್ನು ವಿನಿಯೋಗಿಸಲಾಯಿತು. ಸಂಘವು ತನ್ನದೇ ಆದ ಸುಸಜ್ಜಿತ ಕಟ್ಟಡವನ್ನು ಹೊಂದಿರುವುದು (1954). ಈ ಸಂಘವು 1984–85ರಲ್ಲಿ ಜಿಲ್ಲೆಯ ಅತ್ಯುತ್ತಮ ದವಸ ಭಂಡಾರ ಎಂದು ಪರಿಗಣಿಸಲ್ಪಟ್ಟು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಬಹುಮಾನವನ್ನು ಪಡೆದಿರುವುದು.

ಸಂಘದ 1989–90 ರ ಬತ್ತದ ಜಮಾ ಖರ್ಚಿನ ಕರಡು ತಖ್ತೆ ಈ ಕೆಳಕಂಡಂತೆ ಇತ್ತು.

| ಜಮಾದ ವಿವರಗಳು | ಕ್ವಿಂಟಾಲ್ | ಖರ್ಚಿನ ವಿವರಗಳು | ಕ್ವಿಂಟಾಲ್ |
|---|---|---|---|
| ಸದಸ್ಯರಿಂದ ಪಾಲು ಬತ್ತ | 9.88 | ಸದಸ್ಯರ ಪಾಲು ಬತ್ತ ಹಿಂದಕ್ಕೆ ಕೊಟ್ಟಿದ್ದು | 3.00 |
| ಸಾಲ ಮರು ಪಾವತಿ | 249.39 | ಬತ್ತ ಮಾರಾಟ (ಹಣದ ರೂಪದಲ್ಲಿ ಸಾಲ ಮರು ಪಾವತಿ) | 49.09 |
| ಮರಣ ನಿಧಿ ಜಮಾ | 4.36 | — | |
| ಸದಸ್ಯರಿಂದ ಕೋರ್ಟ್ ಖರ್ಚು | 0.96 | ಸದಸ್ಯರಿಗೆ ಬತ್ತ ಸಾಲ | 179.25 |
| ಡಿಪಾಜಿಟ್ | 0.52 | ಸದಸ್ಯರ ಮರಣ ನಿಧಿ | 37.50 |
| ದಾಖಲಾತಿ ಶುಲ್ಕ | 1.26 | ಅರುವಾಸೆ | 7.00 |
| ಬಡ್ಡಿ ಜಮಾ | 110.34 | ಸದಸ್ಯರ ವಿದ್ಯಾನಿಧಿಗೆ | 16.00 |
| ಆರಂಭದ ಶಿಲ್ಕು | 104.07 | ಆಖೈರು ಶಿಲ್ಕು | 188.94 |
| | 480.78 | | 480.78 |

**ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು**

ತಾಲೂಕಿಗೆ ಒಂದರಂತೆ ಇರುವ ಈ ಸಹಕಾರಿ ಸಂಸ್ಥೆಗಳು ಮೊದಲಿಗೆ ಜಮೀನು ಅಡಮಾನ ಬ್ಯಾಂಕ್, ನಂತರ ಜಮೀನು ಅಭಿವೃದ್ಧಿ ಬ್ಯಾಂಕ್ ಎಂದು ಕರೆಯಲ್ಪಟ್ಟು, 1985 ರಿಂದ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಎಂದು ಪುನರ್ ನಾಮಕರಣಗೊಂಡಿದ್ದು, ಕರ್ನಾಟಕ ರಾಜ್ಯ ಸಹಕಾರಿ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಬೆಂಗಳೂರು, ಈ ಶೃಂಗಸಂಸ್ಥೆಯ ಶಾಖಾ ಬ್ಯಾಂಕುಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ಮೊದಲನೇಯ ಜಮೀನು ಅಭಿವೃದ್ಧಿ ಬ್ಯಾಂಕು ಮಡಿಕೇರಿಯಲ್ಲಿ 1957ರಲ್ಲಿ, ನಂತರ ವೀರರಾಜಪೇಟೆಯಲ್ಲಿ 1960 ರಲ್ಲಿ ಹಾಗೂ ಸೋಮ ವಾರಪೇಟೆಯಲ್ಲಿ 1962 ರಲ್ಲಿ ಪ್ರಾರಂಭವಾದವು.

ಪ್ರಾಥಮಿಕ ಬ್ಯಾಂಕುಗಳ ಕಾರ್ಯದ ಉಸ್ತುವಾರಿ, ಪರಸ್ಪರ ಸಮನ್ವಯ, ಸಾಲದ ಅರ್ಜಿಗಳ ತಪಾಸಣೆ ಮತ್ತು ಶೀಘ್ರ ವಿಲೇವಾರಿ ಮುಂತಾದವುಗಳನ್ನು ಕೈಗೊಳ್ಳಲು ಸಹಾಯಕವಾಗುವಂತೆ ಕೇಂದ್ರ ಸಂಸ್ಥೆಯು ತನ್ನ ಜಿಲ್ಲಾ ಶಾಖೆ ಯನ್ನು 1969 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭಿಸಿತು. ಈ ಸಹಕಾರಿ ಸಂಸ್ಥೆಗಳು ರೈತರಿಗೆ ಜಮೀನಿನ ಆಧಾರದ ಮೇಲೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಅಭಿವೃದ್ಧಿ ಸಾಲ ವನ್ನು ಸುಲಭ ಕಂತಿನ ಮೂಲಕ ನೀಡುವುದರಿಂದ ಬೇಸಾಯ ದಲ್ಲಿ ಯಾಂತ್ರೀಕರಣ, ಶಾಶ್ವತ ಜಮೀನು ಅಭಿವೃದ್ಧಿ ಮತ್ತು ಸುಧಾರಣೆಗಳನ್ನು ಅಳವಡಿಸಿಕೊಂಡು ವ್ಯವಸಾಯ ಗಾರರು ಹೆಚ್ಚು ಉತ್ಪಾದನೆ ಮಾಡಲು ಸಹಾಯಕವಾಗಿವೆ. ಅಲ್ಲದೇ ವಿಶೇಷ ಯೋಜನೆಗಳಾದ ಚಿಕ್ಕ ನೀರಾವರಿ, ತೋಟ ಗಾರಿಕೆ, ಪಂಪ್‌ಸೆಟ್‌ಗಳ ಅಳವಡಿಕೆ, ತೋಟದ ಮನೆಗಳ ನಿರ್ಮಾಣ, ಹೈನು ಅಭಿವೃದ್ಧಿ, ರೇಷ್ಮೆ ವ್ಯವಸಾಯ, ಮುಂತಾದವುಗಳಿಗೆ ಸಾಲ ನೀಡುವುದಲ್ಲದೇ, ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ 'ಗಿರಿಜನರ ಉಪಯೋಜನೆ', 'ವಿಶೇಷ ಘಟಕ ಯೋಜನೆ', ಸಮಗ್ರ ಗ್ರಾಮೀಣ ಅಭಿವೃದ್ಧಿ, ಜೈವಿಕ ಅನಿಲ, ನೂರು ಬಾವಿ ಯೋಜನೆ, ಮುಂತಾದವುಗಳಿಗೆ ಸಾಲದ ನೆರವನ್ನು ಒದಗಿಸುತ್ತವೆ. 1989–90ರಲ್ಲಿ ಈ ಸಂಸ್ಥೆಗಳು ಹರಿಜನ ಗಿರಿಜನರಿಗೆ ನೀಡಿದ ಒಟ್ಟು ಮೊತ್ತ ರೂ. 0.51 ಲಕ್ಷ ; ಫಲಾನುಭವಿಗಳ ಸಂಖ್ಯೆ ಏಳು.

1988–89 ರಲ್ಲಿ ರಾಜ್ಯ ಸರ್ಕಾರದ ರಿಯಾಯತಿ ಬಡ್ಡಿ ಯೋಜನೆಯ ಅನ್ವಯ ಈ ಸಂಸ್ಥೆಗಳು ನೀಡಿದ ರಿಯಾಯತಿ ಬಡ್ಡಿ ರೂ. 6.65 ಲಕ್ಷ ; ಫಲಾನುಭವಿಗಳ ಸಂಖ್ಯೆ 1,945 ಆಗಿತ್ತು. ಅದರ ಹಿಂದಿನ ವರ್ಷದ ಬಡ್ಡಿ ರಿಯಾಯತಿ ಮೊತ್ತ ರೂ. 33.63 ಲಕ್ಷ, ಫಲಾನುಭವಿಗಳ ಸಂಖ್ಯೆ 3,445 ಆಗಿತ್ತು.

1980–81ರಲ್ಲಿ ಈ ಬ್ಯಾಂಕುಗಳು ಹೊಂದಿದ್ದ ಸದಸ್ಯತ್ವ 13,488, ಪಾಲು ಬಂಡವಾಳ ರೂ. 20.21 ಲಕ್ಷ ಆಗಿದ್ದರೆ 1989–90ರಲ್ಲಿ ಕ್ರಮವಾಗಿ ಸದಸ್ಯತ್ವ ಮತ್ತು ಷೇರು ಬಂಡವಾಳಗಳು 20,549 ಮತ್ತು ರೂ. 48.52 ಲಕ್ಷಕ್ಕೆ ಹೆಚ್ಚಳಗೊಂಡಿತ್ತು. ವಿವಿಧ ಅಭಿವೃದ್ಧಿ ಯೋಜನೆ ಗಳಿಗೆ ತಮ್ಮ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ 1989–90ರಲ್ಲಿ ಈ ಬ್ಯಾಂಕುಗಳು ನೀಡಿದ ಸಾಲ ಮುಂಗಡಗಳು ಈ ರೀತಿ ಯಾಗಿದ್ದವು : ಮಡಿಕೇರಿ ರೂ. 16.95ಲಕ್ಷ, ಸೋಮವಾರ ಪೇಟೆ 15.67 ಲಕ್ಷ ರೂ. ಹಾಗೂ ವೀರರಾಜಪೇಟೆ 28.65 ಲಕ್ಷ ರೂ. 1987–88ರಲ್ಲಿ ಮಡಿಕೇರಿ ಬ್ಯಾಂಕು ರೂ. 17.68 ಲಕ್ಷ ಸಾಲ ನೀಡಿದ್ದರೆ ಸೋಮವಾರಪೇಟೆ ಮತ್ತು ವೀರರಾಜಪೇಟೆ ಬ್ಯಾಂಕುಗಳು ಕ್ರಮವಾಗಿ ನೀಡಿದ ಸಾಲದ ಮೊತ್ತ ರೂ. 23.88 ಲಕ್ಷ ಮತ್ತು ರೂ. 24.91 ಲಕ್ಷ ಆಗಿತ್ತು. ಈ ಮೇಲಿನ ವರ್ಷಗಳ ಸಾಲದಲ್ಲಿ ಬಹು ಭಾಗ ಸಾಲವು ಕಾಫಿ ಬೆಳೆಗೆ ಮೀಸಲಾಗಿತ್ತು. ಸಾಲ ವಸೂಲಾತಿ ಪ್ರಮಾಣ 1989–90ರಲ್ಲಿ ಕನಿಷ್ಠ ಪ್ರಮಾಣ ಶೇ. 11 ಸೋಮವಾರಪೇಟೆ ಬ್ಯಾಂಕಿನದ್ದಾಗಿದ್ದರೆ ಗರಿಷ್ಠ ಪ್ರಮಾಣ ಶೇ. 26 ಮಡಿಕೇರಿ ಮತ್ತು ವೀರರಾಜಪೇಟೆ ಬ್ಯಾಂಕಿನದ್ದಾಗಿತ್ತು.
(ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಸಾಂಪತ್ತಿಕ ಸ್ಥಿತಿಗತಿಗಳು, ಸದಸ್ಯತ್ವ, ಸಾಲ ಮುಂಗಡಗಳ ವಿವರವಾದ ಪಟ್ಟಿಗೆ ಪುಟ 367 ನೋಡಿ).

**ಕೊಡಗು ಕಾಫಿ ಬೆಳೆಗಾರರ ಸಹಕಾರಿ ಸಂಘ**

ಕೊಡಗು ಕಾಫಿ ಬೆಳೆಗಾರರಲ್ಲಿ ಬಹುಸಂಖ್ಯಾತರು (ಸುಮಾರು 23,000) ಚಿಕ್ಕ ಹಿಡುವಳಿದಾರರು ಎಂದರೆ 25 ಎಕರೆಗಿಂತ ಕಡಿಮೆ ಗಾತ್ರದ ತೋಟ ಹೊಂದಿರು ವವರು. ಒಟ್ಟು ಕಾಫಿ ಬೆಳೆಯ ಕ್ಷೇತ್ರದಲ್ಲಿ (ಸುಮಾರು 1.35 ಲಕ್ಷ ಎಕರೆ), ಶೇ. 75ರಷ್ಟು ಭಾಗ ಚಿಕ್ಕ ಹಿಡುವಳಿ ದಾರರ, ಸಾಗುವಳಿದಾರರ ಸಾಗುವಳಿ ಕ್ಷೇತ್ರವಾಗಿದೆ. ಒಂದು ವರದಿಯಂತೆ ಜಿಲ್ಲೆಯಲ್ಲಿ ಇರುವ ನೋಂದಾಯಿತ ಕಾಫಿ ತೋಟಗಳ ಸಂಖ್ಯೆ 53,189 (1991). ಸಂಘದ ಹಲ ವಾರು ಉದ್ದೇಶಗಳಲ್ಲಿ ಚಿಕ್ಕ ಕಾಫಿ ಬೆಳೆಗಾರರಿಗೆ ಬೆಳೆಸಾಲ ಮತ್ತು ಅವಧಿ ಸಾಲಗಳನ್ನು ಒದಗಿಸುವುದು, ಸೂಕ್ತ ಮಾರು ಕಟ್ಟೆಯ ಸೌಲಭ್ಯ, ರಸಗೊಬ್ಬರ ಮತ್ತು ಇತರ ಪರಿಕರಗಳ

ಈ ಕೆಳಗಿನ ತಖ್ತೆಯು ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಸಾಂಪತ್ತಿಕ ಸ್ಥಿತಿಗತಿಗಳು, ಸದಸ್ಯತ್ವ, ಸಾಲ ಮುಂಗಡ ಮುಂತಾದ ವಿವರಗಳನ್ನು ತಿಳಿಸುವುದು.

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಬ್ಯಾಂಕಿನ ಹೆಸರು | ವಿವರಣೆ | | | | | |
|---|---|---|---|---|---|---|---|
| | | ಸದಸ್ಯರ ಸಂಖ್ಯೆ | ಪಾಲು ಬಂಡವಾಳ | ನೀಡಿದ ಸಾಲ | ಠೇವಣಿ | ಪಡೆದ ಸಾಲ | ಲಾಭ(+) ನಷ್ಟ(—) |
| 1980–81 | ಮಡಿಕೇರಿ | 5,290 | 5.23 | 58.81 | 0.33 | 45.30 | + 0.26 |
| | ಸೋಮವಾರಪೇಟೆ | 5,630 | 9.39 | 116.73 | 0.51 | 110.38 | — 0.65 |
| | ವೀರರಾಜಪೇಟೆ | 2,568 | 6.09 | 82.82 | 0.32 | 78.74 | + 0.94 |
| 1985–86 | ಮಡಿಕೇರಿ | 3,052 | 12.29 | 157.38 | 0.76 | 156.54 | — 1.81 |
| | ಸೋಮವಾರಪೇಟೆ | 6,611 | 19.56 | 243.56 | 0.97 | 243.88 | — 5.66 |
| | ವೀರರಾಜಪೇಟೆ | 2,547 | 13.45 | 200.50 | 0.68 | 186.81 | — 0.65 |
| 1989–90 | ಮಡಿಕೇರಿ | 7,676 | 12.13 | 176.18 | 0.99 | 180.00 | — 7.14 |
| | ಸೋಮವಾರಪೇಟೆ | 9,385 | 21.69 | 254.47 | 1.32 | 262.90 | +15.17 |
| | ವೀರರಾಜಪೇಟೆ | 3,488 | 14.70 | 206.96 | 1.37 | 204.85 | + 0.42 |

ಪೂರೈಕೆ, ಕಾಫಿ ಸಂಸ್ಕರಣ ಮುಂತಾದವುಗಳು ಸೇರಿವೆ. ಮೇಲಿನ ಹಲವಾರು ಉದ್ದೇಶಗಳನ್ನು ಸಹಕಾರಿ ರಂಗದಲ್ಲಿ ಸಾಕಾರಗೊಳಿಸಲು 1956 ಜನವರಿ 2ರಂದು ನೊಂದಾಯಿಸಲ್ಪಟ್ಟು ಜಿಲ್ಲಾ ವ್ಯಾಪ್ತಿಯನ್ನು ಹೊಂದಿ ಈ ಸಂಘವು ಮೂಡಿಬಂದಿತು. ಪ್ರಾರಂಭದಲ್ಲಿ (1955-56) ಸಂಘದ ಸದಸ್ಯತ್ವ 143 ಇದ್ದು ಷೇರು ಬಂಡವಾಳ ರೂ. 4,768 ಆಗಿತ್ತು ಎಂದು ಹಿಂದಿನ ವರದಿಗಳು ತಿಳಿಸುತ್ತವೆ. 1961–62ರಲ್ಲಿ ಸದಸ್ಯರ ಸಂಖ್ಯೆ 2,544ಕ್ಕೆ ಮತ್ತು ಷೇರು ಬಂಡವಾಳ ರೂ. 3.56 ಲಕ್ಷಕ್ಕೆ ಹೆಚ್ಚಳಗೊಂಡಿತು.

ಸಂಘವು ತನ್ನ ಸದಸ್ಯರಿಗೆ (ನೋಂದಾಯಿಸಲ್ಪಟ್ಟ ಕಾಫಿ ತೋಟದ ಮಾಲಿಕರಿಗೆ) ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿ ಕಾಫಿ ಬೇಸಾಯ ಕೈಗೊಳ್ಳಲು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ (ನಬಾರ್ಡ್) ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶನದಂತೆ ಒಂದು ಲಕ್ಷ ರೂ. ಮಿತಿಗೊಳಪಟ್ಟ ಬೆಳೆಸಾಲ, ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ನೀಡುತ್ತದೆ. ಅಲ್ಲದೇ ಇತರೇ ವ್ಯವಸಾಯೋಪಯೋಗಿ ಪರಿಕರಗಳಾದ ರಸಗೊಬ್ಬರ, ಕೀಟನಾಶಕ, ಬೇಲಿಹಾಕುವ ಸಲಕರಣೆ, ಮುಂತಾದವುಗಳನ್ನು ಪಡೆಯಲು ಸಾಲದ ರೂಪದಲ್ಲಿ ಸದಸ್ಯರಿಗೆ ನೆರವಾಗುತ್ತದೆ. ಕಾಫಿ ಮಂಡಳಿಯು ತನ್ನ 'ಪೂಲ್ ಫಂಡ್ಸ್‌ನಿಂದ' ಸಂಘಕ್ಕೆ ಬಡ್ಡಿ ರಹಿತ ಹಣಕಾಸಿನ ನೆರವು ನೀಡಿ ಕಾಫಿ ಸಂಗ್ರಹಣಾ ಕೆಲಸಕ್ಕೆ ನೆರವಾಗುವುದು. ಈ ಸಂಘವು ಭಾರತದ ಕಾಫಿ ಮಂಡಳಿಯ 'ಎ' ದರ್ಜೆಯ ಅಧೀಕೃತ ಏಜಂಟರಂತೆ ಕಾರ್ಯ ನಿರ್ವಹಿಸುವುದು. ಸಂಘದ ಸದಸ್ಯತ್ವ ಎ. ಬಿ. ಸಿ. ಎಂಬ ಮೂರು ಪ್ರಭೇದಗಳನ್ನೊಳಗೊಂಡಿದ್ದು ಕ್ರಮವಾಗಿ ಸಾಮಾನ್ಯ ಸದಸ್ಯರು, ರಾಜ್ಯ ಸರ್ಕಾರ ಮತ್ತು ನಾಮಮಾತ್ರ ಸದಸ್ಯರನ್ನು ಇದು ಪ್ರತಿನಿಧಿಸುತ್ತವೆ. 1992 ಮಾರ್ಚ್ ಕೊನೆಯಲ್ಲಿ ಸಂಘವು 8,602 'ಎ' ವರ್ಗದ, ಒಂದು 'ಬಿ' ವರ್ಗದ ಮತ್ತು 74 'ಸಿ' ವರ್ಗದ ಸದಸ್ಯರನ್ನು ಒಳಗೊಂಡಂತೆ ಒಟ್ಟು ಸದಸ್ಯರ ಸಂಖ್ಯೆ 8,677 ಆಗಿತ್ತು. ಸಂಘದ ಒಟ್ಟು ಪಾಲು ಬಂಡವಾಳ ರೂ. 122.41 ಲಕ್ಷ, ಅದರಲ್ಲಿ ಸದಸ್ಯರ ಪಾಲು ರೂ. 77.79 ಲಕ್ಷ, ಸರ್ಕಾರದ ಪಾಲು 44.62 ಲಕ್ಷ ರೂ. ರಾಜ್ಯ ಸರ್ಕಾರವು ಈ ಸಂಘಕ್ಕೆ 1982–83ರಲ್ಲಿ ನೀಡಿದ ಸಹಾಯದ ಮೊತ್ತ ರೂ. 139.30 ಲಕ್ಷ. ಇದರಲ್ಲಿ

ಹೆಬ್ಬಾಲೆಯಲ್ಲಿ ಕಾಫಿ ಸಂಸ್ಕರಣ ಘಟಕದ ಸ್ಥಾಪನೆಗೆ ನೀಡಿದ ಸಾಲ ರೂ. 78.42 ಲಕ್ಷ, ಪಾಲು ಬಂಡವಾಳ ರೂ. 42.48 ಲಕ್ಷ ರೂ. (ದಾಸ್ತಾನು ಮಳಿಗೆಗಳಿಗೆ ನೀಡಿದ ಸಾಲ, ಸಹಾಯಧನ ಮುಂತಾದವು ಸೇರಿವೆ). ಸಂಘವು ಹೆಬ್ಬಾಲೆ ಮತ್ತು ಹುಣಸೂರಿನಲ್ಲಿ ತಲಾ 10 ಸಾವಿರ ಮೆಟ್ರಿಕ್‌ಟನ್ ಸಾಮರ್ಥ್ಯದ ಸಂಸ್ಕರಣ ಘಟಕಗಳನ್ನು ಹೊಂದಿದೆ; ಹುಣಸೂರು ಘಟಕವನ್ನು ಸಂಘವು 1966ರಲ್ಲಿ ರೂ. 13.5ಲಕ್ಷ ಬೆಲೆಗೆ ಖರೀದಿಸಿದ್ದರೆ, ಹೆಬ್ಬಾಲೆ ಸಂಸ್ಕರಣ ಕೇಂದ್ರವನ್ನು ಸಂಘವೇ 1987ರಲ್ಲಿ ರಾಜ್ಯ ಸರ್ಕಾರ ಮತ್ತು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಸಹಾಯದಿಂದ ಸ್ಥಾಪಿಸಿದೆ. ಮತ್ತು ಈ ಘಟಕಗಳಿಗೆ ಇದುವರೆಗೆ ಖರ್ಚು ಮಾಡಿದ ಹಣ ಸುಮಾರು ರೂ. 190 ಲಕ್ಷ. ಸಂಘವು ಜಿಲ್ಲೆಯಾದ್ಯಂತ ವ್ಯಾಪಿಸಿದ 39 ಕೇಂದ್ರಗಳಿಂದ ಕಚ್ಚಾ ಕಾಫಿ ಬೀಜಗಳನ್ನು ಸಂಗ್ರಹಿಸಿ ಸಂಸ್ಕರಿಸುತ್ತದೆ.

1991ರ ಮಾರ್ಚ್ ಕೊನೆಯಲ್ಲಿ ಸಂಘವು ಹೊಂದಿದ್ದ ಒಟ್ಟು ಆಸ್ತಿ ಮತ್ತು ಹೊಣೆಗಾರಿಕೆಗಳ ಮೊತ್ತ ಕ್ರಮವಾಗಿ ರೂ. 7.82 ಕೋಟಿ ಮತ್ತು ರೂ. 8.54 ಕೋಟಿ, ಎಂದು ವರದಿ ತಿಳಿಸುತ್ತದೆ. ಒಟ್ಟು ನೌಕರರ ಸಂಖ್ಯೆ 1,258 ಇದ್ದು ಇವರಲ್ಲಿ 1,037 ಕಾಯಂ ಕಾರ್ಮಿಕರು. 1992–93ನೇ ಸಾಲಿನ ಸಂಘದ ಆಡಳಿತವು 24 ಜನರ ನಿರ್ದೇಶಕ ಮಂಡಳಿಯಿಂದ ನಡೆಸಲ್ಪಡುತ್ತಿದ್ದು ಅದರಲ್ಲಿ ಆರು ಮಂದಿ ರಾಜ್ಯ ಸರ್ಕಾರದ ಪ್ರತಿನಿಧಿಗಳು ಮತ್ತು ಒಬ್ಬರು ಹಣಕಾಸು ಸಂಸ್ಥೆಯ ಪ್ರತಿನಿಧಿ ಇರುವರು. ಕಳೆದ 30 ವರ್ಷಗಳಿಂದ ಲಾಭ ಗಳಿಸುತ್ತಿದ್ದ ಸಂಘವು 1986–87ರಿಂದ ನಿರಂತರವಾಗಿ ನಷ್ಟದಲ್ಲಿ ಮುಂದುವರೆಯುತ್ತಿದ್ದು 1991ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಒಟ್ಟುಗೂಡಿದ ನಷ್ಟದ ಮೊತ್ತ ರೂ. 121.92 ಲಕ್ಷ ಎಂದು ವರದಿಯಾಗಿದೆ. ನಷ್ಟಕ್ಕೆ ಬಹು ಮುಖ್ಯವಾದ ಕಾರಣಗಳಲ್ಲಿ 1985–86 ರಿಂದ ಕಾಫಿ ಸಂಗ್ರಹಣಾ ಏಜಂಟರಿಗೆ ನೀಡುತ್ತಿದ್ದ ಸಂಭಾವನೆಯಲ್ಲಾದ ಬದಲಾವಣೆಯಿಂದ ಬಂದ ಕೊರತೆ, ಹೆಬ್ಬಾಲೆಯಲ್ಲಿ ಪ್ರಾರಂಭವಾದ ಕಾಫಿ ಸಂಸ್ಕರಣ ಘಟಕಗಳಲ್ಲಿ ಉತ್ಪಾದನಾ ಸಾಮರ್ಥ್ಯದ ಸಂಪೂರ್ಣ ಬಳಕೆ ಆಗದೆ ಇರುವುದು, ಕಟ್ಟಡ ಯಂತ್ರೋಪಕರಣಗಳ ಮೇಲಿನ ಸವಕಳಿ, ಸಾಲಗಳ ಮೇಲಿನ ಬಡ್ಡಿ, ಮುಂತಾದವು ಎಂದು ಸೂಚಿಸಲಾಗಿದೆ.

(ಸಂಘದ ಕಾರ್ಯ ಪ್ರಗತಿಯ ವಿವರವಾದ ಪಟ್ಟಿಯನ್ನು ಪುಟ 369ರಲ್ಲಿ ಕೊಟ್ಟಿದೆ).

### ಬೇಸಾಯ ಸಹಕಾರ ಸಂಘಗಳು

ಇಂದು ಹಲವಾರು ಕಾರಣಗಳಿಂದ ನಿಷ್ಕ್ರಿಯಗೊಂಡಿರುವ ಮತ್ತು ವಿಸರ್ಜನೆಯ ಹಂತ ತಲುಪಿರುವ ಈ ಬೇಸಾಯ ಸಹಕಾರ ಸಂಘಗಳ ಮೂಲೋದ್ದೇಶಗಳು ಹೀಗಿವೆ. ತುಂಡು ಒಡೆತನದ ಭೂಮಿಯನ್ನು ಒಂದುಗೂಡಿಸಿ ಸಾಗುವಳಿ ಮಾಡುವುದು, ಸಾಮೂಹಿಕ ಶ್ರಮ ಹಾಗೂ ಹಣಕಾಸುಗಳ ಕ್ರೋಢೀಕರಣ ; ಸಂಘಟಿತ ಯತ್ನದಿಂದ ಆಧುನಿಕ ಬೇಸಾಯ ಕ್ರಮಗಳನ್ನು ಅಳವಡಿಸಿಕೊಳ್ಳುವುದು ; ಮತ್ತು ಹೀಗೆ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ದುಡಿಮೆಗೆ ತಕ್ಕ ಪ್ರತಿಫಲ ಪಡೆಯುವಂತೆ ಮಾಡುವುದು. ಈ ಸಂಘಗಳನ್ನು ಜಂಟೀ ಬೇಸಾಯ ಸಹಕಾರ ಸಂಘ ಮತ್ತು ಸಾಮೂಹಿಕ ಬೇಸಾಯ ಸಹಕಾರಿ ಸಂಘ ಎಂದು ಎರಡು ಬಗೆಯಲ್ಲಿ ವರ್ಗೀಕರಿಸಬಹುದು. ಇಂದು ಜಿಲ್ಲೆಯಲ್ಲಿ ನಾಲ್ಕು ಜಂಟೀ (ಜಾಯಿಂಟ್) ಬೇಸಾಯ ಸಂಘಗಳು ಹಾಗೂ ಏಳು ಸಾಮೂಹಿಕ ('ಕಲೆಕ್ಟಿವ್') ಬೇಸಾಯ ಸಂಘಗಳಿದ್ದು, ಬಹು ಪಾಲು ಅವು ನಿಷ್ಕ್ರಿಯಗೊಂಡಿವೆ ಅಥವಾ ಸಮಾಪನಗೊಂಡಿವೆ. ಜಂಟೀ ಬೇಸಾಯ ಸಹಕಾರ ಸಂಘಗಳು ಸೋಮವಾರಪೇಟೆ ತಾಲೂಕಿನ ದುಂಡಳ್ಳಿ (1952), ಕಿರುಬ್ಯೆಲು (1955) ಮತ್ತು ನಿಲುವಾಗಿಲು (1957) ಗಳಲ್ಲಿ ಪ್ರಾರಂಭಿಸಲ್ಪಟ್ಟವು. ನಾಲ್ಕನೇಯದು ವೀರರಾಜಪೇಟೆ ತಾಲೂಕಿನ ತಿತಿಮತಿಯಲ್ಲಿ ಕೇವಲ ಹರಿಜನ ಮತ್ತು ಗಿರಿಜನರ ಪುರೋಭಿವೃದ್ಧಿಗಾಗಿ 1973ರಲ್ಲಿ ಪ್ರಾರಂಬಿಸಲ್ಪಟ್ಟಿದ್ದು, ಇಂದು ಅದು ಅಸ್ತಿತ್ವದಲ್ಲಿ ಇಲ್ಲ. ಸಾಮೂಹಿಕ ಬೇಸಾಯ ಸಹಕಾರಿ ಸಂಘಗಳು ಮಡಿಕೇರಿ ತಾಲೂಕಿನ ಅಯ್ಯನಗೇರಿ, ಚೇರಂಗಾಲ, ಮರಗೋಡು, ಕಿರಂಗಾಲ, ತಣ್ಣಿಮಾನಿ, ತಾವೂರು ಮತ್ತು ಸಣ್ಣ ಪುಲಿಕೋಟಿಗಳಲ್ಲಿ 1956–57ರ ಅವಧಿಯಲ್ಲಿ ಪ್ರಾರಂಬಿಸಲ್ಪಟ್ಟವು. ಇಂದು ಎಲ್ಲವೂ ಸಮಾಪನ ಹಂತದಲ್ಲಿವೆ.

ಜಿಲ್ಲೆಯ ಮೊದಲನೇಯ ಬೇಸಾಯ ಸಹಕಾರ ಸಂಘವು ಪ್ರಾಯೋಗಿಕವಾಗಿ 1952ರಲ್ಲಿ ದುಂಡಳ್ಳಿಯಲ್ಲಿ 23 ಜನ ಭೂರಹಿತ, ಸಾಲದ ಹೊರೆಯಿಂದ ನರಳುತ್ತಿದ್ದ ಬೇಸಾಯ ಕಾರ್ಮಿಕರಿಗೆ ಜೀವನೋಪಾಯ ಕಲ್ಪಿಸಲು ಪ್ರಾರಂಭಿಸಲಾಯಿತು. ಸರ್ಕಾರವು ಈ ಯೋಜನೆಗೆ ಗುತ್ತಿಗೆ ಆಧಾರದ ಮೇಲೆ 16ಎಕರೆ ಜಮೀನು ಮತ್ತು ಹಣಕಾಸಿನ ನೆರವು ನೀಡಿ ಏಲಕ್ಕಿ ಬೆಳೆಯಲು ಪ್ರೋತ್ಸಾಹಿಸಿತು. ನಾಲ್ಕು ವರ್ಷದ ದುಡಿಮೆಯ ನಂತರ ಈ ಪ್ರಯೋಗವು ಯಶಸ್ವಿ ಎಂದು ಮನಗಂಡು ಮುಂದೆ 1956ರಲ್ಲಿ ಜನಪ್ರಿಯ ಸರ್ಕಾರವು ಅಸ್ತಿತ್ವ

ಕೊಡಗು ಕಾಫಿ ಬೆಳೆಗಾರರ ಸಹಕಾರಿ ಸಂಘದ ಇತ್ತೀಚಿನ ವರ್ಷಗಳಲ್ಲಿಯ ಕಾರ್ಯ ಪ್ರಗತಿ.

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಸದಸ್ಯರ ಸಂಖ್ಯೆ | ಪಾಲು ಬಂಡವಾಳ | ಠೇವಣಿ ಸಂಗ್ರಹಣೆ | ಸಾಲ ಮುಂಗಡ | ಸಾಲ ವಸೂಲಿ (ಶೇ.) | ಕಾಫಿ ಸಂಗ್ರಹಣೆ (ಮೆ.ಟನ್) | ಕಾಫಿ ಖರೀದಿ ಬೆಲೆ | ಲಾಭ(+) ನಷ್ಟ(—) |
|---|---|---|---|---|---|---|---|---|
| 1964–65 | 3,007 | 5.35 | 3.51 | 25.70 | 86 | 2,856 | 61.48 | + 1.30 |
| 1974–75 | 4,322 | 29.56 | 8 88 | 87.80 | 82 | 7,013 | 301.45 | + 4.88 |
| 1984–85 | 7,615 | 110.86 | 42.24 | 154.67 | 87 | 15,708 | 1,904.49 | + 6.71 |
| 1988–89 | 8,394 | 120.83 | 56.40 | 267.30 | 92 | 15,653 | 2,793.35 | —42.34 |
| 1989–90 | 8,593 | 122.47 | 60.82 | 228.58 | 58 | 7,713 | 1,515.11 | —25.93 |
| 1990–91 | 8,600 | 123.92 | 59.40 | 294.31 | 71 | 11,408 | 2,133.81 | —49.61 |
| 1991–92 | 8,602 | 122.41 | 60.80 | 273.33 | 70 | — | — | — |

ದಲ್ಲಿ ಬಂದ ನಂತರ ಕೇಂದ್ರ ಸಹಕಾರಿ ಬ್ಯಾಂಕು 9,500 ರೂ. ಸಾಲದ ನೆರವು ನೀಡಿದ್ದರಿಂದ ಸಂಘದ ಸದಸ್ಯರು ಸಾಲದಿಂದ ಮುಕ್ತರಾದರು. ಈ ಪ್ರಯೋಗವು ಕೊಡಗು ಜಿಲ್ಲೆಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಸಾಮೂಹಿಕ ಬೇಸಾಯ ಸಹಕಾರ ಸಂಘಗಳು ಮೂಡಿಬರಲು ಪ್ರೇರಣೆ ನೀಡಿತು. 1981-82 ರಲ್ಲಿ ಹನ್ನೊಂದು ಬೇಸಾಯ ಸಹಕಾರ ಸಂಘಗಳು ಹೊಂದಿದ್ದ ಸದಸ್ಯತ್ವ 275 ಮತ್ತು ಪಾಲು ಬಂಡವಾಳ ರೂ. 4,000 ಇದ್ದರೆ, ಈ ಸಂಸ್ಥೆಗಳು ಪಡೆದ ಸಾಲ ರೂ. 33,000 ಆಗಿತ್ತು. ಇವುಗಳ ದುಡಿಯುವ ಬಂಡವಾಳ ರೂ. 68,000 ಆಗಿತ್ತು. 1988-89 ರಲ್ಲಿ ಬಹುಪಾಲು ಸಂಘಗಳು ನಿಷ್ಕ್ರಿಯಗೊಂಡಿದ್ದರಿಂದ ಆ ಸಂಘಗಳು ಹೊಂದಿದ್ದ ಸದಸ್ಯರ ಬಲ ಕೇವಲ 29ಕ್ಕೆ ಇಳಿದು ಪಾಲು ಬಂಡವಾಳ ಕೇವಲ ರೂ. 1,000ಕ್ಕೆ ಇಳಿಯಿತು. ಆದರೆ ಇವುಗಳು ಕಾಯ್ದಿಟ್ಟ ಎಲ್ಲ ನಿಧಿಗಳ ಮೊತ್ತ ರೂ. 5,000 ಸೇರಿದಂತೆ ದುಡಿಯುವ ಬಂಡವಾಳ ರೂ. 6,000 ಇತ್ತು.

### ನೀರಾವರಿ ಸಹಕಾರಿ ಸಂಘಗಳು

ಚಿಕ್ಕ ಹಿಡುವಳಿದಾರರು ವೈಯಕ್ತಿಕವಾಗಿ ಸ್ವಂತ ಖರ್ಚಿನಲ್ಲಿ ನೀರಾವರಿ ಸೌಲಭ್ಯವನ್ನು ಪಡೆಯಲು ಆರ್ಥಿಕವಾಗಿ ಲಾಭದಾಯಕವಲ್ಲದ ಸಂದರ್ಭಗಳಲ್ಲಿ ಸಾಮೂಹಿಕವಾಗಿ ನೀರಾವರಿ ಸೌಲಭ್ಯವನ್ನು ಸುಲಭ ಖರ್ಚಿನಲ್ಲಿ ಪಡೆಯಲು ಈ ಸಹಕಾರಿ ಸಂಘಗಳು ಸದಸ್ಯರಿಗೆ ನೆರವಾಗುವುವು. ಇಂದು ಜಿಲ್ಲೆಯಾದ್ಯಂತ ಒಟ್ಟು ಆರು ಇಂತಹ ಘಟಕಗಳು ಸಹಕಾರಿ ರಂಗದಲ್ಲಿ ಇದ್ದು, ನಾಲ್ಕು ಘಟಕಗಳು ಏತನೀರಾವರಿಗೆ ಮೀಸಲಾಗಿದ್ದರೆ ಉಳಿದ ಎರಡು ಸಾಮಾನ್ಯ ನೀರಾವರಿ (ಬಾವಿ ಮೂಲಕ) ಸೌಲಭ್ಯ ಹೊಂದಿರುವಂತವುಗಳು. ಸಾಮಾನ್ಯ ನೀರಾವರಿ ಸಂಘಗಳು 'ಬೆಟರ್ ಫಾರ್ಮಿಂಗ್' ಸಂಘಗಳು ಎಂದು ನೋಂದಾಯಿಸಲ್ಪಟ್ಟಿವೆ. ಸರ್ಕಾರವು ಪ್ರಾರಂಭದಲ್ಲಿ ಈ ಸಂಘಗಳಿಗೆ ಉಚಿತವಾಗಿ ಸುಮಾರು ರೂ. 80,000 ಬೆಲೆ ಬಾಳುವ ಆಯಿಲ್ ಇಂಜಿನ್ ಮತ್ತು ಪಂಪ್‌ಸೆಟ್‌ಗಳನ್ನು ಒದಗಿಸಿ ಸುಮಾರು 50 ಎಕರೆ ಜಮೀನು ನೀರಾವರಿ ಸೌಲಭ್ಯ ಪಡೆಯಲು ಸಹಾಯ ಮಾಡಿತು ಎಂದು 1955-56ರ ಆಡಳಿತ ವರದಿ ತಿಳಿಸುವುದು. ಈ ಸಂಘಗಳಲ್ಲಿ ಕೇವಲ ಒಂದು ಘಟಕವಾದ ವೀರರಾಜಪೇಟೆ ತಾಲೂಕಿನ ಟಿ.ಸೆಟ್ಟಗೇರಿ ಹರಿಜನ ಗಿರಿಜನ ನೀರಾವರಿ ಸಹಕಾರಿ ಸಂಘ (1988)ವು ಕಾರ್ಯ ನಿರ್ವಹಿಸುತ್ತಿದೆ. ಇನ್ನುಳಿದ ಐದರಲ್ಲಿ ಮೂರು ಸಮಾಪನ ಹಂತದಲ್ಲಿದ್ದರೆ ಎರಡು ನಿಷ್ಕ್ರಿಯಗೊಂಡಿವೆ. ನೀರಾವರಿ ಸಂಘಗಳಲ್ಲಿ ವೀರರಾಜಪೇಟೆ ತಾಲೂಕಿನ ಬಲ್ಯಮುಂಡೂರು ಸಹಕಾರಿ ಸಂಘವು (1958) ಅತ್ಯಂತ ಹಳೆಯದು (ಸದ್ಯ ಸಮಾಪನ ಹಂತದಲ್ಲಿದೆ).

### ಕೈಗಾರಿಕಾ ಸಹಕಾರಿ ಸಂಘಗಳು

1950-60ರ ದಶಕದಲ್ಲಿ ಈ ಜಿಲ್ಲೆಯಲ್ಲಿ ಅನೇಕ ಗ್ರಾಮೀಣ ಮತ್ತು ಕುಶಲ ಕೈಗಾರಿಕೆಗಳನ್ನು ಸಹಕಾರಿವಲಯದಲ್ಲಿ ಪ್ರಾರಂಭಿಸುವ ಪ್ರಯತ್ನ ಮಾಡಲಾಯಿತು. ಸಹಕಾರಿ ವಲಯದ ಕೈಗಾರಿಕೆಗಳನ್ನು ನೇಕಾರರ ಸಹಕಾರಿ ಸಂಘಗಳು, ನೇಕಾರೇತರ ಸಹಕಾರ ಸಂಘಗಳು ಹಾಗೂ ಇತರೇ ಕೈಗಾರಿಕಾ ಸಂಘಗಳು ಎಂದು ಸಾಮಾನ್ಯವಾಗಿ ವರ್ಗೀಕರಿಸಬಹುದು. ಈ ಸಹಕಾರಿ ಸಂಸ್ಥೆಗಳ ಮುಖ್ಯ ಉದ್ದೇಶ ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳನ್ನು ಸಹಕಾರಿ ಬಂಡವಾಳದ ಮೂಲಕ ಪ್ರಾರಂಭಿಸುವುದು, ಕುಶಲಕರ್ಮಿಗಳಿಗೆ ಕಚ್ಚಾವಸ್ತು ಮತ್ತು ಹಣಕಾಸಿನ ನೆರವು ನೀಡುವುದು, ಅಲ್ಲದೇ ಸಿದ್ಧ ವಸ್ತುಗಳ ಮಾರಾಟ, ಕುಶಲಕರ್ಮಿಗಳಿಗೆ ತರಬೇತಿ ಮತ್ತು ವ್ಯವಸಾಯ ಆಧಾರಿತ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು, ಮುಂತಾದವುಗಳು.

ಇಂದು ಜಿಲ್ಲೆಯಾದ್ಯಂತ ಮೂರು ಹತ್ತಿ ನೇಕಾರರ ನೋಂದಾಯಿತ ಸಂಘಗಳು ಇದ್ದು ಅವುಗಳಲ್ಲಿ 'ಕೊಡಗು ನೇಕಾರರ ಸಹಕಾರಿ ಸಂಘ' ಮಡಿಕೇರಿ (1951) ಅತ್ಯಂತ ಹಳೆಯದು. ಅನಂತರ 1954ರಲ್ಲಿ ಶನಿವಾರಸಂತೆ ಮತ್ತು ಶಿರಂಗಾಲದಲ್ಲಿ ಎರಡು ಸಂಘಗಳು ಸ್ಥಾಪಿಸಲ್ಪಟ್ಟವು. ಇಂದು ಮೂರೂ ನೇಕಾರರ ಸಂಘಗಳು ಸಮಾಪನ ಹಂತದಲ್ಲಿವೆ. ಸಹಕಾರಿ ವಲಯದಲ್ಲಿ ಕೈಗಾರಿಕೆಗಳು ವ್ಯಾಪಕವಾಗಿ ಮೂಡಿಬರಲು ಸಹಾಯವಾಗುವಂತೆ ಕೂರ್ಗ್ ಸ್ಟೇಟ್ ಔದ್ಯೋಗಿಕ ಸಹಕಾರಿ ಸಂಘವನ್ನು 1954ರಲ್ಲಿ ವೀರರಾಜಪೇಟೆಯಲ್ಲಿ ಪ್ರಾರಂಭಿಸಲಾಯಿತು. (ಸದ್ಯ ಇದು ನಿಷ್ಕ್ರಿಯಗೊಂಡಿದೆ). ಕೊಡಗು ಗೃಹನಿರ್ಮಾಣ ಸಹಕಾರಿ ಸಂಘ 1954ರಲ್ಲಿ ರಚನೆಗೊಂಡ ನಂತರ ಒಂದು ಕಾಲದಲ್ಲಿ ಹೆಚ್ಚುತ್ತಿರುವ ಕಟ್ಟಡ ನಿರ್ಮಾಣ ಕೆಲಸಕ್ಕೆ ಸಹಾಯಕವಾಗಲು ಸಹಕಾರಿ ವಲಯದಲ್ಲಿ ಇಟ್ಟಿಗೆ ತಯಾರಿಸುವ ಪ್ರಯತ್ನವನ್ನು 1955ರಲ್ಲಿ ಮಡಿಕೇರಿಯಲ್ಲಿ ಮಾಡಲಾಯಿತು (ಸದ್ಯಸಂಘವು ಸಮಾಪನ ಹಂತದಲ್ಲಿದೆ). ಮುಂದಿನ ಕೆಲವರ್ಷಗಳಲ್ಲಿ ಕುಂಬಾರರ ಸಹಕಾರಿ ಸಂಘ ಹೊದ್ದೂರು, (1959), ಮೇದಾರರ ಸಹಕಾರಿ ಸಂಘ, ಗುಡ್ಡೇಹೊಸೂರು (1960), ಹರಿಜನರ ಚಾಪೆ ಹೆಣೆಯುವ ಸಹಕಾರಿ ಸಂಘ ಶನಿವಾರಸಂತೆ (1961), ಬೇತೂರು ಹರಿಜನರ ಕುಶಲ ಕೈಗಾರಿಕಾ ಸಂಘ, ನಾಪೋಕ್ಲು (1963), ವಿಶ್ವಕರ್ಮರ

ಸಹಕಾರಿ ಸಂಘ ಹೆಬ್ಬಾಲೆ (1965), ಮುಂತಾಗಿ ಅನೇಕ ಸಂಘಗಳು ಮೂಡಿಬಂದರೂ ಅವು ಹೆಚ್ಚು ಕಾಲ ಬದುಕಲಿಲ್ಲ.

1963–64 ರಲ್ಲಿ ಜಿಲ್ಲೆಯಾದ್ಯಂತ 22 ಕೈಗಾರಿಕಾ ಘಟಕಗಳು ಸಹಕಾರಿ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಅವುಗಳಲ್ಲಿ ಮಡಿಕೇರಿ ಮತ್ತು ವೀರರಾಜಪೇಟೆ ತಾಲೂಕುಗಳಲ್ಲಿ ತಲಾ ಏಳರಂತೆ ಮತ್ತು ಸೋಮವಾರಪೇಟೆ ತಾಲೂಕಿನಲ್ಲಿ 8 ಸಂಘಗಳು ಸ್ಥಾಪಿತವಾಗಿದ್ದವು. ಈ ಕೈಗಾರಿಕೆಗಳಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳು, ಕುಂಬಾರಿಕೆ, ಜೇನುಸಾಕಣೆ, ನೇಕಾರಿಕೆ, ಹಣ್ಣುಗಳ ಸಂಸ್ಕರಣೆ, ಚಾಪೆ ಹೆಣೆಯುವುದು, ಬೆತ್ತದ ಕೈಗಾರಿಕೆ, ಚರ್ಮ ಹದ ಮಾಡುವುದು, ಮುಂತಾದ ವೈವಿಧ್ಯತೆಯಿಂದ ಕೂಡಿದ್ದವು. ಇಂದು ಜಿಲ್ಲೆಯಲ್ಲಿ ಬದುಕಿ ಉಳಿದು ಉತ್ತಮ ಸೇವೆ ಸಲ್ಲಿಸುತ್ತಿರುವ ಗ್ರಾಮೀಣ ಕೈಗಾರಿಕಾ ಸಂಘಗಳಲ್ಲಿ ವೀರರಾಜಪೇಟೆ ಮತ್ತು ಭಾಗಮಂಡಲ ಜೇನು ಕೃಷಿ ಸಂಘಗಳು, ಒಂದೆರೆಡು ದರ್ಜಿ ಸಹಕಾರಿ ಸಂಘಗಳು ; ಶಾಂತಿನಿಕೇತನ ಉಡುಪು ತಯಾರಕರ ಸಹಕಾರಿ ಸಂಘ, ಮಡಿಕೇರಿ (1980) ಮತ್ತು ಸಂತನಾಮದೇವ ಸಹಕಾರಿ ಸಂಘ, ಕೊಡ್ಲಿಪೇಟೆ (1981) ಮುಖ್ಯವಾದವುಗಳು.

ಇಂದು (1990) ಜಿಲ್ಲೆಯಾದ್ಯಂತ ಒಟ್ಟು 14 ನೇಕಾರೇತರ ಸಂಘಗಳು ಇದ್ದು ಅವುಗಳಲ್ಲಿ 8 ಇತರೇ ಕೈಗಾರಿಕೆ ಸಂಘಗಳು, 6 ಕರಕುಶಲ ವಸ್ತುಗಳ ಕೈಗಾರಿಕಾ ಸಂಘಗಳು ಸೇರಿರುವವು. ಇವುಗಳ ತಾಲೂಕುವಾರು ವಿಂಗಡನೆ ಈ ರೀತಿ ಇರುವುದು ; ಸೋಮವಾರಪೇಟೆ 7, ಮಡಿಕೇರಿ 4, ಹಾಗೂ ವೀರರಾಜಪೇಟೆ 3. ಕರಕುಶಲ ವಸ್ತುಗಳ ಕೈಗಾರಿಕಾ ಸಂಘಗಳಲ್ಲಿ ಎರಡು, ಇತರೇ ಸಂಘಗಳಲ್ಲಿ ಒಂದು ಸಮಾಪನ ಸ್ಥಿತಿಯಲ್ಲಿವೆ.

1988–89ರಲ್ಲಿ ಕರಕುಶಲ ವಸ್ತುಗಳ ಕೈಗಾರಿಕೆಗಳು ಮತ್ತು ಇತರೇ ಕೈಗಾರಿಕೆಗಳು ಸೇರಿದಂತೆ ಒಟ್ಟು 21 ಘಟಕಗಳು ಸಹಕಾರಿ ವಲಯದಲ್ಲಿ ಇದ್ದು ಆದರಲ್ಲಿ ಐದು ಘಟಕಗಳು ಸಮಾಪನ ಹಂತದಲ್ಲಿವೆ. 21 ಘಟಕಗಳು ಹೊಂದಿದ ಸದಸ್ಯರ ಸಂಖ್ಯೆ 4,775, ಪಾಲು ಬಂಡವಾಳ ರೂ. 2.27 ಲಕ್ಷ, ಅದರಲ್ಲಿ ಸರ್ಕಾರದ ಪಾಲು ರೂ. 54,000. ಈ ಸಂಸ್ಥೆಗಳು ಹೊಂದಿದ ಠೇವುಗಳ ಮೊತ್ತ ರೂ. 5.06 ಲಕ್ಷ. ಸರ್ಕಾರದಿಂದ ರೂ. 22,000, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಿಂದ ರೂ. 14.54 ಲಕ್ಷ ಮತ್ತು ಇತರೆ ಸಂಸ್ಥೆಗಳಿಂದ ರೂ. 32.17 ಲಕ್ಷ ಸೇರಿದಂತೆ ಈ ಸಂಸ್ಥೆಗಳು ಪಡೆದ ಸಾಲದ ಮೊತ್ತ ರೂ. 46.93 ಲಕ್ಷ. ಈ ಸಂಸ್ಥೆಗಳು ಸದಸ್ಯರಿಗೆ ನೀಡಿದ ಸಾಲ ರೂ. 21,000 ಇದ್ದರೆ, ಇವುಗಳಿಗೆ ಬರಬೇಕಾದ ಅವಧಿ ಮೀರಿದ ಸುಸ್ತಿ ಸಾಲ ರೂ. 50,000. ಈ ಸಂಸ್ಥೆಗಳು ಮೇಲಿನ ವರ್ಷದಲ್ಲಿ ಕೊಂಡ ಮತ್ತು ಮಾರಾಟ ಮಾಡಿದ ವಸ್ತುಗಳ ಮೌಲ್ಯ ಕ್ರಮವಾಗಿ ರೂ. 33.42 ಲಕ್ಷ ಮತ್ತು ರೂ. 52.66 ಲಕ್ಷ. ಈ ಈ ವಿಧದ ಸಂಘಗಳಲ್ಲಿ ನಾಲ್ಕು ಘಟಕಗಳು ಗಳಿಸಿದ ಒಟ್ಟು ಲಾಭ ರೂ. 45,000 ಆಗಿತ್ತು ಎಂದು ವರದಿ ತಿಳಿಸುವುದು.

**ಕರ್ನಾಟಕ ಕೈಗಾರಿಕಾ ಸಹಕಾರ ಬ್ಯಾಂಕ್, ಬೆಂಗಳೂರು**

ಸಣ್ಣ ಕೈಗಾರಿಕೆಗಳ ಹಾಗೂ ಕುಶಲಕರ್ಮಿಗಳ ಆರ್ಥಿಕ ಸಮಸ್ಯೆಯನ್ನು ಪರಿಹರಿಸಲು ಸಹಾಯಕವಾಗುವಂತೆ, ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದ ಸ್ವತಂತ್ರವಾದ ಕೊಡಗು ಜಿಲ್ಲಾ ಕೈಗಾರಿಕಾ ಸಹಕಾರಿ ಬ್ಯಾಂಕ್, ಮಡಿಕೇರಿಯಲ್ಲಿ 1966ರಲ್ಲಿ ಆರಂಭಗೊಂಡಿತು. ಮುಂದೆ ಅದು 1972ರಲ್ಲಿ ರಾಜ್ಯ ಮಟ್ಟದಲ್ಲಿ ಪಟ್ಟಣ ಸಹಕಾರಿ ಬ್ಯಾಂಕೆಂದು ಪುನರ್ರಚನೆಗೊಂಡ ಕರ್ನಾಟಕ ಕೈಗಾರಿಕಾ ಸಹಕಾರ ಬ್ಯಾಂಕ್, ಬೆಂಗಳೂರು ಇದರ ಶಾಖೆಯಾಗಿ ಪರಿವರ್ತನಗೊಂಡಿತು. ಇಂದು ಈ ಬ್ಯಾಂಕಿನ ಶಾಖೆಯು ಮೂಲಕ ನೋಂದಾಯಿಸಲ್ಪಟ್ಟ ಎಲ್ಲಾ ವಲಯದ ಸಣ್ಣ ಕೈಗಾರಿಕೆಗಳಿಗೆ ಆದ್ಯತೆಯ ಮೇಲೆ ಅವಧಿ ಸಾಲವನ್ನು ನೀಡುತ್ತಿದೆ. ಕೊಡಗು ಜಿಲ್ಲೆಗೆ ಸೀಮಿತವಾದಂತೆ ಬ್ಯಾಂಕಿನ ಸದಸ್ಯರ ಸಂಖ್ಯೆ 1986ರ ಸಹಕಾರಿ ವರ್ಷದ ಕೊನೆಯಲ್ಲಿ 666 ಇದ್ದು ಷೇರು ಬಂಡವಾಳ ಮತ್ತು ಠೇವುಗಳು ಕ್ರಮವಾಗಿ ರೂ. 1.38 ಲಕ್ಷ ಮತ್ತು ರೂ. 10.05 ಲಕ್ಷ ಇದ್ದು, 1988ರ ಜೂನ್ ಕೊನೆಯಲ್ಲಿ ಸದಸ್ಯತ್ವ 670ಕ್ಕೆ ಹೆಚ್ಚಳಗೊಂಡು ಷೇರು ಬಂಡವಾಳ ಮತ್ತು ಠೇವಣಿಗಳು ಕ್ರಮವಾಗಿ ರೂ. 1.43 ಲಕ್ಷ ಮತ್ತು ರೂ. 14.16 ಲಕ್ಷಕ್ಕೆ ವೃದ್ಧಿಗೊಂಡವು.

1990 ಜೂನ್ ಕೊನೆಯಲ್ಲಿ ಸದಸ್ಯತ್ವ 671 ಇದ್ದು ಪಾಲು ಬಂಡವಾಳ ರೂ. 1.49 ಲಕ್ಷ ಆಗಿತ್ತು. ಬ್ಯಾಂಕು ಸಂಗ್ರಹಿಸಿದ್ದ ಠೇವಣಿ ಮತ್ತು ನೀಡಿದ ಸಾಲ ಮುಂಗಡಗಳು ಕ್ರಮವಾಗಿ ರೂ. 21.09 ಲಕ್ಷ ಮತ್ತು ರೂ. 36.51 ಲಕ್ಷ. (ಸಾಲ ಮುಂಗಡದಲ್ಲಿ ರೂ. 4.93 ಲಕ್ಷ ಅಭಿವೃದ್ಧಿ ಸಾಲವೂ ಸೇರಿದೆ). ಭಾರತೀಯ ರಿಜರ್ವ್ ಬ್ಯಾಂಕ್ ಸಾಲದ ಪುನರ್ಧನ ಯೋಜನೆಯ ಅನುಸಾರ ಜಿಲ್ಲೆಯಾದ್ಯಂತ ಈ ಬ್ಯಾಂಕು ನೀಡಿದ ಸಾಲದ ಮೊತ್ತ 89–90ರಲ್ಲಿ ರೂ. 8.78 ಲಕ್ಷ ಇದ್ದರೆ, 88–89ರಲ್ಲಿ ರೂ. 15.83 ಲಕ್ಷ ಇತ್ತು ಮತ್ತು ಆದರ ಹಿಂದಿನ ವರ್ಷ ನೀಡಿದ ಸಾಲದ ಪ್ರಮಾಣ

ರೂ.15.68ಲಕ್ಷ ಆಗಿತ್ತು. ಸದರಿ ವರ್ಷಗಳಲ್ಲಿಯೇ ಬ್ಯಾಂಕು ತನ್ನ ಸ್ವಂತ ಹಣದಿಂದ ನೀಡಿದಸಾಲ ಮುಂಗಡಗಳು ಕ್ರಮವಾಗಿ ರೂ. 22.80 ಲಕ್ಷ (89–90), ರೂ. 17.23 ಲಕ್ಷ (88–89) ಮತ್ತು ರೂ. 9.82 ಲಕ್ಷ (87–88).

**ಜೇನು ಮತ್ತು ಮೇಣ ಉತ್ಪಾದಕರ ಸಂಘ**

ಹಿಂದಿನಿಂದಲೂ ವ್ಯವಸಾಯದೊಂದಿಗೆ ಪೂರಕ ಗ್ರಾಮೀಣ ಉದ್ಯೋಗವಾಗಿ ನಡೆದುಕೊಂಡು ಬರುತ್ತಿರುವ ಜೇನುಸಾಕಣೆಯನ್ನು ಶಾಸ್ತ್ರೀಯವಾಗಿ ಅಭಿವೃದ್ಧಿಗೊಳಿಸಲು ಮತ್ತು ಜೇನು ಕೃಷಿಕರಿಗೆ ಲಾಭದಾಯಕವಾದ ಮಾರಾಟ ಬೆಲೆಯನ್ನು ಒದಗಿಸುವ ಉದ್ದೇಶದಿಂದ ಕೊಡಗು ಜೇನು ಮತ್ತು ಮೇಣ ಉತ್ಪಾದಕರ ಮಾರಾಟ ಸಹಕಾರ ಸಂಘವನ್ನು 1936ರಲ್ಲಿ ವೀರರಾಜಪೇಟೆಯಲ್ಲಿ ಪ್ರಾರಂಭಿಸಲಾಯಿತು. ಈ ಸಂಘದ ಸ್ಥಾಪನೆಗೆ ಮೂಲ ಪ್ರೇರಣೆ ಮತ್ತು ಮಾರ್ಗದರ್ಶಿಗಳು ಅಂದಿನ ಪೊನ್ನಂಪೇಟೆಯ ರಾಮಕೃಷ್ಣಾಶ್ರಮದ ಶಾಂಭವಾನಂದಜಿ ಸ್ವಾಮೀಜಿಯವರು. ಇವರನ್ನು ಕೊಡಗು ಪ್ರಾಂತ್ಯದ ಆಧುನಿಕ ಜೇನುಕೃಷಿಯ ಪ್ರವರ್ತಕರು ಎಂದು ಕರೆಯಬಹುದು. 1952ರಿಂದ ಇತ್ತೀಚೆಗೆ ಜಿಲ್ಲೆಯಲ್ಲಿ ಜೇನು ಕೃಷಿಯು ಒಂದು ಪೂರಕ ಉದ್ಯೋಗವಾಗಿ ಬೆಳೆಯಲು ಸಹಾಯಕವಾಗುವಂತೆ ಪ್ರಯತ್ನಿಸಲಾಗುತ್ತಿದೆ. ಈ ಸಂಘದ ಕಾರ್ಯವ್ಯಾಪ್ತಿಯು ಕೊಡಗು ಜಿಲ್ಲೆಯ ಕಾವೇರಿ ನದಿಯ ದಕ್ಷಿಣ ಭಾಗದ ಪ್ರದೇಶಕ್ಕೆ ಸೀಮಿತವಾಗಿರುತ್ತದೆ (ವೀರರಾಜಪೇಟೆ ತಾಲೂಕು ಪೂರ್ತಿ ಮತ್ತು ಮಡಿಕೇರಿ ತಾಲೂಕಿನ ಕೆಲವು ಭಾಗಗಳು). ಸಂಘದ ಮುಖ್ಯ ಚಟುವಟಿಕೆಗಳಲ್ಲಿ ಸದಸ್ಯರಿಂದ ಜೇನು ಮತ್ತು ಮೇಣವನ್ನು ಕೊಳ್ಳುವುದು, ಅದರ ಶುದ್ಧೀಕರಣ, ವರ್ಗೀಕರಣ, ಮಾರಾಟ, ಸದಸ್ಯರಿಗೆ ಮುಂಗಡ ಸಾಲ ನೀಡುವುದು, ಜೇನುಗೂಡುಗಳನ್ನು ಮತ್ತು ಜೇನು ಕೃಷಿಗೆ ಬೇಕಾಗುವ ಇತರ ಸಲಕರಣೆಗಳನ್ನು, ಕೃತಕ ಮೇಣದ ಹಾಳೆಗಳನ್ನು ಶುದ್ಧವಾದ ಮೇಣದಿಂದ ತಯಾರಿಸಿ ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದು ಮುಂತಾದವುಗಳು ಸೇರಿವೆ. ಇದು ಅಲ್ಲದೇ ಸಂಘವು ಗ್ರಾಮಾಂತರ ಪ್ರದೇಶದ ಜೇನು ಕೃಷಿಕರಿಗೆ ಪ್ರತೀವರ್ಷ 10 ದಿನಗಳ ಜೇನು ಕೃಷಿ ತರಬೇತಿಯನ್ನು ನಡೆಸಿ ಜೇನು ಕೃಷಿಯಲ್ಲಿ ಗ್ರಾಮೀಣ ಜನರ ಆಸಕ್ತಿಯನ್ನು ಹೆಚ್ಚಿಸಿ ಅವರ ಆದಾಯದ ಮಟ್ಟವನ್ನು ಈ ಉಪಕಸುಬಿನ ಮೂಲಕ ವೃದ್ಧಿಸುವಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ, ಪ್ರಯತ್ನ ಮಾಡುತ್ತಿದೆ. ಈ ಸಂಘದ ವ್ಯಾಪ್ತಿಗೆ ಒಳಪಟ್ಟಂತೆ ಜೇನು ಕೃಷಿಯಲ್ಲಿ ತೊಡಗಿರುವವರ ಸಂಖ್ಯೆ ಸುಮಾರು 4,500. ಸಂಘದ ಸದಸ್ಯತ್ವವು ನಾಲ್ಕು ವಿಧವಾಗಿದ್ದು (ಎ) ಸಹಕಾರಿ ಸಂಘಗಳು, (ಬಿ) ಜೇನು ಕೃಷಿಕರು, (ಸಿ) ವ್ಯಾಪಾರಸ್ಥರು ಮತ್ತು (ಡಿ) ರಾಜ್ಯ ಸರ್ಕಾರ ಎಂದು ವಿಂಗಡಿಸಲಾಗಿದೆ. ಸಂಘವು ಜೇನು ಕೃಷಿಕರಿಗೆ ಸರ್ಕಾರ ಮತ್ತು ಖಾದಿಮಂಡಳಿಯಿಂದ ದೊರೆಯುವ ಸಾಲ ಮತ್ತು ಸಹಾಯ ಧನವನ್ನು ವಿತರಣೆ ಮಾಡುವ ಹಾಗೂ ವಸೂಲಿ ಮಾಡುವ ಏಜೆಂಟನಾಗಿಯೂ ಕಾರ್ಯ ನಿರ್ವಹಿಸುತ್ತದೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು 1960 ರಿಂದ ಈ ಸಂಘಕ್ಕೆ ಜೇನು ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಾಲ ಮತ್ತು ಸಹಾಯ ಧನವನ್ನು ನೀಡುತ್ತಿದೆ.

ಸಂಘವು ಗ್ರಾಮಾಂತರ ಪ್ರದೇಶಗಳಲ್ಲಿ ಐದು ಜೇನು ಸಂಗ್ರಹಣಾ ಕೇಂದ್ರಗಳನ್ನು ತೆರೆದಿದ್ದು ಅವುಗಳ ಮೂಲಕ ಜೇನು ಸಂಗ್ರಹಿಸುವ ವ್ಯವಸ್ಥೆ ಮಾಡಿದೆ. ಅಲ್ಲದೇ ಮರಿಜೇನು ಕುಟುಂಬದ ಮಧುವನವನ್ನು ಕೋರಂಗಾಲದಲ್ಲಿ ನಡೆಸುತ್ತಿತ್ತು (1986–1991). ಸಂಘದ ಆರಂಭವು 1936 ರಲ್ಲಿ ಕೇವಲ 53 ಜನ ಸದಸ್ಯರು ಮತ್ತು 314 ರೂ. ಷೇರು ಬಂಡವಾಳದಿಂದ ಆರಂಭಗೊಂಡು ಇಂದು ಬೃಹತ್ ಪ್ರಮಾಣದಲ್ಲಿ ಬೆಳೆದಿದೆ. 1964ರಲ್ಲಿ ಸಂಘದ ಸದಸ್ಯತ್ವವು 724ಕ್ಕೆ ಹೆಚ್ಚಳಗೊಂಡು ಷೇರು ಬಂಡವಾಳ ರೂ. 15,067ಕ್ಕೆ ವೃದ್ಧಿಯಾಯಿತು. ಆ ವರ್ಷ ಸಂಘ ಮಾರಾಟ ಮಾಡಿದ ಜೇನಿನ ಮೌಲ್ಯ ರೂ. 49,831, ಮೇಣದ ಮೌಲ್ಯ ರೂ. 3,351 ಇದ್ದರೆ ಸಂಘದ ವಹಿವಾಟು ಏಳು ಲಕ್ಷ ರೂಪಾಯಿಗೂ ಮೀರಿತ್ತು. 1963 ರಲ್ಲಿ ಸಂಘ ಗಳಿಸಿದ ಲಾಭ ರೂ. 16,859 ಎಂದು ಹಳೆಯ ದಾಖಲೆಗಳು ತಿಳಿಸುತ್ತವೆ.

ರಾಜ್ಯ ಸರ್ಕಾರವು ಸಂಘಕ್ಕೆ ರೂ. 15,000 ಪಾಲು ಬಂಡವಾಳ (1982), ನೀಡಿರುವುದಲ್ಲದೇ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಜೇನುಪೆಟ್ಟಿಗೆ ತಯಾರಿಸುವ ಘಟಕಕ್ಕೆ ರೂ. 1.20 ಲಕ್ಷದ ಸಾಲ ಮತ್ತು ರೂ. 96,000 ಧನ ಸಹಾಯವನ್ನು (1983–84) ಒದಗಿಸಿದೆ, ಸಂಘವು ತನ್ನ ಬಂಡವಾಳದಿಂದ ರೂ. 1.5 ಲಕ್ಷ ಈ ಘಟಕಕ್ಕಾಗಿ ಖರ್ಚು ಮಾಡಿದೆ. 1979–80 ರಲ್ಲಿ ಸಂಘವು ಸದಸ್ಯರಿಂದ ಕೊಂಡ ಜೇನಿನ ಮೌಲ್ಯ ರೂ. 4.43 ಲಕ್ಷ ಆಗಿದ್ದರೆ, ಜೇನು ಮತ್ತು ಮೇಣದ ಮಾರಾಟದ ಮೌಲ್ಯ ರೂ. 5.03 ಲಕ್ಷ ಆಗಿತ್ತು. 1984–85 ರಲ್ಲಿ ಕೊಂಡ ಸರಕಿನ ಬೆಲೆ ಮತ್ತು ಸರಕು ಮಾರಾಟದ ಮೊತ್ತವು ಅನುಕ್ರಮವಾಗಿ ರೂ. 7.63 ಲಕ್ಷ, ರೂ. 12.19 ಲಕ್ಷ ಎಂದು ತಿಳಿದು ಬರುವುದು. 1988–89 ರಲ್ಲಿ ಈ ವ್ಯವಹಾರಗಳು ಕ್ರಮವಾಗಿ

ರೂ. 19.26 ಲಕ್ಷ ಮತ್ತು ರೂ. 25.90 ಲಕ್ಷಕ್ಕೆ ಹೆಚ್ಚಳಗೊಂಡವು.

ಸಂಘವು ಮಾರಾಟ ಮಾಡುವ ಕೊಡಗಿನ (ಅಗ್‌ಮಾರ್ಕ್) ಜೇನು ದೇಶದಲ್ಲೆಲ್ಲಾ ಪ್ರಸಿದ್ಧವಾಗಿದ್ದು ಪ್ರಮುಖ ನಗರಗಳಾದ ಬೆಂಗಳೂರು, ಮದ್ರಾಸ್, ಹೈದರಾಬಾದ್, ಬೊಂಬಾಯಿ, ಅಲಹಾಬಾದ್, ಅಹ್ಮದಾಬಾದ್ ಮತ್ತು ದೆಹಲಿಗಳಲ್ಲಿ ಈ ಜೇನಿಗೆ ವಿಪುಲವಾದ ಬೇಡಿಕೆ ಉಂಟು. ಅನೇಕ ಸಂದರ್ಭಗಳಲ್ಲಿ ಈ ಬೇಡಿಕೆಯನ್ನು ಪೂರೈಸಲಾಗುತ್ತಿಲ್ಲ. ಸಂಘವು ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ನಡೆದ ಅನೇಕ ಪ್ರದರ್ಶನಗಳಲ್ಲಿ ಭಾಗವಹಿಸಿ ಚಿನ್ನದ ಪದಕ ಮತ್ತು ಪಾರಿತೋಷಕಗಳನ್ನು ಪಡೆದಿದೆ. 1941 ರಷ್ಟು ಪೂರ್ವದಲ್ಲಿಯೇ ಸಂಘವು ದೂರದ ಮುಂಬಯಿಯಲ್ಲಿ ಮಾರಾಟ ಸಂಚಾಲಕರನ್ನು ನಿಯಮಿಸಿ ಕೊಡಗಿನ ಜೇನನ್ನು ಪ್ರಚಾರ ಮಾಡುವ ಪ್ರಯತ್ನ ಕೈಗೊಂಡಿತು. ಇದಕ್ಕಾಗಿ ಸರ್ಕಾರವು ಧನ ಸಹಾಯವನ್ನೂ ನೀಡಿತ್ತು, ಅಲ್ಲದೇ 1937 ರಿಂದ 1950ರ ವರೆಗೆ ಒಬ್ಬ ಜೇನು ಕೃಷಿ ಶಿಕ್ಷಕರನ್ನು ನಿಯಮಿಸಿ ಜೇನು ಕೃಷಿ ಕೊಡಗಿನಲ್ಲಿ ಬೇರೂರುವಂತೆ ಪ್ರಯತ್ನಿಸಲಾಯಿತು. ವೀರರಾಜಪೇಟೆಯಲ್ಲಿ (1984) ಹಾಗೂ ಗೋಣಿಕೊಪ್ಪಲಿನಲ್ಲಿ (1988) ಗ್ರಾಮೋದ್ಯೋಗ ಮಳಿಗೆಗಳನ್ನು ತೆರೆಯುವ ಮೂಲಕ ಸಂಸ್ಥೆಯು ಗ್ರಾಮೋದ್ಯೋಗ ವಸ್ತುಗಳನ್ನು ನಿಗದಿತ ಬೆಲೆಗೆ ಮಾರಾಟ ಮಾಡುತ್ತಿದೆ. 1990 ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಸಂಘದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಕ್ರಮವಾಗಿ ರೂ. 9.27 ಲಕ್ಷ ಮತ್ತು ರೂ. 7.21 ಲಕ್ಷ ಎಂದು ವರದಿ ತಿಳಿಸುವುದು. ಸಂಘವು ಸುಸಜ್ಜಿತವಾದ ದಾಸ್ತಾನು ಮಳಿಗೆ ಮತ್ತು ಪ್ರಯೋಗಶಾಲೆಯನ್ನು ಹೊಂದಿದ್ದು, ಸೀಲಿಂಗ್, ಲೇಬಲಿಂಗ್ ಮತ್ತು ಪ್ಯಾಕಿಂಗ್ ಕೆಲಸಗಳನ್ನು ಯಂತ್ರಗಳಿಂದ ಮಾಡಲಾಗುವುದು. 1938 ರಲ್ಲಿಯೇ ಸಂಘವು ಈಗ ಇರುವ ಕಟ್ಟಡವನ್ನು ರೂ. 4,000ಕ್ಕೆ ಸರ್ಕಾರದ ಸಹಾಯಧನದಿಂದ ಖರೀದಿಸಿ ವಿಸ್ತರಿಸಿಕೊಂಡಿತು. ಸಂಘವು 1986 ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿತು. ಇಂದು ಸಂಘದ ನೌಕರರ ಸಂಖ್ಯೆ 25.

(ಇತ್ತೀಚಿನ ದಶಕದಲ್ಲಿ ಸಂಘವು ಸಾಧಿಸಿದ ಪ್ರಗತಿಯ ವಿವರವಾದ ಪಟ್ಟಿಯನ್ನು ಪುಟ 374ರಲ್ಲಿ ಕೊಟ್ಟಿದೆ).

**ಪ್ರಗತಿಪರ ಜೇನು ಕೃಷಿಕರ ಸಹಕಾರಿ ಸಂಘ**

1954ರಲ್ಲಿ ನೋಂದಾಯಿಸಲ್ಪಟ್ಟ ಕೊಡಗು ಪ್ರಗತಿಪರ ಜೇನು ಕೃಷಿಕರ ಸಹಕಾರಿ ಸಂಘದ ಕೇಂದ್ರ ಕಚೇರಿಯು ಮಡಿಕೇರಿ ತಾಲೂಕಿನ ಭಾಗಮಂಡಲದಲ್ಲಿ ಇದ್ದು, ಸಂಸ್ಥೆಯ ಕಾರ್ಯ ವ್ಯಾಪ್ತಿ ಉತ್ತರ ಕೊಡಗಿನ ಪ್ರದೇಶಕ್ಕೆ (ಮಡಿಕೇರಿ ಮತ್ತು ಸೋಮವಾರಪೇಟೆ ತಾಲೂಕುಗಳು) ಸೀಮಿತವಾಗಿರುವುದು.

ಈ ಸಂಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಬಹುಮುಖ್ಯವಾದವುಗಳು; ಸದಸ್ಯರಿಂದ ಜೇನು ಖರೀದಿ, ಅದನ್ನು ಸಂಸ್ಕರಿಸಿ ವರ್ಗೀಕರಣಗೊಳಿಸಿ ಮಾರಾಟ ಮಾಡುವುದು ಅಲ್ಲದೇ ಜೇನು ಕೃಷಿಕರಿಗೆ ಬೇಕಾಗುವ ಸಾಲ ಸೌಲಭ್ಯ ಮತ್ತು ಉದ್ಯಮಕ್ಕೆ ಅವಶ್ಯಕವಾಗಿ ಬೇಕಾಗುವ ಸಲಕರಣೆಗಳನ್ನು ಸುಲಭ ದರದಲ್ಲಿ ಒದಗಿಸುವುದು ಮುಂತಾದವುಗಳು. 1989–90ರಲ್ಲಿ ಸಂಘದ ಸದಸ್ಯರ ಸಂಖ್ಯೆ 1,057 ಇದ್ದು ಬಹುಪಾಲು (905) ನಿಮ್ನ ವರ್ಗಕ್ಕೆ ಸೇರಿದವರು; ಸಂಸ್ಥೆಯ ಪಾಲು ಬಂಡವಾಳ ರೂ. 79,750 ಇದ್ದು ಇದರಲ್ಲಿ ಸದಸ್ಯರ ಪಾಲು ರೂ. 56,900, ಸಹಕಾರಿ ಸಂಸ್ಥೆಗಳ ಪಾಲು ರೂ. 2,820 ಹಾಗೂ ಉಳಿದ ರೂ. 20,000 ಸರ್ಕಾರದ ಬಂಡವಾಳ ಆಗಿತ್ತು. 1989-90ನೇ ವರ್ಷದಲ್ಲಿ ಸಂಘವು ಖರೀದಿಸಿದ ಜೇನು 19,698 ಕೆ.ಜಿ. (ಮೌಲ್ಯ ರೂ. 5.19 ಲಕ್ಷ); ಮಾರಾಟ ಮಾಡಿದ್ದು 46,416 ಕೆ.ಜಿ. (ಮೌಲ್ಯ ರೂ. 23.88 ಲಕ್ಷ), ಅಲ್ಲದೇ 516 ಕೆ.ಜಿ. ಜೇನು ಮೇಣ ಖರೀದಿಸಿ 756 ಕೆ.ಜಿ. ಮಾರಾಟ ಮಾಡಲಾಗಿದೆ. ಸಂಘವು 12 ಜೇನು ಸಂಗ್ರಹಣಾ ಕೇಂದ್ರಗಳನ್ನು ಹೊಂದಿದ್ದು ಬೆಂಗಳೂರು ಸೇರಿದಂತೆ (1984) ಹಲವು ಮಾರಾಟ ಕೇಂದ್ರಗಳನ್ನು ಹೊಂದಿದೆ. 1990 ಮಾರ್ಚ್ ಕೊನೆಯಲ್ಲಿ ಇದ್ದಂತೆ ಸಂಘವು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ನೀಡಬೇಕಾಗಿದ್ದ ವಾಯಿದೆ ಮೀರಿದ ಸಾಲ ರೂ 9.96 ಲಕ್ಷ, ಖಾದೀ ಮಂಡಳಿಯಿಂದ ಜೇನು ಕೃಷಿ ಅಭಿವೃದ್ಧಿಗೆ ಪಡೆದ ಸಾಲ ರೂ. 11.11ಲಕ್ಷ, ಮಂಡಳಿಯಿಂದ ಪಡೆದ ಸಹಾಯಧನ ಮತ್ತು ವಂತಿಗೆ ರೂ. 76,722. ಸಂಘವು ವಿವಿಧ ಸಂಸ್ಥೆಗಳಲ್ಲಿ ವಿನಿಯೋಗಿಸಿದ ಹಣ ರೂ. 2.02 ಲಕ್ಷ ಇದ್ದರೆ ವಿವಿಧ ಸಂಸ್ಥೆಗಳಲ್ಲಿ ಇಟ್ಟ ಠೇವಣಿ ಮೊತ್ತ ರೂ. 3.87 ಲಕ್ಷ. ಸಂಘದ ಕೇಂದ್ರ ಕಚೇರಿ ಕಟ್ಟಡವನ್ನು ಸುಮಾರು ಎರಡು ಲಕ್ಷ ರೂ. ವೆಚ್ಚದಲ್ಲಿ 1961ರಲ್ಲಿ ನಿರ್ಮಿಸಲಾಯಿತು; ಸಂಘದ ಸಿಬ್ಬಂದಿಯ ಸಂಖ್ಯೆ 17.

ಇತ್ತೀಚಿನ ದಶಕದಲ್ಲಿ ಜೇನು ಮತ್ತು ಮೇಣ ಉತ್ಪಾದಕರ ಸಂಘವು ಸಾಧಿಸಿದ ಪ್ರಗತಿಯ ಚಿತ್ರಣ.

(ಮೊತ್ತ ಸಾವಿರ ರೂ.ಗಳಲ್ಲಿ)

| ವರ್ಷ | ಸದಸ್ಯರ ಸಂಖ್ಯೆ | ಷೇರು ಬಂಡವಾಳ | ವಿತರಣೆ ಮಾಡಿದ | ಜೇನು ಉತ್ಪಾದನೆ ಜೇನುಗೂಡುಗಳ ಸಂಖ್ಯೆ | ಜೇನು ಸಂಗ್ರಹಣೆ ಕಿ.ಗ್ರಾಂ. | ಜೇನು ಮಾರಾಟ | ಖಾದಿ ಮಂಡಳಿಯು ಸಹಾಯ ಧನ (ಎ) | ಖಾದಿ ಮಂಡಳಿಯು ಸಾಲ (ಬಿ) | ನಿವ್ವಳ ಲಾಭ |
|---|---|---|---|---|---|---|---|---|---|
| 1978–79 | 914 | 29.80 | 577 | 50,000 | 27,000 | 693.02 | 9.20 | — | 54.60 |
| 1980–81 | 880 | 33.96 | 194 | 50,000 | 25,000 | 653.44 | — | — | 37.46 |
| 1982–83 | 1,064 | 53.10 | 152 | 60,000 | 30,000 | 1,064.17 | 23.20 | 32.50 | 61.36 |
| 1984–85 | 1,114 | 59.19 | 700 | 50,000 | 35,000 | 1,211.07 | 30.67 | 96.15 | 56.93 |
| 1986–87 | 1,211 | 64.77 | 856 | 30,000 | 15,000 | 1,710.24 | 204.50 | 774.50 | 60.66 |
| 1987–88 | 1,152 | 68.63 | 278 | 80,000 | 58,000 | 554.75 | 53.20 | 82.20 | 23.06 |
| 1988–89 | 927 | 71.39 | 832 | 80,000 | 60,000 | 1,971.43 | 59.70 | 58.70 | 126.93 |
| 1989–90 | 973 | 73.20 | 585 | 60,000 | 30,000 | 1,546.60 | 28.20 | 175.70 | 120.58 |
| 1990–91 | 1,097 | 75.53 | 440 | 1,00,000 | 65,000 | 1,768.90 | 9.80 | 200.75 | 179.00 |

ಪ್ರಗತಿಪರ ಜೇನು ಕೃಷಿಕರ ಸಹಕಾರಿ ಸಂಘದ ವಿವಿಧ ಮುಖಗಳ ಪ್ರಗತಿಯ ಚಿತ್ರಣ.

(ಮೊತ್ತ ಸಾವಿರ ರೂ.ಗಳಲ್ಲಿ)

| ವರ್ಷ | ಸದಸ್ಯರ ಸಂಖ್ಯೆ | ಪಾಲು ಬಂಡವಾಳ | ಜೇನು ಸಂಗ್ರಹಣೆ (ಕಿ.ಗ್ರಾ.) | ಜೇನು ಮಾರಾಟ (ರೂ.) | ನಿವ್ವಳ ಲಾಭ |
|---|---|---|---|---|---|
| 1963-64 | 1,142 | 12.73 | 1,100 | 189.72 | 9.95 |
| 1973–74 | 963 | 10.97 | 1,200 | 480.56 | 50.86 |
| 1984-85 | 1,776 | 61.54 | 60,000 | 1,778.19 | 170.89 |
| 1986–87 | 1,834 | 70.29 | 44,415 | 1,965.56 | 52.97 |
| 1987–88 | 927 | 73.58 | 73,244 | 1,837.55 | 101.91 |
| 1988–89 | 1,026 | 78.75 | 73,243 | 2,518.65 | 165.82 |
| 1989–90 | 1,057 | 79.75 | 46,334 | 2,949.75 | 149.18 |

**ಸಹಕಾರಿ ಮಾರಾಟ ಸಂಘಗಳು**

ಸಹಕಾರಿ ಮಾರಾಟ ಸಂಘಗಳ ಮೂಲ ಉದ್ದೇಶ ಮಧ್ಯವರ್ತಿಗಳನ್ನು ದೂರ ಮಾಡಿ ವ್ಯವಸಾಯೋತ್ಪನ್ನಗಳಿಗೆ ಸೂಕ್ತವಾದ ಸ್ಪರ್ಧಾತ್ಮಕ ಬೆಲೆಗಳನ್ನು ಒದಗಿಸುವುದಲ್ಲದೇ "ಪತ್ತು ಮತ್ತು ಮಾರಾಟದ ಜೋಡಣೆ" ಸೌಲಭ್ಯವನ್ನು ಒದಗಿಸುವುದು. ಈ ಸಂಘಗಳು ಸದಸ್ಯರಿಗೆ ವ್ಯವಸಾಯ ಉಪಕರಣ, ರಸಗೊಬ್ಬರ ಮತ್ತು ಇತರ ನಿಯಂತ್ರಿತ ಸರಕುಗಳನ್ನು ನ್ಯಾಯ ಬೆಲೆಗೆ ವಿತರಿಸುತ್ತವೆ. ಕೊಡಗು ಜಿಲ್ಲೆಯಲ್ಲಿ ಸಹಕಾರಿ ಮಾರಾಟದ ವ್ಯವಸ್ಥೆಯನ್ನು ಬಹು ಹಿಂದೆ ಅಂದರೆ 1924 ರಲ್ಲಿಯೇ ಬಳಕೆಯಲ್ಲಿ ತರಲಾಯಿತು. ಮಡಿಕೇರಿ ತಾಲೂಕಿನ ಕಡಿಯತ್‌ನಾಡ್ ವ್ಯವಸಾಯ ಉತ್ಪನ್ನ ಸಹಕಾರಿ ಮಾರಾಟ ಸಂಘ (1924) ಇವುಗಳಲ್ಲಿ ಮೊದಲನೇಯದು. (ಸದ್ಯ ಇದು ಸಮಾಪನ ಸ್ಥಿತಿಯಲ್ಲಿ ಇದೆ). ಈ ರೀತಿಯ ಎರಡನೇಯ ಸಂಘ ವೀರರಾಜಪೇಟೆಯಲ್ಲಿ 1931ರಲ್ಲಿ ಪ್ರಾರಂಭವಾಯಿತು. ಸೋಮವಾರಪೇಟೆ ತಾಲೂಕಿನ ಶನಿವಾರಸಂತೆಯಲ್ಲಿ 1936 ರಲ್ಲಿ ಮೂರನೇಯ ಸಂಘ ಪ್ರಾರಂಭವಾಯಿತು. ಬತ್ತಕ್ಕೆ ಸೂಕ್ತವಾದ ಮಾರುಕಟ್ಟೆ ಒದಗಿಸುವುದೇ ಈ ಸಂಘಗಳ ಉದ್ದೇಶವಾಗಿತ್ತು.

ಈ ಜಿಲ್ಲೆಯಲ್ಲಿ ಸಾಮಾನ್ಯ ಸಹಕಾರೀ ಮಾರಾಟ ಸಂಘಗಳಲ್ಲದೇ ವಿಶೇಷ ಬೆಳೆಗಳಾದ ಏಲಕ್ಕಿ, ಅಡಿಕೆ, ತೆಂಗು, ಕಿತ್ತಳೆ ಮುಂತಾದ ಬೆಳೆಗಾರರ ಹಿತರಕ್ಷಣೆಯ ದೃಷ್ಟಿಯಿಂದ ವಿಶೇಷವಾದ ಸಹಕಾರಿ ಮಾರಾಟ ಸಂಘಗಳಿವೆ. ಅವುಗಳಲ್ಲಿ ಕೊಡಗು ಏಲಕ್ಕಿ ಸಹಕಾರಿ ಮಾರಾಟ ಸಂಘ, ಮಡಿಕೇರಿ, (1935), ಕಾವೇರಿ ಏಲಕ್ಕಿ ಸಹಕಾರಿ ಮಾರಾಟ ಸಂಘ, ಭಾಗಮಂಡಲ, (1939) (ಸದ್ಯ ಸಮಾಪನ ಹಂತದಲ್ಲಿದೆ), ಕೊಡಗು ಕಿತ್ತಳೆ ಬೆಳೆಗಾರರ ಸಹಕಾರ ಮಾರಾಟ ಸಂಘ, ಗೋಣಿಕೊಪ್ಪಲು (1942), ಕುಶಾಲನಗರ ಹಣ್ಣು, ತರಕಾರಿ, ಸಂಸ್ಕರಣ ಸಹಕಾರಿ ಸಂಘ (1953) (ಸದ್ಯ ಸಮಾಪನ ಹಂತದಲ್ಲಿದೆ), ಜೈಹಿಂದ್ ಅಡಿಕೆ ಮಾರಾಟ ಸಹಕಾರಿ ಸಂಘ, ಪೆರಾಜೆ (1954), ಮಡಿಕೇರಿ ತಾಲೂಕು (ಸದ್ಯ ಸಮಾಪನ ಹಂತದಲ್ಲಿದೆ), ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಸಹಕಾರಿ ಸಂಘ, ಮಡಿಕೇರಿ (1967) ಮತ್ತು ಕೊಡಗು ಜಿಲ್ಲಾ ಮೀನು ಮಾರಾಟಗಾರರ ಸಹಕಾರಿ ಸಂಘ, ಮಡಿಕೇರಿ (1978) (ಸದ್ಯ ಸ್ಥಗಿತಗೊಂಡಿದೆ), ಇವು ಬಹು ಮುಖ್ಯವಾದ ವಿಶೇಷ ಉತ್ಪನ್ನಗಳ ಮಾರಾಟ ಸಂಘಗಳು.

ಈ ಎಲ್ಲಾ ಪ್ರಾಥಮಿಕ ಸಹಕಾರಿ ಮಾರಾಟ ಸಂಘಗಳ ಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸಲು, ಮತ್ತು ಇಡೀ ಜಿಲ್ಲೆಗೆ ಸಹಕಾರಿ ಮಾರಾಟ ವ್ಯವಸ್ಥೆಯಲ್ಲಿ ಕೇಂದ್ರ ಸಂಸ್ಥೆಯಾಗಿ ವ್ಯವಹರಿಸಲು, ಸರ್ಕಾರದ ಏಜಂಟರಂತೆ ಕೆಲಸ ಮಾಡಲು ಕೊಡಗು ಜಿಲ್ಲಾ ಸಹಕಾರಿ ಮಹಾಮಂಡಳ 1942 ರಲ್ಲಿ ವೀರರಾಜಪೇಟೆಯಲ್ಲಿ ಸ್ಥಾಪಿಸಲಾಯಿತು. ಇಂದು ಜಿಲ್ಲೆಯಾದ್ಯಂತ 16 ಸಾಮಾನ್ಯ ಸಹಕಾರಿ ಮಾರಾಟ ಸಂಘಗಳು, 7 ವಿಶೇಷ ಮಾರಾಟ ಸಂಘಗಳು ಮತ್ತು ಒಂದು ಮಾರಾಟ ಮಹಾಮಂಡಳ ಸೇರಿ ಒಟ್ಟು 24 ಸಹಕಾರಿ

ಮಾರಾಟ ಸಂಘಗಳು ಉಂಟು. ಇವುಗಳಲ್ಲಿ ಏಳು ಸಂಘಗಳು ಸಮಾಪನ ಸ್ಥಿತಿಯಲ್ಲಿ ಇದ್ದರೆ ಒಂದು ಸಂಘವು ಮುಚ್ಚಿ ಹೋಗಿದೆ.

ಸಾಮಾನ್ಯ ಸಂಘಗಳು ವಿಶೇಷವಾಗಿ ಬತ್ತ ಮಾರಾಟ ಸಂಘಗಳಾಗಿದ್ದು ಇವುಗಳ ಕಾರ್ಯವ್ಯಾಪ್ತಿ ಸೀಮಿತವಾಗಿರುವುದು; ಇತರ ಜಿಲ್ಲೆಗಳಂತೆ ಒಂದು ತಾಲೂಕಿಗೆ ಸೀಮಿತವಾಗಿರುವುದಿಲ್ಲ. 1949–50 ರಲ್ಲಿ ಜಿಲ್ಲೆಯಾದ್ಯಂತ 15 ಮಾರಾಟ ಸಹಕಾರಿ ಸಂಘಗಳು ಇದ್ದವು. ಅವುಗಳ ಸದಸ್ಯತ್ವ 3,711 ಆಗಿತ್ತು. ಕೇಂದ್ರ ಮಾರಾಟ ಮಹಾಮಂಡಳ ಹೆಚ್ಚುವರಿ ಬತ್ತವನ್ನು ಇತರ ಸಂಘಗಳಿಂದ ಸಂಗ್ರಹಿಸಿ ಮೈಸೂರು ಮತ್ತು ಕೇರಳ ಪ್ರದೇಶಗಳಿಗೆ ರಫ್ತು ಮಾಡುತ್ತಿತ್ತು. 1955–56 ರಲ್ಲಿ ಮತ್ತು ಮುಂದಿನ ವರ್ಷಗಳಲ್ಲಿ ಅಖಿಲ ಭಾರತ ಗ್ರಾಮೀಣ ಸಾಲ ಸರ್ವೇಕ್ಷಣ ಸಮಿತಿ ವರದಿ (1954)ಯ ಅನ್ವಯ ಸಹಕಾರಿ ರಂಗದಲ್ಲಿ ಮಾರುಕಟ್ಟೆ ವ್ಯವಸ್ಥೆ ಬಲವಾಗಿ ಬೇರೂರಲು ಅವಶ್ಯಕವಾದ ದಾಸ್ತಾನು ಮಳಿಗೆ, ರಸ್ತೆ ಸೌಲಭ್ಯ, ಪತ್ತು ಮತ್ತು ಮಾರಾಟದ ಜೋಡಣೆ, ವ್ಯವಸಾಯ ಉತ್ಪನ್ನಗಳ ಸಂಸ್ಕರಣೆ, ಶೀತಾಗಾರ, ಮುಂತಾದ ವ್ಯವಸ್ಥೆಗಳನ್ನು ಜಿಲ್ಲೆಯಾದ್ಯಂತ ಒದಗಿಸಲು ಪ್ರಯತ್ನಿಸಲಾಯಿತು. ಅಲ್ಲದೇ ಸರ್ಕಾರ ವಿಶೇಷ ಮಾರಾಟ ಸಂಘಗಳಿಗೆ ಪಾಲು ಬಂಡವಾಳ, ಸಹಾಯಧನ ಮುಂತಾದ ಸೌಲಭ್ಯಗಳನ್ನು ಒದಗಿಸಿತು. 1955–56 ರಲ್ಲಿ ಸಾಮಾನ್ಯ ಮಾರಾಟ ಸಂಘಗಳ ಸಂಖ್ಯೆ 17ಕ್ಕೆ ವೃದ್ಧಿಗೊಂಡಿತು. ಆ ವರ್ಷ ಈ ಸಂಘಗಳು ಮಾರಾಟ ಮಾಡಿದ ಬತ್ತದ ಪ್ರಮಾಣ 8,000 ಟನ್‌ಗಳು. ಆದೇ ವರ್ಷ ಸರ್ಕಾರವು ಮಾರಾಟ ಸಂಘಗಳು ದಾಸ್ತಾನು ಮಳಿಗೆಗಳನ್ನು ಹೊಂದಲು ಸಹಾಯಕವಾಗುವಂತೆ ರೂ. 4.24 ಲಕ್ಷ ಮೊತ್ತದ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ನೀಡಿತ್ತು. 1977–78 ರಲ್ಲಿ ಇಂಥ 17 ಸಂಘಗಳು 8,298 ಸದಸ್ಯರನ್ನೂ 31.14 ಲಕ್ಷ ರೂ. ಪಾಲು ಬಂಡವಾಳವನ್ನೂ ಹೊಂದಿದ್ದು (ಇದರಲ್ಲಿ ಸರಕಾರದ ಪಾಲು 24.17 ಲಕ್ಷ ರೂ.) 167 ಲಕ್ಷ ರೂ.ಗಳ ಖರೀದಿ ಮತ್ತು 174 ಲಕ್ಷ ರೂ.ಗಳ ಮಾರಾಟ ವ್ಯವಹಾರವನ್ನು ಒಟ್ಟಾಗಿ ಮಾಡಿದ್ದವು.

1981-82ರಲ್ಲಿ ಇಂಥ ಸಂಘಗಳ ಸಂಖ್ಯೆ 13ಕ್ಕೆ ಇಳಿಯಿತು. ಆದರೆ ಸದಸ್ಯತ್ವದ ಸಂಖ್ಯೆ 9,392ಕ್ಕೆ ಹೆಚ್ಚಳಗೊಂಡಿತ್ತು. ಷೇರು ಬಂಡವಾಳ ರೂ. 39.18 ಲಕ್ಷದಲ್ಲಿ ಸರ್ಕಾರದ ಪಾಲು ರೂ. 30.90 ಲಕ್ಷ ಆಗಿತ್ತು. ಈ ವರ್ಷದಲ್ಲಿ ಈ ಸಂಸ್ಥೆಗಳು ಸದಸ್ಯರಿಗೆ ನೀಡಿದ ಸಾಲ ರೂ. 9.68 ಲಕ್ಷ ಆಗಿದ್ದರೆ ಸದಸ್ಯರಿಂದ ಬರಬೇಕಾದ ಬಾಕಿ ರೂ. 7.53 ಲಕ್ಷ ಇತ್ತು. ಈ ಸಂಸ್ಥೆಗಳು ಕೊಂಡ ಸರಕಿನ ಮೌಲ್ಯ ರೂ. 101.32 ಲಕ್ಷ ಆಗಿದ್ದರೆ, ಮಾರಾಟ ಮಾಡಿದ ಸರಕಿನ ಮೌಲ್ಯ ರೂ. 394.74 ಲಕ್ಷ. ಕೆಲವು ಸಂಸ್ಥೆಗಳು ಸೇರಿ ಗಳಿಸಿದ ಲಾಭ ರೂ. 7.40 ಲಕ್ಷ ಆಗಿದ್ದರೆ ಇತರ ಸಂಘಗಳು ಅನುಭವಿಸಿದ ನಷ್ಟದ ಒಟ್ಟು ಮೊತ್ತ ರೂ. 1.20 ಲಕ್ಷ.

1989ರ ಜೂನ್ ಕೊನೆಯಲ್ಲಿ 17 ಸಾಮಾನ್ಯ ಮಾರಾಟ ಸಹಕಾರಿ ಸಂಘಗಳ ಸದಸ್ಯರ ಸಂಖ್ಯೆ 11,751; ಪಾಲು ಬಂಡವಾಳದಲ್ಲಿ ಸರ್ಕಾರದ ಪಾಲು ರೂ. 43.12 ಲಕ್ಷ ಸೇರಿದಂತೆ ರೂ. 54.95 ಲಕ್ಷ ಇತ್ತು. ಈ ಸಂಸ್ಥೆಗಳ ಕಾಯ್ದಿಟ್ಟ ನಿಧಿ ಮತ್ತು ಸಂಗ್ರಹಿಸಿದ ಠೇವಣಿಗಳು ಅನುಕ್ರಮವಾಗಿ ರೂ. 62.22 ಲಕ್ಷ ಮತ್ತು ರೂ. 60.16 ಲಕ್ಷ. ಈ ಸಂಸ್ಥೆಗಳು ಎತ್ತಿದ ಒಟ್ಟು ಸಾಲ ರೂ. 63.17 ಲಕ್ಷ ಆಗಿದ್ದರೆ ಇದರಲ್ಲಿ ಸರ್ಕಾರದ ಕೊಡುಗೆ ರೂ. 12.30 ಲಕ್ಷ, ಕೇಂದ್ರ ಹಣಕಾಸು ಸಂಸ್ಥೆಗಳಿಂದ ರೂ. 48.95 ಲಕ್ಷ ಮತ್ತು ಇತರೇ ಮೂಲದಿಂದ ರೂ. 1.92 ಲಕ್ಷ. ಈ ಸಂಘಗಳು ವರ್ಷದಲ್ಲಿ ನೀಡಿದ ಸಾಲ ರೂ. 7.76 ಲಕ್ಷ ಆಗಿದ್ದರೆ, ಬರಬೇಕಾದ ಸಾಲದ ಬಾಕಿ ರೂ. 4.80 ಲಕ್ಷ ಇತ್ತು. 12 ಸಂಘಗಳು ಒಟ್ಟಾರೆ ಗಳಿಸಿದ ಲಾಭ ರೂ. 4.73 ಲಕ್ಷ ಆಗಿದ್ದರೆ, ಒಂದು ಸಂಸ್ಥೆ ಅನುಭವಿಸಿದ ನಷ್ಟ ರೂ. 1.04 ಲಕ್ಷ ಆಗಿತ್ತು. ಆದೇ ವರ್ಷದಲ್ಲಿ ಈ ಸಂಸ್ಥೆಗಳು ಖರೀದಿಸಿದ ಮತ್ತು ಮಾರಾಟ ಮಾಡಿದ ಸರಕಿನ ಮೌಲ್ಯ ಕ್ರಮವಾಗಿ ರೂ. 525.22 ಲಕ್ಷ, ರೂ. 1,378.60 ಲಕ್ಷ ಎಂದು ವರದಿಯಾಗಿದೆ.

ವಿಶೇಷ ಸಹಕಾರಿ ಮಾರಾಟ ಸಂಘಗಳನ್ನು ಕುರಿತಂತೆ ಜಿಲ್ಲಾ ಮಟ್ಟದ ಹಲವಾರು ಸಂಘಗಳ ಕಾರ್ಯ ಪ್ರಗತಿಯನ್ನು ಮುಂದೆ ಸಮೀಕ್ಷಿಸಲಾಗಿದೆ :

**ಕೊಡಗು ಜಿಲ್ಲಾ ಸಹಕಾರ ಮಾರಾಟ ಮಹಾಮಂಡಳ**

1943 (ಏಪ್ರಿಲ್ 6) ರಲ್ಲಿ ವೀರರಾಜಪೇಟೆಯಲ್ಲಿ ಕಾರ್ಯಾರಂಭ ಮಾಡಿದ, ಕೊಡಗು ಜಿಲ್ಲಾ ವ್ಯಾಪ್ತಿಯನ್ನು ಕಾರ್ಯ ಕ್ಷೇತ್ರವಾಗಿ ಹೊಂದಿರುವ, ಕೊಡಗು ಜಿಲ್ಲಾ ಸಹಕಾರ ಮಾರಾಟ ಮಹಾಮಂಡಳವು, (ಪ್ರಾರಂಭದಲ್ಲಿ) ಜಿಲ್ಲೆಯಾದ್ಯಂತ ಹರಡಿದ್ದ ಪ್ರಾಥಮಿಕ ವ್ಯವಸಾಯ ಉತ್ಪನ್ನಗಳ ಮಾರಾಟ ಸಹಕಾರಿ ಸಂಘಗಳಲ್ಲಿ ಸಮನ್ವಯ ಸಾಧಿಸುವುದು, ಅವುಗಳಿಗೆ ಹಣಕಾಸಿನ ನೆರವು ನೀಡುವುದು, ಅವುಗಳ

ಹೆಚ್ಚುವರಿ ಬತ್ತವನ್ನು ಕೊಂಡು ಮೈಸೂರು, ಕೇರಳಗಳೊಂದಿಗೆ ರಫ್ತು ವ್ಯವಹಾರ ನಡೆಸುವುದು, ಮತ್ತು ಗ್ರಾಹಕರ ಸಹಕಾರಿ ಸಂಘಗಳಿಗೆ ವಸ್ತುಗಳ ಸರಬರಾಜು, ಸದಸ್ಯರ ವ್ಯವಸಾಯ ಉತ್ಪನ್ನಗಳ ಮಾರಾಟ, ದಾಸ್ತಾನು ಮಳಿಗೆಗಳ ನಿರ್ಮಾಣ, ಬತ್ತದ ಸಂಸ್ಕರಣ, ಮುಂತಾದ ಚಟುವಟಿಕೆಗಳನ್ನು ನಡೆಸುತ್ತಾ ತನ್ನ ಮಾರಾಟ ಚಟುವಟಿಕೆಗಳನ್ನು ವಿಸ್ತರಿಸುತ್ತಾ ಮುನ್ನಡೆದಿದೆ. ಇಂದು ಸಂಘವು ಮುಖ್ಯವಾಗಿ ಆಹಾರ ವಸ್ತುಗಳು ಮತ್ತು ದಿನಬಳಕೆ ವಸ್ತುಗಳ ಸರಬರಾಜು, ನಿಯಂತ್ರಿತ ವಸ್ತುಗಳಾದ ಕಬ್ಬಿಣ, ಸಿಮೆಂಟ್, ರಸಗೊಬ್ಬರ ಮುಂತಾದವುಗಳ ವ್ಯಾಪಾರದಲ್ಲಿ ತೊಡಗಿರುವುದಲ್ಲದೇ ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ, ಬೆಂಗಳೂರು ಇದರ ಕೊಡಗು ಜಿಲ್ಲಾ ಪ್ರತಿನಿಧಿಯಾಗಿಯೂ ಕಾರ್ಯ ನಿರ್ವಹಿಸುತ್ತಿದೆ. ಈ ಮೊದಲು ಜಿಲ್ಲೆಯಾದ್ಯಂತ ಲೆವಿ ಬತ್ತವನ್ನು ಸಂಗ್ರಹಿಸುವ ಕೆಲಸವನ್ನು ಸರ್ಕಾರ ಈ ಸಂಸ್ಥೆಗೆ ಒಪ್ಪಿಸಿತ್ತು. ಬೆಳೆಗಳ ರಕ್ಷಣೆಗೆ ಬೇಕಾದ ಬಂದೂಕು ಮತ್ತು ಮದ್ದುಗುಂಡುಗಳನ್ನು ಮಾರಾಟ ಮಾಡುವ ಅನುಮತಿಯನ್ನೂ ಸಂಘವು ಹೊಂದಿದೆ. ಸಂಘದ ಸದಸ್ಯತ್ವವನ್ನು ನಾಲ್ಕು ಬಗೆಯಲ್ಲಿ ವಿಂಗಡಿಸಿದ್ದು ಪ್ರಾಥಮಿಕ ಮಾರಾಟ ಸಂಘಗಳು (ಎ), ಪ್ರಾಥಮಿಕ ಸಹಕಾರ ಸಂಘಗಳು (ಬಿ) ಮತ್ತು ಸಂಸ್ಥೆಯೊಂದಿಗೆ ವ್ಯವಹರಿಸುವ ಬಿಡಿ ಸದಸ್ಯರು (ಸಿ ಮತ್ತು ಡಿ) ವರ್ಗವನ್ನು ಪ್ರತಿನಿಧಿಸುವರು.

1958–59ರಲ್ಲಿ ಈ ಸಂಸ್ಥೆಯು ಹೊಂದಿದ್ದ ಸದಸ್ಯರ ಸಂಖ್ಯೆ 205, ಪಾಲು ಬಂಡವಾಳ ರೂ. 43,005 ಆಗಿದ್ದರೆ ಕೊಂಡ ಮತ್ತು ಮಾರಾಟ ಮಾಡಿದ ವಸ್ತುಗಳ ಮೌಲ್ಯ ಕ್ರಮವಾಗಿ ರೂ. 14.08 ಲಕ್ಷ ಮತ್ತು ರೂ. 13 ಲಕ್ಷ ಆಗಿತ್ತು. ಸಂಘವು ಅಂದು ಗಳಿಸಿದ ಲಾಭವು ರೂ. 15,946 ಆಗಿತ್ತು. 1962–63ರಲ್ಲಿ, ಸದಸ್ಯತ್ವ 201ಕ್ಕೆ ಇಳಿದು ಪಾಲು ಬಂಡವಾಳ ರೂ. 32,955 ಇದ್ದರೆ ಸರಕು ಖರೀದಿ ಮತ್ತು ವಿಕ್ರಯಗಳ ಮೌಲ್ಯ ಕ್ರಮವಾಗಿ ರೂ. 5.88 ಲಕ್ಷ ಮತ್ತು ರೂ. 7.28 ಲಕ್ಷ ಆಗಿತ್ತು. ಆ ವರ್ಷ ಸಂಸ್ಥೆ ಗಳಿಸಿದ ಲಾಭ ರೂ. 20,100.

1984–85ರಲ್ಲಿ ಸಂಘದ ಸದಸ್ಯರ ಸಂಖ್ಯೆ ಸರ್ಕಾರವೂ ಸೇರಿದಂತೆ 2,190 ಇದ್ದು ಇದರಲ್ಲಿ ವ್ಯಕ್ತಿಗತ ಸದಸ್ಯರು 2,103, ಸಹಕಾರಿ ಸಂಸ್ಥೆಗಳು 86. ಆ ವರ್ಷ ಪಾವತಿಯಾದ ಪಾಲು ಬಂಡವಾಳದ ಮೊತ್ತ ರೂ. 5.20 ಲಕ್ಷ. ಆದರಲ್ಲಿ ಸರ್ಕಾರದ ಪಾಲುಗಾರಿಕೆ ರೂ. 2.25 ಲಕ್ಷ ಸೇರಿತ್ತು. 1989–90ರಲ್ಲಿ ಒಟ್ಟು ಸದಸ್ಯರ ಸಂಖ್ಯೆ 3,493 ಇದ್ದು ಅದರ ಹಂಚಿಕೆ ಈ ರೀತಿ ಇತ್ತು. ವ್ಯಕ್ತಿಗತ ಸದಸ್ಯತ್ವ (3,396), ಸಹಕಾರಿ ಸಂಸ್ಥೆಗಳು (96), ಸರ್ಕಾರ (ಒಂದು). ಒಟ್ಟು ಪಾಲು ಬಂಡವಾಳ ರೂ. 6.59 ಲಕ್ಷದಲ್ಲಿ, ಸರ್ಕಾರದ ಪಾಲು ರೂ. 2.5 ಲಕ್ಷ; ವ್ಯಕ್ತಿಗಳ ಪಾಲು ರೂ. 3.84 ಲಕ್ಷ; ಮತ್ತು ಸಂಘಗಳ ಪಾಲು ರೂ. 49,700. 1985-86ರಲ್ಲಿ ಸಂಘವು ಸರ್ಕಾರದಿಂದ 72,000 ರೂ.ಗಳನ್ನು ಸಾಲದ ರೂಪದಲ್ಲಿ ಮತ್ತು 48,000 ರೂ.ಗಳನ್ನು ಸಹಾಯಧನದ ರೂಪದಲ್ಲಿ ಪಡೆದಿತ್ತು. ಸಂಘದ ಶಾಖೆಗಳು ಗೋಣಿಕೊಪ್ಪಲು (1971) ಸೋಮವಾರಪೇಟೆ (1974), ಸಿದ್ದಾಪುರ (1986), ಶ್ರೀಮಂಗಲ (1988)ಗಳಲ್ಲಿ ಪ್ರಾರಂಭಿಸಲ್ಪಟ್ಟವು.

1990–91ರಲ್ಲಿ ಸಂಘವು ಹೊಂದಿದ್ದ ಸದಸ್ಯರ ಸಂಖ್ಯೆ (ವ್ಯಕ್ತಿಗಳು, ಸಂಘ ಸಂಸ್ಥೆಗಳು, ಸರ್ಕಾರ ಸೇರಿದಂತೆ) 3,548 ಆಗಿದ್ದು ಪಾಲು ಬಂಡವಾಳ ರೂ. 6.64 ಲಕ್ಷ ಆಗಿದ್ದು ಅದರಲ್ಲಿ ಸರ್ಕಾರದ ಪಾಲು ರೂ. 2.25 ಲಕ್ಷ ಸೇರಿದೆ. ಸಂಘದ ದುಡಿಯುವ ಬಂಡವಾಳ, ನಿರಖು ಠೇವಣಿ ಮತ್ತು ಕ್ಷೇಮನಿಧಿ ಸೇರಿದಂತೆ ರೂ. 35.34 ಲಕ್ಷ ಆಗಿತ್ತು. ವರದಿ ವರ್ಷದಲ್ಲಿ ಶಾಖೆಗಳೂ ಸೇರಿದಂತೆ ಸಂಘವು ಖರೀದಿಸಿದ ಮತ್ತು ವಿಕ್ರಯಿಸಿದ ಸರಕುಗಳ ಮೌಲ್ಯ ಕ್ರಮವಾಗಿ ರೂ. 266.51 ಲಕ್ಷ ಮತ್ತು ರೂ.308.70 ಲಕ್ಷ ಎಂದು ವರದಿಯಾಗಿದೆ. ಸದರಿ ವರ್ಷದಲ್ಲಿ ಸಂಘವು ಕೇಂದ್ರ ಸಹಕಾರಿ ಬ್ಯಾಂಕಿನಿಂದ ಪಡೆದ ಸಾಲ ರೂ. 18.50 ಲಕ್ಷ ಆಗಿತ್ತು. 1991 ಮಾರ್ಚ್ ಕೊನೆಯಲ್ಲಿ ಇದ್ದಂತೆ ಸಂಘ ಹೊಂದಿದ್ದ ಒಟ್ಟು ಆಸ್ತಿ ಮತ್ತು ಸಾಲಗಳು ಕ್ರಮವಾಗಿ ರೂ. 29.64 ಲಕ್ಷ ಮತ್ತು ರೂ. 11.62 ಲಕ್ಷ ಎಂದು ತಿಳಿದು ಬರುವುದು. ಸಂಘವು ತನ್ನದೇ ಆದ ಅಕ್ಕಿ ಗಿರಣಿಯನ್ನು ಹೊಂದಿರುವುದು. ಸಂಘದ ಆಡಳಿತ ಕಛೇರಿಯ ಮುಖ್ಯ ಕಟ್ಟಡವನ್ನು 1980ರಲ್ಲಿ ಸುಮಾರು ರೂ. 4.89 ಲಕ್ಷ ವೆಚ್ಚದಿಂದ ನಿರ್ಮಿಸಲಾಯಿತು. ಸಂಘದ ಒಟ್ಟು ನೌಕರರ ಸಂಖ್ಯೆ 43(1992). ವಿವಿಧ ಕಾರಣಗಳಿಂದ 1990–91ರ ಸಾಲಿನ ನಷ್ಟವೂ ಸೇರಿದಂತೆ, ಇದುವರೆಗೆ ಸಂಘವು ಅನುಭವಿಸಿದ ನಷ್ಟದ ಮೊತ್ತ ರೂ. 10.14 ಲಕ್ಷ ಎಂದು ವರದಿಯಾಗಿದೆ.

### ಕೊಡಗು ಏಲಕ್ಕಿ ಮಾರಾಟ ಸಹಕಾರ ಸಂಘ

ಕೊಡಗಿನ ಮಸಾಲೆ ಬೆಳೆಗಳಲ್ಲಿ ಮುಖ್ಯವಾದ ಏಲಕ್ಕಿ ಮತ್ತು ಮೆಣಸು ಬೆಳೆಗಾರರಿಗೆ ಸೂಕ್ತವಾದ ಮಾರುಕಟ್ಟೆಯ

ಸೌಲಭ್ಯ ಮತ್ತು ಹಣಕಾಸಿನ ನೆರವು ಸೇರಿದಂತೆ ಇತರೇ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದ ಈ ಸಂಘವು 1939ರಲ್ಲಿ ಕಾರ್ಯಾರಂಭ ಮಾಡಿತು. ಸಂಘದ ಸದ್ಯದ ಚಟುವಟಿಕೆಗಳು : ಏಲಕ್ಕಿ ಬೆಳೆಗಾರರಿಗೆ ಬೆಳೆ ಅಡಮಾನ ಸಾಲ, ದಾಸ್ತಾನು ಮಳಿಗೆ ಸೌಲಭ್ಯ, ಸಂಸ್ಕರಣ ಮತ್ತು ವರ್ಗೀಕರಣ ವ್ಯವಸ್ಥೆ, ವ್ಯವಸಾಯ ಉಪಕರಣ, ರಸಗೊಬ್ಬರ, ನಿಯಂತ್ರಿತ ವಸ್ತುಗಳ ಮತ್ತು ಆಯುಧಗಳ ಪೂರೈಕೆ, ಏಲಕ್ಕಿಯ ರಫ್ತು ಹಾಗೂ ಮಾರಾಟ ಮತ್ತು ಖರೀದಿ ಸೇರಿವೆ. ವ್ಯವಸಾಯ ಪತ್ತಿನ ಸಂಘಗಳು ತನ್ನ ಸದಸ್ಯರಿಗೆ ನೀಡಿದ ಬೆಳೆಸಾಲವನ್ನು ವಸೂಲಿ ಮಾಡುವಲ್ಲಿ ಈ ಸಂಘವು ಅವುಗಳ ಪ್ರತಿನಿಧಿಯಂತೆಯೂ ಕಾರ್ಯ ನಿರ್ವಹಿಸುವುದು (ಪತ್ತು ಮತ್ತು ಮಾರಾಟ ಜೋಡಣೆ). ಏಲಕ್ಕಿ ಹಂಗಾಮಿನಲ್ಲಿ ಸಂಘವು ನಿಯಮಿತವಾಗಿ ವಾರಕ್ಕೆ ಒಂದಾವರ್ತಿಯಂತೆ ಹರಾಜು ಮೂಲಕ ಬೆಳೆಮಾರಾಟ ಮಾಡುವುದು. ಸಕಲೇಶಪುರ, ಮಂಗಳೂರು ಮತ್ತು ತಮಿಳುನಾಡಿನ ವ್ಯಾಪಾರಸ್ಥರು ಹರಾಜಿನಲ್ಲಿ ಭಾಗವಹಿಸುವರು. ಸಾಮಾನ್ಯವಾಗಿ ಹರಾಜು ಮುಗಿದ 15-20 ದಿನಗಳಲ್ಲಿ ಬೆಳೆಗಾರರಿಗೆ ಹಣವನ್ನು ಪಾವತಿ ಮಾಡಲಾಗುವುದು. ಸಂಘವು ತನ್ನ ಈ ಸೇವೆಗೆ ಮಾರಾಟ ಮೌಲ್ಯದ ಶೇ. ಒಂದೂವರೆಯಷ್ಟು ಸೇವಾ ಶುಲ್ಕವನ್ನು ವಿಧಿಸುವುದು. ಬೆಳೆಗಾರರಿಗೆ ಸಂಘವು ಮಾರುಕಟ್ಟೆ ಬೆಲೆಯ ಶೇ. 60ರಷ್ಟನ್ನು ಮುಂಗಡವಾಗಿ ನೀಡುವುದು. ಹರಾಜಿನಲ್ಲಿ 'ಬಿ' ವರ್ಗದ ಸದಸ್ಯರು (ಏಲಕ್ಕಿ ವ್ಯಾಪಾರಿಗಳು ಮತ್ತು ದಳ್ಳಾಳಿಗಳು) ಭಾಗವಹಿಸಬಹುದು.

1951-52ರಲ್ಲಿ ಸಂಘದ ಸದಸ್ಯರ ಸಂಖ್ಯೆ 417, ಷೇರು ಬಂಡವಾಳ ರೂ. 9,010 ಇದ್ದು ಸಂಘವು ನೀಡಿದ ಬೆಳೆಸಾಲ ರೂ. 2.17 ಲಕ್ಷ ಆಗಿದ್ದರೆ ಏಲಕ್ಕಿ ಮಾರಾಟ ಪರಿಮಾಣ 22,708 ಕಿ.ಗ್ರಾಂ. (ಮೌಲ್ಯ ರೂ. 4.10 ಲಕ್ಷ) ಆಗಿದ್ದು ಸಂಘದ ನಿವ್ವಳಲಾಭ 1,614 ರೂ. ಎಂದು ಹಳೆಯ ದಾಖಲೆ ತಿಳಿಸುತ್ತದೆ. ಮುಂದಿನ ದಶಕದಲ್ಲಿ, (1961-62ರಲ್ಲಿ), ಸದಸ್ಯತ್ವ 2,227ಕ್ಕೆ ಹೆಚ್ಚಳಗೊಂಡರೆ ಷೇರು ಬಂಡವಾಳ ರೂ. 2.10 ಲಕ್ಷ, ನೀಡಿದ ಸಾಲ ರೂ. 10.06 ಲಕ್ಷಕ್ಕೆ ಹೆಚ್ಚಳಗೊಂಡಿತ್ತು. ಆ ವರ್ಷ ಮಾರಾಟ ಮಾಡಿದ ಏಲಕ್ಕಿ ಪರಿಮಾಣ 2.42 ಲಕ್ಷ ಕಿ.ಗ್ರಾಂ ಆಗಿದ್ದರೆ (ಮೌಲ್ಯ ರೂ. 30.69 ಲಕ್ಷ), ನಿವ್ವಳಲಾಭ ರೂ. 13,683 ಎಂದು ವರದಿ ತಿಳಿಸುವುದು.

1990ರ ಮಾರ್ಚ್ ಕೊನೆಯಲ್ಲಿ ಸಂಘದ ಸದಸ್ಯರ ಸಂಖ್ಯೆ 4,518 ಇದ್ದು, ರೂ. 8.21 ಲಕ್ಷ ಪಾಲು ಬಂಡವಾಳ ಹೊಂದಿತ್ತು. ಅದರಲ್ಲಿ ಸರ್ಕಾರದ ಪಾಲು ರೂ. 4.29 ಲಕ್ಷ ಮತ್ತು ಸಾಂಬಾರ ಮಂಡಳಿಯ ಪಾಲು ಬಂಡವಾಳ ರೂ. 15,000, 'ಅ' ವರ್ಗದ ಸದಸ್ಯರ ಪಾಲು ಬಂಡವಾಳ ರೂ. 3.39 ಲಕ್ಷ ಆಗಿತ್ತು. 1989-90ರಲ್ಲಿ ಸಂಘವು ಮಾರಾಟ ಮಾಡಿದ ರಸಗೊಬ್ಬರ, ಕ್ರಿಮಿನಾಶಕ ಮತ್ತು ಕಬ್ಬಿಣದ ವಸ್ತುಗಳ ಮೌಲ್ಯ ಕ್ರಮವಾಗಿ ರೂ. 10.97 ಲಕ್ಷ, ರೂ. 4.38 ಲಕ್ಷ, ರೂ. 28.15 ಲಕ್ಷ ಆಗಿದ್ದರೆ, ಆಹಾರ ಧಾನ್ಯಗಳು, ಹಂಚು ಮತ್ತು ಆಯುಧಗಳ ಮಾರಾಟ ಮೌಲ್ಯಗಳು ಕ್ರಮವಾಗಿ ರೂ. 18.71 ಲಕ್ಷ, ರೂ. 0.72 ಲಕ್ಷ ಮತ್ತು ರೂ. 1.28 ಲಕ್ಷ ಆಗಿತ್ತು.

ಸಾಂಬಾರ ಮಂಡಳಿಯು 1985 ರಿಂದ ಮಡಿಕೇರಿಯಲ್ಲಿ ಹರಾಜು ಕೇಂದ್ರವನ್ನು ಪ್ರಾರಂಭಿಸಿದ್ದರಿಂದ ಮತ್ತು ಮಂಡಳಿಯು ಹರಾಜಿನ ಮಾರನೇಯ ದಿವಸವೇ ಬೆಳೆಗಾರರಿಗೆ ಹಣವನ್ನು ಪಾಪತಿ ಮಾಡುತ್ತಿರುವುದರಿಂದ ಮತ್ತು ಸ್ಥಳೀಯ ವ್ಯಾಪಾರಸ್ಥರ ಪೈಪೋಟಿಯಿಂದ ಸಂಘಕ್ಕೆ ಮಾರಾಟಕ್ಕೆ ಬರುವ ಏಲಕ್ಕಿಯ ಪ್ರಮಾಣ ವರ್ಷ ವರ್ಷವೂ ಕಡಿಮೆಯಾಗುತ್ತಿದೆ. 1986-87ರಲ್ಲಿ ಮಾರಾಟಕ್ಕೆ ಬಂದ ಏಲಕ್ಕಿಯ ಪರಿಮಾಣ 20 ಸಾವಿರ ಕಿಲೋಗ್ರಾಮ್ ಆಗಿದ್ದರೆ ಅದರ ಮುಂದಿನ ವರ್ಷ ಕೇವಲ 7,500 ಕಿ.ಗ್ರಾಂ.ಗೆ ಇಳಿಯಿತು. 1989-90ರಲ್ಲಿ ಮಾರಾಟಕ್ಕೆ ಬಂದ ಸರಕು ಕೇವಲ 3,956 ಕಿ.ಗ್ರಾಂ. ಆಗಿತ್ತು. ಆದರೆ 1988-89 ರಲ್ಲಿ ಮಾರಾಟಕ್ಕೆ ಬಂದ ಫಸಲು 12,398 ಕಿ.ಗ್ರಾಂ. ಸಂಘವು ಇತ್ತೀಚಿನ ವರ್ಷಗಳಲ್ಲಿ ಏಲಕ್ಕಿ ಮಾರಾಟಕ್ಕಿಂತಲೂ ಇತರೇ ವಸ್ತುಗಳ ಮಾರಾಟದಲ್ಲಿ ತನ್ನನ್ನು ಹೆಚ್ಚಾಗಿ ತೊಡಗಿಸಿಕೊಂಡಿದೆ.

1982-83 ರಿಂದ ಸಂಘವು ನಿರಂತರವಾಗಿ ನಷ್ಟದಲ್ಲಿ ಮುಂದುವರೆಯುತ್ತಿದ್ದು ನಷ್ಟಕ್ಕೆ ಮುಖ್ಯವಾದ ಕಾರಣಗಳಲ್ಲಿ ಸತತವಾಗಿ ಕುಸಿಯುತ್ತಿರುವ ಏಲಕ್ಕಿ ಬೆಲೆ, ಸದಸ್ಯರು, ಕಮಿಶನ್ ಏಜಂಟರು, ಮುಂತಾದವರಿಂದ ಬರಬೇಕಾದ ಬೆಳೆ ಅಡಮಾನ ಸಾಲ ಮತ್ತು ಇತರ ಸಾಲಗಳ ಹಳೆಯ ಬಾಕಿ ಮುಂತಾದವುಗಳು. ಸಂಘದ ವರದಿ ತಿಳಿಸುವಂತೆ ಸಂಘಕ್ಕೆ 1988-89ರಲ್ಲಿ ಸದಸ್ಯರಿಂದ ಬರಬೇಕಾದ ಸಾಲ ರೂ. 6.25 ಲಕ್ಷ ಆಗಿದ್ದರೆ ವ್ಯಾಪಾರಸ್ಥರಿಂದ ಬರಬೇಕಾದ ಸಾಲದ ಬಾಕಿ ರೂ. 10.23 ಲಕ್ಷ ; ಆ ವರ್ಷ ಸಂಘದ ಒಟ್ಟು ನಷ್ಟ (ಹಿಂದಿನದನ್ನೂ ಸೇರಿಸಿ) ರೂ. 22.17 ಲಕ್ಷ.

ರಾಜ್ಯ ಸರ್ಕಾರವು ಸಂಘಕ್ಕೆ ಇದುವರೆಗೆ ರೂ. 1.92 ಲಕ್ಷವನ್ನು ಸಾಲವನ್ನಾಗಿ ಮತ್ತು ರೂ. 1.73 ಲಕ್ಷವನ್ನು

500ಟನ್ ಸಾಮರ್ಥ್ಯದ ದಾಸ್ತಾನು ಮಳಿಗೆ ಕಟ್ಟಲು ಷೇರು ಬಂಡವಾಳ ರೂಪದಲ್ಲಿ ನೀಡಿರುವುದಲ್ಲದೇ 1990ರಲ್ಲಿ ಷೇರು ಬಂಡವಾಳವನ್ನು ಬಲಪಡಿಸುವ ಉದ್ದೇಶದಿಂದ ಎರಡು ಲಕ್ಷ ರೂ.ಗಳನ್ನು ಕೊಡಮಾಡಿದೆ. ಸಂಘವು ಸೋಮವಾರಪೇಟೆಯಲ್ಲಿ 1975 ರಿಂದ ಶಾಖೆಯನ್ನು ಹೊಂದಿದ್ದು ಅಲ್ಲಿ ಕೇಂದ್ರ ಕಛೇರಿಯ ಶೇ. 40ರಷ್ಟು ವ್ಯವಹಾರ ನಡೆಯುವುದು. ಸಂಘದ ಸದ್ಯದ ನೌಕರರ ಸಂಖ್ಯೆ 18ಕ್ಕೆ ಇಳಿದಿದೆ.

ಸಂಘದ ಆಡಳಿತ ಮಂಡಳಿಯು 20 ಜನ ನಿರ್ದೇಶಕರಿಂದ ಕೂಡಿದ್ದು ಅದರಲ್ಲಿ 17 ಜನರು ಚುನಾಯಿತರು. ಉಳಿದ ಮೂವರಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿ, ಕೇಂದ್ರ ಸಾಂಬಾರ ಮಂಡಳಿಯ ಪ್ರತಿನಿಧಿ ಮತ್ತು ಹಣಕಾಸು ಸಂಸ್ಥೆಯ ಪ್ರತಿನಿಧಿ ಸೇರಿರುವರು. ಇತ್ತೀಚಿನ ವರ್ಷಗಳಲ್ಲಿ ಸಂಘದ ಸಾಧನೆಗಳನ್ನು ಸೂಚಿಸುವ ತಖ್ತೆಯನ್ನು ಪು. 380 ರಲ್ಲಿ ಕೊಟ್ಟಿದೆ.

### ಕಿತ್ತಳೆ ಬೆಳೆಗಾರರ ಸಂಘ, ಗೋಣಿಕೊಪ್ಪಲು

ಕೊಡಗಿನ ಕಾಫಿಯಷ್ಟೇ ರಸಭರಿತವಾದ ಕಿತ್ತಳೆ ಹಣ್ಣು ಪ್ರಸಿದ್ಧ. ಒಂದು ಅಂದಾಜಿನಂತೆ ಉತ್ತಮ ಹಂಗಾಮಿನಲ್ಲಿ ಸುಮಾರು 2,500 ಲಾರಿ ಭರ್ತಿ ಕಿತ್ತಳೆ ಈ ಜಿಲ್ಲೆಯಲ್ಲಿ ಬೆಳೆಯುವರೆಂದು ಹಳೆಯ ವರದಿಗಳಲ್ಲಿ ನಮೂದಿಸಲಾಗಿದೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಸೂಚನೆಯಂತೆ ಕೊಡಗಿನ ಕಿತ್ತಳೆ ಬೆಳೆಗಾರರಿಗೆ ಖಾಸಗಿ ಮಧ್ಯವರ್ತಿಗಳಿಂದ ಉಂಟಾಗುತ್ತಿದ್ದ ಶೋಷಣೆಯನ್ನು ತಪ್ಪಿಸಿ ಸಹಕಾರಿ ಸಂಸ್ಥೆಯ ಆಶ್ರಯದಲ್ಲಿ ಉತ್ತಮ ಮಾರುಕಟ್ಟೆಯ ಸೌಲಭ್ಯ ಒದಗಿಸುವುದಲ್ಲದೇ ಕಿತ್ತಳೆ ಬೇಸಾಯಗಾರರಿಗೆ ಬೇಕಾಗುವ ದುಡಿಯುವ ಬಂಡವಾಳ ಮತ್ತು ಇತರೇ ವಸ್ತುಗಳ ನೆರವು ಒದಗಿಸುವುದನ್ನು ಮುಖ್ಯ ಗುರಿಯಾಗಿ ಹೊಂದಿ ಕೊಡಗು ಕಿತ್ತಳೆ ಬೆಳೆಗಾರರ ಸಹಕಾರೀ ಸಂಘವು ಗೋಣಿಕೊಪ್ಪಲಲ್ಲಿ 1942 ರಲ್ಲಿ ಆರಂಭಗೊಂಡಿತು. ಪ್ರಾರಂಭದಿಂದಲೂ (1942) 1950ರ ವರೆಗೆ ಭಾರತೀಯ ಕೃಷಿ ಸಂಶೋಧನಾ ಮಂಡಳಿಯು ಕೊಡಗಿನ ಕಿತ್ತಳೆ ಮಾರಾಟಕ್ಕೆ ಸಹಾಯಕವಾಗುವಂತೆ 'ಕಿತ್ತಳೆ ಮಾರಾಟ ವ್ಯವಸ್ಥಾಪಕರ' ಸೇವೆಯನ್ನು ಸಂಘಕ್ಕೆ ಒದಗಿಸಿತ್ತು. ಪ್ರಾರಂಭದಲ್ಲಿ (1942–43), ಸಂಘದ ಸದಸ್ಯತ್ವ 167 ಮತ್ತು ಪಾಲು ಬಂಡವಾಳ ಕೇವಲ ರೂ. 2,471 ಇದ್ದು ಆ ವರ್ಷ ಸುಮಾರು 32 ಲಾರಿ ಕಿತ್ತಳೆಯನ್ನು ಸಂಘ ಮಾರಾಟ ಮಾಡಿ ರೂ. 1,704 ನಿವ್ವಳಲಾಭ ಗಳಿಸಿತ್ತು. 1948–49 ರ ಸುಮಾರಿಗೆ ಸಂಘದ ಸದಸ್ಯತ್ವ 395 ಕ್ಕೆ ಹೆಚ್ಚಳಗೊಂಡು ಪಾಲು ಬಂಡವಾಳ ರೂ. 7,260ಗೆ ಹೆಚ್ಚಿಸಲ್ಪಟ್ಟಿತು. ಆ ವರ್ಷ 375 ಲಾರಿ ಭರ್ತಿ ಕಿತ್ತಳೆಯನ್ನು ಮಾರಾಟ ಮಾಡಿ ರೂ. 15,313 ರಷ್ಟು ನಿವ್ವಳಲಾಭ ಗಳಿಸಿತ್ತು. 1951 ರಲ್ಲಿ ಸಂಘದ ಮಾರಾಟದ ವ್ಯವಹಾರ ರೂ. 1.90 ಲಕ್ಷವಾದರೆ, 1956ರಲ್ಲಿ ಇದು ರೂ. 6.50 ಲಕ್ಷವಾಗಿತ್ತು. 1963–64 ರಲ್ಲಿ ಸದಸ್ಯರ ಸಂಖ್ಯೆ 740ಕ್ಕೆ ಹೆಚ್ಚಳಗೊಂಡು ಪಾಲು ಬಂಡವಾಳ ಒಂದು ಲಕ್ಷ ರೂ.ಗೆ ವೃದ್ಧಿಗೊಂಡಿತು. ಜಿಲ್ಲೆಯ ಒಟ್ಟು ಕಿತ್ತಳೆ ಬೆಳೆಯ ಶೇ. 80 ಭಾಗ ಕಿತ್ತಳೆಯು ಈ ಸಂಘದ ಮೂಲಕ ಮಾರಾಟವಾಗುತ್ತಿತ್ತು ಮತ್ತು ಜಿಲ್ಲೆಯ ಕಿತ್ತಳೆ ಬೆಳೆಗಾರರಲ್ಲಿ ಶೇ. 80 ಈ ಸಂಸ್ಥೆಯ ಸದಸ್ಯತ್ವ ಪಡೆದಿದ್ದರು.

ರಾಜ್ಯ ಸರ್ಕಾರವು ಈ ಸಂಘಕ್ಕೆ ಕಿತ್ತಳೆ ಬೇಸಾಯಕ್ಕೆ ಮತ್ತು ಸಂಶೋಧನೆಗೆ ಅನುಕೂಲವಾಗವಂತೆ ತಿತಿಮತಿ ಬಳಿಯ ಮಾವಕಲ್ ಕಾಯ್ದಿಟ್ಟ ಅರಣ್ಯದಲ್ಲಿ ಒಂದು ಸಾವಿರ ಎಕರೆ ಅರಣ್ಯಭೂಮಿಯನ್ನು 1967ರಲ್ಲಿ 30 ವರ್ಷದ ಗುತ್ತಿಗೆಗೆ ನೀಡಿದೆ. ಅದರಲ್ಲಿ ಸಂಘವು ಇದುವರೆಗೆ ಉಪಯೋಗಿಸಿಕೊಂಡಿರುವ ಭೂಮಿ ಕೇವಲ 57 ಎಕರೆ ಮಾತ್ರ. (ವಿವಿಧ ಕಾರಣಗಳಿಂದ ಉಳಿದ ಭೂಮಿಯನ್ನು ಸಂಘವು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ). ಈ ಸಂಸ್ಥೆಯ ಪಾಲು ಬಂಡವಾಳದಲ್ಲಿ ರಾಜ್ಯ ಸರ್ಕಾರವೂ ಸಾಕಷ್ಟು ಹಣವನ್ನು ತೊಡಗಿಸಿದೆ. (ರೂ. 15.6 ಲಕ್ಷ)

1966ರಲ್ಲಿ ಸಂಘವು ತನ್ನದೇ ಆದ ಹಣ್ಣು ಸಂಸ್ಕರಣ ಘಟಕವನ್ನು ಸುಮಾರು 50 ಲಕ್ಷ ರೂ. ವೆಚ್ಚದಲ್ಲಿ ಪ್ರಾರಂಭ ಮಾಡಿತ್ತು. ಸಂಸ್ಕರಣ ಘಟಕವು ಆಧುನಿಕ ವಿದೇಶಿ ಯಂತ್ರೋಪಕರಣಗಳನ್ನು ಹೊಂದಿದೆ. ಸದರಿ ಘಟಕವು ಹಲವಾರು ವರ್ಷ ಉತ್ತಮ ಕಾರ್ಯ ನಿರ್ವಹಿಸಿ 1983 ರಿಂದ ದುಡಿಯುವ ಬಂಡವಾಳದ ಕೊರತೆಯಿಂದ ಮತ್ತು ಇನ್ನು ಅನೇಕ ಕಾರಣಗಳಿಂದ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿದೆ. ಸಂಸ್ಕರಣ ಘಟಕವು ಕಾರ್ಯ ನಿರ್ವಹಿಸುತ್ತಿದ್ದಾಗ ಸುಮಾರು 100 ಜನ ಕೆಲಸಗಾರರನ್ನು ಹೊಂದಿತ್ತು ಮತ್ತು ದಿನದ ಉತ್ಪಾದನಾ ಸಾಮರ್ಥ್ಯ ಸುಮಾರು ಎಂಟು ಟನ್ನುಗಳಾಗಿತ್ತು.

1975ರವರೆಗೆ ಸಂಘವು ಸದಸ್ಯರಿಗೆ ಹಣಕಾಸಿನ ನೆರವು, ಇತರ ವ್ಯವಸಾಯ ಪರಿಕರಗಳು, ಸಾಗಾಣಿಕೆ ವಾಹನದ ನೆರವು ಮುಂತಾದವುಗಳನ್ನು ಒದಗಿಸುತ್ತಿತ್ತು. ಸರಕು ಸಾಗಾಣಿಕೆಗೆ 1962ರಲ್ಲಿ ಮೂರು ವಾಹನಗಳನ್ನು ಹೊಂದಿತ್ತು. ಸಂಘವು

ಕೊಡಗು ಏಲಕ್ಕಿ ಮಾರಾಟ ಸಹಕಾರ ಸಂಘದ ಸಾಧನೆಗಳನ್ನು ಸೂಚಿಸುವ ತಖ್ತೆ.

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಪಾಲು ಬಂಡವಾಳ | ಮಾರಾಟ ಮಾಡಿದ ಏಲಕ್ಕಿ ಕಿ.ಗ್ರಾಂ | ಮಾರಾಟ ಮೊತ್ತ | ಗೊಬ್ಬರ ಮತ್ತು ಇತರ ಸಾಮಗ್ರಿ ಮಾರಾಟ | ಈಡಿನ ಮೇಲೆ ನೀಡಿದ ಸಾಲ | ಲಾಭ + ನಷ್ಟ — | ಏಲಕ್ಕಿ ದರ ಕೇ.ಜಿ. ಒಂದರ ಗರಿಷ್ಠ | ಕನಿಷ್ಠ |
|---|---|---|---|---|---|---|---|---|
| 1978–79 | 6.52 | 1,02,193 | 142.43 | 56.82 | 50.07 | (+) 2.48 | 120 | 162 |
| 1982–83 | 6.30 | 1,27,844 | 226.03 | 33.07 | 102.76 | (+) 0.39 | 120 | 300 |
| 1984–85 | 6.34 | 39,258 | 67.10 | 68.58 | 44.20 | (—) 4.30 | 70 | 210 |
| 1987–88 | 6.44 | 22,492 | 22.90 | 64.30 | 3.92 | (—) 2.95 | 80 | 180 |
| 1988–89 | 6.47 | 7,615 | 9.07 | 44.22 | 5.60 | (—) 0.85 | 25 | 155 |
| 1989–90 | 8.21 | 8,279 | 3.28 | 64.32 | 2.99 | (—) 1.57 | 100 | 325 |
| 1990–91 | 10.21 | 80 | 0.20 | 59.45 | 2.40 | (—)10.15 | 150 | 350 |

ಕಿತ್ತಳೆ ಜೊತೆಗೆ ಸ್ಥಳೀಯ ಮಾವು, ಸೀತಾಫಲ, ದ್ರಾಕ್ಷಿ, ಪೇರಲೆ, ಸೇಬು ಮುಂತಾದ ಹಣ್ಣುಗಳ ಮಾರಾಟವನ್ನು ಆಯಾ ಹಂಗಾಮಿನಲ್ಲಿ ಮಾರುವುದು. ಸಂಘದ ವಾರ್ಷಿಕ ಮಾರಾಟದ ವಹಿವಾಟು ಸುಮಾರು ರೂ. 25 ಲಕ್ಷ ಆಗಿತ್ತು. ಸಂಘವು ಮಾರಾಟ ಬೆಲೆಯ ಮೇಲೆ ಶೇ. 5 ರಂತೆ ಸೇವಾ ಶುಲ್ಕವನ್ನು ವಿಧಿಸುತ್ತದೆ.

ಸಂಘವು 1949–50ರಷ್ಟು ಹಿಂದೆಯೇ ತನ್ನ ಮಾರಾಟ ಮಳಿಗೆಗಳನ್ನು ಬೆಂಗಳೂರು, ಮೈಸೂರು, ಮಂಗಳೂರು ಮತ್ತು ತಲ್ಲೇರಿಗಳಲ್ಲಿ ಪ್ರಾರಂಭ ಮಾಡಿತ್ತು. (ಸದ್ಯ ಬೆಂಗಳೂರಿನಲ್ಲಿ ಮಾತ್ರ ಇರುವುದು). ಬೆಳೆಗಾರರಿಗೆ ಉತ್ತಮ ಬೆಲೆಯನ್ನು ಒದಗಿಸುವ ಉದ್ದೇಶದಿಂದ 1949-50 ರಲ್ಲಿಯೇ 'ಅಗ್‌ಮಾರ್ಕ್' ವರ್ಗೀಕರಣವನ್ನು ಅನುಸರಿಸಲಾಯಿತು. 1955–56ರಲ್ಲಿ ರಾಜ್ಯ ಸರ್ಕಾರವು ಪ್ರಪ್ರಥಮವಾಗಿ 25,000 ರೂ.ಗಳನ್ನು ಷೇರು ಹಣವನ್ನಾಗಿ ವಿನಿಯೋಗಿಸುವ ಮೂಲಕ ಸಂಘದ ಬೆಳವಣಿಗೆಗೆ ಪ್ರೋತ್ಸಾಹ ನೀಡಿತು. ಮುಂದುವರೆದು ರೂ. 1.5 ಲಕ್ಷ ಹಣವನ್ನು ಈ ಸಂಘದ ಮೂಲಕ ಕಿತ್ತಳೆ ಬೆಳೆಯ ಅಭಿವೃದ್ಧಿಗೆ ನೀಡಿತು. 1961–62ರಲ್ಲಿ ಸರ್ಕಾರದ ಷೇರು ಬಂಡವಾಳದ ಪಾಲು ರೂ. 75,000ಕ್ಕೆ ಹೆಚ್ಚಳಗೊಂಡಿತು. ಆ ವರ್ಷ 200 ಲಾರಿ ಕಿತ್ತಳೆ ಮಾರಾಟ ಮಾಡಿ ರೂ. 36,000 ಕಮಿಶನ್ ಗಳಿಸಿತು.

1978ರಲ್ಲಿ ಸಂಘದ ಚುನಾಯಿತ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ, ಆಡಳಿತವನ್ನು ಸರ್ಕಾರವೇ ವಹಿಸಿಕೊಂಡಿತು. 1983ರಲ್ಲಿ ಆಡಳಿತ ಅಧಿಕಾರಿಯನ್ನು ನಿಯಮಿಸಲಾಯಿತು. 1986ರಲ್ಲಿ ಸಂಘವನ್ನು ಸಮಾಪನಗೊಳಿಸಲು ಅಧಿಕಾರಿಯನ್ನು ನಿಯಮಿಸಲಾಯಿತು. ನಂತರ ಸಂಘದ ನೌಕರರು ಸದಸ್ಯರು ಕಾನೂನಿನ ರಕ್ಷಣೆ ಪಡೆದು ಸಮಾಪನ ಕಾರ್ಯಕ್ರಮಗಳನ್ನು ನಿಲ್ಲಿಸಿದರು. ಸದ್ಯ ಸರ್ಕಾರವು ಈ ಸಂಘವನ್ನು ಪುನರಾರಂಭಗೊಳಿಸಲು ಒಂದು ವಿಶೇಷ ಸಮಿತಿಯನ್ನು ನಿಯಮಿಸಿದ್ದು, ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ಅದರ ವಿಶೇಷ ಅಧಿಕಾರಿಗಳಾಗಿದ್ದಾರೆ. ಈ ಕಾರ್ಯಕ್ಕೆ ಸುಮಾರು 110 ಲಕ್ಷ ರೂ. ಬೇಕಾಗಬಹುದೆಂಬ ಅಂದಾಜಿದೆ. ಈ ಯೋಜನೆಯು ಸದಸ್ಯರು ನೀಡುವ ಹೆಚ್ಚಿನ ಪಾಲು ಹಣ (ರೂ. 20 ಲಕ್ಷ), ಸರ್ಕಾರದ ಸಹಾಯ (ರೂ. 20 ಲಕ್ಷ) ಮತ್ತು ಜಿಲ್ಲಾ ಪರಿಷತ್ತಿನ ಸಹಾಯ (ರೂ. 10 ಲಕ್ಷ) ಮತ್ತು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದಿಂದ ರೂ. 60 ಲಕ್ಷ ನೆರವಿನೊಂದಿಗೆ ಪುನಃ ಕಾರ್ಯಾರಂಭ ಮಾಡಲು ಯೋಚಿಸಲಾಗಿದೆ. ಸಂಘದ ಮಾರಾಟ ಘಟಕಗಳಲ್ಲಿ ಬೆಂಗಳೂರು ಘಟಕವು ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿದ್ದು ವಾರ್ಷಿಕ ಸುಮಾರು 30 ರಿಂದ 40 ಲಕ್ಷ ರೂ.ಗಳ ವರೆಗೆ ವಹಿವಾಟು ನಡೆಸುತ್ತಿದ್ದು, ಮಾರಾಟ ದಳ್ಳಾಳಿ ರೂಪದಲ್ಲಿ ವಾರ್ಷಿಕ ಸುಮಾರು ಎರಡು ಲಕ್ಷ ರೂ. ಆದಾಯ ಗಳಿಸುತ್ತಿದೆ ಎಂದು ತಿಳಿದು ಬರುವದು. ಸಂಘದ ಸದ್ಯದ ನೌಕರರ ಸಂಖ್ಯೆ 12.

**ಹಾಲು ಉತ್ಪಾದಕರ ಸಹಕಾರಿ ಸಂಘಗಳು**

ಈ ಸಹಕಾರಿ ಸಂಘಗಳ ಮೂಲೋದ್ದೇಶ ಗ್ರಾಮೀಣ ಪ್ರದೇಶದಲ್ಲಿ ಕ್ಷೀರೋದ್ಯಮಕ್ಕೆ ಸಹಾಯಕವಾಗುವ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವುದಲ್ಲದೇ ಹಾಲು ಸಂಗ್ರಹಣೆ ಮತ್ತು ಅದರ ಮಾರಾಟ, ಪಶುಸಂಗೋಪನೆ, ಪಶು ಆಹಾರ ಪೂರೈಕೆ, ಹಿಂಡುವ ಹಸುಗಳನ್ನು ಕೊಳ್ಳಲು ಹಣಕಾಸಿನ ನೆರವು, ಶೀತಲೀಕರಣ ವ್ಯವಸ್ಥೆ, ಮುಂತಾದ ಚಟುವಟಿಕೆಗಳನ್ನು ನಡೆಸುವುದು.

ಜಿಲ್ಲೆಯ ಸಹಕಾರಿ ಸಂಸ್ಥೆಗಳಲ್ಲಿ, ಸಂಖ್ಯೆಯ ಗಾತ್ರದಲ್ಲಿ ಮತ್ತು ಕ್ಷೇತ್ರ ವ್ಯಾಪ್ತಿಯಲ್ಲಿ ಈ ಸಂಘಗಳ ಸ್ಥಾನ ಮೂರನೇಯದು (ಒಂದನೇಯದು ದವಸ ಭಂಡಾರಗಳು, ಎರಡನೇಯದು ವ್ಯವಸಾಯ ಸಹಕಾರ ಸಂಘಗಳು).

ಈ ಜಿಲ್ಲೆಯಲ್ಲಿ 1970–1980ರ ದಶಕದ ಅವಧಿಯಲ್ಲಿ ಈ ಸಂಘಗಳು ಬಹು ವ್ಯಾಪಕವಾಗಿ ಸ್ಥಾಪನೆಗೊಂಡವು. ಲಭ್ಯ ಇರುವ ಮಾಹಿತಿಯ ಪ್ರಕಾರ 1970 ರಲ್ಲಿ ಗಾಳಿಬೀಡಿನಲ್ಲಿ (ಕಲಕೇರಿ) ಪ್ರಾರಂಭವಾದ ಹಾಲು ಉತ್ಪಾದಕರ ಸಹಕಾರಿ ಸಂಘ ಜಿಲ್ಲೆಗೆ ಮೊದಲನೇಯದು (ಸದ್ಯ ಸಮಾಪನ ಹಂತದಲ್ಲಿದೆ). ಮುಂದೆ 1978 ರಲ್ಲಿ ಸೋಮವಾರಪೇಟೆ ತಾಲೂಕಿನ ಅಂಕನಹಳ್ಳಿ, ಬೆಸ್ಸೂರು, ಗೋಣಿಮರೂರು, ಹೆಬ್ಬಾಲೆ, ಜಗ್ಗನಹಳ್ಳಿ, ಮಾದಲಾಪುರ ಮತ್ತು ಶಿರಂಗಾಲದಲ್ಲಿ ಈ ಸಂಘಗಳು ಪ್ರಾರಂಭಿಸಲ್ಪಟ್ಟವು. ವೀರರಾಜಪೇಟೆ ತಾಲೂಕಿನ ತಿತಿಮತಿಯಲ್ಲಿ 1981 ರಲ್ಲಿ ಮೊದಲನೇಯ ಇಂತಹ ಸಂಘ ಪ್ರಾರಂಭವಾಯಿತು.

ಇಂದು (1990) ಜಿಲ್ಲೆಯಾದ್ಯಂತ 59 ಹಾಲು ಉತ್ಪಾದಕರ ಸಹಕಾರಿ ಸಂಘಗಳಿದ್ದು ಬಹುಭಾಗ ಸೋಮವಾರಪೇಟೆ ತಾಲೂಕಿನಲ್ಲಿ 33, ಹಾಗೂ ವೀರರಾಜಪೇಟೆಯಲ್ಲಿ 24 ಇದ್ದರೆ ಕೇವಲ ಎರಡು ಸಂಘಗಳು ಮಡಿಕೇರಿ ತಾಲೂಕಿನಲ್ಲಿವೆ (ಈ ಎರಡೂ ಸಂಘಗಳು ಸಮಾಪನ ಹಂತದಲ್ಲಿವೆ).

ಈ ಬಗೆಯ ಸಂಘಗಳಲ್ಲಿ ಕೇವಲ ಐದು ಸಂಘಗಳು ಸಮಾಪನ ಸ್ಥಿತಿಯಲ್ಲಿ ಇದ್ದರೆ ಮೂರು ಸಂಘಗಳು ನಿಷ್ಕ್ರಿಯವಾಗಿವೆ.

ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲದೇ ತಾಲೂಕಿಗೆ ಒಂದರಂತೆ, ವಿಶಾಲ ವ್ಯಾಪ್ತಿಯನ್ನು ಪಡೆದ ಕುಕ್ಕುಟ (ಪೌಲ್ಟ್ರಿ) ಸಹಕಾರಿ ಸಂಘಗಳು ಇದ್ದು ಸದ್ಯ ಮೂರೂ ಸಮಾಪನ ಹಂತದಲ್ಲಿವೆ. ಈ ಸಂಘಗಳಲ್ಲಿ ಪೊನ್ನಂಪೇಟೆ ಸಂಘವು ಹಳೆಯದು (1959), ನಂತರ ಸೋಮವಾರಪೇಟೆ (1965), ಮಡಿಕೇರಿ (1968) ಯಲ್ಲಿ ಇಂತಹ ಸಂಘಗಳು ಉದಯವಾದವು.

1981–82ರಲ್ಲಿ 15 ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸದಸ್ಯರ ಸಂಖ್ಯೆ 1,207 ಇದ್ದು ರೂ. 17,000 ಪಾಲು ಬಂಡವಾಳ, ರೂ. 38,000 ದುಡಿಯುವ ಬಂಡವಾಳ ಹೊಂದಿದ್ದರೆ ಸದರಿ ಸಂಸ್ಥೆಗಳು ಖರೀದಿಸಿದ ಮತ್ತು ಮಾರಾಟ ಮಾಡಿದ ಸರಕುಗಳ ಮೌಲ್ಯ ರೂ. 5.38 ಲಕ್ಷ ಮತ್ತು ರೂ. 6.40 ಲಕ್ಷ ಆಗಿತ್ತು. ಈ ಸಂಸ್ಥೆಗಳು ಒಟ್ಟಾರೆ ಗಳಿಸಿದ ಲಾಭದ ಮೊತ್ತ ರೂ. 31,000 ಎಂದು ವರದಿ ತಿಳಿಸುವುದು. 1988–89ರಲ್ಲಿ 59 ಹಾಲು ಉತ್ಪಾದಕರ ಸಹಕಾರಿ ಸಂಘಗಳು ಹೊಂದಿದ್ದ ಸದಸ್ಯರ ಬಲ 5,671 ಇದ್ದು, ಷೇರು ಬಂಡವಾಳ ರೂ. 90,000 ಮತ್ತು ದುಡಿಯುವ ಬಂಡವಾಳ ರೂ. 2.09 ಲಕ್ಷ ಆಗಿತ್ತು. ಈ ಸಂಘಗಳ ಸರಕು ಖರೀದಿ ಮತ್ತು ವಿಕ್ರಿ ಮೌಲ್ಯ ಕ್ರಮವಾಗಿ ರೂ. 31.20 ಲಕ್ಷ ಮತ್ತು ರೂ. 38.98 ಲಕ್ಷ ಆಗಿದ್ದರೆ, 24 ಸಂಘಗಳು ಗಳಿಸಿದ ಲಾಭ ರೂ. 1.07 ಲಕ್ಷ ಮತ್ತು 25 ಸಂಘಗಳು ಅನುಭವಿಸಿದ ನಷ್ಟದ ಮೊತ್ತ ರೂ. 33,000 ಎಂದು ವರದಿಯಾಗಿದೆ. 1988–89ರಲ್ಲಿ ಸಮಾಪನ ಹಂತದಲ್ಲಿದ್ದ ಮೂರು ಪೌಲ್ಟ್ರೀ ಸಹಕಾರಿ ಸಂಘಗಳ ಸದಸ್ಯತ್ವ 338 ಇದ್ದು ಅವುಗಳು ರೂ. 6,000 ಪಾಲು ಬಂಡವಾಳವನ್ನು, ರೂ. 55,000 ದುಡಿಯುವ ಬಂಡವಾಳವನ್ನು ಹೊಂದಿದ್ದವು. ಇವುಗಳು ಸರ್ಕಾರದಿಂದ ಪಡೆದ ಸಾಲ ರೂ. 44,000 ಆಗಿತ್ತು ಎಂದು ವರದಿಯಾಗಿದೆ.

### ಗ್ರಾಹಕರ ಸಹಕಾರಿ ಸಂಘಗಳು

ಗ್ರಾಹಕರ ಸಹಕಾರಿ ಸಂಘಗಳ ಮುಖ್ಯ ಉದ್ದೇಶ ತನ್ನ ಸದಸ್ಯರಿಗೆ ನ್ಯಾಯಯುತವಾದ ಬೆಲೆಯಲ್ಲಿ ಜೀವನಾವಶ್ಯಕ ಸರಕುಗಳು, ನಿಯಂತ್ರಿತ ಮತ್ತು ಇತರೇ ವಸ್ತುಗಳ ಸಮರ್ಪಕ ಹಂಚಿಕೆ ಮತ್ತು ತಕ್ಕಮಟ್ಟಿಗೆ ಬೆಲೆ ಏರಿಕೆಯನ್ನು ತಡೆಗಟ್ಟುವುದು ಮುಂತಾದವುಗಳು. ಈ ಜಿಲ್ಲೆಯಲ್ಲಿನ ಗ್ರಾಹಕರ ಸಂಘಗಳ ವೈಶಿಷ್ಟ್ಯ ಎಂದರೆ ಈ ಸಂಘಗಳನ್ನು ಇತರ ಕಡೆಯಂತೆ ಕೇವಲ ಸುಸಂಘಟಿತ ನೌಕರರ ವರ್ಗ, ಪಟ್ಟಣಗಳ ಸಮುದಾಯದವರು ರಚಿಸಿಕೊಂಡಿರುವುದಲ್ಲದೇ, ಬಹುಪಾಲು ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ವಿದ್ಯಾರ್ಥಿ ಗ್ರಾಹಕರ ಸಹಕಾರಿ ಸಂಘಗಳನ್ನು ರಚಿಸಿಕೊಂಡಿವೆ. ಇಂದು ಜಿಲ್ಲೆಯಾದ್ಯಂತ ನೋಂದಾಯಿಸಲ್ಪಟ್ಟ 50 ಗ್ರಾಹಕರ ಸಹಕಾರಿ ಸಂಘಗಳಲ್ಲಿ 23 ಸಾಮಾನ್ಯ ಪ್ರಾಥಮಿಕ ಸಹಕಾರಿ ಸಂಘಗಳು, 26 ವಿದ್ಯಾರ್ಥಿಗಳ ಗ್ರಾಹಕ ಸಂಘಗಳು ಮತ್ತು ಒಂದು ಜಿಲ್ಲಾ ಮಟ್ಟದ ಕೇಂದ್ರ ಸಗಟು ಗ್ರಾಹಕರ ಸಹಕಾರ ಮಾರಾಟ ಸಂಘ ಸೇರಿವೆ. ಪ್ರಾಥಮಿಕ ಗ್ರಾಹಕರ ಸಹಕಾರಿ ಸಂಘಗಳಲ್ಲಿ 8 ಸಂಘಗಳು ಸಮಾಪನ ಸ್ಥಿತಿಯಲ್ಲಿ ಇದ್ದರೆ, ವಿದ್ಯಾರ್ಥಿಗಳ ಸಂಘಗಳಲ್ಲಿ ಕೇವಲ ಎರಡು ಸಂಘಗಳು ಸಮಾಪನ ಸ್ಥಿತಿಯಲ್ಲಿ ಇವೆ.

ಸಾಮಾನ್ಯ ಗ್ರಾಹಕರ ಸಹಕಾರಿ ಸಂಘಗಳಲ್ಲಿ ಕೂರ್ಗ್ ಟೀಚರ್ ಸ್ಟೋರ್ಸ್, ವೀರರಾಜಪೇಟೆ (1920) ಅತ್ಯಂತ ಹಳೆಯದು ಮತ್ತು ಇಂದಿಗೂ ಕಾರ್ಯನಿರ್ವಹಿಸುತ್ತಿದೆ. ವಿದ್ಯಾರ್ಥಿಗಳ ಗ್ರಾಹಕರ ಸಹಕಾರಿ ಸಂಘಗಳಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಸಂಘ (1931) ಅತ್ಯಂತ ಹಳೆಯದು ಹಾಗೂ ಇಂದಿಗೂ ಇದೆ. ಗ್ರಾಹಕರ ಸಹಕಾರಿ ಸಂಘಗಳ ತಾಲೂಕುವಾರು ವಿಂಗಡಣೆ ಈ ರೀತಿ ಇರುವುದು; ಮಡಿಕೇರಿ 19, ವೀರರಾಜಪೇಟೆ 19 ಮತ್ತು ಸೋಮವಾರಪೇಟೆ 12. ವಿದ್ಯಾರ್ಥಿ ಗ್ರಾಹಕರ ಸಹಕಾರ ಸಂಘಗಳ ತಾಲೂಕುವಾರು ವಿಂಗಡನೆ ಈ ರೀತಿ ಇರುವುದು; ಮಡಿಕೇರಿ 11, ವೀರರಾಜಪೇಟೆ 9 ಮತ್ತು ಸೋಮವಾರಪೇಟೆ 6. 1979–80ನೇ ವರ್ಷದಲ್ಲಿ 24 ವಿದ್ಯಾರ್ಥಿ ಗ್ರಾಹಕರ ಸಂಘಗಳೂ ಸೇರಿದಂತೆ ಜಿಲ್ಲೆಯಾದ್ಯಂತ ಇದ್ದ ಒಟ್ಟು ಗ್ರಾಹಕರ ಸಂಘಗಳ ಸಂಖ್ಯೆ 40 ಇದ್ದು ಸದಸ್ಯರ ಸಂಖ್ಯೆ 43,555 ಆಗಿತ್ತು. ಸದರಿ ಸಂಸ್ಥೆಗಳು ಹೊಂದಿದ್ದ ಪಾಲು ಬಂಡವಾಳ ರೂ. 3.39 ಲಕ್ಷ ಆಗಿದ್ದು ಅದರಲ್ಲಿ ಸರ್ಕಾರದ ಪಾಲು ರೂ. 1.17 ಲಕ್ಷ ಆಗಿತ್ತು. ಇವುಗಳ ದುಡಿಯುವ ಬಂಡವಾಳ ರೂ. 11.69 ಲಕ್ಷ ಆಗಿದ್ದರೆ, ಇವುಗಳು ಖರೀದಿ ಮಾಡಿದ ಮತ್ತು ವಿಕ್ರಯಿಸಿದ ಸರಕುಗಳ ಮೌಲ್ಯ ಕ್ರಮವಾಗಿ ರೂ. 52.67 ಲಕ್ಷ ಮತ್ತು ರೂ. 93.71 ಲಕ್ಷ; ಇವುಗಳಲ್ಲಿ ಹಲವು ಸಂಸ್ಥೆಗಳು ಗಳಿಸಿದ ಲಾಭ ರೂ. 53,000, ಮತ್ತು ಉಳಿದ ಸಂಸ್ಥೆಗಳು ಅನುಭವಿಸಿದ ಸಾಮೂಹಿಕ ನಷ್ಟ ರೂ. 10.3 ಲಕ್ಷ.

1988-89ರಲ್ಲಿ, 23 ಸಾಮಾನ್ಯ ಗ್ರಾಹಕರ ಸಹಕಾರಿ ಸಂಘಗಳು ಹೊಂದಿದ್ದ ಸದಸ್ಯರ ಸಂಖ್ಯೆ 7,297 ಆಗಿದ್ದರೆ ಪಾಲು ಬಂಡವಾಳ, ಸರ್ಕಾರದ ಪಾಲು (ರೂ. 2.67 ಲಕ್ಷ) ಸೇರಿದಂತೆ ರೂ. 4.66 ಲಕ್ಷಕ್ಕೆ ಹೆಚ್ಚಳಗೊಂಡಿತ್ತು. ಈ ಸಂಸ್ಥೆಗಳು ಪಡೆದ ಒಟ್ಟು ಸಾಲದಲ್ಲಿ ಅಂದರೆ ರೂ. 5.45 ಲಕ್ಷದಲ್ಲಿ, ಸರ್ಕಾರದ ಮೂಲದಿಂದ ರೂ. 1.56 ಲಕ್ಷ, ಕೇಂದ್ರ ಹಣಕಾಸು ಸಂಸ್ಥೆಯಿಂದ ರೂ. 1.81 ಲಕ್ಷ ಮತ್ತು ಇತರ ಮೂಲಗಳಿಂದ ರೂ 2.08 ಲಕ್ಷ ಸಂದಾಯವಾಗಿತ್ತು. ಈ ಸಂಸ್ಥೆಗಳ ದುಡಿಯುವ ಬಂಡವಾಳ ರೂ. 21.06 ಲಕ್ಷ ಆಗಿತ್ತು. ಸದರಿ ಸಂಸ್ಥೆಗಳು ಖರೀದಿಸಿದ, ಮಾರಾಟ ಮಾಡಿದ ಸರಕುಗಳ ಮೌಲ್ಯ ರೂ. 122.30 ಲಕ್ಷ ಮತ್ತು ರೂ. 118.79 ಲಕ್ಷ ಆಗಿತ್ತು. ಸದರಿ ವರ್ಷದಲ್ಲಿ 11 ಸಂಘಗಳು ಗಳಿಸಿದ ಲಾಭ ರೂ. 1.84 ಲಕ್ಷ ಆಗಿದ್ದರೆ ಎರಡು ಸಂಸ್ಥೆಗಳು ಅನುಭವಿಸಿದ ನಷ್ಟ ರೂ. 36,000. ಇನ್ನು 26 ವಿದ್ಯಾರ್ಥಿ ಗ್ರಾಹಕರ ಸಹಕಾರಿ ಸಂಘಗಳ ಸದಸ್ಯರ ಸಂಖ್ಯೆ 37,252 ಇದ್ದರೆ ಅವುಗಳ ಪಾಲು ಬಂಡವಾಳ ಸರ್ಕಾರದ ಪಾಲು ರೂ. 39,000 ಸೇರಿದಂತೆ ರೂ. 2.27 ಲಕ್ಷ ಆಗಿತ್ತು. ಈ ಸಂಸ್ಥೆಗಳು ಸರ್ಕಾರ ಮತ್ತು ಕೇಂದ್ರ ಸಹಕಾರಿ ಬ್ಯಾಂಕಿನಿಂದ ರೂ. 33,000 ಸಾಲ ಪಡೆದಿದ್ದವು. ಇವುಗಳ ದುಡಿಯುವ ಬಂಡವಾಳ ರೂ. 4.20 ಲಕ್ಷ ಆಗಿತ್ತು. 1988-89ನೇ ಸಾಲಿನಲ್ಲಿ ಸದರಿ ಸಂಸ್ಥೆಗಳು ಕೊಂಡ ಮತ್ತು ಮಾರಾಟ ಮಾಡಿದ ವಸ್ತುಗಳ ಮೌಲ್ಯ ಕ್ರಮವಾಗಿ ರೂ. 3.20 ಲಕ್ಷ ಮತ್ತು ರೂ. 2.84 ಲಕ್ಷ. ಸದರಿ ಸಂಘಗಳಲ್ಲಿ 12 ಸಂಸ್ಥೆಗಳು ಗಳಿಸಿದ ಒಟ್ಟು ಲಾಭ ರೂ. 26,000 ಮತ್ತು ಆರು ಸಂಸ್ಥೆಗಳು ಅನುಭವಿಸಿದ ನಷ್ಟ ರೂ. 3,000 ಎಂದು ವರದಿಯಾಗಿದೆ.

## ಜಿಲ್ಲಾ ಕೇಂದ್ರ ಸಹಕಾರಿ ಸಗಟು ಮಾರಾಟ ಮಳಿಗೆ

ಗ್ರಾಹಕರ ಸಹಕಾರಿ ಚಳವಳಿಯನ್ನು ಹೆಚ್ಚು ಬಲಪಡಿಸುವ ಕೇಂದ್ರ ಸರ್ಕಾರದ ನೀತಿಗೆ ಅನುಸಾರವಾಗಿ 1966 ಮೇ ತಿಂಗಳಲ್ಲಿ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದ ಕೊಡಗು ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆಯನ್ನು ಪ್ರಾರಂಭಿಸಲಾಯಿತು. ಜಿಲ್ಲೆಯ ಪ್ರಾಥಮಿಕ ಗ್ರಾಹಕರ ಸಹಕಾರಿ ಸಂಘಗಳು ಈ ಕೇಂದ್ರ ಸಂಸ್ಥೆಗೆ ಸದಸ್ಯರಾಗಿದ್ದು ತಮ್ಮ ಖರೀದಿಯನ್ನು ಈ ಸಂಸ್ಥೆಯ ಮೂಲಕ ಮಾಡುತ್ತವೆ. ಈ ಸಂಸ್ಥೆಯು ಗ್ರಾಹಕರ ಅನುಕೂಲಕ್ಕೋಸ್ಕರ ತನ್ನದೇ ಆದ ಚಿಲ್ಲರೆ (ರಿಟೇಲ್) ಮಾರಾಟ ಮಳಿಗೆ 'ಜನತಾ ಬಜಾರ್' ಪ್ರಾರಂಭಿಸಿದೆ. ಅದರ ಮೂಲಕ ಗ್ರಾಹಕರ ಬೇಡಿಕೆಯಂತೆ ಎಲ್ಲಾ ವಸ್ತುಗಳನ್ನು ಪೂರೈಸಲಾಗುತ್ತಿದೆ. ಸಂಘದ ಆರು ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ನಾಲ್ಕು ಮಡಿಕೇರಿಯಲ್ಲಿ ಇದ್ದರೆ ಉಳಿದ ಎರಡು ಕುಶಾಲನಗರ ಮತ್ತು ಚಟ್ಟಳ್ಳಿಯಲ್ಲಿ ಇರುವವು.

1978-79ರಲ್ಲಿ ಜಿಲ್ಲಾ ಸಗಟು ಸಹಕಾರಿ ಮಾರಾಟ ಮಳಿಗೆ ಹೊಂದಿದ್ದ ಸದಸ್ಯರ ಸಂಖ್ಯೆ, ಸಹಕಾರಿ ಸಂಸ್ಥೆಗಳು ಮತ್ತು ವ್ಯಕ್ತಿಗಳೂ ಸೇರಿದಂತೆ 572 ಆಗಿದ್ದು ಷೇರು ಬಂಡವಾಳ ರೂ. 5 ಲಕ್ಷದಲ್ಲಿ, ಸರ್ಕಾರದ ಪಾಲು ರೂ. 3.83 ಲಕ್ಷ ಇತ್ತು. ಈ ಸಂಸ್ಥೆಯು ಪಡೆದ ಸಾಲದ ಮೊತ್ತ (ಎಲ್ಲಾ ಮೂಲಗಳಿಂದ) ರೂ. 5.83 ಲಕ್ಷ ಆಗಿತ್ತು. ಈ ಸಂಸ್ಥೆಯ ವ್ಯವಹಾರಿಕ ಬಂಡವಾಳ ರೂ. 11.72 ಲಕ್ಷ. ಮಳಿಗೆಯು ಸದರಿ ವರ್ಷದಲ್ಲಿ ಖರೀದಿಸಿದ ಮತ್ತು ವಿಕ್ರಯಿಸಿದ ಸರಕುಗಳ ಮೊತ್ತ ಕ್ರಮವಾಗಿ ರೂ. 33.25 ಲಕ್ಷ ಮತ್ತು ರೂ. 39.57 ಲಕ್ಷ ಆಗಿದ್ದರೆ ಆ ವರ್ಷ ಸಂಸ್ಥೆ ಅನುಭವಿಸಿದ ನಷ್ಟ ರೂ. 2,000. 1981-82ರಲ್ಲಿ ಸದಸ್ಯರ ಸಂಖ್ಯೆ 1,246ಕ್ಕೆ ಹೆಚ್ಚಿಸಲ್ಪಟ್ಟು ಷೇರು ಬಂಡವಾಳ ರೂ. 6.40 ಲಕ್ಷದಲ್ಲಿ ಸರ್ಕಾರದ ಪಾಲು ರೂ. 5.08 ಲಕ್ಷ ಸೇರಿತ್ತು. ಸಂಘವು ಖರೀದಿಸಿದ ಮತ್ತು ಮಾರಾಟ ಮಾಡಿದ ಸರಕುಗಳ ಮೌಲ್ಯ ಕ್ರಮವಾಗಿ ರೂ. 49.31 ಮತ್ತು ರೂ. 49 ಲಕ್ಷ ಎಂದು ವರದಿ ತಿಳಿಸುವುದು. ಜೂನ್ 30-1989ರಲ್ಲಿ ಇದ್ದಂತೆ ಸಂಘದ ಸದಸ್ಯತ್ವ 87 ಸಹಕಾರಿ ಸಂಸ್ಥೆಗಳೂ ಸೇರಿದಂತೆ 1,558ಕ್ಕೆ ಹೆಚ್ಚಳಗೊಂಡಿತು, ಷೇರು ಬಂಡವಾಳ ರೂ. 5.15 ಲಕ್ಷದಲ್ಲಿ ಸರ್ಕಾರದ ಪಾಲು ರೂ. 3.58 ಲಕ್ಷ ಇದ್ದು ಸಂಘವು ಹೊಂದಿದ್ದ ಠೇವಣಿ ಮತ್ತು ಕಾಯ್ದಿಟ್ಟ ಹಾಗೂ ಇತರ ನಿಧಿಗಳು ಕ್ರಮವಾಗಿ ರೂ. 2.16 ಲಕ್ಷ ಮತ್ತು ರೂ. 1.73 ಲಕ್ಷ ಆಗಿದ್ದರೆ ಸರ್ಕಾರವೂ ಸೇರಿದಂತೆ ವಿವಿಧ ಸಂಸ್ಥೆಗಳಿಂದ ರೂ. 6.16 ಲಕ್ಷಗಳಷ್ಟು ಸಾಲವಾಗಿ ಪಡೆದುಕೊಂಡಿತ್ತು. ಸಂಸ್ಥೆಯ ದುಡಿಯುವ ಬಂಡವಾಳ ರೂ. 15.20 ಲಕ್ಷ ಆಗಿತ್ತು. ಇದೇ ವರ್ಷದಲ್ಲಿ ಸಂಘವು ಖರೀದಿಸಿದ ಸರಕು ರೂ. 79.74 ಮೌಲ್ಯದ್ದಾದರೆ, ಮಾರಿದ ಸರಕಿನ ಮೌಲ್ಯ ರೂ. 80.45 ಲಕ್ಷದ್ದು ಆಗಿತ್ತು ಮತ್ತು ವರದಿಯಾದ ವರ್ಷದಲ್ಲಿ ಸಂಘವು ರೂ. 5,000 ಲಾಭವನ್ನು ಗಳಿಸಿತ್ತು. 1991ರ ಜೂನ್ ಕೊನೆಯಲ್ಲಿ ಸಂಘದ ಸದಸ್ಯರ ಸಂಖ್ಯೆ 1,306 ಇದ್ದು ಪಾಲು ಬಂಡವಾಳ ಸರ್ಕಾರದ ಪಾಲೂ ಸೇರಿದಂತೆ ರೂ. 4.95 ಲಕ್ಷ ಆಗಿತ್ತು. ಈ ವರ್ಷದಲ್ಲಿ

ಸಂಘ ಖರೀದಿಸಿದ ಮತ್ತು ಬಿಕರಿ ಮಾಡಿದ ಸರಕಿನ ಮೌಲ್ಯ ಕ್ರಮವಾಗಿ ರೂ. 70.71 ಲಕ್ಷ ಮತ್ತು ರೂ. 78.18 ಲಕ್ಷ ಆಗಿದ್ದರೆ ಗಳಿಸಿದ ನಿವ್ವಳ ಲಾಭ ರೂ. 79,400 ಎಂದು ವರದಿಯಾಗಿದೆ. ಸಂಘದ ಸಿಬ್ಬಂದಿ ಸಂಖ್ಯೆ 27 (1992).

### ಗೃಹನಿರ್ಮಾಣ ಸಹಕಾರ ಸಂಘಗಳು

ನಗರ ಪ್ರದೇಶಗಳ ಮಧ್ಯಮ ಮತ್ತು ಅಲ್ಪ ಆದಾಯ ವರ್ಗದ ಜನಸಮುದಾಯಕ್ಕೆ ತಮ್ಮದೇ ಆದ ಮನೆ ನಿವೇಶನ ಗಳನ್ನು ಹೊಂದಲು, ಮನೆ ಕಟ್ಟಲು, ಮತ್ತು ದುರಸ್ತಿ ಮುಂತಾದ ಕೆಲಸಗಳಿಗೆ ದೀರ್ಘಾವಧಿಯ ಸಾಲ ಸೌಲಭ್ಯ ಗಳನ್ನು ನೀಡುವ ಉದ್ದೇಶಕ್ಕೆ ಈ ಸಂಘಗಳು ರಚನೆ ಗೊಂಡಿವೆ. ಕೊಡಗು ಜಿಲ್ಲೆಯಲ್ಲಿ ಸಹಕಾರೀ ವಲಯದಲ್ಲಿ ಗೃಹನಿರ್ಮಾಣ ಚಟುವಟಿಕೆಗಳು 1954 ರಲ್ಲಿ ಜಿಲ್ಲಾ ವ್ಯಾಪ್ತಿಯ ಕೊಡಗು ಜಿಲ್ಲಾ ಗೃಹ ನಿರ್ಮಾಣ ಸಹಕಾರಿ ಸಂಘವನ್ನು ಮಡಿಕೇರಿಯಲ್ಲಿ ಸ್ಥಾಪಿಸುವ ಮೂಲಕ ಪ್ರಾರಂಭ ವಾದವು. ಹರಿಜನ–ಗಿರಿಜನರಿಗೆ ಈ ಸೌಲಭ್ಯವನ್ನು ಪಡೆಯಲು ಸಹಾಯಕವಾಗುವಂತೆ ಮಹಾತ್ಮಗಾಂಧೀ ಹರಿಜನ-ಗಿರಿಜನ ಗೃಹನಿರ್ಮಾಣ ಸಹಕಾರಿ ಸಂಘ ಕುಶಾಲನಗರ (1962), ಮಡಿಕೇರಿ ಹರಿಜನ–ಗಿರಿಜನ, ಗೃಹನಿರ್ಮಾಣ ಸಹಕಾರಿ ಸಂಘ (1963), ವೀರರಾಜಪೇಟೆ ತಾಲೂಕು ಹರಿಜನ–ಗಿರಿಜನ ಗೃಹನಿರ್ಮಾಣ ಸಹಕಾರಿ ಸಂಘ (1963) ಪ್ರಾರಂಭವಾದವು. ಅದೇ ವರ್ಷ (1963)ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಈ ಸೌಲಭ್ಯವನ್ನು ವಿಸ್ತರಿಸಲು ಗೃಹನಿರ್ಮಾಣ ಸಹಕಾರಿ ಸಂಘ, ಕೆರಗನಹಳ್ಳಿಯಲ್ಲಿ (ಕೊಡಲಿಪೇಟೆ) ಪ್ರಾರಂಭವಾಯಿತು. ಈ ಗ್ರಾಮೀಣ ಗೃಹನಿರ್ಮಾಣ ಸಂಘವು ಪ್ರಾರಂಭದಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿರುವುದು. ಆದರೆ ಇಂದು ಕೇವಲ ಕೊಡಗು ಜಿಲ್ಲಾ ಗೃಹನಿರ್ಮಾಣ ಸಹಕಾರಿ ಸಂಘ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು ಉಳಿದ ನಾಲ್ಕರಲ್ಲಿ ಮೂರು ನಿಷ್ಕ್ರಿಯಗೊಂಡಿದ್ದರೆ, ಒಂದು (ಕೊಡಲಿಪೇಟೆ) ಸಮಾಪನ ಹಂತದಲ್ಲಿ ಇದೆ ಎಂದು ವರದಿಯಾಗಿದೆ. 1988–89ರಲ್ಲಿ, ನಿಶ್ಚೇತನಗೊಂಡ ನಾಲ್ಕು ಪ್ರಾಥಮಿಕ ಸಂಘಗಳು ಹೊಂದಿದ್ದ ಸದಸ್ಯರ ಸಂಖ್ಯೆ 551 ಇದ್ದರೆ ಅವುಗಳು ಹೊಂದಿದ್ದ ಪಾಲು ಬಂಡವಾಳ ರೂ. 6,000 ಆಗಿತ್ತು.

### ಕೊಡಗು ಜಿಲ್ಲಾ ಗೃಹನಿರ್ಮಾಣ ಸಹಕಾರ ಸಂಘ

ಕೊಡಗು ಪ್ರತ್ಯೇಕ 'ಸಿ' ರಾಜ್ಯವಾಗಿದ್ದಾಗ ನಡೆದ ಸಹಕಾರಿ ವಿಚಾರ ಗೋಷ್ಠಿಯ ಸಲಹೆ ಪ್ರಕಾರ ಜಿಲ್ಲೆ ಯಾದ್ಯಂತ ಗೃಹನಿರ್ಮಾಣ ಚಟುವಟಿಕೆಗಳನ್ನು ವ್ಯಾಪಕವಾಗಿ ಉತ್ತೇಜಿಸಲು ಸಹಾಯಕವಾಗುವಂತೆ ಈ ಸಂಸ್ಥೆಯು ಕೊಡಗು ರಾಜ್ಯ ಗೃಹನಿರ್ಮಾಣ ಸಹಕಾರ ಸಂಘವೆಂದು ನೋಂದಾಯಿಸಲ್ಪಟ್ಟು, ಕಾರ್ಯಾರಂಭ ಮಾಡಿತು (1954). ಪ್ರಾರಂಭದಲ್ಲಿ ಕೊಡಗು ರಾಜ್ಯ ಮಟ್ಟದಲ್ಲಿ ಇದು ಶೃಂಗ ಸಂಸ್ಥೆಯಾಗಿತ್ತು. ಈ ಸಂಸ್ಥೆಯ ಇಂದಿನ ಕಾರ್ಯ ವ್ಯಾಪ್ತಿಯು ಸಂಪೂರ್ಣ ಕೊಡಗು ಜಿಲ್ಲೆಯನ್ನು ಒಳ ಗೊಂಡಿರುವುದು.

ಸಂಘದ ಹಲವಾರು ಧ್ಯೇಯೋದ್ದೇಶಗಳಲ್ಲಿ ಮುಖ್ಯವಾಗಿ ಸದಸ್ಯರಿಗೆ ವಾಸದ ಮನೆಗಳನ್ನು ಕಟ್ಟಲು ನೆರವಾಗಿ ದೀರ್ಘ ಕಂತಿನ ಸಾಲ, ಮನೆಗಳ ದುರಸ್ತಿ ಮತ್ತು ವಿಸ್ತರಣೆಗೆ ಮಧ್ಯಮಾವಧಿ ಸಾಲ ನೀಡುವುದಲ್ಲದೇ ಸಂಘವು ನೇರವಾಗಿ ಮನೆನಿವೇಶನಗಳನ್ನು ರಚಿಸಿ ಕರ್ನಾಟಕ ರಾಜ್ಯ ಸಹಕಾರ ಗೃಹ ನಿರ್ಮಾಣ ಮಹಾಮಂಡಳ (ಬೆಂಗಳೂರು) ಇವರಿಂದ ಹಣಕಾಸಿನ ನೆರವು ಪಡೆದು ಮನೆಗಳ ಸಮುದಾಯವನ್ನು ನಿರ್ಮಿಸಿ ಅವುಗಳನ್ನು ಸದಸ್ಯರಿಗೆ ಬಾಡಿಗೆ ಮಾರಾಟ ಸಾಲ ಯೋಜನೆ ಪ್ರಕಾರ ಹಂಚುವುದಲ್ಲದೇ ಸದಸ್ಯರಿಗೆ ನೇರವಾಗಿ ಮನೆ ಕಟ್ಟಲು ಬೇಕಾದ ಕಟ್ಟಡ ಸಾಮಗ್ರಿಗಳನ್ನು ಒದಗಿ ಸುವುದು ಮುಂತಾದವುಗಳು. ಸದಸ್ಯರು ಬಯಸಿದಲ್ಲಿ ಸಂಘವು ಮನೆಗಳ ನಿರ್ಮಾಣಕ್ಕೆ ಬೇಕಾಗುವ ಮನೆಗಳ ನಕ್ಷೆ, ಅಂದಾಜು ವೆಚ್ಚ ಪಟ್ಟಿ ತಯಾರಿಕೆ ಮತ್ತು ಕಾಲಕಾಲಕ್ಕೆ ಬೇಕಾಗುವ ತಾಂತ್ರಿಕ ಸೇವೆಗಳ ನೆರವನ್ನು ಸಹ ತಜ್ಞರಿಂದ ಒದಗಿಸುವುದು.

ಸಂಘವು ಪ್ರಾರಂಭಗೊಂಡಾಗ 153 ಸದಸ್ಯರನ್ನು ಒಳ ಗೊಂಡಂತೆ 1,530 ರೂ. ಪಾಲು ಬಂಡವಾಳವನ್ನು ಹೊಂದಿತ್ತು. ಸಂಘದ ಪ್ರಾರಂಭದಲ್ಲಿ ಅಂದಿನ ಕೊಡಗಿನ ಸರ್ಕಾರವು ಗೃಹನಿರ್ಮಾಣ ಚಟುವಟಿಕೆಗಳನ್ನು ಉತ್ತೇಜಿಸಲು ಸಂಘಕ್ಕೆ ಮುಫತ್ತಾಗಿ ನಿವೇಶನಗಳನ್ನು ಒದಗಿಸಿದ್ದಲ್ಲದೇ ಎರಡು ಲಕ್ಷ ರೂಪಾಯಿಗಳ ಸಾಲದ ನೆರವು ನೀಡಿತ್ತು. ಇದರಿಂದ ಸಂಘವು ಮಡಿಕೇರಿಯಲ್ಲಿ 45 ವಿವಿಧ ವಿನ್ಯಾಸಗಳ ಮನೆಗಳನ್ನು ನಿರ್ಮಿಸಿತು. ಸಂಘದ ಸದಸ್ಯರ ಸಂಖ್ಯೆ 1968–69ರಲ್ಲಿ 1989ಕ್ಕೆ ಹೆಚ್ಚಳಗೊಂಡು ಪಾಲು ಹಣ ರೂ. 81,420 ಆಗಿತ್ತು. ಸದರಿ ವರ್ಷದಲ್ಲಿ ಸಂಘವು ಸದಸ್ಯರಿಗೆ ನೀಡಿದ ಸಾಲ ಮತ್ತು ಗಳಿಸಿದ ನಿವ್ವಳ ಲಾಭಗಳು ಕ್ರಮವಾಗಿ ರೂ. 11 ಲಕ್ಷ ಮತ್ತು ರೂ. 14,271. ಸಂಘವು 1977–78ರಲ್ಲಿ ಹೊಂದಿದ್ದ ಸದಸ್ಯರ ಸಂಖ್ಯೆ 1,233 ಆಗಿದ್ದರೆ, ಪಾಲು ಬಂಡವಾಳ ರೂ. 2.48 ಲಕ್ಷ, ಸಂಘ ಪಡೆದ ಸಾಲ ರೂ. 22.86 ಲಕ್ಷ, ಸದಸ್ಯರಿಂದ

ಸಂಘಕ್ಕೆ ಬರಬೇಕಾಗಿದ್ದ ಸಾಲದ ಬಾಕಿ ರೂ. 20.38 ಲಕ್ಷ ಆಗಿದ್ದರೆ ಅನುಭವಿಸಿದ ನಷ್ಟ ರೂ.38,000. 1988-89 ರಲ್ಲಿ ಸಂಘದ ಸದಸ್ಯರ ಸಂಖ್ಯೆ 1,779 ಇದ್ದರೆ, ಪಾಲು ಬಂಡವಾಳ ಸರ್ಕಾರದ ಪಾಲು ರೂ. 8,000 ಸೇರಿದಂತೆ ರೂ. 7.23 ಲಕ್ಷ ಆಗಿತ್ತು. ಆ ವರ್ಷ ಸಂಘವು ವಿವಿಧ ಮೂಲಗಳಿಂದ ಪಡೆದ ಸಾಲ ರೂ. 57.99 ಲಕ್ಷ ಆಗಿದ್ದರೆ ಸದಸ್ಯರಿಗೆ ನೀಡಿದ ಸಾಲ ರೂ. 1.60 ಲಕ್ಷ ಆಗಿತ್ತು. ಆದರೆ ಸಂಘಕ್ಕೆ ಸದಸ್ಯರಿಂದ ಬರಬೇಕಾದ ಬಾಕಿ ಸಾಲ ರೂ. 53.30 ಲಕ್ಷ ಆಗಿತ್ತು. ಆ ವರ್ಷ ಸಂಘ ಗಳಿಸಿದ ಲಾಭ ರೂ. ಒಂದು ಲಕ್ಷ.

1991ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಸಂಘವು ಹೊಂದಿದ್ದ ಸದಸ್ಯರ ಸಂಖ್ಯೆ 1,048 ಆಗಿದ್ದರೆ ಷೇರು ಬಂಡವಾಳ ಸರ್ಕಾರದ ಪಾಲು ರೂ. 8,000 ಸೇರಿದಂತೆ ರೂ. 8.14. ಲಕ್ಷ. 1990-91 ನೇ ವರ್ಷದಲ್ಲಿ ಸಂಘವು ಸದಸ್ಯರಿಗೆ 26 ಮನೆಗಳ ನಿರ್ಮಾಣಕ್ಕೆ ನೇರವಾಗಿ ನೀಡಿದ ಸಾಲ ರೂ. 10.94 ಲಕ್ಷ ಆಗಿದ್ದರೆ ಪ್ರಾರಂಭದಿಂದ ಇದು ವರೆಗೆ ಸಂಘವು 110 ಮನೆಗಳ ನಿರ್ಮಾಣಕ್ಕೆ ನೇರ ಸಾಲ ವನ್ನು ಒದಗಿಸಿರುವುದಲ್ಲದೇ 900 ಜನ ಸಂಘದ ಸದಸ್ಯರು ರಾಜ್ಯ ಗೃಹನಿರ್ಮಾಣ ಸಹಕಾರಿ ಮಹಾಮಂಡಳ, ಬೆಂಗಳೂರು ಸಂಸ್ಥೆಯ ಮೂಲಕ ಸಾಲ ಪಡೆದು ಮನೆಗಳನ್ನು ನಿರ್ಮಿಸಲು ಸಂಘವು ಸಹಾಯಕವಾಗಿದೆ.

ಸಂಘವು ಸದ್ಯ ನಗರ ಪ್ರದೇಶಗಳಲ್ಲಿ ಗೃಹನಿರ್ಮಾಣಕ್ಕೆ ಗರಿಷ್ಠ ರೂ. ಒಂದು ಲಕ್ಷದವರೆಗೆ 15 ವರ್ಷಗಳ ಅವಧಿಯ ದೀರ್ಘಾವಧಿ ಸಾಲವನ್ನು, ಗ್ರಾಮೀಣ ಪ್ರದೇಶಗಳಲ್ಲಿ ರೂ. 50,000 ವರೆಗೆ 10 ವರ್ಷಗಳ ದೀರ್ಘಾವಧಿ ಸಾಲ ನೀಡು ವುದು. ಮನೆಗಳ ದುರಸ್ತಿ ಮತ್ತು ವಿಸ್ತರಣೆಗೆ ನಗರ ಪ್ರದೇಶದಲ್ಲಿ ರೂ. 50,000, ಗ್ರಾಮೀಣ ಪ್ರದೇಶದಲ್ಲಿ ರೂ. 30,000ದವರೆಗೆ ಸಾಲ ನೀಡಲಾಗುವುದು (ಅವಧಿ 5 ವರ್ಷ). ಸಂಘವು ವಿವಿಧ ಸಾಲಗಳಿಗೆ ವಿಧಿಸುವ ಬಡ್ಡಿದರ ಶೇ. 14.2 ರಿಂದ 14.6 ಎಂದು ವರದಿ ತಿಳಿಸುವುದು. ಮಾರ್ಚ್ 1991ರ ಕೊನೆಯಲ್ಲಿ ಇದ್ದಂತೆ ಸಂಘ ಅನುಭವಿಸಿದ ಒಟ್ಟು ನಷ್ಟ ರೂ. 3.58 ಲಕ್ಷ ಎಂದು ವರದಿಯಾಗಿದೆ. ಸಂಘವು ಪ್ರತ್ಯೇಕವಾದ ಮರಣ ನಿಧಿ ಯೋಜನೆಯನ್ನು ಹೊಂದಿರುವುದು. ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ 1956 ರಲ್ಲಿ (ಅಖಿಲ ಭಾರತ ಸಹಕಾರಿ ಸಮ್ಮೇಳನ) ಮತ್ತು 1977 ರಲ್ಲಿ ನಡೆದ ರಾಜ್ಯ ಗೃಹನಿರ್ಮಾಣ ಸಹಕಾರಿ ಸಂಘ ಗಳ ಸಮ್ಮೇಳನದಲ್ಲಿ ಈ ಸಂಘವು ಬಹುಮಾನವಾಗಿ ಲಾಂಛನ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಪಡೆದಿರುವುದು.

### ವ್ಯವಸಾಯೇತರ ಸಹಕಾರಿ ಸಂಘಗಳು

ಜಿಲ್ಲೆಯಾದ್ಯಂತ 1990ರಲ್ಲಿ 24 ವ್ಯವಸಾಯೇತರ ಚಟುವಟಿಕೆಗಳಿಗೆ ಸಾಲ ನೀಡುವ ಸಹಕಾರಿ ಸಂಘಗಳು ಇದ್ದು ಅವುಗಳನ್ನು ಪಟ್ಟಣ ಸಹಕಾರಿ ಬ್ಯಾಂಕುಗಳು (3), ನೌಕರರ ಪತ್ತಿನ ಸಂಘಗಳು (13) ಮತ್ತು ಇತರೆ ಸಾಲ ನೀಡುವ ಸಂಘಗಳು (8) ಎಂದು ವರ್ಗೀಕರಿಸಲಾಗಿದೆ. ನೌಕರರ ಸಾಲ ಸಂಘಗಳಲ್ಲಿ, ಮೂರು ಸಮಾಪನ ಹಂತದಲ್ಲಿವೆ ಮತ್ತು ಎರಡು ನಿಷ್ಕ್ರಿಯಗೊಂಡಿವೆ. ಇತರೇ ವರ್ಗದ ಸಾಲ ಸಂಘ ಗಳಲ್ಲಿ, ಮೂರು ನಿಷ್ಕ್ರಿಯಗೊಂಡಿದ್ದರೆ ಒಂದು ಸಮಾಪನ ಹಂತದಲ್ಲಿದೆ. ಪಟ್ಟಣ ಸಹಕಾರಿ ಬ್ಯಾಂಕುಗಳು 1966ರಿಂದ ಭಾರತೀಯ ರಿಜರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಟ್ಟು ಕೆಲಸ ನಿರ್ವಹಿಸಿದರೆ, ಇತರೇ ವ್ಯವಸಾಯೇತರ ಪತ್ತಿನ ಪ್ರಾಥಮಿಕ ಸಂಘಗಳಿಗೆ ಈ ರೀತಿಯ ನಿರ್ಬಂಧ ಇರುವುದಿಲ್ಲ. ಅವು ಕೇವಲ ಸಹಕಾರಿ ಇಲಾಖೆಯ ನಿಯಂತ್ರಣಕ್ಕೆ ಒಳ ಪಟ್ಟಿರುವುವು. ಈ ಸಂಘಗಳಲ್ಲಿ ಬಹುಪಾಲು ಸಂಘಗಳು ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ಹಲವಾರು ಬ್ಯಾಂಕೇತರ ಚಟುವಟಿಕೆಗಳನ್ನು ಹಮ್ಮಿಕೊಂಡಿರುವುವು. ಪಟ್ಟಣ ಸಹಕಾರಿ ಬ್ಯಾಂಕುಗಳು ವೀರರಾಜಪೇಟೆ (1937), ಪೊನ್ನಂಪೇಟೆ (1945) ಮತ್ತು ಮಡಿಕೇರಿ (ಮಹದೇವಪೇಟೆ) (1955) ಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಗಳು ಬ್ಯಾಂಕಾಗಿ ಪರಿವರ್ತನೆ ಹೊಂದುವ ಪೂರ್ವದಲ್ಲಿ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳಾಗಿದ್ದವು. ನೌಕರರ ಸಹಕಾರಿ ಸಂಘ ಗಳಲ್ಲಿ ಕೊಡಗು ಸರ್ಕಾರಿ ನೌಕರರ ಸಹಕಾರಿ ಸಂಘ(1919) ಮತ್ತು ಇತರೇ ಪತ್ತಿನ ಸಹಕಾರಿ ಸಂಘಗಳಲ್ಲಿ ಮಡಿಕೇರಿ ಟೌನ್ ಸಹಕಾರಿ ಸಂಘ (1919), ಇವು ಈ ಬಗೆಯ ಸಂಘಗಳಲ್ಲಿ ಜಿಲ್ಲೆಯಲ್ಲಿ ಮೊದಲನೇಯವುಗಳು (ಇಂದು ಎರಡೂ ಸಮಾಪನ ಸ್ಥಿತಿಯಲ್ಲಿ ಇವೆ). ನೌಕರರ ಸಾಲ ಸಂಘ ಗಳಲ್ಲಿ ಬಹುಪಾಲು (6) ಮಡಿಕೇರಿಯಲ್ಲಿ ಇದ್ದರೆ, ವೀರ ರಾಜಪೇಟೆ ಮತ್ತು ಸೋಮವಾರಪೇಟೆಯಲ್ಲಿ ತಲಾ ಒಂದರಂತೆ ಇರುವವು. ಕಳೆದ ಒಂದು ದಶಕದಲ್ಲಿ ವ್ಯವಸಾಯೇತರ ಸಹಕಾರಿ ಸಂಘಗಳು ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಮತ್ತು ಸದಸ್ಯತ್ವವನ್ನು ಬಲಪಡಿಸಿಕೊಂಡು ತಮ್ಮ ಚಟುವಟಿಕೆಗಳನ್ನು ಹೆಚ್ಚಿಸಿಕೊಂಡಿವೆ.

1988-89ರಲ್ಲಿ ಮೂರು ಪಟ್ಟಣ ಸಹಕಾರಿ ಬ್ಯಾಂಕು ಗಳು ಹೊಂದಿದ್ದ ಸದಸ್ಯತ್ವ 4,405, 1990-91ರಲ್ಲಿ

ಸದಸ್ಯತ್ವ 4,774ಕ್ಕೆ ಏರಿತು. ಠೇವಣಿ ಸಂಗ್ರಹಣೆಯು ರೂ. 189.77 ಲಕ್ಷದಿಂದ ರೂ. 224.24 ಲಕ್ಷಕ್ಕೆ ಹೆಚ್ಚಳಗೊಂಡಿತ್ತು. ಈ ಬ್ಯಾಂಕುಗಳು 1979-80ರಲ್ಲಿ ರೂ41.83 ಲಕ್ಷಸಾಲ ನೀಡಿದ್ದರೆ 1988-89ರಲ್ಲಿ ನೀಡಿದ ಸಾಲ ಮುಂಗಡಗಳು ರೂ. 134.42 ಲಕ್ಷ, 1988–89ರಲ್ಲಿ ಎರಡು ಬ್ಯಾಂಕುಗಳು ಗಳಿಸಿದ ಲಾಭ ಮೊತ್ತ ರೂ. 4.02 ಲಕ್ಷ ಆಗಿದ್ದರೆ, ಒಂದು ಬ್ಯಾಂಕು ಅನುಭವಿಸಿದ ನಷ್ಟ ರೂ. 94,000 ಆಗಿತ್ತು. ಒಂದು ದಶಕದ ಹಿಂದೆ (1979-80) ಈ ಎರಡು ಸಂಸ್ಥೆಗಳು ಗಳಿಸಿದ ಲಾಭದ ಮೊತ್ತ ರೂ. 1.64 ಲಕ್ಷ ಆಗಿದ್ದರೆ ಒಂದು ಸಂಸ್ಥೆ ಅನುಭವಿಸಿದ ನಷ್ಟ ರೂ. 37,000 ಆಗಿತ್ತು.

1979–80 ರಲ್ಲಿ ನೌಕರರ ಸಾಲ ಸಹಕಾರಿ ಸಂಘಗಳ ಸಂಖ್ಯೆ 11 ಇದ್ದು ಸದಸ್ಯತ್ವ 4,017 ಮತ್ತು ಷೇರು ಬಂಡವಾಳ ರೂ. 15.13 ಲಕ್ಷ ಇತ್ತು. ಮುಂದಿನ ದಶಕದಲ್ಲಿ (1988–89) ಸದಸ್ಯರ ಸಂಖ್ಯೆ 3,829ಕ್ಕೆ ಇಳಿಕೆ ಆದರೆ ಪಾಲುಬಂಡವಾಳ ರೂ. 27.90 ಲಕ್ಷಕ್ಕೆ ಹೆಚ್ಚಳಗೊಂಡಿತು. ಪಾಲು ಬಂಡವಾಳದಲ್ಲಿ ಸರ್ಕಾರದ ಪಾಲು ರೂ. 25,000 ಇತ್ತು. ಈ ಸಂಸ್ಥೆಗಳು 79–80 ರಲ್ಲಿ ರೂ. 8.87 ಲಕ್ಷ ಠೇವಣಿ ಸಂಗ್ರಹಿಸಿದ್ದರೆ 88–89 ರಲ್ಲಿ ಠೇವಣಿಯು ರೂ. 22.50 ಲಕ್ಷಕ್ಕೆ ಹೆಚ್ಚಳವಾಗಿತ್ತು. ಈ ಸಂಘಗಳು 1979–80 ರಲ್ಲಿ ರೂ. 19.51 ಲಕ್ಷ ರೂ. ಸಾಲ ನೀಡಿದ್ದರೆ, 88–89ರಲ್ಲಿ ಸಾಲ ನೀಡಿದ ಮೊತ್ತ ರೂ. 39.12 ಲಕ್ಷ ಆಗಿತ್ತು. ಈ ಸಂಸ್ಥೆಗಳಲ್ಲಿ 8 ಸಂಘಗಳು ಗಳಿಸಿದ ಒಟ್ಟು ಲಾಭ ರೂ. 11,000 ಆಗಿದ್ದರೆ ಒಂದು ಸಂಘವು ಅನುಭವಿಸಿದ ನಷ್ಟ ಒಂದು ಸಾವಿರ ರೂಪಾಯಿ ಆಗಿತ್ತು.

1979–80 ರಲ್ಲಿ ಇತರೇ ಪತ್ತಿನ ಸಹಕಾರಿ ಸಂಘಗಳ ಸಂಖ್ಯೆ ಒಂಬತ್ತು ಇದ್ದು 88–89 ರಲ್ಲಿ ಅವುಗಳ ಸಂಖ್ಯೆ ಎಂಟಕ್ಕೆ ಇಳಿಯಿತು. ಈ ಬಗೆಯ ಸಂಘಗಳಲ್ಲಿ – ಉತ್ತರ ಕೊಡಗು ಮುಸ್ಲಿಂ ಸಹಕಾರಿ ಸಂಘ (1935) ಮಡಿಕೇರಿ, ವಕೀಲರ ಸಹಕಾರಿಸಂಘ (1986), ಮಡಿಕೇರಿ, ದ. ಕೊಡಗು ಮುಸ್ಲಿಂ ಸಹಕಾರಿ ಬ್ಯಾಂಕ್ ವೀರರಾಜಪೇಟೆ (1932), ಇವುಗಳು ಕಾರ್ಯ ನಿರ್ವಹಿಸುತ್ತಿವೆ. ಈ ಬಗೆಯ ಸಂಘಗಳಲ್ಲಿ ನಾಲ್ಕು ಸಂಘಗಳು ಕೇವಲ ಹರಿಜನ ಗಿರಿಜನರಿಗೆ ಮೀಸಲಾಗಿದ್ದು ಅವುಗಳಲ್ಲಿ ಮೂರು ವೀರರಾಜಪೇಟೆ ತಾಲೂಕಿನಲ್ಲಿ, ಒಂದು ಸೋಮವಾರಪೇಟೆ ತಾಲೂಕಿನಲ್ಲಿ ಇದ್ದು, ಈ ನಾಲ್ಕರಲ್ಲಿ ಎರಡು ನಿಷ್ಕ್ರಿಯಗೊಂಡಿದ್ದರೆ ಉಳಿದೆರಡು ಸಮಾಪನ ಸ್ಥಿತಿಯಲ್ಲಿವೆ.

1979–80ರಲ್ಲಿ ಈ ಸಂಘಗಳು ಹೊಂದಿದ್ದ ಸದಸ್ಯತ್ವ ಮತ್ತು ಪಾಲು ಬಂಡವಾಳಗಳು ಕ್ರಮವಾಗಿ 2,356 ಮತ್ತು ರೂ. 4.33 ಲಕ್ಷ ಇದ್ದು ಇವುಗಳು ಸಂಗ್ರಹಿಸಿದ ಠೇವಣಿಗಳು ರೂ. 4.42 ಲಕ್ಷ ಆಗಿತ್ತು. 1988–89ರಲ್ಲಿ ಈ ಸಂಘಗಳು ಹೊಂದಿದ್ದ ಸದಸ್ಯರ ಬಲ 3,007 ಷೇರು ಹಣ ರೂ. 4.99 ಲಕ್ಷ ಆಗಿದ್ದು, ಅದರಲ್ಲಿ ಸರ್ಕಾರದ ಪಾಲು ಬಂಡವಾಳ ರೂ. 46,000 ಇತ್ತು ; ಈ ಸಂಘಗಳು ಸಂಗ್ರಹಿಸಿದ್ದ ಠೇವಣಿಗಳ ಮೊತ್ತ ರೂ. 9.66 ಲಕ್ಷ. 1989–89 ರಲ್ಲಿ ಈ ಸಂಸ್ಥೆಗಳು ಸದಸ್ಯರಿಗೆ ನೀಡಿದ ಸಾಲ ರೂ. 8 89 ಲಕ್ಷ ಆಗಿದ್ದರೆ, 1979-80ರಲ್ಲಿ ನೀಡಿದ ಸಾಲ ರೂ. 8.66 ಲಕ್ಷ ಆಗಿತ್ತು. ಸದರಿ ಸಂಘಗಳು ಖರೀದಿಸಿದ ಮತ್ತು ಮಾರಾಟ ಮಾಡಿದ ಸರಕುಗಳ ಮೌಲ್ಯ 79–80ರಲ್ಲಿ ಕ್ರಮವಾಗಿ ರೂ. 4.50 ಲಕ್ಷ ಮತ್ತು ರೂ. 3.78 ಲಕ್ಷ ಇದ್ದರೆ, 88–89ರಲ್ಲಿ ಈ ಮೌಲ್ಯಗಳು ಕ್ರಮವಾಗಿ ರೂ. 7.10 ಲಕ್ಷ ಮತ್ತು ರೂ. 7.01 ಲಕ್ಷ ಇದ್ದವು ; ಮತ್ತು ಆ ವರ್ಷದಲ್ಲಿ ಕೇವಲ ಮೂರು ಸಂಘಗಳು ಮಾತ್ರ ಲಾಭ ಗಳಿಸಿದ್ದು, ಲಾಭದ ಮೊತ್ತ ರೂ. 1.91 ಲಕ್ಷ ಆಗಿತ್ತು.

### ವೀರರಾಜಪೇಟೆ ಟೌನ್ ಸಹಕಾರಿ ಬ್ಯಾಂಕ್

ಪ್ರಾರಂಭದಲ್ಲಿ (1922) ಪ್ರಾಥಮಿಕ ಸಹಕಾರಿ ಪತ್ತಿನ ಸಂಘವೆಂದು ನೋಂದಾಯಿಸಲ್ಪಟ್ಟ ಈ ಸಂಸ್ಥೆ ಮುಂದೆ 1937 ರಲ್ಲಿ ತನ್ನ ಸಾಂಪತ್ತಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಂಡು ವೀರರಾಜಪೇಟೆ ಟೌನ್ ಸಹಕಾರಿ ಬ್ಯಾಂಕ್ ಆಗಿ ರೂಪು ತಾಳಿತು. ಪ್ರಾರಂಭದಲ್ಲಿ ನಗರದ ಸುತ್ತಮುತ್ತಲಿನ ಸಹಕಾರಿ ಸಂಘಗಳು ಸಹ ಈ ಸಂಸ್ಥೆಯು ಹಣಕಾಸಿನ ನೆರವು ಪಡೆಯುತ್ತಿದ್ದವು. ಈ ಬ್ಯಾಂಕಿನ ಕಾರ್ಯವ್ಯಾಪ್ತಿ ವೀರರಾಜಪೇಟೆ ಪಟ್ಟಣಕ್ಕೆ ಸೀಮಿತವಾಗಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ನಿಬಂಧನೆಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಿರುವ ಪಟ್ಟಣ ಸಹಕಾರಿ ಬ್ಯಾಂಕ್ ಇದಾಗಿದ್ದು ಹೆಚ್ಚು ಕಡಿಮೆ ವಾಣಿಜ್ಯ ಬ್ಯಾಂಕುಗಳಂತೆ ಎಲ್ಲ ರೀತಿಯ ಸೇವೆಯನ್ನು ತನ್ನ ಗ್ರಾಹಕರಿಗೆ ನೀಡುತ್ತಿದೆ. 1957 ರಲ್ಲಿ ಬ್ಯಾಂಕ್ ಆರ್ಥಿಕವಾಗಿ ಮುಗ್ಗರಿಸಿ ವ್ಯವಹಾರವನ್ನು ಮುಚ್ಚುವ ಸ್ಥಿತಿ ಬಂದಾಗ ಸದಸ್ಯರ ಪ್ರಯತ್ನದಿಂದ ಬ್ಯಾಂಕು ಪುನಃ ಕಾರ್ಯ ನಿರ್ವಹಿಸುವುದು ಸಾಧ್ಯವಾಯಿತು. ಇದೇ ಸಂದರ್ಭದಲ್ಲಿ – ಸರ್ಕಾರವು ಈ ಸಂಸ್ಥೆಗೆ ಎರಡು ಲಕ್ಷ ರೂ. ಸಾಲವನ್ನು ನೀಡಿ ಆರ್ಥಿಕ ಭದ್ರತೆಯನ್ನು ಹೆಚ್ಚಿಸಿತು. ಇಂದು ಬ್ಯಾಂಕ್ ಪ್ರತೀ ವರ್ಷ ಸರಾಸರಿ ರೂ. 43 ಲಕ್ಷಕ್ಕೂ ಮೀರಿ ಸಾಲ ಮುಂಗಡವನ್ನು ನೀಡುತ್ತದೆ ಮತ್ತು ಅದಕ್ಕೆ ತಕ್ಕಂತೆ ಠೇವಣಿಗಳನ್ನು ಸಂಗ್ರಹಿಸುತ್ತಿದೆ.

1960-1991ರ ವರೆಗಿನ ಅವಧಿಯಲ್ಲಿ ಬ್ಯಾಂಕು ನಡೆದು ಬಂದ ಹಾದಿಯ ಪ್ರಗತಿಯ ಚಿತ್ರಣ ಈ ಕೆಳಗಿನಂತೆ ಇರುವುದು.

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಸದಸ್ಯರ ಸಂಖ್ಯೆ | ಪಾಲು ಬಂಡವಾಳ | ದುಡಿಯುವ ಬಂಡವಾಳ | ಠೇವಣಿಗಳು | ನಿವ್ವಳ ಲಾಭ |
|---|---|---|---|---|---|
| 1960-61 | 710 | 0.81 | 4.78 | — | 00.13 |
| 1969-70 | 1,540 | 1.15 | 5.75 | — | 00.02 |
| 1979-80 | 1,511 | 2.11 | 14.35 | 8.01 | 00.71 |
| 1984-85 | 1,796 | 3.66 | 26.88 | 17.87 | 00.53 |
| 1988-89 | 1,838 | 5.01 | 47.32 | 34.42 | 00.84 |
| 1989-90 | 1,566 | 5.59 | 50.82 | 36.13 | 1.39 |
| 1990-91 | 1,661 | 6.33 | 60.74 | 43.74 | 1.70 |
| 1991-92 | 1,754 | 6.92 | 66.22 | 48.37 | 1.34 |

**ವ್ಯವಸಾಯೇತರ ಮತ್ತು ಪತ್ತೇತರ ಸಹಕಾರಿ ಸಂಘಗಳು**

ಮಹಿಳಾ ಸಮಾಜಗಳು ಮತ್ತು ಇತರೇ ವರ್ಗದ ಜನರು ತಮ್ಮ ಆರ್ಥಿಕ ಸಾಮಾಜಿಕ ಮುನ್ನಡೆ ಸಾಧಿಸಲು ಆರಂಭಿಸಿದ 'ಬೆಟರ್ ಲಿವಿಂಗ್' ಸೊಸೈಟಿಗಳು (ಬಿ.ಎಲ್.ಸಿ.ಎಸ್.) ಪತ್ತೇತರ ಸಂಘಗಳಲ್ಲಿ ಪ್ರಮುಖವಾದವುಗಳು. ಉದಾ : ಆರೋಗ್ಯ ಸೇವಾ ಸಹಕಾರ ಸಂಘ (1982), ಕೊಡಿಗೆ (ಸಮಾಪನಗೊಂಡಿದೆ), ಬಾಲಕರ ರೈಜಿಂಗ್ ಸ್ಟಾರ್ ಥ್ರಿಫ್ಟ್ ಸಹಕಾರಿ ಸಂಘ (1940) ಶನಿವಾರಸಂತೆ, (ಸಮಾಪನ ಗೊಂಡಿದೆ), ಮೂರ್ನಾಡು ಸಹಕಾರಿ ಕ್ರೀಡಾ ಸಂಘ(1951), ನಾಪೋಕ್ಲು ಸಹಕಾರ ನೌಕರರ ಉಳಿತಾಯ ಸಹಕಾರಿ ಸಂಘ (1943) (ಸ್ಥಗಿತಗೊಂಡಿದೆ), ಹೊರೂರ್ ಬೆಟರ್ ಲಿವಿಂಗ್ ಸಹಕಾರಿ ಸಂಘ (1954, ಸಮಾಪನಗೊಂಡಿದೆ), ಬಾಲಾ ವಳಿಕರ ಬಿ.ಎಲ್.ಸಿ.ಎಸ್., ಬೀಟೋಳಿ, (1942), ಚೆಪ್ಪುಡಿರ ಕುಟುಂಬದ ಬಿ.ಎಲ್.ಸಿ.ಎಸ್. ಗೋಣಿಕೊಪ್ಪಲು (1946; ನಿಷ್ಕ್ರಿಯಗೊಂಡಿದೆ), ಹವ್ಯಕ ಬ್ರಾಹ್ಮಣರ ಬಿ.ಎಲ್.ಸಿ.ಎಸ್. ವೀರರಾಜಪೇಟೆ (1939; ನಿಷ್ಕ್ರಿಯ ಗೊಂಡಿದೆ), ಶ್ರೀಮಂಗಳ ಕೆಲಸಗಾರರ ಸಹಕಾರಿ ಸಂಘ, ಹುದಿಕೇರಿ (1945; ಸಮಾಪನಗೊಂಡಿದೆ), ಮುಂತಾದವುಗಳು.

ಮಹಿಳಾ ಸಂಘಗಳಲ್ಲಿ 1941ರಲ್ಲಿ ವೀರರಾಜಪೇಟೆಯಲ್ಲಿ ಪ್ರಾರಂಭವಾದ ಕೊಡಗು ಸಹಕಾರಿ ಮಹಿಳಾ ಸಮಾಜ ಜಿಲ್ಲೆಗೆ ಮೊದಲನೇಯದು. ಇಂದು ಜಿಲ್ಲೆಯಾದ್ಯಂತ (ತಾಲೂಕಿಗೆ ಆರರಂತೆ) ಇಂಥ 18 ಸಂಘಗಳು ನೋಂದಾಯಿಸಲ್ಪಟ್ಟಿದ್ದು, ಅವುಗಳಲ್ಲಿ 15 ಸಕ್ರೀಯವಾಗಿದ್ದು ಉಳಿದವುಗಳು ಸಮಾಪನ ಗೊಂಡಿವೆ (ಗೋಣಿಕೊಪ್ಪಲು ಹಾತೂರು ಮತ್ತು ಪೊನ್ನಂಪೇಟೆ). ಮಹಿಳಾ ಸಂಘಗಳ ಚಟುವಟಿಕೆಗಳು ವಿವಿಧ ಮುಖವಾಗಿದ್ದು, ಗೃಹಕೈಗಾರಿಕೆ, ಗುಡಿ ಕೈಗಾರಿಕೆ, ಹಣ್ಣು ತರಕಾರಿಗಳ ಸಂಸ್ಕರಣ, ಗ್ರಾಹಕರ ವಸ್ತುಗಳ ಪೂರೈಕೆ, ಧವಸ ಭಂಡಾರಗಳ ನಿರ್ವಹಣೆ ಮುಂತಾದ ವಹಿವಾಟನ್ನು ಮಾಡಿವರೆ ಕೆಲವು, ಸಂಸ್ಥೆಗಳು ಮಹಿಳೆಯರಿಗೆ ಉಪಯುಕ್ತವಾಗುವ ಹೊಲಿಗೆ, ಕಸೂತಿ, ಕರಕುಶಲ ವಸ್ತುಗಳ ತಯಾರಿಕೆ ಬಾಲವಾಡಿ, ಶಿಶುಕೇಂದ್ರಗಳನ್ನು ನಡೆಸುವುದು ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. 1949-50ರಷ್ಟು ಹಿಂದೆಯೇ ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರ ಪೇಟೆಯ ಸಮಾಜಗಳು ಶಿಶುವಿಹಾರ, ಹಿಂದಿ ಶಿಕ್ಷಣ ಕೇಂದ್ರ, ನೂಲುವ ತರಬೇತಿ (ಚರಖಾ ಸಂಘ), ಹೊಲಿಗೆ ತರಬೇತಿ ಮುಂತಾದ ವಿಧಾಯಕ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನಡೆಸುತ್ತಿದ್ದವು ಎಂದು ತಿಳಿದು ಬರುವುದು.

ಮಡಿಕೇರಿ ಸಮಾಜಕ್ಕೆ ಕಟ್ಟಡ ಕಟ್ಟಲು ಸರ್ಕಾರ ರೂ. 5,000 ಧನಸಹಾಯ ಮಾಡಿತ್ತು. 1951ರಲ್ಲಿ ಜಿಲ್ಲೆ ಯಾದ್ಯಂತ ಇದ್ದ ಮಹಿಳಾ ಸಮಾಜಗಳ ಸಂಖ್ಯೆ ಆರು. ಮುಂದೆ 1955-56ರಲ್ಲಿ ನಾಲ್ಕು ಸಮಾಜಗಳು ಹೊಸದಾಗಿ ಪ್ರಾರಂಭಿಸಲ್ಪಟ್ಟವು.

1979-80ರಲ್ಲಿ ಜಿಲ್ಲೆಯಲ್ಲಿ 15 ಮಹಿಳಾ ಸಮಾಜ ಗಳಿದ್ದವು. ಸದಸ್ಯರ ಸಂಖ್ಯೆ 3,377 ಇದ್ದು ಅವುಗಳ ಷೇರು ಬಂಡವಾಳ ರೂ. 20,000 ಮತ್ತು ದುಡಿಯುವ ಬಂಡವಾಳ ರೂ. 2.77 ಲಕ್ಷ ಆಗಿತ್ತು. ಈ ಸಂಸ್ಥೆಗಳು ಸದಸ್ಯರಿಗೆ ನೀಡಿದ ಸಾಲ ಮುಂಗಡ ಮತ್ತು ವಸೂಲಾತಿ ಕ್ರಮವಾಗಿ ರೂ. 1.34 ಲಕ್ಷ ಮತ್ತು ರೂ. 98,000 ಆಗಿತ್ತು. ಇವುಗಳಲ್ಲಿ ಕೆಲವು ಸಂಘಗಳು ಗಳಿಸಿದ ಒಟ್ಟು ಲಾಭ ರೂ. 10,000 ಆಗಿದ್ದರೆ ಇನ್ನೂ ಕೆಲವುಸಂಘಗಳು ಅನುಭವಿ ಸಿದ ಒಟ್ಟು ನಷ್ಟ ರೂ. 9,000 ಆಗಿತ್ತು. ಈ ಸಂಸ್ಥೆಗಳು ಖರೀದಿ ಮತ್ತು ಮಾರಾಟ ಮಾಡಿದ ಸರಕಿನ ಮೌಲ್ಯ ಕ್ರಮ ವಾಗಿ ರೂ. 11,000 ಮತ್ತು ರೂ. 13,000 ಆಗಿತ್ತು.

1988-89ರಲ್ಲಿ ಮಹಿಳಾ ಸಮಾಜಗಳ ಸಂಖ್ಯೆ 18ಕ್ಕೆ ಹೆಚ್ಚಳಗೊಂಡು, ಸದಸ್ಯರ ಸಂಖ್ಯೆ 6,473ಕ್ಕೆ ಏರಿದರೆ, ಪಾಲು ಬಂಡವಾಳ ರೂ. 2.33 ಲಕ್ಷಕ್ಕೆ ವೃದ್ಧಿಗೊಂಡು, ಅದರಲ್ಲಿ ಶೇ. 50 (ರೂ. 1.16 ಲಕ್ಷ) ಸರ್ಕಾರದ ಕೊಡುಗೆ ಆಗಿತ್ತು. ಈ ಸಂಸ್ಥೆಗಳು ಹೊಂದಿದ್ದ ನಿಧಿಗಳ ಮೊತ್ತ ರೂ. 4 ಲಕ್ಷ, ಸರ್ಕಾರದಿಂದ ಪಡೆದ ಸಾಲ ರೂ. 67,000 ಮತ್ತು ದುಡಿಯುವ ಬಂಡವಾಳ ರೂ. 7 ಲಕ್ಷ ಆಗಿದ್ದವು. ಸದರಿ ಸಂಸ್ಥೆಗಳಲ್ಲಿ 11 ಸಂಘಗಳು ಗಳಿಸಿದ ಒಟ್ಟು ಲಾಭ ರೂ. 1.08 ಲಕ್ಷ ಆಗಿದ್ದರೆ ಆರು ಸಂಘಗಳು ಅನುಭವಿಸಿದ ಒಟ್ಟು ನಷ್ಟ ರೂ. 18,000 ಆಗಿತ್ತು. ಈ ಸಂಸ್ಥೆಗಳು ಕೊಂಡ ಮತ್ತು ಮಾರಾಟ ಮಾಡಿದ ಸರಕಿನ ಮೌಲ್ಯ ಕ್ರಮ ವಾಗಿ ರೂ. 1.80 ಲಕ್ಷ ಮತ್ತು ರೂ. 2.44 ಲಕ್ಷ ಎಂದು ವರದಿಯಾಗಿದೆ. ಮುಂದಿನ ಪುಟಗಳಲ್ಲಿ ಮಹಿಳಾ ಸಮಾಜ ವೀರ ರಾಜಪೇಟೆಯನ್ನು ಕುರಿತಂತೆ ವಿವರಣೆ ನೀಡಲಾಗಿದೆ.

**ಕೊಡಗು ಮಹಿಳಾ ಸಹಕಾರ ಸಮಾಜ**

ಕೊಡಗಿನಲ್ಲಿ ಪ್ರಾರಂಭವಾದ ಪ್ರಥಮ ಮಹಿಳಾ ಸಹಕಾರಿ ಸಮಾಜವೆಂದರೆ ವೀರರಾಜಪೇಟೆಯ ಕೊಡಗು ಮಹಿಳಾ ಸಹಕಾರ ಸಮಾಜ (1938). ರಾಷ್ಟ್ರೀಯ ಆಂದೋಲನದಲ್ಲಿ ಮಹಿಳೆಯರ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಇದು ಸಂಘಟಿಸಲ್ಪಟ್ಟಿತು. ಇದಕ್ಕೆ ಮೂಲ ಪ್ರೇರಕಶಕ್ತಿ ಅಂದಿನ ಸುಪ್ರಸಿದ್ಧ ರಾಷ್ಟ್ರೀಯ ಮಹಿಳಾ ಸಂಘಟನೆಯ ಕಾರ್ಯಕರ್ತೆಯರಾಗಿದ್ದ ಶ್ರೀಮತಿ ಕಮಲಾದೇವಿ ಚಟ್ಟೋ ಪಾಧ್ಯಾಯ ಮತ್ತು ಕೊಡಗಿನ ಕಾರ್ಯಕರ್ತೆ ಶ್ರೀಮತಿ ಬಲ್ಯಾಂಟಂಡ ಮುದ್ದಮ್ಮನವರು. ಮುಂದೆ 1941ರಲ್ಲಿ ಸಮಾಜವನ್ನು ಸಹಕಾರಿ ಸಂಘದ ಕಾನೂನಿನ ಅನ್ವಯ ನೋಂದಾಯಿಸಲಾಯಿತು. ಅಂದಿನ ಅದರ ಕಾರ್ಯವ್ಯಾಪ್ತಿ ಇಡೀ ಜಿಲ್ಲೆ. ಇಂದು ಈ ಸಂಘದ ಕಾರ್ಯವ್ಯಾಪ್ತಿ ವೀರ ರಾಜಪೇಟೆ ನಗರ ಪ್ರದೇಶ ಮತ್ತು ಅದರ ಸುತ್ತಮುತ್ತಲಿನ ಮೂರು ಮೈಲಿ ಫಾಸಲೆಯ ಪ್ರದೇಶಕ್ಕೆ ಸೀಮಿತವಾಗಿದೆ. ಸಂಘದ ಉತ್ತಮ ಕಾರ್ಯ ಚಟುವಟಿಕೆಗಳನ್ನು ಮೆಚ್ಚಿ ಸರ್ಕಾರವು ಒಂದು ಎಕರೆ ಭೂಮಿಯನ್ನು ನೀಡಿದ್ದಲ್ಲದೇ ಕಟ್ಟಡ ಕಟ್ಟಲೂ ಕೂಡ ಹಣಕಾಸಿನ ನೆರವು ನೀಡಿತು. 1943ರಲ್ಲಿ ಸಂಘವು ತನ್ನದೇಆದ ಕಟ್ಟಡವನ್ನು ಹೊಂದಿತ್ತು. ಮುಂದೆ 1957-58ರಲ್ಲಿ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ನೆರವು ರೂ. 10,000 ಮತ್ತು ಸದಸ್ಯರ ಹಾಗೂ ಸಾರ್ವಜನಿಕರ ದೇಣಿಗೆ ರೂ. 5,000 ದಿಂದ ಕಟ್ಟಡದ ವಿಸ್ತರಣೆ ಕಾರ್ಯ ಕೈಗೊಳ್ಳಲಾಯಿತು ; ಅಲ್ಲದೇ ಸಂಘದ ವಿವಿಧ ಚಟುವಟಿಕೆಗಳಿಗೆ ಬೇಕಾದ ಉಪಕರಣಗಳನ್ನು ಕೊಳ್ಳಲಾಯಿತು. ಪ್ರಾರಂಭದಲ್ಲಿ ಸಂಘದ ಮೂಲ ಉದ್ದೇಶ ತನ್ನ ವ್ಯಾಪ್ತಿಯಲ್ಲಿ ಬರುವ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಸಾಧನೆಗೆ ಪೂರಕವಾಗುವ ಹಲವಾರು ಕಾರ್ಯಕ್ರಮ ಗಳನ್ನು ಕೈಗೊಳ್ಳುವದಾಗಿದ್ದು ಅವುಗಳನ್ನು ಪೂರೈಸಲು ಸಂಘವು ಮೊದಲನೇಯದಾಗಿ ಶಿಶುವಿಹಾರವನ್ನು (1944) ಪ್ರಾರಂಭಿಸಿತು. ಅದರೊಂದಿಗೆ ಸದಸ್ಯ ಮಹಿಳೆಯರಿಗೆ ಹೊಲಿಗೆ, ಹೆಣಿಕೆ, ಕಸೂತಿ ಮುಂತಾದ ವೃತ್ತಿಗಳಲ್ಲಿ ತರಬೇತಿ ನೀಡುವುದು ಮತ್ತು ವಾಚನಾಲಯದ ಸೌಲಭ್ಯವನ್ನು ಒದಗಿ ಸುವುದು, ಕ್ರೀಡಾ ತರಬೇತಿ, ಮುಂತಾದವುಗಳನ್ನು ಪ್ರಾರಂಭಿಸಿತು.

1942ರಲ್ಲಿ ಸಂಘವು ಕೇವಲ ಹತ್ತು ಸದಸ್ಯರನ್ನು ಒಳ ಗೊಂಡು ರೂ. ಹತ್ತನ್ನು ಪಾಲುಬಂಡವಾಳವಾಗಿ ಹೊಂದಿತ್ತು. 1952ರಲ್ಲಿ ಸದಸ್ಯತ್ವ 32ಕ್ಕೆ ಹೆಚ್ಚಳಗೊಂಡು ಪಾಲು ಬಂಡವಾಳ ರೂ. 43 ಇತ್ತು. 1961ರಲ್ಲಿ ಸದಸ್ಯರ ಸಂಖ್ಯೆ 80 ಆಗಿದ್ದರೆ ಪಾಲು ಬಂಡವಾಳ ರೂ. 91 ಆಗಿತ್ತು. 1960-62ರ ಅವಧಿಯಲ್ಲಿ ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿಯ ಆಶ್ರಯದಲ್ಲಿ ಸಂಘವು 25 ಜನ ಹಿಂದುಳಿದ ಮಹಿಳೆಯರಿಗೆ (ಅನಾಥರು, ವಿಧವೆಯರು, ಪತಿತೆಯರು ಮುಂತಾದವರು) ಏಳನೇಯ ತರಗತಿಯ ಪರೀಕ್ಷೆಗೆ ತರಬೇತು ಗೊಳಿಸಿತು. ಈ ಉದ್ದೇಶಕ್ಕಾಗಿ ಸಮಾಜವು ಎರಡು ವರ್ಷ

ಕಾಲ ಇವರುಗಳಿಗೆ ಉಚಿತವಾದ ಊಟ ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಿತ್ತು.

1962 ರಲ್ಲಿ ಮಹಿಳೆಯರಿಗೆ ಕಾಯಂ ಉದ್ಯೋಗ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿಯ ನೆರವಿನಿಂದ ರೂ. 28,000 ಧನಸಹಾಯದೊಂದಿಗೆ ಹಣ್ಣು ಮತ್ತು ತರಕಾರಿಗಳನ್ನು ಸಂಸ್ಕರಿಸುವ ಘಟಕವನ್ನು ಪ್ರಾರಂಭಿಸಿತು. ಅದು ಇಂದಿಗೂ ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ. ಸಂಸ್ಕರಣ ಘಟಕದಲ್ಲಿ ಸಂಘದಿಂದಲೇ ವಿವಿಧ ಹಣ್ಣುಗಳನ್ನು ಕೊಂಡು ಅವುಗಳ ರಸ ತೆಗೆಯುವುದು ಮತ್ತು ಅದರ ಉತ್ಪನ್ನಗಳನ್ನು ಸಂಸ್ಕರಿಸಿ ನ್ಯಾಯಬೆಲೆಯಲ್ಲಿ ಮಾರಾಟ ಮಾಡಲಾಗುವುದು ಮತ್ತು ಸದಸ್ಯರು, ಸಾರ್ವಜನಿಕರು ಪೂರೈಸಿದ ಹಣ್ಣು ಹಂಪಲುಗಳನ್ನು ಸೂಕ್ತ ಸೇವಾ ಶುಲ್ಕ ಪಡೆದು ಸಂಸ್ಕರಿಸಿ ಹಣ್ಣಿನ ರಸ, ಉಪ್ಪಿನಕಾಯಿ, ಗುಳಂಬ ಮುಂತಾದವುಗಳನ್ನು ತಯಾರಿಸಿ ಕೊಡಲಾಗುವುದು. 1984 ರಿಂದ ಸಂಘವು ಡಿಟರ್‌ಜಂಟ್ ಪೌಡರ್ ಮತ್ತು ಕ್ಲೀನಿಂಗ್ ಪೌಡರ್‌ಗಳನ್ನು ಸಹ ತಯಾರಿಸಿ ಅವುಗಳ ಮಾರಾಟ ಮಾಡುತ್ತಿದೆ.

ಈ ಮೇಲಿನ ಸಾಮಾನ್ಯ ನಿಗದಿತ ಚಟುವಟಿಕೆಗಳು ಅಲ್ಲದೇ ಸಂಘದ ಸದಸ್ಯರು ವಿಶೇಷ ಸಂದರ್ಭಗಳಲ್ಲಿ ಅಂದರೆ ಟಿ.ಬಿ. ಮತ್ತು ರೆಡ್‌ಕ್ರಾಸ್ ಸೀಲು ಮತ್ತು ಧ್ವಜಗಳ ಮಾರಾಟ, ರಕ್ಷಣಾನಿಧಿ, ಯುದ್ಧನಿಧಿ ಸಂಗ್ರಹ, ಮುಂತಾದ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿರುವರು. ಪ್ರಾರಂಭದಲ್ಲಿ (1938) ಸಂಘದ ಆಸ್ತಿಗಳು ರೂ. 200 ಇದ್ದದ್ದು, 1969 ರ ಬೆಳ್ಳಿಹಬ್ಬದ ಸಂದರ್ಭದಲ್ಲಿ ಅದು ರೂ. 79,000ಕ್ಕೆ ವೃದ್ಧಿಗೊಂಡಿತ್ತು. 1990 ರಲ್ಲಿ ಸಂಘದ ಸದಸ್ಯರ ಸಂಖ್ಯೆ 375 ಕ್ಕೆ ಹೆಚ್ಚಳಗೊಂಡು ಪಾಲು ಬಂಡವಾಳ ರೂ. 19,025ಕ್ಕೆ ವೃದ್ಧಿಯಾಗಿತ್ತು. ಅದರಲ್ಲಿ ಬಹುಪಾಲು (ರೂ. 15,000) ಸರ್ಕಾರದ ಕೊಡುಗೆಯಾಗಿತ್ತು. ಸಂಘವು ಹೊಂದಿದ್ದ ವಿವಿಧ ಕ್ಷೇಮನಿಧಿಗಳ ಮೊತ್ತ ರೂ. 20,618 ಆಗಿತ್ತು. 1988 ಮತ್ತು ಮುಂದಿನ ಎರಡು ವರ್ಷಗಳಲ್ಲಿ ಸಂಘವು ಗಳಿಸಿದ ನಿವ್ವಳಲಾಭ ಕ್ರಮವಾಗಿ ರೂ. 12,094, ರೂ. 19,993 ಮತ್ತು ರೂ. 35,011. 1990 ರಲ್ಲಿ ಕಾರ್ಖಾನೆಯ ವಿಭಾಗವು ಖರೀದಿಸಿದ ವಸ್ತುಗಳ ಬೆಲೆ ರೂ. 57,772 ಆಗಿದ್ದರೆ, ಉತ್ಪನ್ನಗಳ ಮಾರಾಟದ ಮೌಲ್ಯ ರೂ. 59,792. ಸಂಘವು ಇತ್ತೀಚಿನ ಮೂರು ವರ್ಷಗಳಲ್ಲಿ ಹಣ್ಣುಗಳಿಂದ ತಯಾರಿಸಿದ ಸಿದ್ಧವಸ್ತುಗಳ ಪರಿಮಾಣ ಈ ರೀತಿ ಇತ್ತು. 1988 (8,500 ಕಿ.ಗ್ರಾಂ.), 1989 (8,500 ಕಿ.ಗ್ರಾಂ.), 1990 (7,984 ಕಿ.ಗ್ರಾಂ.). 1991 ರ ಮಾರ್ಚ್ ಕೊನೆಯಲ್ಲಿ ಸಂಘದ ಸದಸ್ಯರ ಸಂಖ್ಯೆ 379ಕ್ಕೆ ಹೆಚ್ಚಳಗೊಂಡು ಪಾಲುಬಂಡವಾಳ ಸರ್ಕಾರದ ಪಾಲು ರೂ. 5,000 ಸೇರಿದಂತೆ 23,114ಕ್ಕೆ ಹೆಚ್ಚಳಗೊಂಡಿತು. ಆ ವರ್ಷ ಸಂಘದ ಕಾರ್ಖಾನೆ ವಿಭಾಗವು ಖರೀದಿಸಿದ ಮತ್ತು ಸಂಸ್ಕರಿಸಿ ಮಾರಾಟ ಮಾಡಿದ ಸರಕುಗಳ ಮೌಲ್ಯ ಕ್ರಮವಾಗಿ ರೂ. 40,000 ಮತ್ತು ರೂ. ಒಂದು ಲಕ್ಷ. ಸಂಘವು ವಾರ್ಷಿಕ ಸುಮಾರು ರೂ. 50,000 ಬಾಡಿಗೆಬರುವ ಆಸ್ತಿಯನ್ನು ಹೊಂದಿರುವುದು. 1990-91 ರಲ್ಲಿ ಸಂಘವು ಗಳಿಸಿದ ನಿವ್ವಳಲಾಭ ರೂ. 65,722 ಆಗಿತ್ತು, ಸಂಘದ ನೌಕರರ ಸಂಖ್ಯೆ 8.

### ಇತರ ಸಹಕಾರಿ ಸಂಘಗಳು

ಈ ಮೊದಲು ವಿವರಿಸಿದ ವರ್ಗೀಕೃತ ಸಹಕಾರಿ ಸಂಘಗಳಲ್ಲದೇ ಹಲವಾರು ಅವರ್ಗೀಕೃತ ಸಹಕಾರಿ ಸಂಸ್ಥೆಗಳೂ ಜಿಲ್ಲೆಯಲ್ಲಿದ್ದು ಆ ಪೈಕಿ ಮಾಜೀ ಸೈನಿಕರು ನಡೆಸುತ್ತಿರುವ 'ಟ್ರಾನ್ಸ್‌ಪೋರ್ಟ್' ಸಹಕಾರಿ ಸಂಘ, ವೀರರಾಜಪೇಟೆ (1951) ಸದ್ಯ ಸಮಾಪನ ಹಂತದಲ್ಲಿದೆ. 1988-89ರಲ್ಲಿ ಅದರ ಸದಸ್ಯರ ಸಂಖ್ಯೆ 779 ಇದ್ದು ಪಾಲು ಬಂಡವಾಳದಲ್ಲಿ ಸರ್ಕಾರದ ಪಾಲು ರೂ. 25,000 ಸೇರಿದಂತೆ ರೂ. 66,000 ಆಗಿತ್ತು. ಇದು ಕೇಂದ್ರ ಸಹಕಾರಿ ಬ್ಯಾಂಕಿಗೆ ಕೊಡಬೇಕಾದ ಸಾಲದ ಬಾಕಿ ರೂ. 8.34 ಲಕ್ಷ, ಅನುಭವಿಸಿದ ನಷ್ಟ ರೂ. 8.37 ಲಕ್ಷ ಎಂದು ವರದಿಯಾಗಿದೆ. ಜಿಲ್ಲೆಯಲ್ಲಿ ಎರಡು ಅರಣ್ಯ ಕೂಲಿಕಾರರ ಸಹಕಾರಿ ಸಂಘಗಳು ಇವೆ. ಅವೆಂದರೆ ಗುಡ್ಡೆಹೊಸೂರು (1967), ಮತ್ತು ಕುಟ್ಟ (1960)ದ ಸಂಘಗಳು. ಈ ಎರಡೂ ಸಂಸ್ಥೆಗಳು ಗಿರಿಜನರ ಅಭಿವೃದ್ಧಿಗೋಸ್ಕರ ಪ್ರಾರಂಭವಾದವು. ಇದರಲ್ಲಿ ಒಂದು ಸಮಾಪನ ಹಂತದಲ್ಲಿದ್ದರೆ (ಗುಡ್ಡೆಹೊಸೂರು) ಇನ್ನೊಂದು ನಿಷ್ಕ್ರೀಯವಾಗಿದೆ. ಈ ಸಂಘಗಳು 1988-89ರಲ್ಲಿ ಹೊಂದಿದ್ದ ಸದಸ್ಯರ ಸಂಖ್ಯೆ 446, ಸರ್ಕಾರದ ಪಾಲೂ ಸೇರಿದಂತೆ ಪಾಲು ಬಂಡವಾಳ ರೂ. 6,000, ದುಡಿಯುವ ಬಂಡವಾಳ ರೂ. 8,000.

ಸೋಮವಾರಪೇಟೆಯಲ್ಲಿ 1984ರಲ್ಲಿ ತಾಲೂಕು ವ್ಯಾಪ್ತಿಯ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ನೋಂದಾಯಿಸಲ್ಪಟ್ಟು ಮುಂದೆ ನಿಷ್ಕ್ರೀಯಗೊಂಡಿತು. ಗ್ರಾಮೀಣ ಪ್ರದೇಶದಲ್ಲಿ ವಿಶೇಷವಾಗಿ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಬಹು ಹಿಂದೆಯೇ 1951ರಲ್ಲಿ

ಮೂರ್ನಾಡ್ ಸಹಕಾರಿ ಕ್ಲಬ್ ಪ್ರಾರಂಭಿಸಲ್ಪಟ್ಟು ಇಂದಿಗೂ ಮುಂದುವರಿದುಕೊಂಡು ಬರುತ್ತಿದೆ.

### ಸಹಕಾರಿ ಯುನಿಯನ್‌ಗಳು

ಸಹಕಾರೀ ಆಂದೋಲನದ ಬೆಳವಣಿಗೆಯಲ್ಲಿ ಸಹಕಾರೀ ಯೂನಿಯನ್‌ಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸಹಕಾರೀ ತತ್ವದ ಪ್ರಚಾರ, ಸಂಘಗಳ ರಚನೆಯಲ್ಲಿ ಸೂಕ್ತ ಮಾರ್ಗದರ್ಶನ, ಅವುಗಳ ಮೇಲ್ವಿಚಾರಣೆ, ಪರಸ್ಪರ ಸಮನ್ವಯ ಸಾಧನೆ, ಸಹಕಾರಿ ಧೋರಣೆಯ ನಿರೂಪಣೆ ಮುಂತಾದವು ಈ ಸಂಘಗಳ ಮುಖ್ಯ ಉದ್ದೇಶ ಎಂದು ಕಂಡು ಬಂದರೂ ಕೊಡಗಿನ ಮಟ್ಟಿಗೆ ಹೇಳುವುದಾದರೆ 1923 ರಿಂದ ಇತ್ತೀಚಿನ ಹಲವು ವರ್ಷಗಳವರೆಗೆ ಈ ಸಂಸ್ಥೆಗಳು ಸಕ್ರಿಯ ಸಂಸ್ಥೆಗಳಾಗಿದ್ದವು. ಕೊಡಗಿನಲ್ಲಿ ಒಂದು ಜಿಲ್ಲಾ ಯುನಿಯನ್ ಇರುವುದಲ್ಲದೇ 16 ಪ್ರಾಥಮಿಕ ಯುನಿಯನ್‌ಗಳೂ ಇದ್ದವು. ಇವುಗಳನ್ನು ಆಯಾ ಭಾಗದ 'ನಾಡ್ ಯುನಿಯನ್' ಎಂದೂ ಕರೆಯುತ್ತಿದ್ದರು. ಈ ಯುನಿಯನ್‌ಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಪ್ರತಿನಿಧಿಗಳು (ಸೂಪರ್‌ವೈಸರ್) ಮುಖ್ಯ ಕಾರ್ಯನಿರ್ವಾಹಕರೆಂದು ಕಾರ್ಯನಿರ್ವಹಿಸುತ್ತಿದ್ದರು. ಈ ಸೂಪರ್‌ವೈಸರ್‌ಗಳ ಶಿಫಾರಸಿನ ಮೂಲಕ ಈ ಹಿಂದೆ ಜಿಲ್ಲಾ ಕೇಂದ್ರ ಬ್ಯಾಂಕ್ ಪ್ರಾಥಮಿಕ ಸಂಘಗಳ ವ್ಯವಹಾರವನ್ನು ಪರಿಶೀಲಿಸಿ ಹಣಕಾಸಿನ ನೆರವು ನೀಡುತ್ತಿತ್ತು. ಸಹಕಾರಿ ತತ್ವ ಪ್ರಚಾರ, ಸಹಕಾರ ಶಿಕ್ಷಣ, ತರಬೇತಿ ಮುಂತಾದ ವಿಷಯಗಳಲ್ಲಿ ಪ್ರಾಥಮಿಕ ಯೂನಿಯನ್‌ಗಳು ಜಿಲ್ಲಾ ಯೂನಿಯನಿನ ಅಧೀನವಾಗಿ ಅದರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಪ್ರಾಥಮಿಕ ಯೂನಿಯನ್‌ಗಳಲ್ಲಿ ವೀರರಾಜಪೇಟೆ ತಾಲೂಕಿನ ಪೊನ್ನಂಪೇಟೆ (1923), ಶ್ರೀಮಂಗಲನಾಡ ಯೂನಿಯನ್ (ಹುದಿಕೇರಿ, 1923) ಅತ್ಯಂತ ಹಳೆಯವು. ಮುಂದಿನ ವರ್ಷ 1924ರಲ್ಲಿ ಮಡಿಕೇರಿ ತಾಲೂಕಿನ ಬಿಳಗುಂದ, ಪಾಡಿನಾಲ್ಕುನಾಡು, ತಾವುನಾಡು, ಕಡಿಯತ್ ನಾಡುಗಳಲ್ಲಿ ಯೂನಿಯನ್‌ಗಳು ಪ್ರಾರಂಭವಾದವು. ಸೋಮವಾರಪೇಟೆ ತಾಲೂಕಿನಲ್ಲಿ ಶನಿವಾರಸಂತೆ ಮತ್ತು ಕುಶಾಲನಗರದಲ್ಲಿ 1926ರಲ್ಲಿ ಮೊದಲಿಗೆ ಯೂನಿಯನ್‌ಗಳು ಪ್ರಾರಂಭವಾದವು. ಜಿಲ್ಲೆಯಾದ್ಯಂತ ಇದ್ದ 16 ಪ್ರಾಥಮಿಕ ಯೂನಿಯನ್‌ಗಳಲ್ಲಿ 7 ವೀರರಾಜಪೇಟೆ ತಾಲೂಕಿನಲ್ಲಿ, 6 ಮಡಿಕೇರಿ ತಾಲೂಕಿನಲ್ಲಿ ಮತ್ತು ಮೂರು ಸೋಮವಾರಪೇಟೆ ತಾಲೂಕಿನಲ್ಲಿ ಇದ್ದವು.

1989 ಜೂನ್ 30 ರಂದು ಇದ್ದಂತೆ 16 ಪ್ರಾಥಮಿಕ ಯೂನಿಯನ್‌ಗಳ ಸದಸ್ಯರ ಸಂಖ್ಯೆ (ಸಹಕಾರಿ ಸಂಸ್ಥೆಗಳು) 346, ಒಂದು ಜಿಲ್ಲಾ ಮಟ್ಟದ ಯೂನಿಯನ್ನಿನ ಸದಸ್ಯರ ಸಂಖ್ಯೆ 280. ಸದ್ಯದ ಬದಲಾದ ಸಹಕಾರಿ ಆಡಳಿತ ನಿರ್ವಹಣಾ ವ್ಯವಸ್ಥೆಯಲ್ಲಿ, ಸಾಲ ವಿತರಣಾ ವ್ಯವಸ್ಥೆಯಲ್ಲಿ ಪ್ರಾಥಮಿಕ ಯೂನಿಯನ್‌ಗಳು ತಮ್ಮ ಮಹತ್ವವನ್ನು ಕಳೆದುಕೊಂಡಿರುವದರಿಂದ ಮತ್ತು ಜಿಲ್ಲೆಗೆ ಒಂದರಂತೆ ಪ್ರಬಲವಾದ ಸಹಕಾರಿ ಯೂನಿಯನ್ ಇರುವುದರಿಂದ ಇತ್ತೀಚಿನ ವರ್ಷಗಳಲ್ಲಿ ಈ ಪ್ರಾಥಮಿಕ 'ನಾಡ ಯೂನಿಯನ್'ಗಳನ್ನು ಸಮಾಪನಗೊಳಿಸಲಾಗಿದೆ.

### ಸಹಕಾರಿ ತರಬೇತಿ ಕೇಂದ್ರ

ಸಹಕಾರಿ ಚಳವಳಿಗೆ ಪೋಷಕವಾಗಿ ಸದಸ್ಯರಿಗೆ, ಪದಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಸಹಕಾರಿ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಭಾರತೀಯ ರಿಜರ್ವ್ ಬ್ಯಾಂಕ್ 1955ರಲ್ಲಿ ಸಹಕಾರಿ ತರಬೇತಿ ಸಂಸ್ಥೆಯನ್ನು ಮಡಿಕೇರಿಯಲ್ಲಿ ಪ್ರಾರಂಭಿಸಿತು. ಇಂದು ಅದೇ ಸಂಸ್ಥೆ ಮುಂದುವರೆದು 1965 ರಿಂದ ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಳ, (ಮೊದಲಿಗೆ ಯೂನಿಯನ್), ಬೆಂಗಳೂರು, ಇದರ ಅಂಗ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ತರಬೇತಿ ಕೇಂದ್ರವು ಸಹಕಾರಿ ಇಲಾಖೆಯ ಕಿರಿಯ ದರ್ಜೆಯ ನೌಕರರಿಗೆ ಮತ್ತು ಸೇವೆಯಲ್ಲಿರುವ ಪ್ರಾಥಮಿಕ ಸಹಕಾರಿ ಸಂಘಗಳ ಸಿಬ್ಬಂದಿ ವರ್ಗದವರಿಗೆ ಆರು ತಿಂಗಳ ಅವಧಿಯ ಸಹಕಾರಿ ಡಿಪ್ಲೋಮಾ ತರಬೇತಿಯನ್ನು, ಸಹಕಾರದ ವಿವಿಧ ವಿಭಾಗಗಳಾದ ವ್ಯವಸಾಯ ಸಾಲ, ಗ್ರಾಹಕರ ಸಾಲ, ಮಾರಾಟ ಸಹಕಾರ ಮುಂತಾದ ನಿಗದಿತ ವಿಷಯಗಳಲ್ಲಿ ವಿಶೇಷ ಶಿಕ್ಷಣ ತರಬೇತಿ ನೀಡುವುದು. ಇದು ಅಲ್ಲದೇ ವಿವಿಧ ಸಹಕಾರೀ ಸಂಘಗಳ ಸದಸ್ಯರಿಗೆ ಅಲ್ಪಾವಧಿಯ ತರಬೇತಿಯನ್ನು ಸಹ ನೀಡುವುದು. ಕೇಂದ್ರವು ಆಸಕ್ತ ಸಹಕಾರಿಗಳಿಗೆ ಸಂಘದ ನೋಂದಣಿ, ಸರ್ವಸದಸ್ಯರ ಸಭೆ ನಡೆಸುವುದು, ಲೆಕ್ಕ ಪತ್ರ ಇಡುವುದು ಮತ್ತು ಸಹಕಾರೀ ಕಾನೂನಿನ ಬಗ್ಗೆ ವಿಶೇಷ ನೆರವು, ಮಾಹಿತಿಯನ್ನು ಸಹ ನೀಡುವುದು. 1988, 1989 ಮತ್ತು 1990ರಲ್ಲಿ ಈ ಕೇಂದ್ರದಿಂದ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ ಕ್ರಮವಾಗಿ 214, 150 ಮತ್ತು 123.

## ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು

ಒಂದು ಪ್ರದೇಶದ ವ್ಯಾಪಾರ ಮತ್ತು ವಾಣಿಜ್ಯೋದ್ಯಮದ ಬೆಳವಣಿಗೆಗೆ ಅನೇಕ ಮೂಲಭೂತ ಸೌಕರ್ಯಗಳು ಅವಶ್ಯಕವಾಗಿ ಬೇಕು. ಉತ್ತಮ ಸಂಚಾರ ಸೌಲಭ್ಯ, ಸಂಪರ್ಕ

ಮಾಧ್ಯಮಗಳು, ಸುವ್ಯವಸ್ಥಿತ ಮಾರುಕಟ್ಟೆಗಳು, ಅಭಿವೃದ್ಧಿ ಹೊಂದಿದ ಹಿನ್ನಾಡು ಮುಂತಾದವುಗಳು ಒಂದು ಪ್ರದೇಶದ ಮುಕ್ತ ವ್ಯಾಪಾರದಲ್ಲಿ ತುಂಬಾ ಸಹಕಾರಿಯಾಗಿರುತ್ತವೆ. ಕೊಡಗು ಜಿಲ್ಲೆಯನ್ನು ಸಂಚಾರ ಸೌಲಭ್ಯ ಮತ್ತು ಸಂಪರ್ಕ ಸಾಧನಗಳ ಲಭ್ಯತೆಯ ದೃಷ್ಟಿಯಿಂದ ವೀಕ್ಷಿಸಿದಾಗ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಹಿಂದುಳಿದ ಜಿಲ್ಲೆಯೆಂದು ಪರಿಗಣಿಸ ಬಹುದು. ಹೀಗಿದ್ದರೂ ಗಂಗ, ಚಂಗಾಳ್ವ, ಹೊಯ್ಸಳರ ಕಾಲದಲ್ಲಿ ಕೊಡಗಿನಲ್ಲಿ ಮುಳ್ಳೂರು, ಅಂಜನಗಿರಿ–ಬೆಟ್ಟಗೇರಿ, ತಾತಂಗಿ ಮುಂತಾದ ಪಟ್ಟಣಗಳು ವ್ಯಾಪಾರಿ ಕೇಂದ್ರಗಳಾಗಿ ದ್ದವು. 12 ನೇಯ ಶತಮಾನದಲ್ಲಿ ತಾತಂಗಿಯ 'ನಖರ' (ವ್ಯಾಪಾರೀ ಶ್ರೇಣಿ)ದ ಉಲ್ಲೇಖ ಶಾಸನದಲ್ಲಿದೆ. ಇದಲ್ಲದೆ ವಿಜಯನಗರದ ಕಾಲದಲ್ಲಿ ಬೆಮ್ಮತ್ತಿ, ಬೂತನಹಳ್ಳಿ, ಮಲಗನ ಕೆರೆ ಮುಂತಾದ ಸ್ಥಳಗಳಲ್ಲಿ 'ಹಲರು' (ವ್ಯಾಪಾರಿಗಳ ಶ್ರೇಣಿ) ಇದ್ದುದು ತಿಳಿಯುತ್ತದೆ.

ಸುಮಾರು ಇನ್ನೂರು ವರ್ಷಗಳ ಹಿಂದೆ ಕೊಡಗಿನ ರಾಜರ ಆಳ್ವಿಕೆಯಲ್ಲಿ ಮತ್ತು ಅದಕ್ಕೂ ಪೂರ್ವದಲ್ಲಿ ಈ ಜಿಲ್ಲೆಯು ಹೊಂದಿದ್ದ ಪ್ರಾಕೃತಿಕ ಪರಿಸರಗಳು ಈ ಜಿಲ್ಲೆಯನ್ನು ನೆರೆ ಹೊರೆಯ ಪ್ರದೇಶಗಳಿಂದ ಹೊರಗಿನವರ ಪ್ರವೇಶವು ಅಷ್ಟೊಂದು ಸುಲಭವಾಗಿ ಸಾಧ್ಯವಾಗದಂತೆ ಮಾಡುವಲ್ಲಿ ನೈಸರ್ಗಿಕ ತಡೆಯನ್ನು ಒಡ್ಡಿದ್ದವು ಎಂದು ಹೇಳಬಹುದು. ಈ ಸನ್ನಿವೇಶಕ್ಕೆ ಪೂರಕವಾಗಿ ಕೊಡಗಿನ ಆಳರಸರು ತಮ್ಮ ಪುಟ್ಟ ಪ್ರದೇಶವನ್ನು ಇತರರು ಯಾವುದೇ ರೀತಿಯಿಂದ ಅತಿ ಕ್ರಮಿಸದಂತೆ ವ್ಯಾಪಾರ ನೀತಿಯನ್ನು ಹೊಂದಿದ್ದರು. ಮುಕ್ತ ವ್ಯಾಪಾರಕ್ಕೆ ಬೇಕಾದ ಮೂಲಭೂತ ಸೌಕರ್ಯಗಳಿಂದ ಜಿಲ್ಲೆಯು ವಂಚಿತವಾಗಿತ್ತು. ಹೀಗಿದ್ದರೂ ವನೋತ್ಪತ್ತಿ, ಬತ್ತ ಮುಂತಾದ ವಸ್ತುಗಳನ್ನು ತಲಚೇರಿ, ಮಂಗಳೂರು, ಹಾಸನ ಮತ್ತು ಮೈಸೂರುಗಳ ಕಡೆ ಎತ್ತಿನ ಹೇರಿನಿಂದ ಸಾಗಿಸಿ ಮಾರುತ್ತಿದ್ದರು. ತಮ್ಮಲ್ಲಿ ಸಿದ್ಧವಾಗದ ವಸ್ತು ಗಳನ್ನು ಇದೇ ರೀತಿ ತರುತ್ತಿದ್ದರು.

ಮೂರನೇಯ ಮೈಸೂರು ಯುದ್ಧದ ಪ್ರಾರಂಭದ ಕಾಲ ದಲ್ಲಿ ತಲಚೇರಿಯಲ್ಲಿದ್ದ ಇಂಗ್ಲೀಷ್ ಕಂಪನಿಯ ಅಧಿಕಾರಿ ರಾಬರ್ಟ್‌ಟೇಲರ್, ದೊಡ್ಡ ವೀರರಾಜೇಂದ್ರನೊಡನೆ ಸಂಧಾನ ಆರಂಭಿಸಿ ವ್ಯಾಪಾರ ಸೌಕರ್ಯಗಳನ್ನು ಪಡೆದನು. 1790–92ರ ಅವಧಿಯಲ್ಲಿ ವೀರರಾಜಪೇಟೆಯನ್ನು ಕಟ್ಟಿಸಿದ ನಂತರ ದೊಡ್ಡವೀರರಾಜೇಂದ್ರನು ಅಲ್ಲಿ ಲಿಂಗಾಯತರು, ವೈಶ್ಯರು, ಕ್ಯಾಥೋಲಿಕ್ ಕ್ರೈಸ್ತರು, ಮಲಬಾರಿನ ಮಾಪಿಳ್ಳೆ ಮತ್ತು ಬಂಗಾಳೀ ಮುಸ್ಲಿಮರು ವ್ಯಾಪಾರಕ್ಕೆ ಬಂದು ನೆಲಸಲು ಅನುವು ಮಾಡಿದನು. ಇದರಿಂದ ದಕ್ಷಿಣ ಕೊಡಗಿನಲ್ಲಿ ವೀರರಾಜಪೇಟೆ ಒಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿ ರೂಪುಗೊಳ್ಳಲು ಸಹಾಯಕವಾಯಿತು. 17ನೇಯ ಶತಮಾನ ದಲ್ಲಿ ರಾಜಧಾನಿಯಾದ ಮಡಿಕೇರಿಯೂ ಒಂದು ವ್ಯಾಪಾರೀ ಕೇಂದ್ರವಾಯಿತು. ಕೊಡಗಿನ ವನೋತ್ಪತ್ತಿಗಳಾದ ಶ್ರೀಗಂಧ, ಏಲಕ್ಕಿ, ಜೇನು, ಜೇನುಮೇಣ, ಮೆಣಸು ಹಾಗೂ ಔಷಧಿ ವಸ್ತು (ಮೂಲಿಕೆ, ಸಿಪ್ಪೆ, ಸೊಪ್ಪು ಇತ್ಯಾದಿ)ಗಳ ವ್ಯಾಪಾರವು ಕೊಡಗಿನ ರಾಜರ ಕಾಲದಲ್ಲಿ ಸರಕಾರೀ ಗುತ್ತಿಗೆಯಾಗಿದ್ದು ಈ ವಸ್ತುಗಳನ್ನು ಯಾರೇ ಆದರೂ ಸಂಗ್ರಹಿಸಿ ಅರಮನೆಗೆ ಮಾರಬೇಕಾಗಿತ್ತು. ಅರಮನೆಯಲ್ಲಿ ತಕ್ಕಮುಟ್ಟಿಗೆ ನ್ಯಾಯ ಪರವಾದ ಮಾರುಕಟ್ಟೆಯ ದರದಲ್ಲಿ ಇವನ್ನು ಕೊಳ್ಳುತ್ತಿದ್ದರು.

1834ರ ವರೆಗೂ (ಬ್ರಿಟಿಷರು ಕೊಡಗಿನ ಆಧಿಪತ್ಯವನ್ನು ವಹಿಸಿಕೊಳ್ಳುವವರೆಗೆ) ಸಂಚಾರ ಸೌಲಭ್ಯಗಳ ಕೊರತೆ ಮುಂದುವರಿದಿತ್ತು. ನಂತರ ಸಂಚಾರ ಸೌಲಭ್ಯಗಳಲ್ಲಿ ಸಂಪರ್ಕ ವ್ಯವಸ್ಥೆಯಲ್ಲಿ ಕ್ರಮೇಣ ಸುಧಾರಣೆ ಉಂಟಾಗಿ ಈ ಜಿಲ್ಲೆಯು ಇತರ ನೆರೆಯ ಜಿಲ್ಲೆಗಳೊಂದಿಗೆ ಹೆಚ್ಚಿನ ವ್ಯಾಪಾರ ವಾಣಿಜ್ಯ ಮತ್ತು ಇತರ ಸಂಪರ್ಕ ಹೊಂದಲು ಸಹಾಯಕ ವಾಯಿತು. 1817ರಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿ(ಲೆಫ್ಟಿನಂಟ್) ಕೊನೋರ್ ಕೊಡಗಿನ ವ್ಯಾಪಾರದ ಸ್ಥಿತಿಗತಿಗಳನ್ನು ಕುರಿತು ತನ್ನ ಸಮೀಕ್ಷೆಯಲ್ಲಿ ಈ ರೀತಿ ವಿವರಿಸುತ್ತಾನೆ: "ಅಲ್ಲಲ್ಲಿ ಕಾಡಿನಿಂದ ಆವರಿಸಲ್ಪಟ್ಟ ತುಂಡು ತುಂಡಾದ ಸಾಲು ಬೆಟ್ಟ ಗಳು, ಸಂಚಾರಕ್ಕೆ ಪ್ರತಿಕೂಲವಾದ ಮಾರ್ಗಗಳು, ದೊಡ್ಡ ಪಟ್ಟಣಗಳು ಇಲ್ಲದೇ ಇರುವ ಕೊಡಗು ಪ್ರದೇಶ, ತನ್ನ ನೆರೆ ಹೊರೆಯವರೊಂದಿಗೆ ವ್ಯಾಪಕವಾದ ವ್ಯಾಪಾರ ಸಂಬಂಧ ಬೆಳೆಸಲು ಕೆಲವು ಬಾರಿ ತೀರ ಉತ್ಸುಕವಾಗುತ್ತಿತ್ತು. ಈ ಪ್ರದೇಶ ಹೊಂದಿದ್ದ ಬಹು ಮುಖ್ಯವಾದ ಅನುಕೂಲತೆ ಎಂದರೆ ಇಲ್ಲಿಯ ಸಮೃದ್ಧವಾದ ಬತ್ತದ ಬೆಳೆ ಸುತ್ತಮುತ್ತಲಿನ ನಾಡಿನಲ್ಲಿ ಇದನ್ನು ಬತ್ತದ ಕಣಜವನ್ನಾಗಿ ಮಾಡಿತ್ತು". 1878ರಲ್ಲಿ ಲೂಯಿಸ್ ರೈಸ್, ಸಂಪಾದಿಸಿದ 'ಕೂರ್ಗ್ ಗ್ಯಾಸೆಟಿಯರ್'ನಲ್ಲಿಯೂ, ಅವರು ರಸ್ತೆಗಳ ವಿಚಾರವನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಲ್ಲಿ ಕೊನೋರ್ ರವರ ವರ್ಣನೆಯು ಯಥಾವತ್ತಾಗಿದೆ ಎಂದು ಅಭಿಪ್ರಾಯ ಪಡುವರು.

ಕೊಡಗಿನ ಇತಿಹಾಸದಲ್ಲಿ ಉಲ್ಲೇಖಿಸಿದಂತೆ "1850 ರವರೆಗೆ ಕೊಡಗಿನಲ್ಲಿ ಎರಡು ಚಕ್ರದ ವಾಹನಗಳಾಗಲಿ ಮತ್ತು ಅವು ಚಲಿಸುವಂತಹ ಮಾರ್ಗಗಳಾಗಲಿ ಇರಲಿಲ್ಲ". ಆಯಾ ಸ್ಥಳಗಳಿಗೆ ಬೆಟ್ಟಗಳ ಕಣಿವೆಗಳ ಮೂಲಕ ಎತ್ತು, ಆನೆ

ಮತ್ತು ಪಲ್ಲಕ್ಕಿಗಳು ಹೋಗುವಂತಹ ಕಾಲುದಾರಿಗಳು ಮಾತ್ರ ಇದ್ದವು. ಈ ಮಧ್ಯದ ಆರು ದಶಕಗಳ ಅವಧಿಯಲ್ಲಿ (1817–78) ಸಂಚಾರ ಸೌಲಭ್ಯ ಮತ್ತು ಇತರೇ ವ್ಯವಸ್ಥೆಗಳನ್ನು ಉತ್ತಮ ಪಡಿಸುವ ಮೂಲಕ ಬ್ರಿಟಿಷರ ಆಡಳಿತ ವ್ಯವಸ್ಥೆಯಲ್ಲಿ ಕೊಡಗಿನ ವ್ಯಾಪಾರ ವಾಣಿಜ್ಯಗಳು ಮುನ್ನಡೆ ಹೊಂದಿದವು. ಕೊಡಗಿನಲ್ಲಿ 1854ರ ನಂತರ ಪ್ರಾರಂಭವಾದ ಕಾಫಿ ಬೆಳೆಯು ಕೊಡಗಿನ ವಾಣಿಜ್ಯ ಸಂಪರ್ಕವನ್ನು ಹೊರದೇಶಗಳೊಂದಿಗೂ ವಿಸ್ತರಿಸಿತು. ವೀರರಾಜಪೇಟೆ ತಾಲೂಕಿನ ಪೆಗ್ಗಳ ಕಣಿವೆ ಮೂಲಕ ಕೇರಳವನ್ನು ಪ್ರವೇಶ ಮಾಡಬಹುದಾಗಿತ್ತು. ಸಂಪಾಜೆ ಮಾರ್ಗ ಸಿದ್ಧವಾದ ನಂತರ ಉತ್ತರ ಕೊಡಗಿನ ಕಾಫಿ ಬೆಳೆಯು ಮಂಗಳೂರಿನ ಮೂಲಕ ಇಂಗ್ಲೆಂಡಿಗೆ ರಫ್ತಾಗುತ್ತಿದ್ದರೆ, ದಕ್ಷಿಣ ಕೊಡಗಿನ ಹುಟ್ಟುವಳಿಗಳು ಕೇರಳದ ತಲ್ಚೇರಿಯ ಮೂಲಕ, ಪರ್ಶಿಯನ್ ಕೊಲ್ಲಿ ಮತ್ತು ಅರಬ್‌ದೇಶಕ್ಕೆ ರಫ್ತಾಗುತ್ತಿದ್ದವು. ಈ ಜಿಲ್ಲೆಯಿಂದ 1867ರಲ್ಲಿ ರೂ. 8.97 ಲಕ್ಷ ಮೌಲ್ಯದ ಮತ್ತು 1875ರಲ್ಲಿ ರೂ. 40.22 ಲಕ್ಷ ಮೌಲ್ಯದ ಕಾಫಿ ರಫ್ತಾದ ಬಗ್ಗೆ ವರದಿ ಇದೆ.

ಕಾಫಿಯ ನಂತರದ ಪ್ರಮುಖ ವಾಣಿಜ್ಯ ಬೆಳೆಯಾದ ಏಲಕ್ಕಿಯೂ ಸಹ ಕೊಡಗಿನ ವ್ಯಾಪಾರ ಅಭಿವೃದ್ಧಿಗೆ ಸಹಾಯಕವಾಗಿದೆ. ಏಲಕ್ಕಿ ಬೆಳೆಗಾರರು ಅದನ್ನು ನಿಗದಿತ ದರದಲ್ಲಿ (ಮಣಕ್ಕೆ 12 ರೂ. ಇಂದ 20ರ ವರೆಗೆ) ಹಿಂದೆ ಸರ್ಕಾರಕ್ಕೇ ಮಾರಬೇಕಿತ್ತು. ಈ ನಿಯಮಕ್ಕೆ ತಪ್ಪಿ ಅನ್ಯರಿಗೆ ಮಾರಿದಲ್ಲಿ ಸರಕಾರವು ಅವರಿಗೆ ಭಾರೀ ಮೊತ್ತದ ಜುಲ್ಮಾನೆ ವಿಧಿಸುತ್ತಿತ್ತು. ಮಲಬಾರಿನ ಮಾಪಿಳ್ಳೆ ವ್ಯಾಪಾರಸ್ಥರು ಅಥವಾ ಅವರ ಪ್ರತಿನಿಧಿಗಳು ಏಲಕ್ಕಿಯ ಸುಗ್ಗಿಯ ಕಾಲದಲ್ಲಿ ಕೊಡಗಿನ ನಾಡುಗಳಿಗೆ ಪ್ರವಾಸ ಕೈಕೊಂಡು ತಾವು ಸಂಗ್ರಹಿಸಿದ ಅಂದಚೆಂದದ ಬಣ್ಣದ ಕರವಸ್ತ್ರಗಳನ್ನು ಮತ್ತು ಇತರೇ ಮನಮೋಹಕ ವಸ್ತ್ರಗಳನ್ನು ಕೊಡಗಿನ ಸ್ತ್ರೀಯರಿಗೆ ಏಲಕ್ಕಿಗೆ ಪ್ರತಿಯಾಗಿ ವಿನಿಮಯ ಮಾಡಿಕೊಂಡು ಉತ್ತಮ ಲಾಭ ಗಳಿಸುತ್ತಿದ್ದರು ಎಂದು ರಿಕ್ಟರ್ ತಿಳಿಸಿದ್ದಾರೆ. 1800ರ ಪೂರ್ವದಲ್ಲಿ ಕೊಡಗಿನಲ್ಲಿ ಬತ್ತವು ಅತೀ ಸಮೃದ್ಧಿಯಾಗಿ ಬೆಳೆಯುತ್ತಿತ್ತು. ಅಂದಿನ ರಫ್ತುಗಳಲ್ಲಿ ಬತ್ತ, ಮರಮುಟ್ಟು ಮತ್ತು ಏಲಕ್ಕಿ ಬಹು ಮುಖ್ಯವಾದವುಗಳಾಗಿದ್ದವು. 1874–76ರ ಅವಧಿಯಲ್ಲಿ ಕೊಡಗಿನಿಂದ ಸುಮಾರು ಮೂರು ಲಕ್ಷ ರೂಪಾಯಿ ಬೆಲೆಯ ಅಕ್ಕಿಯು ರಫ್ತಾಗುತ್ತಿತ್ತೆಂದು ಒಂದು ವರದಿ ತಿಳಿಸುವುದು. ಕೊಡಗಿನಿಂದ ಹೊರ ರಾಜ್ಯಗಳಿಗೆ ಮಾರುವದಕ್ಕೆ ಕಳಿಸಲ್ಪಡುತ್ತಿದ್ದ ಮತ್ತು ಕೊಡಗಿಗೆ ಹೊರರಾಜ್ಯಗಳಿಂದ ಮಾರಲು ತರಲ್ಪಡುತ್ತಿದ್ದ ವಸ್ತುಗಳಿಗೆ ರಾಜರ ಕಾಲದಲ್ಲಿ ಉಕ್ಕಡಗಳಲ್ಲಿ ಅನೇಕ ತರದ ಸುಂಕಗಳನ್ನು ವಿಧಿಸುತ್ತಿದ್ದರು. ಕರ್ನಲ್ ಫ್ರೇಜರನು 1834ರಲ್ಲಿ ಕೆಲವು ಸುಂಕಗಳನ್ನು ತೆಗೆದು ಹಾಕಿದನು. ಇದರಿಂದ ಕೊಡಗು ಮತ್ತು ನೆರೆಯ ರಾಜ್ಯಗಳಲ್ಲಿ ಪರಸ್ಪರ ವ್ಯಾಪಾರ ವಹಿವಾಟು ಹೆಚ್ಚಾಯಿತು. ಬ್ರಿಟಿಷರ ಆಳ್ವಿಕೆಯ ಮೊದಲನೇಯ ಹಂತದಲ್ಲಿ (1834–1861) ವ್ಯಾಪಾರಸ್ಥರು, ಕೈಕಸಬುದಾರರು ಅವರ ವೃತ್ತಿ ಜಾತಿಗಳಿಗೆ ಅನುಸಾರವಾಗಿ ಮನೆಯೊಂದಕ್ಕೆ ಮೂರು ಆಣೆ $2\frac{1}{2}$ ಕಾಸು (ಪೈ)ನಿಂದ (20 ಪೈಸೆ) ಮೂರು ರೂಪಾಯಿ 10 ಆಣೆ 10 ಕಾಸು (ಪೈ) (67 ಪೈಸೆ) ಕಂದಾಯ ಕೊಡಬೇಕಾಗಿತ್ತು, ಎಂದು ಕೊಡಗಿನ ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ. 1868ರ ನಂತರ ಕಂದಾಯವನ್ನು ಹಣದ ರೂಪದಲ್ಲಿ ಸಂಗ್ರಹ ಮಾಡಲಾಯಿತು. ಅದಕ್ಕೂ ಮೊದಲು ಬತ್ತದ ರೂಪದಲ್ಲಿ ವಸೂಲಿ ಮಾಡುತ್ತಿದ್ದರು.

ಬ್ರಿಟಿಷರ ಕಾಲದಲ್ಲಿ ವ್ಯಾಪಾರಕ್ಕೋಸ್ಕರ ಉತ್ತರ ಕನ್ನಡದ ನವಾಯತರು, ಮುಸಲ್ಮಾನರು, ಕೇರಳದ ಮಾಪಿಳ್ಳೆಗಳು, ತಮಿಳುನಾಡಿನ ಲಬ್ಬೆಯವರು ಕೊಡಗಿನಲ್ಲಿ ಬಂದು ನೆಲಸಿದರು. 1868–69 ರಲ್ಲಿನ ಕೊಡಗಿನ ಆಡಳಿತ ವರದಿಯು ಅಂದಿನ ವ್ಯಾಪಾರ, ವಾಣಿಜ್ಯವನ್ನು ಕುರಿತಂತೆ ಈ ರೀತಿಯಾಗಿ ವಿವರಿಸುತ್ತದೆ. ವರ್ಷದಲ್ಲಿ, ಡಿಸೆಂಬರ್‌ನಿಂದ ಮಾರ್ಚ್ ತಿಂಗಳ ಅವಧಿಯಲ್ಲಿ ಕಾಫಿ ಮತ್ತು ಅಕ್ಕಿಯ ವ್ಯಾಪಾರ ವಹಿವಾಟು ಬಿರುಸಿನಿಂದ ನಡೆಯುತ್ತಿತ್ತು. 1867-68 ಮತ್ತು ಅದರ ಮುಂದಿನ ವರ್ಷ (1868-69) ಕ್ರಮವಾಗಿ 24,838 ಮತ್ತು 34,641 ಗಾಡಿಗಳು ಘಟ್ಟವನ್ನು ಇಳಿದು ಪ್ರಯಾಣ ಮಾಡಿದ್ದವು. ಬಹುಪಾಲು ಗಾಡಿಗಳು, ಸಂಪಾಜೆ ಕಣಿವೆ ಮಾರ್ಗ ಹೆಚ್ಚು ಸುಲಭವಾಗಿದ್ದರೂ ಪೆರಿಯಂಬಾಡಿ ಕಣಿವೆ ಮೂಲಕ ಪ್ರಯಾಣ ಬೆಳೆಸುತ್ತಿದ್ದವು. ಇದು ಅಂದು ಕೊಡಗಿನೊಂದಿಗೆ ಪೆರಿಯಂಬಾಡಿ ಕಣಿವೆ ಮೂಲಕ (ಸಿದ್ದಾಪುರ – ವೀರರಾಜಪೇಟೆ – ಪೆರಿಯಂಬಾಡಿ) ಮಲಬಾರಿನೊಂದಿಗೆ ಹೆಚ್ಚು ಸಂಪರ್ಕ ಪಡೆದಿತ್ತೆಂದು ಗೊತ್ತಾಗುವುದು. ಅಂದಿನ ಮುಖ್ಯ ರಫ್ತುಗಳು ಕಾಫೀ, ಏಲಕ್ಕಿ, ಬತ್ತ, ಶ್ರೀಗಂಧ ಮತ್ತು ಸಾಗುವಾನಿ ಮರಗಳು ಎಂದು ವರದಿ ತಿಳಿಸುವುದು. ಒಂದು ಅಂದಾಜಿನಂತೆ 1867-68ರಲ್ಲಿ ಸುಮಾರು ರೂ. 18.60 ಲಕ್ಷ (3,100 ಟನ್) ಬೆಲೆಯ ಕಾಫಿ ಮತ್ತು ರೂ. 1.68 ಲಕ್ಷ ಬೆಲೆಯ ಏಲಕ್ಕಿ ರಫ್ತಾಗಿದೆ. ಬತ್ತವು ಸಾಮಾನ್ಯವಾಗಿ ದಕ್ಷಿಣ ಕೊಡಗಿನ ಎಲ್ಲಾ ತಾಲೂಕುಗಳಿಂದ ಮಲಬಾರಿಗೆ ರಫ್ತಾಗುತ್ತಿತ್ತು.

1868-69ರ ಆಡಳಿತ ವರದಿ ತಿಳಿಸುವಂತೆ ಜಿಲ್ಲೆಯ ಪ್ರಮುಖ ಆಮದು ವಸ್ತುಗಳು ಇವುಗಳಾಗಿದ್ದವು : ಎಲ್ಲಾ ವಿಧವಾದ ಯೂರೋಪಿಯನ್ ಮಾದಕಪೇಯಗಳು, ಕಬ್ಬಿಣ ವಸ್ತುಗಳು, ಆಯುಧಗಳು, ಮದ್ದುಗುಂಡು ಮತ್ತು ದಿನಸೀ ವಸ್ತುಗಳು, ಸಕ್ಕರೆ, ಹುರುಳಿ, ರಾಗಿ, ಎಳ್ಳೆಣ್ಣೆ (ಇವುಗಳು ಮೈಸೂರು ಪ್ರದೇಶದಿಂದ ಆಮದಾಗುತ್ತಿದ್ದವು), ಎಲ್ಲಾ ವಿಧವಾದ ಬಟ್ಟೆಗಳು ಮದ್ರಾಸ್‌ನಿಂದ ಬರುತ್ತಿದ್ದವು. ದಕ್ಷಿಣ ಕನ್ನಡದಿಂದ ಉಪ್ಪು, ತೆಂಗು ಮತ್ತು ತೆಂಗಿನ ಎಣ್ಣೆ ಆಮದಾಗುತ್ತಿದ್ದವು.

1871ರ ಕೊಡಗಿನ ಪ್ರಥಮ ಜನಗಣತಿ ವರದಿ ಮಾಡಿರುವಂತೆ, ರಾಜ್ಯದ ಒಟ್ಟು ಭೂ ಕಂದಾಯದಲ್ಲಿ ಸುಮಾರು ಅರ್ಧದಷ್ಟು (ಶೇ. 46.6) ಕಾಫಿ ಮತ್ತು ಏಲಕ್ಕಿ ಬೆಳೆಗಾರರಿಂದ ಸಂದಾಯವಾಗುತ್ತಿತ್ತು. ಕೊಡಗಿನಲ್ಲಿ ಅಂದು ವ್ಯಾಪಾರ ವಾಣಿಜ್ಯಗಳು ವ್ಯಾಪಕ ಪ್ರಮಾಣದಲ್ಲಿ ಬೆಳೆಯದೇ ಇರುವುದಕ್ಕೆ ಹಲವಾರು ಕಾರಣಗಳನ್ನು ಸೂಚಿಸುತ್ತ ಲೆಫ್ಟಿನಂಟ್ ಕೊನೋರ್ ವ್ಯಾಪಾರ ಮತ್ತು ವಾಣಿಜ್ಯದ ಬಗ್ಗೆ ಕೊಡಗಿನ ಜನಸಾಮಾನ್ಯರ ಮನೋಪ್ರವೃತ್ತಿಯನ್ನು ಕುರಿತು ಈ ರೀತಿ ಉಲ್ಲೇಖಿಸುತ್ತಾರೆ : "ಜನ ಸಮುದಾಯದಲ್ಲಿ ಬಹುಪಾಲು, ವ್ಯಾಪಾರ, ವಾಣಿಜ್ಯ ವ್ಯವಹಾರಗಳಲ್ಲಿ ಆಸಕ್ತಿ ಹೊಂದಿರಲಿಲ್ಲ, ತಾವು ಉಳುಮೆ ಮಾಡುತ್ತಿರುವ ಜಮೀನಿನಲ್ಲಿಯೇ ವಾಸವಾಗಿದ್ದು, ವಿರಳ ಸಾಮಾಜಿಕ ಸಂಪರ್ಕ ಹೊಂದಿದ್ದರಿಂದ ಅವರ ಜೀವನಾವಶ್ಯಕಗಳೂ ಕಡಿಮೆ ಇದ್ದು ಸ್ಥಳೀಯವಾಗಿ ಅವುಗಳ ಪೂರೈಕೆ ಆಗುತ್ತಿದ್ದುದರಿಂದ ಅವರಿಗೆ ಪರಸ್ಪರ ವ್ಯಾಪಾರದ ಬಗ್ಗೆ ಮತ್ತು ಅದರ ಸಂಬಂಧದ ಬಗ್ಗೆ ತಿಳಿದುಕೊಳ್ಳಲು ಆಸಕ್ತಿ ಇರಲಿಲ್ಲ. ಅವರು ಬೆಳೆಯುವ ಬೆಳೆಗಳಲ್ಲಿ ವೈವಿಧ್ಯತೆ ಮತ್ತು ಹೆಚ್ಚಳ ಇಲ್ಲದೇ ಇದ್ದುದರಿಂದ ಅವರಿಗೆ ಹೆಚ್ಚಾಗಿ ಏನನ್ನೂ ಮಾರುವ ಅವಶ್ಯಕತೆ ಇರಲಿಲ್ಲ ಮತ್ತು ಹೊರಗಿನ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಸಂಪರ್ಕ ಸಾಧನಗಳ ಕೊರತೆ ಇತ್ತು. ಮೇಲಾಗಿ ಪರದೇಶದ ವಸ್ತುಗಳನ್ನು ಕೊಂಡು ಭೋಗಿಸಿ ಸುಖಪಡುವ ಮನೋಭಿಲಾಷೆಯನ್ನು ಹೊಂದಿರಲಿಲ್ಲ. ಇದರೊಂದಿಗೆ ಆಳುವ ಅರಸರ ಏಕಸ್ವಾಮ್ಯ ವ್ಯಾಪಾರದ ನೀತಿಯು ಮುಕ್ತ ವ್ಯಾಪಾರದ ವಿಸ್ತರಣೆಗೆ ಅಡ್ಡಿಯಾಗಿತ್ತು". ಹಳೆಯ ಕಾಲದ ಮುಖ್ಯ ವ್ಯಾಪಾರ ಮಾರ್ಗಗಳೆಂದರೆ ಹುಣಸೂರು-ಮಡಿಕೇರಿ ರಸ್ತೆ, ಸಂಪಾಜೆ ಕಣಿವೆ ಮಾರ್ಗದ ಮೂಲಕ ಮಂಗಳೂರಿಗೆ ಹೋಗುವ ರಸ್ತೆ ಮತ್ತು ಪೆರಿಯಂಬಾಡಿ ಕಣಿವೆ ಮೂಲಕ ಆನೆಚೌಕೂರಿನಿಂದ ಕೇರಳದ ಕಣ್ಣಾನೂರು, ತಲ್ಲೇರಿಗಳಿಗೆ ಹೋಗುವ ರಸ್ತೆ. ಆದರೆ ಕಾಲಕ್ರಮೇಣ ಪರಿಸ್ಥಿತಿಯಲ್ಲಿ ಬದಲಾವಣೆಯಾಯಿತು. ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಮತ್ತು ನಂತರದ ದಶಕಗಳಲ್ಲಿ ವಿಶೇಷವಾಗಿ ಸರ್ ಮಾರ್ಕ್ ಕಬ್ಬನ್ ಕಾಲದಲ್ಲಿ ಸಂಚಾರ ಸೌಲಭ್ಯ, ಸಂಪರ್ಕ ಸಾಧನಗಳಲ್ಲಿ ಸಾಕಷ್ಟು ಸುಧಾರಣೆಯಾಯಿತು.

ಕಳೆದ ಶತಮಾನದ ಕೊನೆಯಲ್ಲಿ ಕೊಡಗಿನಿಂದ ರಫ್ತಾಗುತ್ತಿದ್ದ ಮುಖ್ಯ ವಸ್ತುಗಳಲ್ಲಿ ಏಲಕ್ಕಿ, ಮರಮುಟ್ಟು, ಕಿತ್ತಳೆ ಮತ್ತು ಅಲ್ಪ ಪ್ರಮಾಣದಲ್ಲಿ ಬತ್ತ ಇವುಗಳು ಪಶ್ಚಿಮ ಕರಾವಳಿಯ ಮಂಗಳೂರು, ಕಣ್ಣಾನೂರು, ತಲ್ಲೇರಿಗಳಿಗೆ ರಫ್ತಾಗುತ್ತಿದ್ದವು. ಉತ್ತರ ಮತ್ತು ಪೂರ್ವಭಾಗದ ಕೊಡಗಿನ ವ್ಯಾಪಾರ ಮೈಸೂರಿನೊಂದಿಗೆ ನಡೆಯುತ್ತಿತ್ತು. ಮಡಿಕೇರಿ ನಗರದ ಮುಖ್ಯ ವ್ಯಾಪಾರ ಸಂಪರ್ಕವು ಪಶ್ಚಿಮದಲ್ಲಿ ಮಂಗಳೂರು ಮತ್ತು ಪೂರ್ವದಲ್ಲಿ ಮೈಸೂರು-ಬೆಂಗಳೂರಿನೊಂದಿಗೆ ನಡೆಯುತ್ತಿತ್ತು. ಮಂಗಳೂರಿನೊಂದಿಗೆ ನಡೆಯುವ ವ್ಯಾಪಾರ ಸಂಪರ್ಕವು ವಿಪರೀತ ಮಳೆಯ ಕಾರಣ ಸಾಮಾನ್ಯವಾಗಿ ಜೂನ್ ತಿಂಗಳ ಕೊನೆಯವರೆಗೆ ಮಾತ್ರ ಇರುತ್ತಿತ್ತು.

### ವ್ಯಾಪಾರ ವಾಣಿಜ್ಯದ ಅಭಿವೃದ್ಧಿ

1834ರಲ್ಲಿ ಕೊಡಗು ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟ ನಂತರ, ಮುಕ್ತ ವ್ಯಾಪಾರ ಮತ್ತು ಮುಕ್ತ ಮಾರುಕಟ್ಟೆಯ ನೀತಿಯಿಂದ ಕೊಡಗಿನ ಆಮದು ರಫ್ತು ವ್ಯಾಪಾರ ಚಟುವಟಿಕೆಗಳು ಉತ್ತೇಜನಗೊಂಡವು. ಪಶ್ಚಿಮ ಕರಾವಳಿಯ ಮೂಲಕ (ಮಲಬಾರ್) ಕೊಡಗಿನಿಂದ ರಫ್ತಾಗುವ ಮತ್ತು ಕೊಡಗಿಗೆ ಆಮದಾಗುವ ಎಲ್ಲಾ ಮಾರಾಟ ವಸ್ತುಗಳನ್ನು ಆಮದು-ರಫ್ತು ಸುಂಕದಿಂದ ಮುಕ್ತಗೊಳಿಸಲಾಯಿತು. ಸರ್ಕಾರದ ಅನುಮತಿ ಇಲ್ಲದೇ ಮಾದಕ ಪೇಯಗಳ ತಯಾರಿಕೆ ಮತ್ತು ಮನೆಗಳಲ್ಲಿ ಹೆಂಡದ ಬಟ್ಟಿ ಇಳಿಸುವಿಕೆ ಇವುಗಳ ಮೇಲೆ ನಿರ್ಬಂಧ ಹೇರಲಾಯಿತು.

ಕೊಡಗಿನಲ್ಲಿ ಉತ್ಪಾದನೆಯಾಗುತ್ತಿದ್ದ ಹತ್ತಿ ಬಟ್ಟೆಯ ಮೇಲೆ ನಿಗದಿಪಡಿಸಿದ ಪ್ರತೀ ಅಳತೆಯ ಮಾನಕ್ಕೆ ಒಂದು ದುಡ್ಡಿನಂತೆ (ಈಗಿನ ನಯೆಪೈಸೆಯಷ್ಟು) ತೆರಿಗೆ ವಸೂಲಿ ಮಾಡಿ ಸರ್ಕಾರದ ಮುದ್ರೆಯನ್ನು ಹಾಕಲಾಗುತ್ತಿತ್ತು. ವರ್ತಕರಿಗೆ ವಿಧಿಸುತ್ತಿದ್ದ ವೃತ್ತಿ ತೆರಿಗೆ ಅವರವರ ವ್ಯವಹಾರ ವಹಿವಾಟಿನ ಗಾತ್ರಾನುಸಾರ ಇರುತ್ತಿತ್ತು. ಉತ್ತಮ ವ್ಯಾಪಾರಸ್ಥರ ಕುಟುಂಬ (ನಿಜಕೂಲ್) 8 ಬಹದ್ದೂರಿ ಹಣ ನೀಡಿದರೆ ಮಧ್ಯಮ ವರ್ಗದವರು 5-11/16 (ಅರಕೂಲ)

ಮತ್ತು ಕೆಳವರ್ಗ 2–13/16 (ಕಲಕೊಲು) ನೀಡಬೇಕಾಗುತ್ತಿತ್ತು. ಈ ರೀತಿ ಆದೇಶಗಳನ್ನು ಪಾಲಿಸುವಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಬ್ರಿಟಿಷ್ ಸರ್ಕಾರ 1834ರ ಆಗಸ್ಟ್ ಕೊನೆಯಲ್ಲಿ ಸೂಚಿಸಿ ಆಜ್ಞೆಯನ್ನು ಹೊರಡಿಸಿತ್ತು. ಈ ಆಜ್ಞೆಯು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೊಡಗಿನ ವ್ಯಾಪಾರ ಅಭಿವೃದ್ಧಿಗೆ ಸಹಾಯಕವಾಯಿತು.

1864ರಲ್ಲಿ ಮೈಸೂರು ಪ್ರಾಂತ್ಯ ಮತ್ತು ನೆರೆಯ ಬ್ರಿಟಿಷ್ ಇಂಡಿಯಾದ ಆಡಳಿತದಲ್ಲಿದ್ದ ಜಿಲ್ಲೆಗಳೊಂದಿಗೆ ವಿನಿಮಯವಾಗುತ್ತಿದ್ದ ವ್ಯಾಪಾರಿ ವಸ್ತುಗಳ ಮೇಲಿನ ಸುಂಕವನ್ನು ತೆಗೆದುಹಾಕಲಾಯಿತು. ಆದರ ಬದಲಿಗೆ 1879–80ರಲ್ಲಿ ಆಕ್ಟ್ರಾಯ್ ತೆರಿಗೆಯನ್ನು ವಿಧಿಸಲಾಯಿತು. ಈ ಕ್ರಮವು ಪುರಸಭೆಗಳಿಗೆ ಆದಾಯ ಮೂಲ ಒದಗಿಸಲು ಸಹಾಯಕವಾಯಿತು ಮತ್ತು ಸ್ಥಳೀಯವಾಗಿ ವ್ಯಾಪಾರ ವಾಣಿಜ್ಯಕ್ಕೆ ಪ್ರೋತ್ಸಾಹ ನೀಡಿತು. ಈ ಸುಂಕರಹಿತ ವ್ಯಾಪಾರ ನೀತಿಯು ಕೊಡಗು ಇತರ ಪ್ರದೇಶಗಳೊಂದಿಗೆ ವ್ಯಾಪಾರ ಸಂಬಂಧ ಬೆಳೆಸಲು ಹೆಚ್ಚು ಪ್ರೇರಕವಾಯಿತು.

ಮುಂದಿನ ದಶಕಗಳಲ್ಲಿ ಪ್ರಾರಂಭಿಸಲಾದ ಬೆಂಗಳೂರು – ಮದ್ರಾಸ್ ರೈಲು ಮಾರ್ಗ (1864), ಬೆಂಗಳೂರು – ಮೈಸೂರು (1877–82) ಮತ್ತು ಬೆಂಗಳೂರು – ಹರಿಹರ ಮೂಲಕ ಬೊಂಬಾಯಿ ಮಾರ್ಗ (1889) ಹಾಗೂ ಮಂಗಳೂರಿಗೆ ತಲುಪಿದ (1907) ಮಲಬಾರಿನಿಂದ ಬರುವ ಮದ್ರಾಸ್ – ಮಂಗಳೂರು ಮಾರ್ಗ ವ್ಯಾಪಾರ ವಾಣಿಜ್ಯ ಸಂಪರ್ಕಗಳು ಬಹು ದೂರದವರೆಗೆ ಹರಡಲು ಸಹಾಯಕವಾದವು. ಹೊಸ ರೈಲುಮಾರ್ಗಗಳ ನಿರ್ಮಾಣದಿಂದ ಜಿಲ್ಲಾ ಕೇಂದ್ರವಾದ ಮಡಿಕೇರಿಯೊಂದಿಗೆ ಮೈಸೂರು (120 ಕಿ.ಮೀ.), ಕಣ್ಣಾನೂರು (104 ಕಿ.ಮೀ.), ತಲ್ಲೇರಿ (96 ಕಿ.ಮೀ.) ಮತ್ತು ಮಂಗಳೂರು (129 ಕಿ.ಮೀ.) ಇವುಗಳು ರೈಲು ಸಂಪರ್ಕ ಪಡೆದು ದೂರದ ಸ್ಥಳಗಳಿಗೆ ಸರಕು ಸಾಗಾಣಿಕೆಗೆ ಸಹಾಯಕವಾಯಿತು. ಸುಧಾರಣೆಗೊಂಡ ಸಂಚಾರ ಸೌಲಭ್ಯ ಮತ್ತು ವೃದ್ಧಿಸುತ್ತಿರುವ ವ್ಯಾಪಾರ ವಹಿವಾಟುಗಳು, ಹೆಚ್ಚುತ್ತಿರುವ ಹಣದ ಬಳಕೆ, ಮುಂತಾದವುಗಳು ದೂರದ ಲೇವಾದೇವಿಗಾರರು, ಗಿರವಿದಾರರು ಕೊಡಗಿನ ಅಭಿವೃದ್ಧಿ ಹೊಂದುತ್ತಿರುವ ನಗರಗಳಲ್ಲಿ ಬಂದು ನೆಲೆ ನಿಲ್ಲಲು ಸಹಾಯಕವಾದವು. ಹೊರನಾಡಿನ ಅನೇಕ ಕೂಡು ಬಂಡವಾಳದ ವ್ಯಾಪಾರಿ ಸಂಸ್ಥೆಗಳು ಇಲ್ಲಿ ತಮ್ಮ ಶಾಖೆಯನ್ನು ತೆರೆದವು. ಕೆಲವು ಹೊಸ ಕಂಪನಿಗಳು (ವಿಶೇಷವಾಗಿ ಯೂರೋಪಿಯನ್ ಒಡೆತನದ ಕಾಫೀ ತೋಟಗಳು) ಸ್ಥಳೀಯವಾಗಿ ನೋಂದಾಯಿಸಲ್ಪಟ್ಟವು. ಚಹ ಮತ್ತು ಕಾಫೀ ಉದ್ಯಮ ನಡೆಸಲು ಪ್ರಾರಂಭವಾದ ಇತ್ತೀಚಿನ ಕಂಪನಿಗಳಲ್ಲಿ– ಗ್ಲೆನ್‌ಲಾರ್ನ ಎಸ್ಟೇಟ್ ಎನ್ನುವ ಇಂಗ್ಲಿಷ್ ಒಡೆತನದ ಕಂಪೆನಿ (1915), ಕೂರ್ಗ್ ಟೀ ಕಂ. (1943), ಕನ್ಸಾಲಿಡೇಟಡ್ ಕಾಫೀ ಎಸ್ಟೇಟ್, ಕುಶಾಲನಗರ (1948) ಮುಂತಾದವುಗಳು ಪ್ರಮುಖವಾದವುಗಳು. ಒಂದು ವರದಿ ತಿಳಿಸುವಂತೆ ಕೊಡಗಿನಲ್ಲಿ ಕೆಲವು ವ್ಯಾಪಾರಿ ಕಂಪೆನಿಗಳು ಬಹಳ ಹಿಂದೆಯೇ ವ್ಯವಸಾಯ ಉತ್ಪನ್ನಗಳ ಮಾರಾಟದಲ್ಲಿ ತೊಡಗಿದ್ದವು. ಅವುಗಳ ವಿವರ ಈ ರೀತಿ ಇರುವುದು: ಮರ್ಕಂಟಾಯಿಲ್ ಮಿಶನ್‌ಬ್ರಾಂಚ್, ಎಚ್. ಮಾನ್ ಮತ್ತು ಕಂ. (ಇವುಗಳು ಮಡಿಕೇರಿಯಲ್ಲಿ ಇದ್ದಿರಬಹುದು), ವೀರರಾಜಪೇಟೆಯಲ್ಲಿ ಬ್ರೌನ್ ಮತ್ತು ಕಂ., ಮೀರಾದೀನ ಮತ್ತು ಕಂ, ಇಬ್ರಾಹೀಮ್ ಸಾಹೇಬ ಮತ್ತು ಕಂ., ಮುಂತಾದವುಗಳು ಮಡಿಕೇರಿಯಲ್ಲಿದ್ದ ಮಡಿಕೇರಿ ಟ್ರೇಡಿಂಗ್ ಕಂ., ಮುಂದೆ ಮ್ಯಾಕ್‌ಡೋನೆಲ್ ಕಂ. ಎಂದು ಕರೆಯಲ್ಪಟ್ಟಿತು. ನಂತರ ಮಡಿಕೇರಿಯಲ್ಲಿ ದಿ ಕೊಡಗು ಟ್ರೇಡಿಂಗ್ ಕಾರ್ಪೊರೇಷನ್, ದಿ ಕೊಡಗು ಯೂರೋಪಿಯನ್ ಮುಂತಾದ ವಾಣಿಜ್ಯಸಂಸ್ಥೆಗಳು ಪ್ರಾರಂಭವಾದವು*. 1866ರ ಸುಮಾರಿಗೆ ಮಡಿಕೇರಿ ಮತ್ತು ಪೊಲ್ಲಿಬೆಟ್ಟಗಳಲ್ಲಿ ಐರೋಪ್ಯರ ಎರಡು ಮನರಂಜನಾ ಕ್ಲಬ್‌ಗಳು ಇದ್ದ ಬಗ್ಗೆ ತಿಳಿದು ಬರುವುದು. ಈ ಕ್ಲಬ್‌ಗಳು ತನ್ನ ಸದಸ್ಯರಿಗೆ ಬೇಕಾಗುವ ಮಾದಕಪೇಯಗಳಲ್ಲದೇ ಸ್ತ್ರೀಯರ ಶೃಂಗಾರ ವರ್ಧಕ ಅಲಂಕಾರ ವಸ್ತುಗಳನ್ನೂ ಸಹ ಪೂರೈಸುತ್ತಿದ್ದವು.

1854ರ ನಂತರದ ದಶಕಗಳಲ್ಲಿ ಯೂರೋಪಿಯನ್ನರು ಕಾಫಿಯ ವ್ಯವಸಾಯವನ್ನು ವಿಸ್ತೃತವಾಗಿ ಕೈಗೊಂಡು ಅದನ್ನು ಒಂದು ಉದ್ಯಮವಾಗಿ ಪರಿಗಣಿಸಿದ ನಂತರ ಅನೇಕ ಯೂರೋಪಿಯನ್ ಒಡೆತನದ ಕೂಡು ಬಂಡವಾಳ ಸಂಸ್ಥೆಗಳು ಪ್ರವರ್ತಿಸಲ್ಪಟ್ಟವು. ಮಡಿಕೇರಿಯಲ್ಲಿ 1863ರ ಸುಮಾರಿಗೆ ಪ್ರಾರಂಭಗೊಂಡ ತೋಟದ ಬೆಳೆಗಾರರ ಸಂಘ (ಪ್ಲಾಂಟರ್ಸ್ ಅಸೋಸಿಯೇಷನ್) ಕೊಡಗಿನಾದ್ಯಂತ ಅಂಚೆ ವ್ಯವಸ್ಥೆಯನ್ನು ವಿಸ್ತರಿಸಲು ಮತ್ತು ತೀವ್ರಗೊಳಿಸಲು 'ಟಾಂಗಾಡಾಕ್' (ಕುದುರೆಗಾಡಿ ಮೂಲಕ ಅಂಚೆ ಸಾಗಣೆ ವ್ಯವಸ್ಥೆ) ಕಂಪನಿಯನ್ನು ಪ್ರಾರಂಭಿಸುವ ಬಗ್ಗೆ ಸೂಚನೆಯನ್ನೂ ಸಹ ಸರ್ಕಾರಕ್ಕೆ ನೀಡಿತ್ತು. ಅಲ್ಲದೇ ಯುನೈಟೆಡ್ ಪ್ಲಾಂಟರ್ಸ್ ಅಸೋಸಿಯೇಷನ್ ಎಂಬ ಕಾಫಿ ಬೆಳೆಗಾರರ ಸಂಘ, (ನೀಲಗಿರಿ), ಕಾಫಿ ಬಳಕೆಯನ್ನು ಹೆಚ್ಚಿಸಲು ಪ್ರಚಾರ ಕೈಗೊಳ್ಳಲು ಸಹಾಯವಾಗುವಂತೆ ರಫ್ತು ಕಾಫಿಯ ಮೇಲೆ ಸುಂಕ (ಕಾಫಿ ಸೆಸ್) ವಿಧಿಸಲು 1909

* ಐ.ಮಾ. ಮುತ್ತಣ್ಣ, –'ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯ'.

ರಲ್ಲಿಯೇ ಸರ್ಕಾರದ ಮೇಲೆ ಒತ್ತಡ ತಂದಿತ್ತು. ಆದರೆ ಇದು ಕಾರ್ಯಗತವಾದದ್ದು 1935ರಲ್ಲಿ ಇಂಡಿಯನ್ ಕಾಫಿ ಸೆಸ್ ಕಮಿಟಿ ರಚನೆಗೊಂಡ ನಂತರವೇ. 'ಇಂಪೀರಿಯಲ್ ಗ್ಯಾಸೆಟಿಯರ್ ಆಫ್ ಇಂಡಿಯಾ'ದಲ್ಲಿ 1904ರ ಸುಮಾರಿಗೆ ಕೊಡಗಿನ ವ್ಯಾಪಾರ ವಾಣಿಜ್ಯದ ಬಗ್ಗೆ ಈ ಕೆಳಗಿನಂತೆ ವಿವರಿಸಲಾಗಿದೆ.

ಕೊಡಗಿನಲ್ಲಿ ವಿಶಾಲ ಅರ್ಥದಲ್ಲಿ ಹೇಳಿಕೊಳ್ಳುವಂತಹ ಯಾವುವೇ ಕೈಗಾರಿಕೆ ಇರುವುದಿಲ್ಲ ಎನ್ನುತ್ತ, ಕುಶಾಲನಗರದ ಬಳಿಯಲ್ಲಿ ಒಂದು ದೊಡ್ಡ ಪ್ರಮಾಣದ ಮದ್ಯಸಾರವನ್ನು ಭಟ್ಟಿ ಇಳಿಸುವ ಕಾರ್ಖಾನೆ (ಡಿಸ್ಟಿಲರಿ) ಕೆಲಸ ಮಾಡುತ್ತಿದ್ದುದಾಗಿ ಮತ್ತು ಆ ವರ್ಷ ಕಾಫಿ ಫಸಲಿನಲ್ಲಿ ಆದ ಇಳಿಕೆಯಿಂದ ಉತ್ಪಾದನೆ ಕುಂಟಿತಗೊಂಡುದಾಗಿ ಹೇಳಿದೆ. ಮಡಿಕೇರಿಯಲ್ಲಿ ನಾಡಹಂಚು ಮತ್ತು ಮಡಿಕೆ ಮಾಡುವ ಕೈಗಾರಿಕೆಗಳು 1882 ರಿಂದ 1899ರ ಅವಧಿಯಲ್ಲಿ ಇದ್ದುದಾಗಿ ಹೇಳಲಾಗಿದೆ. ನಾಡಹಂಚನ್ನು ಮಾನ್ ಮತ್ತು ಕಂ.ಯವರು 1881ರಲ್ಲಿ ಪ್ರಾರಂಭಿಸಿದರು; 1889ರಲ್ಲಿ ಅದು ಆರ್ಥಿಕವಾಗಿ ಲಾಭಕರವಲ್ಲವೆಂದು ನಿಲ್ಲಿಸಿದರು. 1904ರ ಸುಮಾರಿಗೆ ಮಡಿಕೇರಿ ಮತ್ತು ವೀರರಾಜಪೇಟೆ, ಕೊಡಗಿನ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ಆ ಕಾಲದಲ್ಲಿ ಸೋಮವಾರಪೇಟೆ ಮತ್ತು ಕೊಡಲಿಪೇಟೆ ತಕ್ಕಮಟ್ಟಿಗೆ ವ್ಯಾಪಾರ ಕೇಂದ್ರಗಳಾಗಿದ್ದವು, ಮತ್ತು ಬಹು ದೊಡ್ಡ ಪ್ರಮಾಣದಲ್ಲಿ ವಾರದ ಸಂತೆಗಳು, ದಕ್ಷಿಣ ಕೊಡಗಿನ ಗೋಣಿಕೊಪ್ಪಲು, ಅಮ್ಮತ್ತಿ ಮತ್ತು ಸಿದ್ದಾಪುರಗಳಲ್ಲಿ ಮತ್ತು ಉತ್ತರ ಕೊಡಗಿನ ಸುಂಟಿಕೊಪ್ಪ ಮತ್ತು ಶನಿವಾರಸಂತೆಗಳಲ್ಲಿ ನಡೆಯುತ್ತಿದ್ದುದಾಗಿ ಹೇಳಲಾಗಿದೆ. ಸಣ್ಣ ಪ್ರಮಾಣದ ಸಂತೆಗಳು ಕುಶಾಲನಗರ, ಪೊನ್ನಂಪೇಟೆ, ನಾಪೋಕ್ಲು, ಭಾಗಮಂಡಲ ಮತ್ತು ಮೂರ್ನಾಡುಗಳಲ್ಲಿ ನಡೆಯುತ್ತಿದ್ದವು ಎಂದು ಕಂಡುಬರುವುದು. ಲಿಂಗರಾಜೇಂದ್ರನ ಹುಕುಂನಾಮೆಯಲ್ಲಿ (1811) ವೀರರಾಜಪೇಟೆ ಮತ್ತು ಸೋಮವಾರಪೇಟೆಗಳನ್ನು ಪ್ರಮುಖ ಮಾರುಕಟ್ಟೆಗಳೆಂದು ಮತ್ತು ಎಲ್ಲಾ ನಾಡುಗಳ ಕೇಂದ್ರ ಸ್ಥಳಗಳನ್ನು ಕಡಿಮೆ ಮಹತ್ವದ ವ್ಯಾಪಾರ ಕೇಂದ್ರಗಳೆಂದು ಬಣ್ಣಿಸಲಾಗಿದೆ.

**ಆಮದು ಮತ್ತು ರಫ್ತು**

ಒಂದು ಪ್ರದೇಶದ ಆಮದು–ರಫ್ತುಗಳು ಕಾಲದುದ್ದಕ್ಕೂ ಒಂದೇ ರೀತಿಯಾಗಿರುವುದಿಲ್ಲ. ಸ್ಥಳೀಯ ಜನರ ಬದಲಾಗುತ್ತಿರುವ ಬೇಡಿಕೆ, ಸ್ಥಳೀಯ ಉತ್ಪಾದನೆಗಳು ಮಾರುಕಟ್ಟೆಯ ಸೌಲಭ್ಯ, ಔದ್ಯಮೀಕರಣ, ಜನಸಂಖ್ಯೆಯ ಹೆಚ್ಚಳ, ನಗರೀಕರಣ ಮುಂತಾದ ಹತ್ತು ಹಲವಾರು ಸಂಗತಿಗಳನ್ನು ಅವಲಂಬಿಸಿರುವವು.

ಪ್ರಾರಂಭದಿಂದಲೂ ಕೊಡಗು ಬತ್ತದ ಬೆಳೆಗೆ ಪ್ರಸಿದ್ಧವಾಗಿದ್ದು ಕೊಡಗಿನಾದ್ಯಂತ ಬತ್ತವು ಸಮೃದ್ಧಿಯಾಗಿ ಬೆಳೆಯುವುದು. ಇಲ್ಲಿಯ ಹೆಚ್ಚುವರಿ ಬತ್ತವು ಕೇರಳ, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ರಫ್ತಾಗುವುದು. ಡಾ|| ಬುಕನನ್ ವರದಿ ಮಾಡಿರುವಂತೆ 1801ರಲ್ಲಿ ವಾರ್ಷಿಕ ಸುಮಾರು ಐದಾರು ಸಾವಿರ ಹೇರು ಪ್ರಮಾಣದ ಕೊಡಗಿನ ಬತ್ತ ಪಿರಿಯಾಪಟ್ಟಣದ ಸುಂಕದಕಟ್ಟೆಯ ಮೂಲಕ ಹಾದು ಹೋಗುತ್ತಿತ್ತು. ಇದಕ್ಕೆ ಪ್ರತಿಯಾಗಿ ಆ ಕಡೆಯಿಂದ ಒಣ ಧಾನ್ಯಗಳು, ಬಟ್ಟೆ, ತುಪ್ಪ, ಖಾದ್ಯತೈಲ, ಬೆಲ್ಲ, ಬೆಳ್ಳುಳ್ಳಿ, ವೀಳ್ಯದೆಲೆ, ಕಬ್ಬಿಣ ಮತ್ತು ಉಕ್ಕು, ಕಂಬಳಿ ಮತ್ತು ಹುಣಿಸೆ ಹಣ್ಣು ಆಮದಾಗುತ್ತಿದ್ದವು. 1817ರ ಸುಮಾರಿಗೆ ಲೆಫ್ಟಿನಂಟ್ ಕೊನೋರ್ ವರದಿ ಮಾಡುವಂತೆ, "ಇಲ್ಲಿಯ ಮುಖ್ಯ ರಫ್ತು ಬತ್ತ. ಪ್ರತೀ ವರ್ಷ ಸುಮಾರು 50 ಸಾವಿರ ಎತ್ತುಗಳ ಹೇರಿನ ಪ್ರಮಾಣದ ಬತ್ತ ಇಲ್ಲಿಂದ ರಫ್ತಾಗುವುದು. ಬತ್ತಕ್ಕೆ ಪ್ರತಿಯಾಗಿ ಹಣ ಮತ್ತು ಉಪ್ಪು ವಿನಿಮಯವಾಗುತ್ತಿದ್ದವು. ಬ್ರಿಟಿಷ್ ಮತ್ತು ಟಿಪ್ಪುಸುಲ್ತಾನರ ನಡುವಿನ ಯುದ್ಧದಲ್ಲಿ ಕೊಡಗಿನ ದೊಡ್ಡವೀರರಾಜೇಂದ್ರನು ಕೊಡಗಿನ ಮೂಲಕ ಹಾದುಹೋದ ಬೊಂಬಾಯಿ ಸೈನಿಕರಿಗೆ ವೀರರಾಜಪೇಟೆಯಲ್ಲಿ 40 ಸಾವಿರ ಬಟ್ಟಿಗಳಷ್ಟು (ಒಂದು ಬಟ್ಟಿಗೆ 80 ಸೇರುಗಳು) ಬತ್ತವನ್ನು ಸರಬರಾಜು ಮಾಡಿದನು."

ಬತ್ತದ ನಂತರ ಕೊಡಗಿನ ಮುಖ್ಯ ವಾಣಿಜ್ಯ ಬೆಳೆ ಕಾಫಿ. ಕೊಡಗಿನ ಆರ್ಥಿಕ, ಸಾಮಾಜಿಕ ಜೀವನದಲ್ಲಿ ಕಳೆದ ಸುಮಾರು 125 ವರ್ಷಗಳಲ್ಲಿ ತೀವ್ರತರವಾದ ಬದಲಾವಣೆಯನ್ನು ತಂದಿರುವಲ್ಲಿ ತೋಟದ ಬೆಳೆಗಳೇ ಕಾರಣ. ಅವುಗಳಲ್ಲಿ ಕಾಫಿಯ ಪಾತ್ರ ದೊಡ್ಡದು. ಒಂದು ಅಂದಾಜಿನಂತೆ ಉತ್ತಮ ಫಸಲು ಬಂದ ವರ್ಷದಲ್ಲಿ ಸುಮಾರು 70 ಸಾವಿರ ಟನ್ನು ಕಾಫಿ ಕೊಡಗಿನಲ್ಲಿ ಉತ್ಪಾದನೆಯಾಗುವುದು. ಪುಟ 396ರ ಕೋಷ್ಟಕದಲ್ಲಿ 1873 ರಿಂದ 1908ರ ಮಧ್ಯದ ಅವಧಿಯಲ್ಲಿ ಕೆಲವು ವರ್ಷಗಳಲ್ಲಿ ಇದ್ದಂತೆ, ಜಿಲ್ಲೆಯ ಪ್ರಮುಖ ಆಮದು ಮತ್ತು ರಫ್ತು ವಸ್ತುಗಳನ್ನು ಮೌಲ್ಯದೊಂದಿಗೆ ಸೂಚಿಸಲಾಗಿದೆ.

ಆಮದು

| ವರ್ಷ | ಜಾನುವಾರುಗಳು | ಆಹಾರ ವಸ್ತುಗಳು | ಮದ್ಯ | ಖಾದ್ಯ ತೈಲ | ಉಪ್ಪು | ಸಕ್ಕರೆ ಮತ್ತು ಸಾಕರಿನ್ ಉತ್ಪನ್ನ | ಹೊಗೆಸೊಪ್ಪು | ಒಟ್ಟು |
|---|---|---|---|---|---|---|---|---|
| 1873 | 1,34,890 | 1,64,802 | 76,362 | 1,20,100 | 76,475 | 37,435 | 41,440 | 6,51,504 |
| 1883 | 83,213 | 2,40,221 | 1,01,500 | 71,949 | 1,47,061 | 57,785 | 26,726 | 7,28,455 |
| 1893 | 1,17,126 | 2,76,440 | 88,400 | 1,08,824 | 2,50,170 | 94,052 | 25,000 | 9,60,012 |
| 1903 | 1,15,000 | 3,59,000 | 40,200 | 1,86,600 | 1,46,000 | 1,27,200 | 23,320 | 9,97.920 |
| 1908 | 1,59,000 | 3,51,100 | 44,400 | 2,75,000 | 1,47,600 | 1,52,800 | 37,400 | 11,63,300 |

ರಫ್ತು

| ವರ್ಷ | ಕಾಫೀ | ಧಾನ್ಯಗಳು ಮತ್ತು ಬೇಳೆ ಕಾಳು | ಏಲಕ್ಕಿ | ಹಣ್ಣುಗಳು | ಪ್ರಾಣಿಗಳ ಚರ್ಮ ಮತ್ತು ಕೊಂಬು | ಒಟ್ಟು |
|---|---|---|---|---|---|---|
| 1873 | 45,60,500 | 97,710 | 48,000 | 7,750 | — | 47,13,960 |
| 1883 | 27,88,716 | 88,649 | 1,59,114 | 17,708 | 7,559 | 30,61,746 |
| 1893 | 45,29,840 | 72,400 | 47,500 | 11,160 | 26,600 | 46,87,500 |
| 1903 | 20.98,440 | 2,14,000 | 48,800 | 10,300 | 23,400 | 23,94,940 |
| 1908 | 23,02,200 | 2,76,000 | 27,240 | 16,280 | 27,100 | 26,48,820 |

ಆಧಾರ : ಗಸ್ಟಾವ್ ಹಾಲರ್ ವರದಿ 1910.

1920ರ ಆಡಳಿತ ವರದಿಯು ಜಿಲ್ಲೆಯ ಆಮದು ಮತ್ತು ರಫ್ತು ವಸ್ತುಗಳನ್ನು ಕುರಿತಂತೆ ಸವಿವರವಾದ ಮಾಹಿತಿಯನ್ನು ಒದಗಿಸುವುದು. ಆದರೆ ವರದಿಯಲ್ಲಿಯೇ ಸೂಚಿಸಿರುವಂತೆ ಇದು ಸುಂಕದ ಕಟ್ಟೆಗಳ ಗುತ್ತಿಗೆದಾರರಿಂದ ಸಂಗ್ರಹಿಸಿ ಸಂಕಲನ ಮಾಡಿದ ಮಾಹಿತಿಯ ವರದಿ ಎಂದು ಸೂಚಿಸಲಾಗಿದೆ. ಈ ವರದಿಯಿಂದ ಕೊಡಗು ಜಿಲ್ಲೆಯೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದ ದೇಶದ ಇತರ ಪಟ್ಟಣಗಳನ್ನು ತಿಳಿಯಬಹುದು. 1920-21ರಲ್ಲಿ ಈ ಜಿಲ್ಲೆಯಿಂದ ರಫ್ತಾಗುತ್ತಿದ್ದ ಪ್ರಮುಖ ವಸ್ತುಗಳು, ಅವುಗಳ ಮೌಲ್ಯ ಮತ್ತು ರಫ್ತು ಸ್ಥಳಗಳನ್ನು ಕುರಿತಂತೆ ಈ ರೀತಿ ವರದಿಯಾಗಿದೆ. ಆವರಣದಲ್ಲಿರುವ ಸಂಖ್ಯೆಗಳು ವಸ್ತುವಿನ ಮೌಲ್ಯವನ್ನು ಸೂಚಿಸುತ್ತದೆ ; ಕಾಫಿ : ಮಂಗಳೂರು, ತಲ್ಲೇರಿ, ಮದ್ರಾಸ್ (295 ಟನ್; ರೂ. 18.89 ಲಕ್ಷ); ಔಷಧಿ : ಮಂಗಳೂರು, ಬೆಂಗಳೂರು (ರೂ. 6,200); ಹಣ್ಣುಗಳು : ಮಂಗಳೂರು, ತಲ್ಲೇರಿ, ಮೈಸೂರು (5,100 ರೂ.); ಧಾನ್ಯಗಳು ಮತ್ತು ಬೇಳೆ : ತಲ್ಲೇರಿ ಮತ್ತು ಮಲಬಾರಿನ ಇತರ ಸ್ಥಳಗಳು (ರೂ. 10,000); ಹದಮಾಡಿದ ಚರ್ಮ ಮತ್ತು ಕೊಂಬುಗಳು : ಮೈಸೂರು, ತಲ್ಲೇರಿ (ರೂ. 2.10 ಲಕ್ಷ), ಏಲಕ್ಕಿ ಮತ್ತು ಮಸಾಲೆ : ಮೈಸೂರು, ತಲ್ಲೇರಿ ಮತ್ತು ಮಂಗಳೂರು (ರೂ. 12,630); ಚಿಕ್ಕಪುಟ್ಟ ಕಾಡಿನ ಉತ್ಪನ್ನಗಳು : ಮೈಸೂರು (ರೂ. 5,960); ಮರಮುಟ್ಟು : ಮೈಸೂರು, ಮಂಗಳೂರು, ಮಲಬಾರ್, ಮದ್ರಾಸ್ (ರೂ. 1.32ಲಕ್ಷ); ಶ್ರೀಗಂಧ : ಮಂಗಳೂರು, ತಲ್ಲೇರಿ, ಮದ್ರಾಸ್ (250 ಟನ್ ರೂ. 2.60 ಲಕ್ಷ). ಆ ವರ್ಷದ ಒಟ್ಟು ರಫ್ತು : ಮೌಲ್ಯ ರೂ. 25.31 ಲಕ್ಷ.

1920-21ರಲ್ಲಿ ಈ ಜಿಲ್ಲೆಗೆ ಆಮದಾಗುತ್ತಿದ್ದ ವಿವಿಧ ಸರಕುಗಳ ಸಂಖ್ಯೆ 33 ಆಗಿತ್ತು. ಕೆಲವು ಪ್ರಮುಖ ಆಮದು ವಸ್ತುಗಳ ಮೌಲ್ಯ ಮತ್ತು ಆಮದಾಗುತ್ತಿದ್ದ ಸ್ಥಳಗಳು ಈ ಕೆಳಗಿನಂತೆ ಇರುವವು : ವ್ಯವಸಾಯ ಉಪಕರಣಗಳು ಮಂಗಳೂರು, ತಲ್ಲೇರಿ, ಮದ್ರಾಸ್ (ರೂ. 10,100); ಜಾನುವಾರುಗಳು : ಮೈಸೂರು (ರೂ. 10,200); ಕೊಡವರ (ಸ್ತ್ರೀಪುರುಷರ) ಅಲಂಕಾರಿಕ ಉಡುಪುಗಳು : ಮದ್ರಾಸ್, ಮುಂಬಯಿ (ರೂ. 5,900); ಆಯುಧಗಳು ಮತ್ತು ಮದ್ದು ಗುಂಡುಗಳು : ಮದ್ರಾಸ್, ಮುಂಬಯಿ (ರೂ. 1,000); ಕಟ್ಟಡದ ಸಾಮಗ್ರಿ ಮತ್ತು ಇಂಜನಿಯರಿಂಗ್ ವಸ್ತುಗಳು : ಮೈಸೂರು, ಮದ್ರಾಸ್, ಮಂಗಳೂರು, ತಲ್ಲೇರಿ (ರೂ. 7,200); ಹತ್ತಿ ಬಟ್ಟೆಗಳು : ಮದ್ರಾಸ್, ಬೊಂಬಾಯಿ, ಮಧುರೈ, ಸೇಲಂ, ಮೈಸೂರು (ರೂ. 17,800); ಔಷಧಿ ವಸ್ತುಗಳು : ಮದ್ರಾಸ್, ಬೊಂಬಾಯಿ ಮೈಸೂರು, ಮಂಗಳೂರು (ರೂ. 7,200); ಹಣ್ಣು ಮತ್ತು ತರಕಾರಿಗಳು : ಮೈಸೂರು, ಮಂಗಳೂರು, ತಲ್ಲೇರಿ, (ರೂ. 19,200); ಗಾಜು ಮತ್ತು ಗಾಜಿನ ವಸ್ತುಗಳು : ಮದ್ರಾಸ್, ಬೊಂಬಾಯಿ (ರೂ. 7,200); ಧಾನ್ಯಗಳು : ಮೈಸೂರು, ಮಂಗಳೂರು (ರೂ. 19,000); ಹಾರ್ಡವೇರ್ಸ್ ಮತ್ತು ಪಿಂಗಾಣಿ ವಸ್ತುಗಳು : ಮಂಗಳೂರು, ತಲ್ಲೇರಿ, ಮದ್ರಾಸ್ (ರೂ. 6,400); ಸಿದ್ಧಗೊಳಿಸಿದ ಚರ್ಮ : ಮದ್ರಾಸ್, ಮಂಗಳೂರು, ಮೈಸೂರು, ತಲ್ಲೇರಿ (ರೂ. 11,000); ಮಾದಕಪೇಯಗಳು : ಮದ್ರಾಸ್, ಮಂಗಳೂರು (ರೂ. 30,000); ಖಾದ್ಯ ಮತ್ತು ಇತರ ತೈಲಗಳು : ಮದ್ರಾಸ್, ಮೈಸೂರು, ಮಂಗಳೂರು, ತಲ್ಲೇರಿ (ರೂ. 21,000); ಲೋಹಗಳು : ಮದ್ರಾಸ್, ಮೈಸೂರು ಮಂಗಳೂರು, ತಲ್ಲೇರಿ (ರೂ. 9,200); ಉಪ್ಪು: ಮಂಗಳೂರು, ತಲ್ಲೇರಿ (ರೂ. 1.08 ಲಕ್ಷ); ಮಸಾಲೆ ವಸ್ತುಗಳು : ಮೈಸೂರು, ಮಂಗಳೂರು, ತಲ್ಲೇರಿ (ರೂ. 27,500); ಹೊಗೆಸೊಪ್ಪು: ಮದ್ರಾಸ್, ಮೈಸೂರು, ಮಂಗಳೂರು, ತಲ್ಲೇರಿ (18,500); ಕೊಡೆಗಳು (ಛತ್ರಿ) : ಮದ್ರಾಸ್, ಮುಂಬಯಿ (ರೂ. 9,900); ಉಣ್ಣೆ ಮತ್ತು ಉಣ್ಣೆ ಬಟ್ಟೆಗಳು : ಮದ್ರಾಸ್, ಬೊಂಬಾಯಿ, ಮಂಗಳೂರು, ತಲ್ಲೇರಿ, ಮೈಸೂರು (ರೂ. 19,300). ಆ ವರ್ಷದ ಒಟ್ಟು ಆಮದು ಮೌಲ್ಯ (ರೂ. 9.60 ಲಕ್ಷ).

**ಕಾಫಿಯ ಮಾರಾಟ**

ಪ್ರಾರಂಭದಲ್ಲಿ ಕಾಫಿಯು ಮಾರಾಟ ನಿಯಂತ್ರಣಕ್ಕೆ ಒಳಪಟ್ಟಿರಲಿಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಅದರ ಮಾರಾಟವಾಗುತ್ತಿತ್ತು. ಕಾಫಿ ಮಂಡಳಿಯ ರಚನೆಯ ನಂತರ ದೇಶದ ಒಳಗೆ ಮತ್ತು ವಿದೇಶಗಳಿಗೆ ರಫ್ತಾಗುವ ಕಾಫಿ ಮಾರಾಟ ಸಂಪೂರ್ಣವಾಗಿ ಮಂಡಳಿಯ ನಿಯಂತ್ರಣಕ್ಕೆ ಒಳಪಟ್ಟಿರುವುದು. 1874–1883ರ ದಶಕದ ಅವಧಿಯಲ್ಲಿ ಜಿಲ್ಲೆಯ ಕಾಫಿ ಉದ್ಯಮದ ಅಭಿವೃದ್ಧಿಯು ಉನ್ನತ ಮಟ್ಟದಲ್ಲಿ ಇತ್ತು. 1874–75ರಲ್ಲಿ, ಹೊರ ದೇಶಕ್ಕೆ ರಫ್ತಾದ ಕಾಫಿಯ ಪ್ರಮಾಣ 4,234 ಟನ್ನುಗಳು (ಮೌಲ್ಯ ರೂ. 27.10 ಲಕ್ಷ). ಮೊದಲನೇಯ ಮಹಾಯುದ್ಧದ ಅವಧಿ (1914–18) ಮತ್ತು ಎರಡನೇಯ ಮಹಾಯುದ್ಧದ ಪ್ರಾರಂಭದಲ್ಲಿ (1939) ಯುರೋಪಿನ ಮಾರುಕಟ್ಟೆ ಬಿದ್ದು ಹೋಗಿ ಭಾರತದ ಕಾಫಿಗೆ ಬೇಡಿಕೆ ಅತೀ ಕಡಿಮೆಯಾಗಿ ಕಾಫಿಯ ರಫ್ತು ಬೆಲೆಯಲ್ಲಿ ತೀವ್ರ ಇಳಿಕೆಯಾಯಿತು. ಸ್ಥಳೀಯ

ಬೇಡಿಕೆಯೂ ಹೆಚ್ಚಲಿಲ್ಲ. ಈ ಕಾರಣಗಳಿಂದ ಕಾಫಿ ಉದ್ಯಮದಲ್ಲಿ ಆರ್ಥಿಕ ಹಿಂಜರಿತ ಉಂಟಾಯಿತು. ಕಾಫಿಯ ಬೆಲೆಯಲ್ಲಿ ಸ್ಥಿರತೆ, ರಫ್ತು ಪ್ರಮಾಣ ಮತ್ತು ದೇಶದಲ್ಲಿಯೇ ಉಪಯೋಗಿಸುವ ಕಾಫಿಯ ಮೇಲೆ ನಿಯಂತ್ರಣ ಸಾಧಿಸಲು ಅನುಕೂಲವಾಗುವಂತೆ ಭಾರತ ಸರ್ಕಾರವು ಕಾಫಿ ಮಾರುಕಟ್ಟೆ ವಿಸ್ತರಣೆ ಕಾಯಿದೆಯನ್ನು ಜಾರಿಯಲ್ಲಿ ತಂದಿತು. ಅದರ ಅನ್ವಯ, ಭಾರತೀಯ ಕಾಫಿ ಮಾರುಕಟ್ಟೆ ವಿಸ್ತರಣಾ ಮಂಡಳಿ (1940) ರಚನೆ ಆಯಿತು. ಅದೇ ಸಂಸ್ಥೆ ಮುಂದುವರಿದು ಭಾರತೀಯ ಕಾಫಿ ಮಂಡಳಿ ಎಂದು ಪುನರ್ ರಚನೆಗೊಂಡಿತು. ಕಾಫಿ ಮಂಡಳಿಯ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ಇರುವುದು. ಈ ಜಿಲ್ಲೆಯಲ್ಲಿ ಉತ್ಪಾದಿತ ಕಾಫಿಯ ಬಹು ಭಾಗವನ್ನು ಚಿಕ್ಕಮಗಳೂರು ಅಥವಾ ಮಂಗಳೂರಿಗೆ ಸಂಸ್ಕರಣಕ್ಕೆ ಕಳಿಸಲಾಗುವುದು.

**ಏಲಕ್ಕಿ**

ಕಾಫಿಯ ನಂತರ ಏಲಕ್ಕಿಯು ಈ ಜಿಲ್ಲೆಯ ಪ್ರಮುಖ ರಫ್ತು ಬೆಳೆ. ಕೇರಳದ ಮಾಪಿಳ್ಳೆಗಳು ಇದರ ವ್ಯಾಪಾರದಲ್ಲಿ ನಿರತರಾಗಿದ್ದು ಏಲಕ್ಕಿಗೆ ಬದಲಾಗಿ ಬರ್ವಿಂಗ್ ಹ್ಯಾಮ್ ಅಥವಾ ಮ್ಯಾಂಚೆಸ್ಟರ್‌ನ ಬಟ್ಟೆಗಳನ್ನು ವಿನಿಮಯ ಮಾಡಿಕೊಂಡು ಉತ್ತಮ ಲಾಭ ಗಳಿಸುತ್ತಿದ್ದರು ಎಂದು ಹಳೆಯ ದಾಖಲಾತಿಗಳಲ್ಲಿ ವಿವರಿಸಲಾಗಿದೆ. ಏಲಕ್ಕಿ ಬೆಳೆಯ ಪ್ರಮಾಣ ಮತ್ತು ಬೆಲೆ ಒಂದೇ ತರನಾಗಿಲ್ಲ ; ಇತರ ಬೆಳೆಗಳಂತೆ ಅದೂ ಅನೇಕ ಏರಿಳಿತಗಳನ್ನು ಕಂಡಿದೆ. 1930ರ ಆರ್ಥಿಕ ಹಿಂಜರಿತ, ಎರಡನೇಯ ಮಹಾಯುದ್ಧ ಮುಂತಾದ ಸಮಯದಲ್ಲಿ ಈ ಬೆಳೆಗಾರರಿಗೆ ಅವುಗಳ ಬಿಸಿ ತಟ್ಟದೇ ಇರಲಿಲ್ಲ. 1939ರ ನಂತರ ಸಹಕಾರಿ ವಲಯದಲ್ಲಿ ಏಲಕ್ಕಿ ಬೆಳೆಯ ಮಾರಾಟದ ಬಗ್ಗೆ ಪ್ರಯತ್ನ ಪಡಲಾಯಿತು. ಸಹಕಾರಿ ಸಂಸ್ಥೆಗಳ ಮೂಲಕ ಪತ್ತು ಮತ್ತು ಮಾರಾಟ ಜೋಡಣೆಯನ್ನು ವ್ಯವಸ್ಥೆ ಮಾಡಲಾಯಿತು. ಕಾಫಿ ಬೆಳೆಯ ಮಾರಾಟದಂತೆ ಏಲಕ್ಕಿ ಸಂಪೂರ್ಣವಾಗಿ ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲ. ಸಹಕಾರಿ ಸಂಸ್ಥೆಗಳ ಮೂಲಕ ಭಾಗಶಃ ವಿಕ್ರಿಯಾಗುವುದು. ಹೆಚ್ಚಿನಭಾಗ ಖಾಸಗಿ ವ್ಯಾಪರಿಗಳಮೂಲಕ ಮಾರಾಟವಾಗುವುದು. ಏಲಕ್ಕಿ ಮಾರಾಟವನ್ನು ಕುರಿತಂತೆ ಕಾಫಿಮಂಡಳಿ ಅಥವಾ ಚಹಾ ಮಂಡಳಿಯಂತೆ ಒಂದು ಕಾನೂನುಬದ್ಧವಾದ ಮಂಡಳಿಯನ್ನು ರಚಿಸಬೇಕೆಂದು ಬೆಳೆಗಾರರ ಬಹು ದಿನದ ಬೇಡಿಕೆ. ಏಲಕ್ಕಿ ವ್ಯಾಪಾರವನ್ನು ತಕ್ಕಮಟ್ಟಿಗೆ ನಿಯಂತ್ರಿಸಲು ಮತ್ತು ಬೆಳೆಗಾರರಿಗೆ ಸೂಕ್ತ ಬೆಲೆ ಒದಗಿಸಲು ಸಾಂಬಾರ ಮಂಡಳಿ (ಸ್ಪಾಯಿಸಸ್ ಬೋರ್ಡ್) ಸ್ಥಾಪಿಸಿದ್ದು, ಅದರ ಶಾಖೆಯು ವೀರರಾಜಪೇಟೆಯಲ್ಲಿ ಇರುವುದು. ಕೊಡಗಿನ ಏಲಕ್ಕಿ ಪಶ್ಚಿಮ ಕರಾವಳಿಯ ಬಂದರುಗಳ ಮೂಲಕ ವಿದೇಶಕ್ಕೆ ರಫ್ತಾಗುವುದು ; ಹಲವು ವ್ಯಾಪಾರಸ್ಥರು ಏಲಕ್ಕಿಯನ್ನು ಹರಾಜಿನಲ್ಲಿ ನೇರವಾಗಿ ಕೊಂಡು ಜಿಲ್ಲೆಯ ಹೊರಗೆ ಮಾರುವರು. (ಅದರಲ್ಲಿ ಕೇರಳದವರೂ ಸೇರಿರುವರು). ಕೊಡಗಿನ ಏಲಕ್ಕಿಯು ರಾಜ್ಯದ ಹೊರಗೆ ಮುಂಬಯಿ, ಕೇರಳ ಮತ್ತು ತಮಿಳನಾಡಿಗೆ ಹೋಗುವುದು ; ಒಂದು ಅಂದಾಜಿನಂತೆ ಜಿಲ್ಲೆಯಲ್ಲಿ ಉತ್ಪಾದನೆಯಾಗುವ ಏಲಕ್ಕಿ ಬೆಳೆಯ ಪ್ರಮಾಣ ಸುಮಾರು 3,000 ಮೆ. ಟನ್ನುಗಳು.

**ಕಾಳುಮೆಣಸು**

ಏಲಕ್ಕಿಯ ನಂತರದ ಪ್ರಮುಖ ಮಸಾಲೆ ಬೆಳೆಗಳಲ್ಲಿ ಕಾಳು ಮೆಣಸು ಪ್ರಸಿದ್ಧವಾದುದು. ಇಲ್ಲಿಯ ಮೆಣಸು ಬೆಳೆ ಸಂಪೂರ್ಣವಾಗಿ ಪಶ್ಚಿಮ ಕರಾವಳಿಗೆ ರಫ್ತಾಗುವುದು ಅಲ್ಲಿಂದ ಹೊರದೇಶಗಳಿಗೆ ಮತ್ತು ಕೇರಳ, ದಕ್ಷಿಣ ಕನ್ನಡದ ಪ್ರದೇಶಕ್ಕೆ ಕಳಿಸಲ್ಪಡುವುದು. ಕೊಡಗಿನಲ್ಲಿ ವಾರ್ಷಿಕ ಸುಮಾರು 10,000 ಮಣಗಳಷ್ಟು (ಒಂದು ಮಣ – 28 ಪೌಂಡು) ಮೆಣಸು ಉತ್ಪಾದನೆ ಆಗುವುದು.

**ಕಿತ್ತಳೆ**

ಕೊಡಗಿನ ತೋಟದ ಬೆಳೆಗಳಲ್ಲಿ ಕಿತ್ತಳೆಯೂ ಕೂಡ ವ್ಯಾಪಾರದ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಹೊಂದಿದೆ. ಒಂದು ವರದಿಯಂತೆ ಕೊಡಗಿನಲ್ಲಿ ಪ್ರತೀ ವರ್ಷ ಸುಮಾರು ಎರಡು ಸಾವಿರ ಲಾರಿ ಭರ್ತಿ ಕಿತ್ತಳೆ ಉತ್ಪಾದನೆಯಾಗುತ್ತಿದ್ದು ಬಹುಪಾಲು ಬೆಳೆಗಾರರು ಫಸಲನ್ನು ಸುಗ್ಗಿಯ ಕಾಲದಲ್ಲಿ ಸ್ಥಳೀಯ ಏಜಂಟರಿಗೆ ಗುತ್ತಿಗೆಗೆ ಮಾರಾಟ ಮಾಡುವರು. ಇದರಿಂದ ಕಿತ್ತಳೆಯ ಬೆಲೆಯು ಪ್ರತೀವರ್ಷ ಬದಲಾಗುತ್ತ ಹೋಗುವುದು. ಡಿಸೆಂಬರ್ ಮಧ್ಯದಿಂದ ಏಪ್ರಿಲ್‌ವರೆಗೆ ಇದರ ಸುಗ್ಗಿಯ ಕಾಲ. ಇಲ್ಲಿಂದ ಕಿತ್ತಳೆಯು ಕೇರಳದ ಕಲ್ಲಿಕೋಟೆ ಮತ್ತು ತಲ್ಲೇರಿಗಳಿಗೆ ರಫ್ತಾಗುವುದು. ಕೆಲವು ಭಾಗ ಮೈಸೂರು ಮತ್ತು ಬೆಂಗಳೂರಿಗೂ ಬರುವುದು. ಕೊಡಗಿನ ಇನ್ನುಳಿದ ಪ್ರಮುಖ ರಫ್ತುಗಳೆಂದರೆ ಮರಮಟ್ಟು (ಚೌಬೀನೆ), ಜೇನು ಮತ್ತು ರಬ್ಬರ್.

**ರಬ್ಬರ್**

ಕೊಡಗಿನಿಂದ ರಬ್ಬರ್ ಕೊಚ್ಚಿ ಮತ್ತು ಕೊಟ್ಟಾಯಂಗೆ ರಫ್ತಾಗುವುದು. ಇದರಲ್ಲಿ ಸ್ವಲ್ಪಭಾಗ ಬೊಂಬಾಯಿ ಮಾರುಕಟ್ಟೆಗೆ ಸೇರುವುದು. ಈ ಜಿಲ್ಲೆಯ ರಬ್ಬರ್ ಕೈಗಾರಿಕೆಗಳು ಕೇವಲ ಕಚ್ಚಾ ರಬ್ಬರ್ ಉತ್ಪಾದನೆ ಮಾಡುವುವೇ ವಿನಾ ರಬ್ಬರ್ ಉತ್ಪನ್ನಗಳನ್ನು ತಯಾರಿಸುವುದಿಲ್ಲ.

ಮಡಿಕೇರಿಯ ಹತ್ತಿರದ ಮಡಿಕೆ ಬೀಡುವಿನಲ್ಲಿ ಭಾರತ ಸರ್ಕಾರ ಪ್ರಾರಂಭಿಸಿದ ಕುಂಬಾರಿಕೆ ಕೇಂದ್ರದಿಂದ ಹೂಕುಂಡ,

ನೀರಿನ ಕುಂಡಗಗಳು, ಹಂಚು ಮತ್ತು ಇಟ್ಟಿಗೆಗಳು ರಫ್ತಾಗುವವು. ಅದರಂತೆ ಮಡಿಕೇರಿ, ಸೋಮವಾರಪೇಟೆ, ಗೋಣಿಕೊಪ್ಪಲು, ಪೊನ್ನಂಪೇಟೆ, ಕುಶಾಲನಗರಗಳಲ್ಲಿ ತಾಮ್ರ, ಹಿತ್ತಾಳೆ ಪಾತ್ರೆಗಳ ತಯಾರಿಕೆಯು ನಡೆಯುತ್ತಿದ್ದು ಇವುಗಳು ಆಯಾ ಪ್ರದೇಶಗಳಿಂದ ರಫ್ತಾಗುವವು. ಕೊಡಿಗೆಯಿಂದ ಕೃಷಿ ಉಪಕರಣಗಳು, ಗಾಡಿ ಚಕ್ರದ ಪಟ್ಟಿಗಳು ರಫ್ತಾಗುವವು.

ಜಿಲ್ಲಾ ಕೇಂದ್ರವಾದ ಮಡಿಕೇರಿಯ ಆಮದು ರಫ್ತುಗಳನ್ನು ಕುರಿತು ಹೇಳುವುದಾದರೆ 19ನೇಯ ಶತಮಾನದ ಪ್ರಾರಂಭದಲ್ಲಿ ಯಾವುದೇ ವ್ಯಾಪಾರ ವ್ಯವಹಾರದ ಕೇಂದ್ರವಾಗಿರದಿದ್ದ ಮಡಿಕೇರಿ ಇಂದು ಜಿಲ್ಲೆಯ ಪ್ರಮುಖ ವ್ಯಾಪಾರ ಕೇಂದ್ರವಾಗಿದೆ. ಮಡಿಕೇರಿಗೆ ಕಬ್ಬಿಣ ಮತ್ತು ಉಕ್ಕು ಬೆಂಗಳೂರಿನಿಂದ, ಮೀನು ಮಂಗಳೂರು ಮತ್ತು ಕೇರಳದಿಂದ, ಅಕ್ಕಿಯು ಮೈಸೂರು ಮತ್ತು ಶಿವಮೊಗ್ಗದಿಂದ, ಹಂಚು ಮಂಗಳೂರಿನಿಂದ, ದಿನಸಿಗಳು ಮತ್ತು ತರಕಾರಿ ಮೈಸೂರು ಮತ್ತು ಹಾಸನದಿಂದ, ಹಣ್ಣುಗಳು ಬೆಂಗಳೂರು, ಮೈಸೂರಿನಿಂದ, ಔಷಧಿಗಳು ಬೆಂಗಳೂರು, ಮೈಸೂರು ಮತ್ತು ಹಾಸನದಿಂದ ಬರುವವು. ಸ್ಥಳೀಯವಾಗಿ ರಫ್ತಾಗುವ ವಸ್ತುಗಳಲ್ಲಿ ಮರಮಟ್ಟುಗಳು, ಕಾಫಿ, ಏಲಕ್ಕಿ, ರಬ್ಬರ್, ಗೋಡಂಬಿ, ಜೇನು, ಕಾಡಿನ ಉತ್ಪನ್ನಗಳು ಪ್ರಮುಖವಾದವುಗಳು. ಮಡಿಕೇರಿಯಲ್ಲಿ ಸ್ಥಳೀಯವಾಗಿ ದಿನಸಿ ವ್ಯಾಪಾರ ಮತ್ತು ಸಗಟು ವ್ಯಾಪಾರ, ಮುಸ್ಲಿಮರ ಕೈಯಲ್ಲಿ ಇದ್ದರೆ, ಕೊಡವರು ಹೆಚ್ಚಾಗಿ ಬಟ್ಟೆ, ದಿನಸಿ ಮತ್ತು ಮಾದಕ ವಸ್ತುಗಳ ವ್ಯಾಪಾರವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿರುವರೆಂದು ಕಂಡು ಬರುವುದು.

ಕೊಡಗಿನ ಪ್ರಮುಖ ಆಮದು ವಸ್ತುಗಳೆಂದರೆ ಗ್ರಾಹಕರಿಗೆ ಬೇಕಾಗುವ ನಿತ್ಯ ಬಳಕೆಯ ಗೃಹ ಉಪಯೋಗಿ ವಸ್ತುಗಳು ಅಂದರೆ ಖಾದ್ಯ ತೈಲ, ಮಸಾಲೆ ವಸ್ತುಗಳು, ಬಟ್ಟೆಗಳು, ಉಪ್ಪು ಮತ್ತು ಒಣಗಿಸಿದ ಮೀನು, ಬೆಲ್ಲ, ಸಕ್ಕರೆ ಮತ್ತು ತೆಂಗಿನಕಾಯಿ ಮುಂತಾದವುಗಳು. ಕೊಡವರು ಸಕ್ಕರೆಗಿಂತ ಬೆಲ್ಲವನ್ನು ಹೆಚ್ಚಾಗಿ ಉಪಯೋಗಿಸುವರು. ಒಳನಾಡಿನ ಬಹುಭಾಗ ವ್ಯಾಪಾರ ನಿಯತಕಾಲಿಕವಾಗಿ ನಡೆಯುವ ಸ್ಥಳೀಯ ದೊಡ್ಡ ಸಂತೆಗಳ ಮೂಲಕ ನಡೆಯುವುದು.

"ಸಾಮಾನ್ಯವಾಗಿ ಸ್ಥಳೀಯ ಮಾರುಕಟ್ಟೆಗೆ ಚಿಕ್ಕಪುಟ್ಟ ಬೇಸಾಯಗಾರರು ತಮ್ಮ ವ್ಯವಸಾಯ ಉತ್ಪನ್ನಗಳನ್ನು ಮತ್ತು ಕಾಡಿನ ಉತ್ಪನ್ನಗಳನ್ನು ಮಾರಾಟಕ್ಕೆ ತರುವರು. ಅವುಗಳಲ್ಲಿ ಬತ್ತ, ಬೆಣ್ಣೆ, ತುಪ್ಪ, ಜೇನು, ಧಾನ್ಯಗಳು, ಕೋಳಿ, ಹಣ್ಣು, ತರಕಾರಿ ಮತ್ತು ವಿವಿಧ ಮಸಾಲೆ ಬೆಳೆಗಳು ಮುಖ್ಯವಾದವುಗಳು. ಇವುಗಳನ್ನು ಹಣಕ್ಕೆ ಮಾರಿ ಅದರಿಂದ ಕಬ್ಬಿಣ, ಉಕ್ಕು, ವ್ಯವಸಾಯ ಉಪಕರಣಗಳು, ಒರಟಾದ ಹತ್ತಿಬಟ್ಟೆ, ಗೋಣಿಚೀಲಗಳು, ಕಂಬಳಿ ಮತ್ತು ಬೇಳೆಕಾಳುಗಳು ಮುಂತಾದವುಗಳನ್ನು ಕೊಂಡುಕೊಳ್ಳುವರು. ಈ ವಸ್ತುಗಳು ಹೆಚ್ಚಾಗಿ ಮೈಸೂರು ಪ್ರಾಂತ್ಯದಿಂದ ಈ ಜಿಲ್ಲೆಗೆ ಮಾರಾಟಕ್ಕೆ ಬರುವವು. ಬಡಜನರು ಒಂದು ವಸ್ತುವನ್ನು ಕೊಳ್ಳಲು ಇನ್ನೊಂದನ್ನು ಮಾರುವರು". ಕೊಡಗಿನ ಒಳನಾಡಿನ ವ್ಯಾಪಾರ, ವಾಣಿಜ್ಯವನ್ನು ಕುರಿತಂತೆ 1817ರಲ್ಲಿ ಲೆ. ಕೊನೋರ್ ಅವರು ಮೇಲಿನಂತೆ ವಿವರಿಸಿದ ಗುಣಲಕ್ಷಣಗಳಲ್ಲಿ ಬಹುಪಾಲು ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಸಂತೆಗಳಲ್ಲಿ ಕಂಡುಬಂದರೂ ಇತ್ತೀಚಿನ ದಶಕಗಳಲ್ಲಿ ಕಾಫಿ, ಏಲಕ್ಕಿ, ಜೇನು, ಕಿತ್ತಳೆ, ಮರಮಟ್ಟು ಮುಂತಾದ ವಸ್ತುಗಳ ವ್ಯಾಪಾರದಲ್ಲಿ ಹೊರಗಿನವರ ಪ್ರವೇಶ ಹೆಚ್ಚಾಗುತ್ತಿರುವುದನ್ನು ಕಾಣಬಹುದು. ಕೊಡಗಿನಿಂದ ತೇಗ (ಸಾಗುವಾನಿ) ಹಾಗೂ ಬೀಟೇಮರ, ಇಟಲಿ ಮತ್ತು ಯೂರೋಪ್‌ನ ದೇಶಗಳಿಗೆ ರಫ್ತಾಗುವುದು.

ಈ ಕೆಳಗಿನ ಕೋಷ್ಟಕದಲ್ಲಿ 1981 ರಲ್ಲಿ ಜಿಲ್ಲೆಯ ಕೆಲವು ಪ್ರಮುಖ ವಾಣಿಜ್ಯ ಕೇಂದ್ರಗಳ ಮೂರು ಪ್ರಮುಖ ಕೈಗಾರಿಕಾ ಉತ್ಪಾದನೆಗಳು, ಆಮದು ಮತ್ತು ರಫ್ತು ವಸ್ತುಗಳನ್ನು ಸೂಚಿಸಲಾಗಿದೆ.

| ನಗರಗಳು | ಮುಖ್ಯ ಕೈಗಾರಿಕಾ ಉತ್ಪನ್ನ | ಆಮದುಗಳು | ರಫ್ತುಗಳು |
|---|---|---|---|
| 1 | 2 | 3 | 4 |
| ಮಡಿಕೇರಿ | ಕೊಯ್ದು ಮರ, ಜೈವಿಕ ಅನಿಲ ಉಪಕರಣ, ಉಕ್ಕಿನಿಂದ ಮಾಡಿದ ವಸ್ತುಗಳು | ಕಟ್ಟಡ ಸಾಮಗ್ರಿ, ತರಕಾರಿ ಮತ್ತು ಹಣ್ಣು, ದಿನಸೀ ವಸ್ತುಗಳು | ಕಾಫಿ, ಏಲಕ್ಕಿ |

| 1 | 2 | 3 | 4 |
|---|---|---|---|
| ವೀರರಾಜಪೇಟೆ | ಕೊಯ್ದ ಮರ | ಬಟ್ಟೆ, ಖಾದ್ಯ ತೈಲ, ತರಕಾರಿ | ಕಾಫಿ, ಬತ್ತ, ಕಿತ್ತಳೆ |
| ಸೋಮವಾರಪೇಟೆ | — | ಬಟ್ಟೆ, ಕಟ್ಟಡ ಸಾಮಗ್ರಿ, ತರಕಾರಿ | ಕಾಫಿ, ಏಲಕ್ಕಿ, ಮೆಣಸು |
| ಗೋಣಿಕೊಪ್ಪಲು | ಡಬ್ಬಿಗಳಲ್ಲಿ ಸಂಸ್ಕರಿಸಿದ ಹಣ್ಣು, ಸಂಸ್ಕರಿಸಿದ ಹಣ್ಣಿನ ರಸ | ಖಾದ್ಯ ತೈಲ, ತೆಂಗು, ಬೇಳೆಕಾಳು | ಕಾಫಿ, ಅಕ್ಕಿ, ಮೆಣಸು |
| ಕೊಡಲಿಪೇಟೆ | ವ್ಯವಸಾಯ ಉಪಕರಣ | ಬಟ್ಟೆ, ಬೆಲ್ಲ, ತೆಂಗು | ಕಾಫಿ, ಏಲಕ್ಕಿ, ಮೆಣಸು |
| ಕೊಡುಮಂಗಳೂರು | — | ದಿನಸಿ ವಸ್ತು, ಕಟ್ಟಡ ಸಾಮಗ್ರಿ, ಖಾದ್ಯ ತೈಲ | ಹೊಗೆಸೊಪ್ಪು, ಬತ್ತ, ರಾಗಿ |
| ಕುಶಾಲನಗರ | ಬಾಟಲಿಗಳಲ್ಲಿ ಸಂಸ್ಕರಿಸಿದ ಹಣ್ಣಿನ ರಸ, ಬೆಲ್ಲ, ಕೊಯ್ದ ಮರ | ಬೆಲ್ಲ, ಬೇಳೆಕಾಳು, ಮಸಾಲೆ ವಸ್ತು | ಸಂಸ್ಕರಿಸಿದ ಹಣ್ಣು, ಸಂಸ್ಕರಿಸಿದ ಹಣ್ಣಿನ ರಸ, ಹೊಗೆಸೊಪ್ಪು, ರಾಗಿ |
| ಪೊನ್ನಂಪೇಟೆ | ಬಿದಿರಿನ ಬುಟ್ಟಿಗಳು | ಬಟ್ಟೆ, ಹಾರ್ಡ್‌ವೇರ್ಸ್, ಬೇಳೆಕಾಳುಗಳು | ಕಾಫಿ, ಭತ್ತ, ಕಿತ್ತಳೆ |
| ಶನಿವಾರಸಂತೆ | ಸುಣ್ಣ, ಮರದ ಪ್ಯಾಕಿಂಗ್ ಕೇಸು | ಸಕ್ಕರೆ, ಗೋದಿ, ತೆಂಗು | ಕಾಫಿ, ಏಲಕ್ಕಿ, ಬತ್ತ |
| ಸುಂಟಿಕೊಪ್ಪ | — | ಪೆಟ್ರೋಲ್ ಮತ್ತು ಡೀಸಲ್, ತೆಂಗು, ಸಕ್ಕರೆ | ಕಾಫಿ, ಏಲಕ್ಕಿ, ಕಿತ್ತಳೆ |

**ವ್ಯಾಪಾರ ಕೇಂದ್ರಗಳು**

ಕೊಡಗು ಜಿಲ್ಲೆಯಾದ್ಯಂತ ಅನೇಕ ಚಿಕ್ಕಪುಟ್ಟ ಮತ್ತು ಮಧ್ಯಮ ಪ್ರಮಾಣದ ವ್ಯಾಪಾರ ವಾಣಿಜ್ಯ ಕೇಂದ್ರಗಳಿರುವವು. ಅರಸರ ಆಳ್ವಿಕೆಯಲ್ಲಿ ಮತ್ತು ನಂತರದ ಅವಧಿಯಲ್ಲಿ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದ ಕೆಲವು ಸ್ಥಳಗಳು ಕಾಲಕ್ರಮೇಣ ತಮ್ಮ ವ್ಯಾಪಾರ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದರೆ ಹಲವಾರು ಹೊಸ ಸ್ಥಳಗಳು ಪ್ರಮುಖ ವ್ಯಾಪಾರ ಕೇಂದ್ರಗಳಾಗಿ ಅಭಿವೃದ್ಧಿ ಹೊಂದಿರುವವು. ಉದಾ : ಕೊಡಗು ಶ್ರೀರಂಗಪಟ್ಟಣ ಚಂಗಾಳ್ವರ ರಾಜಧಾನಿಯಾಗಿದ್ದ ಸಮಯದಲ್ಲಿ (1245) ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ಹಿಂದೆ ನಂಜರಾಜಪಟ್ಟಣವು ಸೋಮವಾರಪೇಟೆ ತಾಲೂಕಿನ ಕೇಂದ್ರವಾಗಿದ್ದಾಗ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಅದರಂತೆ ಕುಶಾಲನಗರವು ಕೊಡಗು ಸಕಲೇಶಪುರಗಳ ನಡುವಿನ ಪ್ರಮುಖ ಏಲಕ್ಕಿ ವ್ಯಾಪಾರ ಕೇಂದ್ರವಾಗಿತ್ತು. ಶನಿವಾರಸಂತೆ (ಮೊದಲಿಗೆ ಹೆಮ್ಮಿಗೆ) ಮತ್ತು ಶಿರಂಗಾಳಗಳು ಕೈಮಗ್ಗದ ಬಟ್ಟೆಗೆ ಬಹು ಪ್ರಸಿದ್ಧ ವ್ಯಾಪಾರಿ ಕೇಂದ್ರಗಳಾಗಿದ್ದವು. ಕೊಡಲಿಪೇಟೆಯು 17ನೇ ಶತಮಾನದಲ್ಲಿಯೇ ಚಿಕ್ಕವೀರಪ್ಪ ಅರಸನ ಕಾಲದಲ್ಲಿ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಉಲುಗಲಿ ಸಂತೇಮಾಳ (ಇಂದಿನ ಸುಂಟಿಕೊಪ್ಪ) ಟಿಪ್ಪುವಿನ ಕಾಲದಲ್ಲಿ ಪ್ರಮುಖ ಸಂತೆಯ ಸ್ಥಳವಾಗಿತ್ತು. 1834ರಲ್ಲಿ ಕರ್ನಲ್ ಫ್ರೇಜರನು ನಂಜರಾಜಪಟ್ಟಣದ ಬದಲಿಗೆ ಕುಶಾಲನಗರವನ್ನು ತಾಲೂಕು ಕೇಂದ್ರವನ್ನಾಗಿ ಮಾಡಿದ ನಂತರ ಅದು ಪ್ರಮುಖ ವ್ಯಾಪಾರ ಕೇಂದ್ರವಾಯಿತು. ಅದರಂತೆ 1895ರಲ್ಲಿ ಪುನಃ ಸೋಮವಾರಪೇಟೆಯನ್ನು ತಾಲೂಕು ಕೇಂದ್ರವಾಗಿ ಬದಲಾಯಿಸಿದ ನಂತರ ಸೋಮವಾರಪೇಟೆ ಪ್ರಮುಖ ವ್ಯಾಪಾರ ಕೇಂದ್ರವಾಗಿ ಅಭಿವೃದ್ಧಿಯನ್ನು ಹೊಂದಿತು.

ದಕ್ಷಿಣ ಕೊಡಗಿನ ಗೋಣಿಕೊಪ್ಪಲು ಕೇರಳದ ಕರಾವಳಿ ನಗರಗಳೊಂದಿಗೆ ನೇರ ಸಂಪರ್ಕ ಪಡೆದಿದ್ದು ಕಾಫಿ, ಕಿತ್ತಳೆ, ಮತ್ತು ಬತ್ತದ ಪ್ರಮುಖ ವ್ಯಾಪಾರ ಕೇಂದ್ರ. ಪೊನ್ನಂ

ಪೇಟೆಯು ಬತ್ತದ ಪ್ರಮುಖ ವ್ಯಾಪಾರ ಕೇಂದ್ರ. ಪೊನ್ನಂಪೇಟೆಯು ಕಿತ್ತಳೆಯ ಪ್ರಮುಖ ಸಗಟು ಮಾರಾಟ ಕೇಂದ್ರವಾಗಿರುವುದು. ಜಿಲ್ಲೆಯ ಮೂರನೇಯ ಎರಡರಷ್ಟು ಕಿತ್ತಳೆ ಬೆಳೆಯು ಇಲ್ಲಿಂದ ಮಾರಾಟವಾಗುವುದು. ಕೊಡಲಿಪೇಟೆ ಮತ್ತು ಶನಿವಾರ ಸಂತೆಗಳು ಬೇಸಿಗೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಹಸಿಮೆಣಸಿನಕಾಯಿ ಮತ್ತು ತರಕಾರಿಯನ್ನು ರಫ್ತು ಮಾಡುವ ವ್ಯಾಪಾರ ಕೇಂದ್ರಗಳಾಗಿ ಇತ್ತೀಚೆಗೆ ವೃದ್ಧಿಗೊಂಡಿವೆ. ಇಂದು ಜಿಲ್ಲೆಯ ಪ್ರಮುಖ ವ್ಯಾಪಾರ ಕೇಂದ್ರಗಳು : ವೀರರಾಜಪೇಟೆ, ಮಡಿಕೇರಿ, ಸೋಮವಾರಪೇಟೆ, ಕುಶಾಲನಗರ, ಕೊಡ್ಲಿಪೇಟೆ, ಗೋಣಿಕೊಪ್ಪಲು, ಶನಿವಾರ ಸಂತೆ, ಸುಂಟಿಕೊಪ್ಪ ಮತ್ತು ಪೊನ್ನಂಪೇಟೆ, ಮುಂತಾದವುಗಳು. ಹಳ್ಳಿಗಳಲ್ಲಿ ಚಿಕ್ಕಪುಟ್ಟ ವ್ಯಾಪಾರಿಗಳು ತಮ್ಮದೇ ಆದ ಅಂಗಡಿಗಳ ಮೂಲಕ ದಿನನಿತ್ಯದ ವಸ್ತುಗಳನ್ನು ಗ್ರಾಹಕರಿಗೆ ಚಿಲ್ಲರೆಯಾಗಿ ಮಾರಾಟ ಮಾಡುವರು. ಪ್ರತೀ ಒಂದು ಹಳ್ಳಿಯೂ ಬೇಡಿಕೆಗೆ ಅನುಗುಣವಾಗಿ ಚಿಲ್ಲರೆ ವ್ಯಾಪಾರಸ್ಥರನ್ನು ಹೊಂದಿರುವವು. ಈ ವ್ಯಾಪಾರಿಗಳಲ್ಲಿ ಬಹುಪಾಲು ಕೇರಳದಿಂದ ಬಂದು ಇಲ್ಲಿ ನೆಲೆ ನಿಂತಿರುವವರು. ಈ ಜಿಲ್ಲೆಯಲ್ಲಿ ಪ್ರಮುಖ ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರಗಳು ಇಲ್ಲದೇ ಇರುವುದರಿಂದ, ಸಾಮಾನ್ಯವಾಗಿ ಇಲ್ಲಿಯ ವ್ಯಾಪಾರವು ದಿನನಿತ್ಯದ ವಸ್ತುಗಳು ಮತ್ತು ಗ್ರಾಹಕರ ಬಳಕೆಯ ವಸ್ತುಗಳಿಗೆ ಹೆಚ್ಚಾಗಿ ಸೀಮಿತವಾಗಿರುವುದು. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರಗಳಾದ ಮಡಿಕೇರಿ ಮತ್ತು ಕೇರಳದೊಂದಿಗೆ ನಿಕಟ ಸಂಪರ್ಕ ಪಡೆದ ವೀರರಾಜಪೇಟೆ ಮುಂತಾದ ಪ್ರದೇಶಗಳಲ್ಲಿ ವಿದೇಶಿ ವಸ್ತುಗಳ ವ್ಯಾಪಾರ, ಗೋಡಂಬಿ, ತೇಗದಮರ, ದಂತ ಮುಂತಾದವುಗಳ ಕಳ್ಳಸಾಗಾಣಿಕೆ ಹೆಚ್ಚುತ್ತಿರುವುದು ಮತ್ತು ವಿದೇಶಿ ವಸ್ತುಗಳಿಗೆ ಕೊಡಗಿನ ಮಾರುಕಟ್ಟೆಗಳಲ್ಲಿ ಉತ್ತಮ ಬೇಡಿಕೆಯೂ ಇರುವುದು ಎಂದು ಕಂಡುಬರುವುದು.

## ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆ

ವ್ಯವಸಾಯ ಅಭಿವೃದ್ಧಿಗೆ ಪೂರಕವಾದ ಹಲವಾರು ಅಂಶಗಳಲ್ಲಿ ಕೃಷಿ ಉತ್ಪನ್ನಗಳ ಸುವ್ಯವಸ್ಥಿತ ಮಾರಾಟ ಸೌಲಭ್ಯ, ಉತ್ತಮ ಸಂಚಾರ ಮತ್ತು ಸಂಪರ್ಕ ವ್ಯವಸ್ಥೆಗಳು ಅವಶ್ಯವಾಗಿ ಬೇಕು. ರಾಜ್ಯದ ಇತರ ಜಿಲ್ಲೆಗಳಂತೆ ಕೊಡಗು ಜಿಲ್ಲೆಯಲ್ಲಿಯೂ ಕೃಷಿ ಉತ್ಪನ್ನಗಳ ಮಾರಾಟವು ಸ್ಥಳೀಯ ಸಂತೆಗಳಲ್ಲಿ ಅಥವಾ ಮಾರುಕಟ್ಟೆಗಳಲ್ಲಿ ನೇರವಾಗಿ ಅಥವಾ ಮಧ್ಯವರ್ತಿಗಳ ಮೂಲಕ ನಡೆಯುತ್ತದೆ. ಸ್ವಾತಂತ್ರ್ಯಪೂರ್ವದ ದಶಕಗಳಲ್ಲಿ ಸಾಂಸ್ಥಿಕ ಹಣಕಾಸು ಸಂಸ್ಥೆಗಳಿಂದ ಸುಲಭ ಸಾಲ ಸವಲತ್ತುಗಳ ಅಲಭ್ಯತೆ, ನಿಯಂತ್ರಿತ ಮಾರುಕಟ್ಟೆಗಳ ಅಭಾವ, ಅಳತೆ ತೂಕಗಳಲ್ಲಿ ಅಪ್ರಾಮಾಣಿಕತೆ, ಉಗ್ರಾಣಗಳ ಕೊರತೆ ಮತ್ತು ಗುಣಮಟ್ಟದ ಅನ್ವಯ ವರ್ಗೀಕರಿಸದ ಸರಕು ಇವೇ ಮೊದಲಾದ ನ್ಯೂನತೆಗಳಿಂದ ವ್ಯವಸಾಯಗಾರರಿಗೆ ಅವರ ಶ್ರಮಕ್ಕೆ ಸಮನಾದ ಬೆಲೆ ಸಿಗದೆ ಆರ್ಥಿಕ ಸ್ಥಿತಿ ತುಂಬಾ ಕಷ್ಟಕರವಾಗಿತ್ತು. ಬೆಳೆಗಾರರನ್ನು ಈ ಸಂಕಷ್ಟದಿಂದ ದೂರ ಮಾಡಲು 1928ರಲ್ಲಿ ಕೃಷಿಯನ್ನು ಕುರಿತಂತೆ 'ರಾಯಲ್' ಆಯೋಗವನ್ನು ನಿಯಮಿಸಲಾಯಿತು. ಈ ಆಯೋಗವು ವ್ಯವಸಾಯಗಾರರ ಪರಿಸ್ಥಿತಿಯನ್ನು ಸುಧಾರಿಸಲು ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿತು. ಕೊಡಗಿನಲ್ಲಿ ವ್ಯವಸಾಯ ಇಲಾಖೆಯನ್ನು 1907 ರಲ್ಲಿ ಪ್ರಾರಂಭಿಸಲಾಯಿತು ಎಂದು ತಿಳಿದು ಬರುವುದು.

ಕೊಡಗು ಜಿಲ್ಲೆಯಲ್ಲಿ ಕಾಫಿಯೇ ಪ್ರಮುಖವಾದ ವಾಣಿಜ್ಯ ಬೆಳೆಯಾಗಿದ್ದು ಅದರ ವ್ಯಾಪಾರ ಕೇಂದ್ರ ಸರ್ಕಾರದ 1942ರ ಕಾಫಿ ಮಾರಾಟ ವಿಸ್ತರಣಾ ಕಾಯಿದೆ ಮತ್ತು ಕಾಫಿ ಕಾಯಿದೆ 1942ರ ಅನ್ವಯ ನಿಯಂತ್ರಣಕ್ಕೆ ಒಳಗಾಯಿತು. ಜಿಲ್ಲೆಯಾದ್ಯಂತ ಸಹಕಾರಿ ಸಂಸ್ಥೆಗಳ ಮೂಲಕ ಇತರ ಪ್ರಮುಖ ಬೆಳೆಗಳಾದ ಬತ್ತ, ಏಲಕ್ಕಿ, ಮೆಣಸು, ಕಿತ್ತಳೆ ಮುಂತಾದ ಬೆಳೆಗಾರರಿಗೆ ಉತ್ತಮ ನಿಯಂತ್ರಿತ ಮಾರುಕಟ್ಟೆಯ ಸೌಲಭ್ಯ ಕಲ್ಪಿಸುವ ವ್ಯವಸ್ಥೆ ಮಾಡಲಾಗಿದೆ.

### ವ್ಯವಸಾಯ ಉತ್ಪನ್ನ ಮಾರಾಟ (ನಿಯಂತ್ರಣ) ಕಾನೂನು 1966

ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ 1966 ಇದು ದ್ವಿಮುಖ ಉದ್ದೇಶದ ಸಾಮಾಜಿಕ ಮತ್ತು ಆರ್ಥಿಕ ಹತೋಟಿಯ ಕ್ರಮವಾಗಿದ್ದು ವ್ಯವಸಾಯಗಾರನು ತನ್ನ ಬೆಳೆಯನ್ನು ನಗದುಹಣಕ್ಕೆ ಪರಿವರ್ತಿಸುವಲ್ಲಿ ಆಗಬಹುದಾದ ಶೋಷಣೆ ಮತ್ತು ವಂಚನೆಗಳನ್ನು ನಿವಾರಿಸುತ್ತದೆ. ಅಲ್ಲದೇ ಮಾರುಕಟ್ಟೆಯನ್ನು ಬಳಸುವವರಿಗೆ ಉತ್ಪಾದನಾ ಕೇಂದ್ರಗಳನ್ನು ಮತ್ತು ಮಾರುಕಟ್ಟೆಗಳನ್ನು ಸಂಪರ್ಕಿಸಲು ಸಹಾಯಕವಾಗುವಂತೆ ಸಂಚಾರ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಹಾಯ ಮಾಡುತ್ತದೆ. ಈ ಕಾನೂನಿನ ನಿಯಂತ್ರಣಕ್ಕೆ ಪ್ರಾಥಮಿಕ ಮತ್ತು ಸಗಟು ಮಾರಾಟದ ಎಲ್ಲಾ ಚಟುವಟಿಕೆಗಳು ಒಳಪಡುತ್ತವೆ. ನಿಯಮಾವಳಿಗಳನ್ನು ರಚಿಸಿದ ನಂತರ ಮೇ ತಿಂಗಳ 1968 ರಿಂದ ಈ ಕಾಯಿದೆಯನ್ನು ಜಾರಿಯಲ್ಲಿ ತರಲಾಯಿತು. ಜಿಲ್ಲೆಯಲ್ಲಿ ನಿಯಂತ್ರಿತ ವ್ಯವಸಾಯ ಮಾರುಕಟ್ಟೆಗಳನ್ನು ನೋಡಿಕೊಳ್ಳಲು ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಇವರ ಕಛೇರಿಯನ್ನು 1982ರಲ್ಲಿ ತೆರೆಯ

ಲಾಯಿತು. ಈ ಇಲಾಖೆಯು 1966ರ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ ಕರ್ನಾಟಕ ದಾಸ್ತಾನು ಮಳಿಗೆ ಕಾಯಿದೆ (1961), ಮತ್ತು ಕೇಂದ್ರ ಸರ್ಕಾರದ ವ್ಯವಸಾಯೋತ್ಪನ್ನಗಳ (ವರ್ಗೀಕರಣ ಮತ್ತು ಮಾರಾಟ) ಕಾಯಿದೆ 1937 ಮುಂತಾದವುಗಳನ್ನು ಕಾರ್ಯಾಚರಣೆಗೆ ತರುತ್ತದೆ.

ನಿಯಂತ್ರಿತ ಮಾರುಕಟ್ಟೆಯು ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳಲು ಉತ್ಪಾದಕರು, ವ್ಯಾಪಾರಸ್ಥರು, ದಲ್ಲಾಳಿಗಳು, ಸ್ಥಳೀಯ ಸಂಸ್ಥೆಗಳು, ಸಹಕಾರಿ ಸಂಘಗಳು ಮತ್ತು ಸರ್ಕಾರವನ್ನು ಪ್ರತಿನಿಧಿಸುವ ಒಂದು 'ಮಾರುಕಟ್ಟೆ ಸಮಿತಿಯನ್ನು' ಪ್ರತೀ ಮಾರುಕಟ್ಟೆಯಲ್ಲಿಯೂ ರಚಿಸುವಂತೆ ಈ ಕಾನೂನು ಅವಕಾಶ ಕಲ್ಪಿಸಿದೆ. ಮಾರುಕಟ್ಟೆಯ ಪರಿಮಿತಿಯಲ್ಲಿ ವ್ಯವಹರಿಸುವ ವ್ಯಾಪಾರಸ್ಥರು, ದಲ್ಲಾಳಿಗಳು, ಆಮದು ರಫ್ತುದಾರರು, ದಾಸ್ತಾನು ಮಳಿಗೆಯವರು, ಸರಕು ಸಾಗಿಸುವವರು, ತೂಕ ಮಾಡುವವರು, ಹಮಾಲರು ಮುಂತಾದವರು ಸಮಿತಿಯ ಅನುಜ್ಞೆಯನ್ನು ಪಡೆದಿರಲೇಬೇಕು. ಮಾರುಕಟ್ಟೆ ಸಮಿತಿಯ ಮುಖ್ಯ ಆದಾಯದ ಮೂಲ ಎಂದರೆ ಮಾರುಕಟ್ಟೆ ಶುಲ್ಕ ಮತ್ತು ಪರವಾನಗಿ ಶುಲ್ಕ. ಕೊಳ್ಳುವವನು ಕೊಡಬೇಕಾದ ಪರಮಾವಧಿ ಮಾರುಕಟ್ಟೆ ಶುಲ್ಕ ಒಂದು ನೂರು ರೂಪಾಯಿ ಬೆಲೆಯ ಸರಕಿಗೆ ಒಂದು ರೂಪಾಯಿ (1978 ರಿಂದ) ಆಗಿರುತ್ತದೆ. ಈ ಕಾಯಿದೆಯು ಮಾರುಕಟ್ಟೆಯ ನಿಧಿಯೊಂದನ್ನು ಸ್ಥಾಪಿಸಲು ಅನುವು ಮಾಡಿಕೊಡುತ್ತದೆ ಮತ್ತು ಸಮಿತಿಯ ಎಲ್ಲಾ ಖರ್ಚು ವೆಚ್ಚಗಳನ್ನು ಈ ನಿಧಿಯಿಂದ ಭರಿಸಲಾಗುತ್ತಿದೆ. ಕಾಯಿದೆಯಲ್ಲಿ ತಿಳಿಸಿದ ಉದ್ದೇಶಗಳಿಗೆ ಮಾತ್ರ ನಿಧಿಯು ಉಪಯೋಗಿಸಲ್ಪಡತಕ್ಕದ್ದು.

### ನಿಯಂತ್ರಿತ ಸರಕುಗಳು

ವ್ಯವಸಾಯೋತ್ಪನ್ನಗಳ ವ್ಯಾಖ್ಯೆಯು ಈಗಿನ ವಿಸ್ತೃತ ವ್ಯಾಪ್ತಿಯಲ್ಲಿ ಜಾನುವಾರು, ಕೋಳಿ, ಸಂಸ್ಕರಿಸಿದ ಅಥವಾ ಸಂಸ್ಕರಿಸಲಾರದ ಎಲ್ಲಾ ವ್ಯವಸಾಯ ಉತ್ಪನ್ನಗಳು, ತೋಟಗಾರಿಕೆ, ಹೈನುಗಾರಿಕೆ, ಮತ್ಸ್ಯೋದ್ಯಮ, ಅರಣ್ಯ ಉತ್ಪನ್ನ ವಸ್ತುಗಳು ಮತ್ತು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಆಯಾ ಪ್ರದೇಶಗಳಲ್ಲಿ ಪ್ರಕಟಿಸಲ್ಪಟ್ಟ ವ್ಯವಸಾಯ ಉತ್ಪನ್ನ ವಸ್ತುವೆಂದು ಘೋಷಿಸಲ್ಪಡುವ ಉತ್ಪನ್ನಗಳು ಈ ಕಾಯಿದೆಯ ಪರಿಮಿತಿಯಲ್ಲಿ ಬರುವವು. ಸಾಮಾನ್ಯವಾಗಿ ಮಾರುಕಟ್ಟೆಯ ಕ್ಷೇತ್ರದಲ್ಲಿ ವ್ಯವಸಾಯ ಉತ್ಪನ್ನಗಳ ಬಗ್ಗೆ ಸಮೀಕ್ಷೆ ನಡೆಸಿ, ವ್ಯವಸಾಯ ಉತ್ಪನ್ನಗಳು ಆಯಾ ಕ್ಷೇತ್ರಗಳಲ್ಲಿ ಬೆಳೆಯುತ್ತಿದ್ದಲ್ಲಿ ಅಥವಾ ಸಂಗ್ರಹವಾದಲ್ಲಿ ಅಂತಹ ಉತ್ಪನ್ನಗಳು ನಿಯಂತ್ರಿಸಲ್ಪಡುತ್ತವೆ. ಈ ದಿಶೆಯಲ್ಲಿ ನಿಯಂತ್ರಿತ ಜಾನುವಾರು ಮಾರುಕಟ್ಟೆ ಇತ್ತೀಚಿನದು.

ವ್ಯವಸಾಯ ಉತ್ಪನ್ನಗಳನ್ನು ಕುರಿತಂತೆ ನಿಯಂತ್ರಿತ ಮಾರುಕಟ್ಟೆ ಚಟುವಟಿಕೆಗಳು ಈ ಜಿಲ್ಲೆಯಲ್ಲಿ 1969ರ ನಂತರ ಪ್ರಾರಂಭವಾದವು. ಜಿಲ್ಲೆಯ ಮೊದಲನೇಯ ನಿಯಂತ್ರಿತ ಮಾರುಕಟ್ಟೆ ಸಮಿತಿಯು ವೀರರಾಜಪೇಟೆ ತಾಲೂಕನ್ನು ಒಳಗೊಂಡಂತೆ 1960ರಲ್ಲಿ ರಚನೆಯಾಯಿತು. ಅದರ ಕೇಂದ್ರ ಕಛೇರಿಯು ಗೋಣಿಕೊಪ್ಪಲಿನಲ್ಲಿ ಇರುವುದು. ಇದಾದ ಹತ್ತು ವರ್ಷಗಳ ನಂತರ 1979ರಲ್ಲಿ ಸೋಮವಾರಪೇಟೆ ಮತ್ತು ಮಡಿಕೇರಿ ತಾಲೂಕುಗಳಿಗೆ ಪ್ರತ್ಯೇಕವಾದ ಮಾರುಕಟ್ಟೆ ಸಮಿತಿಗಳು ರಚನೆಗೊಂಡವು. ಸೋಮವಾರಪೇಟೆ ತಾಲೂಕಿನ ನಿಯಂತ್ರಿತ ಮಾರುಕಟ್ಟೆಯ ಕೇಂದ್ರ ಕಚೇರಿ ಕುಶಾಲನಗರದಲ್ಲಿ ಇರುವುದು. ಈ ಮೇಲಿನ ಮೂರು ಮುಖ್ಯ ಮಾರುಕಟ್ಟೆಗಳಲ್ಲದೇ ಸೋಮವಾರಪೇಟೆ ಮತ್ತು ಮಾಕುಟ್ಟದಲ್ಲಿ ಉಪಮಾರುಕಟ್ಟೆಗಳು ಇರುವವು.

ದನಕರುಗಳು, ಕುರಿ ಮತ್ತು ಮೇಕೆಗಳನ್ನು ಒಳಗೊಂಡಂತೆ ಗೋಣಿಕೊಪ್ಪಲು ಮಾರುಕಟ್ಟೆಯ ವಲಯದಲ್ಲಿ 11 ವ್ಯವಸಾಯ ಉತ್ಪನ್ನಗಳನ್ನು ನಿಯಂತ್ರಣಕ್ಕೆ ಒಳಪಡಿಸಿದ್ದರೆ, ಕುಶಾಲನಗರ ಮಾರುಕಟ್ಟೆಗೆ ಜಾನುವಾರುಗಳನ್ನು ಹೊರತುಪಡಿಸಿ 25 ವ್ಯವಸಾಯ ಉತ್ಪನ್ನಗಳು, ಮತ್ತು ಮಡಿಕೇರಿ ಮಾರುಕಟ್ಟೆಯ ವ್ಯಾಪ್ತಿಯಲ್ಲಿ 12 ವಸ್ತುಗಳು ನಿಯಂತ್ರಿತ ಉತ್ಪನ್ನಗಳೆಂದು ಘೋಷಿಸಲ್ಪಟ್ಟಿವೆ.

ಗೋಣಿಕೊಪ್ಪಲು ಮಾರುಕಟ್ಟೆಯಿಂದ ರಫ್ತಾಗುವ ಮುಖ್ಯ ವಸ್ತುಗಳಲ್ಲಿ ಬತ್ತ, ಜಾನುವಾರುಗಳು, ಗೋಡಂಬಿ, ಮೆಣಸು, ಕಿತ್ತಳೆ, ಮರಮುಟ್ಟು ಮತ್ತು ಬಾಳೆಹಣ್ಣು. ಆಮದು ವಸ್ತುಗಳಲ್ಲಿ ಅಕ್ಕಿ ಮತ್ತು ಕುರಿ, ಮೇಕೆಗಳು ಮುಖ್ಯವಾದವುಗಳು. ಕುಶಾಲನಗರ ಮಾರುಕಟ್ಟೆಯಿಂದ ರಫ್ತಾಗುವ ವಸ್ತುಗಳಲ್ಲಿ ಹಸಿಮೆಣಸಿನಕಾಯಿ, ಮೆಕ್ಕೆಜೋಳ, ಕಿತ್ತಳೆ ಮತ್ತು ಮರಮುಟ್ಟುಗಳು ಮುಖ್ಯವಾದವುಗಳು. ಮಡಿಕೇರಿ ಮಾರುಕಟ್ಟೆಗೆ ಅಕ್ಕಿ ಮತ್ತು ಗೋಡಂಬಿ ಮುಖ್ಯ ಆಮದು ವಸ್ತುಗಳಾದರೆ ಮೆಣಸು, ಗೋಡಂಬಿ, ಕಿತ್ತಳೆ ಮತ್ತು ಮರಮುಟ್ಟು ಪ್ರಮುಖ ರಫ್ತು ವಸ್ತುಗಳು. 1989–90ರಲ್ಲಿ ಗೋಣಿಕೊಪ್ಪಲು ಮಾರುಕಟ್ಟೆ ಸಮಿತಿಯಿಂದ ಅನುಜ್ಞೆ ಪಡೆದ ವಿವಿಧ ಮಾರುಕಟ್ಟೆ ವ್ಯವಸ್ಥಾಪಕರ ಸಂಖ್ಯೆ 206 ಆಗಿದ್ದರೆ, ಕುಶಾಲನಗರ ಮತ್ತು ಮಡಿಕೇರಿಯಲ್ಲಿ ಈ ವ್ಯವಸ್ಥಾಪಕರ ಸಂಖ್ಯೆ ಕ್ರಮವಾಗಿ 264 ಮತ್ತು 177 ಎಂದು ವರದಿ

ಸೂಚಿಸುವುದು. ಮಡಿಕೇರಿ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯು ಮಾರುಕಟ್ಟೆ ಪ್ರಾಂಗಣಕ್ಕೋಸ್ಕರ ಸುಮಾರು ನಾಲ್ಕು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು ಕೇಂದ್ರ ಸರ್ಕಾರದ ನೆರವಿನಿಂದ ಆಡಳಿತ ಕಚೇರಿ ಗೋದಾಮು ಗಳನ್ನು ನಿರ್ಮಿಸಲಾಗುತ್ತಿದೆ. ರೈತರ ಮತ್ತು ವ್ಯಾಪಾರಸ್ಥರ ಅನುಕೂಲಕ್ಕಾಗಿ ಹರಾಜುಕಟ್ಟೆ, ಅಂಗಡಿ, ಗೋದಾಮು ಗಳನ್ನು ನಿರ್ಮಿಸಲಾಗುತ್ತಿದೆ. 1986–87 ರಿಂದ 1990–91ರ ವರೆಗೆ ಮಡಿಕೇರಿ ಸಮಿತಿಯು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಮಾಡಿದ ವೆಚ್ಚ ರೂ. 10.85 ಲಕ್ಷ ಎಂದು ವರದಿಯಾಗಿದೆ. ಅದರಂತೆ ಗೋಣಿಕೊಪ್ಪಲು ಸಮಿತಿಯು ಮಾಡಿದ ವೆಚ್ಚ ರೂ. 42.66 ಲಕ್ಷ. ಇದರಲ್ಲಿ ಜಮೀನು ಕೊಳ್ಳಲು, ಆಡಳಿತ ಕಛೇರಿ ಮತ್ತು ಅತಿಥಿ ಭವನ ನಿರ್ಮಾಣ, ರಸ್ತೆ, ಗೋದಾಮು, ಅಂಗಡಿ ಮುಂತಾದವುಗಳ ನಿರ್ಮಾಣ ವೆಚ್ಚ ಸೇರಿದೆ. ಕುಶಾಲನಗರ ಮಾರುಕಟ್ಟೆ ಸಮಿತಿಯು 1985–86 ರಿಂದ ಮೇ 1990ರ ವರೆಗೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಮಾಡಿದ ವೆಚ್ಚ ರೂ. 16.81 ಲಕ್ಷ ಎಂದು ವರದಿ ತಿಳಿಸುವುದು.

1985–86, 1987–88, 1988–89 ಮತ್ತು 1990–91 ರಲ್ಲಿ ಜಿಲ್ಲೆಯ ನಿಯಂತ್ರಿತ ಮಾರುಕಟ್ಟೆಗಳ ಆದಾಯ ಮತ್ತು ವೆಚ್ಚಗಳು ಈ ಕೆಳಗಿನಂತೆ ಇದ್ದವು :

(ಮೊತ್ತ ಲಕ್ಷ ರೂ.ಗಳಲ್ಲಿ)

| ಮಾರುಕಟ್ಟೆಯ ಹೆಸರು | 1985–86 | | 1987–88 | | 1988–89 | | 1990–91 | |
|---|---|---|---|---|---|---|---|---|
| | ಆದಾಯ | ವೆಚ್ಚ | ಆದಾಯ | ವೆಚ್ಚ | ಆದಾಯ | ವೆಚ್ಚ | ಆದಾಯ | ವೆಚ್ಚ |
| ಗೋಣಿಕೊಪ್ಪಲು | 8.68 | 3.10 | 24.92 | 8.99 | 27.40 | 10.56 | 41.87 | 21.32 |
| ಕುಶಾಲನಗರ | 3.93 | 2.76 | 3.31 | 2.74 | 2.45 | 2.45 | 4.58 | 4.55 |
| ಮಡಿಕೇರಿ | 7.42 | 4.08 | 3.21 | 2.44 | 3.65 | 2.95 | 9.63 | 4.95 |
| | 20.03 | 9.94 | 31.44 | 14.17 | 33.50 | 15.96 | 56.98 | 30.82 |

ಈ ಕೆಳಗಿನ ಕೋಷ್ಟಕಗಳಲ್ಲಿ ಪ್ರತಿ ಒಂದು ನಿಯಂತ್ರಿತ ಮಾರುಕಟ್ಟೆಯಲ್ಲಿ 1985–86 ಮತ್ತು 1990–91 ರಲ್ಲಿ ಮಾರುಕಟ್ಟೆಗೆ ಮಾರಾಟಕ್ಕೆ ಬಂದ ಪ್ರಮುಖ ವ್ಯವಸಾಯ ಉತ್ಪನ್ನಗಳ ಪರಿಮಾಣ ಮತ್ತು ಅವುಗಳ ಮಾರಾಟ ಮೌಲ್ಯವನ್ನು ಕುರಿತಂತೆ ತುಲನಾತ್ಮಕ ವಿವರಣೆ ನೀಡಲಾಗಿದೆ.

ನಿಯಂತ್ರಿತ ಮಾರುಕಟ್ಟೆ, ಗೋಣಿಕೊಪ್ಪಲು

(ಮೊತ್ತ ಲಕ್ಷ ರೂ.ಗಳಲ್ಲಿ)

| ಕೃಷಿ ಉತ್ಪನ್ನಗಳ ವಿವರ | 1985–86 | | 1990–91 | |
|---|---|---|---|---|
| | ಆವಕ (ಕ್ವಿಂ.) | ಮೌಲ್ಯ | ಆವಕ (ಕ್ವಿಂ.) | ಮೌಲ್ಯ |
| 1. ಬತ್ತ | 41,963 | 59.96 | 1,16,171 | 234.77 |
| 2. ಅಕ್ಕಿ | 14,313 | 54.20 | 17,098 | 65.08 |
| 3. ಕಾಳು ಮೆಣಸು | 1,855 | 76.99 | 5,566 | 179.69 |
| 4. ಕಿತ್ತಳೆಹಣ್ಣು (ಸಂ) | 20,74,700 | 16.67 | 29,33,000 | 8.30 |
| 5. ಗೋಡಂಬಿ | — | — | 99,741 | 1,826.98 |
| 6. ಮರದ ದಿಮ್ಮಿ (ಘ.ಮೀ.) | 45,476 | 205.18 | 3,083 | 32.75 |
| 7. ವನಕರುಗಳು (ಸಂ) | 46,353 | 198.99 | 4,9,234 | 227.46 |
| 8. ಕುರಿ (ಸಂ) | 7,845 | 18.53 | 3,013 | 9.05 |
| 9. ಮೇಕೆ (ಸಂ) | 3,524 | 9.53 | 4,027 | 12.24 |

ನಿಯಂತ್ರಿತ ಮಾರುಕಟ್ಟೆ, ಸೋಮವಾರಪೇಟೆ

(ಮೊತ್ತ ಲಕ್ಷ ರೂ.ಗಳಲ್ಲಿ)

| ಕೃಷಿಉತ್ಪನ್ನಗಳ ವಿವರ | 1985–86 | | 1990–91 | |
|---|---|---|---|---|
| | ಆವಕ (ಕ್ವಿಂ.) | ಮೌಲ್ಯ | ಆವಕ (ಕ್ವಿಂ.) | ಮೌಲ್ಯ |
| 1. ಬತ್ತ | 3,310 | 6.28 | 3,140 | 6.93 |
| 2. ಅಕ್ಕಿ | 22,598 | 62.88 | 12,434 | 51.23 |
| 3. ಕಾಳು ಮೆಣಸು | 10 | 0.54 | — | — |
| 4. ರಾಗಿ | 3,288 | 5.31 | 810 | 1.62 |
| 5. ಮುಸುಕಿನ ಜೋಳ | 2,429 | 3.89 | 15,294 | 30.20 |
| 6. ಬೆಲ್ಲ | 7,222 | 1.67 | 2,940 | 11.55 |
| 7. ಹಸಿಮೆಣಸಿನಕಾಯಿ | 20 | 0.42 | 8,198 | 8.13 |
| 8. ಕಿತ್ತಳೆಹಣ್ಣು (ಸಂ) | 42,14,200 | 7.71 | 8,530 | 0.17 |
| 9. ತೆಂಗಿನಕಾಯಿ (ಸಂ) | 8,68,867 | 15.46 | 2,58,025 | 8.04 |
| 10. ಮರದ ದಿಮ್ಮಿ | — | 1.72 | — | 20.25 |

ನಿಯಂತ್ರಿತ ಮಾರುಕಟ್ಟೆ, ಮಡಿಕೇರಿ

(ಮೊತ್ತ ಲಕ್ಷ ರೂ.ಗಳಲ್ಲಿ)

| ಕೃಷಿ ಉತ್ಪನ್ನಗಳ ವಿವರ | 1985–86 | | 1990–91 | |
|---|---|---|---|---|
| | ಆವಕ (ಕ್ವಿಂ.) | ಮೌಲ್ಯ | ಆವಕ (ಕ್ವಿಂ.) | ಮೌಲ |
| 1. ಬತ್ತ | 5,869 | 8.97 | 15,673 | 31.92 |
| 2. ಅಕ್ಕಿ | 4,663 | 14.69 | 2,842 | 12.16 |
| 3. ಕಾಳು ಮೆಣಸು | 30,131 | 15.25 | 685 | 23.44 |
| 4. ಮರಮುಟ್ಟುಗಳು (ಸಿ.ಎಂ.ಟಿ.) | 3,484 | 40.98 | 3,556 | 33.81 |
| 5. ತೆಂಗು (ಸಂ) | 1,96,211 | 4.34 | 2,07,925 | 4.82 |
| 6. ಗೋಡಂಬಿ | 49,002 | 618.20 | 20,673 | 417.16 |
| 7. ಕಿತ್ತಳೆ (ಸಂ) | 20,000 | 0.02 | 21,500 | 00.07 |
| 8. ಅಡಿಕೆ | — | — | 18.55 | 00.45 |
| 9. ಸೀಗೇಕಾಯಿ | — | — | 1,637 | 8.17 |
| 10. ಅಂಟುವಾಳ | — | — | 917 | 4.18 |

ವಾಣಿಜ್ಯ ವೃತ್ತಿ ನಿರತರು

ವ್ಯಾಪಾರ, ವಾಣಿಜ್ಯ ಇವುಗಳ ವ್ಯಾಖ್ಯೆ, ವ್ಯಾಪ್ತಿ ಮತ್ತು ಪರಿಕಲ್ಪನೆ ಕಾಲಕಾಲಕ್ಕೆ ಬದಲಾಗಿರುವುದರಿಂದ ಮತ್ತು ಒಬ್ಬನೇ ವ್ಯಕ್ತಿ ಹಲವಾರು ಪೂರಕ ಉದ್ಯೋಗಗಳನ್ನು ಅವಲಂಬಿಸಿರುವುದರಿಂದ, ಒಟ್ಟು ಜನಸಂಖ್ಯೆಯಲ್ಲಿ ಯಾವ ಪ್ರಮಾಣದಲ್ಲಿ ಜನರು ವ್ಯಾಪಾರ/ವಾಣಿಜ್ಯದಲ್ಲಿ ತೊಡಗಿರುವರು ಎಂಬುದನ್ನು ಕರಾರುವಾಕ್ಕಾಗಿ ಹೇಳುವುದು ಸುಲಭ ಸಾಧ್ಯವಾಗುವುದಿಲ್ಲ. 1871 ರ ಕೊಡಗಿನ ಮೊದಲನೇಯ ಜನಗಣತಿಯಲ್ಲಿ ಈ ಪ್ರಯತ್ನವನ್ನು ಮಾಡಲಾಗಿದೆ. ಅಂದಿನ ಜಿಲ್ಲೆಯ ಜನಸಂಖ್ಯೆ 1,68,312. 1871 ರಲ್ಲಿ ಅಂದಿನ ವಾಣಿಜ್ಯ ವ್ಯಾಖ್ಯೆಯಂತೆ ಜಿಲ್ಲೆಯಲ್ಲಿ ವ್ಯಾಪಾರ/ವಾಣಿಜ್ಯದಲ್ಲಿ ತೊಡಗಿದವರನ್ನು ಎರಡು ಪ್ರಮುಖ ವೃತ್ತಿಗೆ ಅನುಸಾರವಾಗಿ ವಿಭಾಗಿಸಲಾಗಿತ್ತು : 1) ಜನರನ್ನು ಮತ್ತು ವಸ್ತುಗಳನ್ನು ಹೊತ್ತು ಸಾಗಿಸುವವರು ; 2) ಹಣಕಾಸಿನ ಲೇವಾದೇವಿ ಮತ್ತು ವಸ್ತುಗಳನ್ನು ಇಟ್ಟು ಮಾರುವವರು. 1871ರಲ್ಲಿ ಮೊದಲನೇ ವೃತ್ತಿಯಲ್ಲಿ ತೊಡಗಿದವರ ಸಂಖ್ಯೆ 656 ಆಗಿತ್ತು. ಅದರಲ್ಲಿ 56 ಜನರು ತೆಪ್ಪ ಅಥವಾ ನಾಡದೋಣಿಗಳ ಮೂಲಕ ಜನರನ್ನು, ವಸ್ತುಗಳನ್ನು ಸಾಗಿಸುವಲ್ಲಿ ತೊಡಗಿದ್ದರೆ, ಉಳಿದ 600 ಜನರು ಎತ್ತಿನ ಗಾಡಿಗಳ ಮೂಲಕ ಮತ್ತು ಪ್ರಾಣಿಗಳ ಮೂಲಕ ಕಾಫಿ ತೋಟಗಳ ಉತ್ಪನ್ನಗಳನ್ನು ಕರಾವಳಿಯ ಬಂದರುಗಳಿಗೆ ಸಾಗಣೆಯಲ್ಲಿ ತೊಡಗಿದ್ದರು. ಎರಡನೇಯ ವರ್ಗದಲ್ಲಿ ಎಲ್ಲಾ ಬಗೆಯ ಹತ್ತಿ ಬಟ್ಟೆ ವ್ಯಾಪಾರಸ್ಥರು, ಕಾಫಿ ಮತ್ತು ಇತರೇ ವ್ಯಾಪಾರಿ ವಸ್ತುಗಳ ಸಗಟು ಮಾರಾಟದಾರರು, ಲೇವಾದೇವಿಗಾರರು ಸೇರಿದ್ದರು. ವೃತ್ತಿಗನುಸಾರವಾಗಿ ವ್ಯಾಪಾರಿಗಳನ್ನು ಮಂಡಿದಾರರು, ಇಜಾರ್‌ದಾರರು, ಸರಾಫರು, ಕಾಫಿ ತೋಟಗಾರರು, ಅವರ ಏಜಂಟರು, ಸ್ಟಾಂಪ್‌ವೆಂಡರ್ಸ್ (ದಸ್ತಾವೇಜ ಮಾರಾಟಗಾರರು) ಮುಂತಾದವರು ಎಂದು ವಿಂಗಡಿಸಲಾಗಿತ್ತು. ಇದೇ ವರ್ಗದಲ್ಲಿ 98 ಜನ ನೇಯ್ಗೆಯವರೂ ಸೇರಿದ್ದರು.

1951ರ ಗಣತಿಯ ವರದಿಯ ಪ್ರಕಾರ ಕೊಡಗು ಜಿಲ್ಲೆಯಲ್ಲಿ ವ್ಯಾಪಾರ-ವಾಣಿಜ್ಯವನ್ನೇ ಜೀವನ ನಿರ್ವಹಣೆಯ ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಿದವರ ಸಂಖ್ಯೆ ಒಟ್ಟು 7,944 ಆಗಿತ್ತು. ಇವರಲ್ಲಿ 4,884 ಪುರುಷರಾಗಿದ್ದರೆ ಮಹಿಳೆಯರ ಸಂಖ್ಯೆ 3,060 ಆಗಿತ್ತು. ವ್ಯಾಪಾರ-ವಾಣಿಜ್ಯದಲ್ಲಿ ತೊಡಗಿದ ಒಟ್ಟು ಜನಸಂಖ್ಯೆಯಲ್ಲಿ, 4,191 (ಇದರಲ್ಲಿ 1,927 ಮಹಿಳೆಯರು) ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದರೆ, ನಗರ ಪ್ರದೇಶದಲ್ಲಿದ್ದವರ ಸಂಖ್ಯೆ 2,753 ಇದರಲ್ಲಿ 1,133 ಮಹಿಳೆಯರು).

ಜಿಲ್ಲೆಯ ಪ್ರಮುಖ ವ್ಯಾಪಾರ ಕೇಂದ್ರಗಳಾದ ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿ ವಾಣಿಜ್ಯ ವ್ಯವಹಾರದಲ್ಲಿ ತೊಡಗಿದವರ ಸಂಖ್ಯೆ ಕ್ರಮವಾಗಿ 1,303 ಮತ್ತು 1,450 ಆಗಿತ್ತು. ಮಡಿಕೇರಿಯಲ್ಲಿ ವಾಣಿಜ್ಯ-ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ 574 ಆಗಿದ್ದರೆ ವೀರರಾಜಪೇಟೆಯಲ್ಲಿ ಈ ಸಂಖ್ಯೆ 559 ಆಗಿತ್ತು. ವೀರರಾಜಪೇಟೆಯಲ್ಲಿ ಮಡಿಕೇರಿಗಿಂತಲೂ ಹೆಚ್ಚು ಗಂಡಸರು ವ್ಯಾಪಾರ ವೃತ್ತಿಯಲ್ಲಿ ತೊಡಗಿದ್ದರು. 1961ರ ಜನಗಣತಿಯಲ್ಲಿ ವಾಣಿಜ್ಯವನ್ನು ಕುರಿತಂತೆ ಮಾಡಲಾದ ಬಹು ಸೀಮಿತವಾದ ವ್ಯಾಖ್ಯೆಯ ಪ್ರಕಾರ ಜಿಲ್ಲೆಯಾದ್ಯಂತ ವಾಣಿಜ್ಯದಲ್ಲಿ ತೊಡಗಿದವರ ಸಂಖ್ಯೆ 5,088 ಆಗಿತ್ತು; ಇವರಲ್ಲಿ ಪುರುಷರ ಸಂಖ್ಯೆ 4,917 ಆಗಿದ್ದರೆ, ಮಹಿಳೆಯರ ಸಂಖ್ಯೆ ಕೇವಲ 171 ಆಗಿತ್ತು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಣಿಜ್ಯದಲ್ಲಿ ತೊಡಗಿದವರ ಸಂಖ್ಯೆ ಬಹುಪಾಲು ಸಮಸಮವಾಗಿತ್ತು. ಅಂದರೆ ಕ್ರಮವಾಗಿ 2,517 ಮತ್ತು 2,571 ಆಗಿತ್ತು ಎಂದು ಕಂಡುಬರುವುದು.

1971ರ ಜನಗಣತಿಯ ವರದಿಯಂತೆ ವ್ಯಾಪಾರ ವಾಣಿಜ್ಯದಲ್ಲಿ ತೊಡಗಿದವರ ಸಂಖ್ಯೆ 8,689; ಇದರಲ್ಲಿ ಪುರುಷರ ಮತ್ತು ಮಹಿಳೆಯರ ಸಂಖ್ಯೆ ಕ್ರಮವಾಗಿ 8,366 ಮತ್ತು 323. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಿಂಗಡನೆ ಕ್ರಮವಾಗಿ 4,574 ಮತ್ತು 4,115. ತಾಲೂಕುಗಳ ಪೈಕಿ ವೀರರಾಜಪೇಟೆಯಲ್ಲಿ ವಾಣಿಜ್ಯ ವ್ಯವಹಾರಗಳಲ್ಲಿ ತೊಡಗಿದವರ ಸಂಖ್ಯೆ 3,564; ನಂತರದ ಸ್ಥಾನ ಮಡಿಕೇರಿ ತಾಲೂಕಿನದು (2,635); ಕೊನೆಯ ಸ್ಥಾನ ಸೋಮವಾರಪೇಟೆಯದು (2,490). ಆದರೆ ಮಹಿಳೆಯರು ಹೆಚ್ಚಾಗಿ ವಾಣಿಜ್ಯ ವ್ಯವಹಾರದಲ್ಲಿ ತೊಡಗಿದ ತಾಲೂಕುಗಳಲ್ಲಿ ಸೋಮವಾರಪೇಟೆ (129) ಮೊದಲನೆಯದು, ಮಡಿಕೇರಿ ಎರಡನೇಯದು (99), ಕೊನೆಯದು ವೀರರಾಜಪೇಟೆ (95). (1981ರ ಗಣತಿಯಲ್ಲಿ ಈ ಮಾಹಿತಿಯು ಇನ್ನು ಲಭ್ಯ ಇರುವುದಿಲ್ಲ).

ನೋಂದಾಯಿತ ವ್ಯಾಪಾರಿ ಸಂಸ್ಥೆಗಳು

ಕರ್ನಾಟಕ ಸರ್ಕಾರವು ಇಡೀ ರಾಜ್ಯಕ್ಕೆ ಅನ್ವಯವಾಗುವ ವ್ಯಾಪಕವಾದ ಕರ್ನಾಟಕ ಮಾರಾಟ ತೆರಿಗೆ ಕಾಯಿದೆಯನ್ನು 1957 ರಲ್ಲಿ ಜಾರಿಗೆ ತಂದಿತು. ಇದಕ್ಕೂ ಪೂರ್ವದಲ್ಲಿ, ಅಂದರೆ 1956 ರಲ್ಲಿ ಕೇಂದ್ರ ಮಾರಾಟ ತೆರಿಗೆ ಕಾಯಿದೆಯನ್ನು ಜಾರಿಯಲ್ಲಿ ತರಲಾಯಿತು. ಈ ಎರಡೂ ಕಾನೂನಿನ ಅನ್ವಯ ವಾರ್ಷಿಕ ನಿರ್ದಿಷ್ಟ ಮೊತ್ತದ (ರೂ. 2.5 ಲಕ್ಷ

ವ್ಯವಹಾರ ನಡೆಸುವ ವ್ಯಾಪಾರಸ್ಥರು ತಮ್ಮ ಹೆಸರನ್ನು ನೋಂದಾಯಿಸಬೇಕಾಗುವುದು. 1960-61 ರಲ್ಲಿ, ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ಅನ್ವಯ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟಿದ್ದ ವ್ಯಾಪಾರಿ ಸಂಸ್ಥೆಗಳ ಸಂಖ್ಯೆ 851 ಆಗಿದ್ದರೆ ಅವುಗಳು ನಿರ್ವಹಿಸಿದ ಒಟ್ಟು ವ್ಯವಹಾರ ಮೊತ್ತ 110.24 ಲಕ್ಷ ಎಂದು ಕಂಡು ಬರುವುದು. ಅನೇಕ ಸಣ್ಣ ಪುಟ್ಟ ವ್ಯಾಪಾರಸ್ಥರು ಮಾರಾಟ ತೆರಿಗೆ ಕಾನೂನಿನ ಕಕ್ಷೆಯಲ್ಲಿ ಬರುವುದಿಲ್ಲ, ಅಂತಹವರು ನೋಂದಾಯಿಸಬೇಕಾಗಿಲ್ಲ. ಇಂತಹ ವ್ಯಾಪಾರಿಗಳ ಸಂಖ್ಯೆ ಜಿಲ್ಲೆಯಲ್ಲಿ 1960-61 ರಲ್ಲಿ ಸುಮಾರು 650 ಇದ್ದಿರಬಹುದು ಎಂದು ಸೂಚಿಸಲಾಗಿದೆ. 1960-61 ರಲ್ಲಿ ನೋಂದಾಯಿಸಿದ್ದ 851 ವ್ಯಾಪಾರಿ ಸಂಸ್ಥೆಗಳಲ್ಲಿ ಬಹುಪಾಲು 480 ಘಟಕಗಳು ಆಹಾರ ವಸ್ತುಗಳ ವ್ಯಾಪಾರಿ ಸಂಸ್ಥೆಗಳಾಗಿದ್ದರೆ, 240 ಘಟಕಗಳು ಬಟ್ಟೆ ಮತ್ತು ಗ್ರಾಹಕರ ವಸ್ತುಗಳನ್ನು ಮಾರಾಟ ಮಾಡುವ ಸಂಸ್ಥೆಗಳು ಮತ್ತು 127 ಇತರ ವಸ್ತುಗಳ ಮಾರಾಟ ಸಂಸ್ಥೆಗಳಾಗಿದ್ದವು ಎಂದು ಕಂಡುಬರುವುದು. ತಾಲೂಕುಗಳಲ್ಲಿ ವೀರರಾಜಪೇಟೆಯು ಅತೀ ಹೆಚ್ಚಿನ ಸಂಖ್ಯೆಯ (362) ವ್ಯಾಪಾರಿ ಸಂಸ್ಥೆಗಳನ್ನು ಹೊಂದಿದ್ದರೆ ನಂತರದ ಸ್ಥಾನಗಳನ್ನು ಕ್ರಮವಾಗಿ ಮಡಿಕೇರಿ (269) ಮತ್ತು ಸೋಮವಾರಪೇಟೆಗಳು (220) ಹೊಂದಿದ್ದವು. 1971 ರಲ್ಲಿ ಜಿಲ್ಲೆಯಾದ್ಯಂತ ಇದ್ದ ಚಿಲ್ಲರೆ ವ್ಯಾಪಾರಿಗಳ ಸಂಖ್ಯೆ ಒಂದು ಅಂದಾಜಿನಂತೆ 2,574. ಇದು ರಾಜ್ಯದ ಒಟ್ಟು ಚಿಲ್ಲರೆ ವ್ಯಾಪಾರ ಘಟಕಗಳ (1.80 ಲಕ್ಷ) ಶೇ. 1.4 ಇತ್ತು. ಜಿಲ್ಲೆಯು ಜನಸಂಖ್ಯೆಯ ಪ್ರಮಾಣಕ್ಕೆ ಹೋಲಿಸಿದಾಗ ಕೊಡಗಿನ ಸ್ಥಾನ 19ನೇಯದಾಗಿತ್ತು. 1989-90 ರಲ್ಲಿ ಕೊಡಗು ಜಿಲ್ಲೆಯಲ್ಲಿ ಕರ್ನಾಟಕ ಮಾರಾಟ ತೆರಿಗೆ (ಕ.ಮಾ.ತೆ.) ಮತ್ತು ಕೇಂದ್ರ ಮಾರಾಟ ತೆರಿಗೆ (ಕೇಂ.ಮಾ.ತೆ.) ಕಾನೂನಿನ ಅನ್ವಯ ನೋಂದಾಯಿಸಲ್ಪಟ್ಟ ವ್ಯಾಪಾರಿಗಳ ಸಂಖ್ಯೆ ಅನುಕ್ರಮವಾಗಿ 2,061 ಮತ್ತು 641 ಆಗಿತ್ತು. ಸಂದಾಯವಾದ ಮಾರಾಟ ತೆರಿಗೆ ಅನುಕ್ರಮವಾಗಿ ರೂ. 124.26 ಲಕ್ಷ ಮತ್ತು ರೂ. 80.37 ಲಕ್ಷ ಆಗಿತ್ತು ಎಂದು ಇಲಾಖಾ ವರದಿ ತಿಳಿಸುವುದು.

### ವ್ಯಾಪಾರಿಗಳ ಸಂಘಟನೆಗಳು

ಜಿಲ್ಲೆಯಲ್ಲಿ ಇರುವ ವಿವಿಧ ವರ್ತಕರು (ವ್ಯಾಪಾರಿಗಳು), ತೋಟದ ಬೆಳೆಗಾರರು, ಇತರ ವಸ್ತುಗಳ ಉತ್ಪಾದಕರು ಮತ್ತು ಮಾರುಕಟ್ಟೆಗಳಲ್ಲಿ ವ್ಯವಹರಿಸುವವರು ತಮ್ಮ ವ್ಯಾಪಾರ, ವಾಣಿಜ್ಯ ಉದ್ಯಮಗಳ ಅಭಿವೃದ್ಧಿಗೋಸ್ಕರ ಅನೇಕ ವೃತ್ತಿಪರ ಸಂಘಗಳನ್ನು ರಚಿಸಿಕೊಂಡಿರುವರು. ಇವುಗಳಲ್ಲಿ ಕೆಲವು ಸಂಘಗಳು ನೋಂದಾಯಿತವಾಗಿದ್ದರೆ ಹಲವು ನೋಂದಾಯಿಸದೇ ಕಾರ್ಯ ನಿರ್ವಹಿಸುತ್ತಿವೆ. ಸ್ವಪ್ರೇರಣೆಯಿಂದ ಸ್ಥಾಪನೆಗೊಂಡಿರುವ ಈ ವಾಣಿಜ್ಯದಾರರ ಸಂಘಗಳು ಸದಸ್ಯರ ಸಾಮೂಹಿಕ ಶ್ರೇಯಸ್ಸು ಮತ್ತು ಹಿತಾಸಕ್ತಿಯನ್ನು ಕಾಪಾಡುವುದರ ಜೊತೆಗೆ ಆಯಾ ವರ್ತಕ ಸಮೂಹದ ಹಾಗೂ ಉದ್ಯಮದಾರರ ಅಭಿವೃದ್ಧಿಗೆ ಉತ್ತೇಜನ ಮತ್ತು ರಕ್ಷಣೆ ನೀಡುವ ಮುಖ್ಯ ಗುರಿಯನ್ನು ಹೊಂದಿವೆ. ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಮಾರಾಟ ತೆರಿಗೆ, ಅಕ್ಸ್ಯಾಯ್ ಸುಂಕ ಮತ್ತು ಇತರೆ ಕಾನೂನುಗಳ ಸಾಧಕ ಬಾಧಕಗಳನ್ನು ಕುರಿತಂತೆ ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ, ಸರ್ಕಾರದ ಮೇಲೆ ಪ್ರಭಾವ ಬೀರುವಲ್ಲಿ ಈ ಸಂಘಗಳು ಸಕ್ರಿಯ ಪಾತ್ರ ವಹಿಸುವವು. ವ್ಯಾಪಾರಿಗಳಲ್ಲಿ ಭಿನ್ನಾಭಿಪ್ರಾಯ, ವ್ಯಾಜ್ಯಗಳು ಉಂಟಾದಾಗ ಈ ಮಂಡಳಿಗಳು ಪಂಚಾಯತಿಗಳ ಮೂಲಕ ಪರಸ್ಪರ ಸಹಕಾರದಿಂದ ತೀರ್ಮಾನಿಸುತ್ತವೆ. ವ್ಯಾಪಾರಸ್ಥರ ಅನುಕೂಲಕ್ಕಾಗಿ ಉಪಯೋಗವಾಗುವ ಅಂಕಿ-ಸಂಖ್ಯೆಗಳನ್ನು, ವಾಣಿಜ್ಯ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ತನ್ನ ಸದಸ್ಯರಿಗೆ ಒದಗಿಸುತ್ತವೆ. ಕೊಡಗು ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟ ವ್ಯಾಪಾರಿ ಸಂಘಗಳ ಪಟ್ಟಿ ಈ ಕೆಳಗಿನಂತೆ ಇರುವುದು : (1) ಕೊಡಗು ಟಿಂಬರ್ ವ್ಯಾಪಾರಸ್ಥರ ಸಂಘ, ವೀರರಾಜಪೇಟೆ (1959), (2) ವೀರರಾಜಪೇಟೆ ತಾಲೂಕು ಆಹಾರ ಧಾನ್ಯ ಮಾರಾಟಗಾರರ ಸಂಘ, ಗೋಣಿಕೊಪ್ಪಲು (1977), (3) ಶ್ರೀರಾಮ ಇಂಜನಿಯರಿಂಗ್ ಕೈಗಾರಿಕೆಗಳ ಸಂಘ, ಸೋಮವಾರಪೇಟೆ (1977), ಕೊಡಗು ಜಿಲ್ಲಾ ಲಾರಿ ಮಾಲಿಕರ ಸಂಘ, ಮಡಿಕೇರಿ (1979), ಬ್ಲೂ ಬರ್ಡ್ ಕೈಗಾರಿಕೆಗಳ ಸಂಘ, ವೀರರಾಜಪೇಟೆ (1981), ರಂಗನಾಥ ಸ್ವಾಮಿ ಗ್ರಾಮೀಣ ಕೈಗಾರಿಕೆಗಳ ಸಂಘ, ಮಡಿಕೇರಿ (1983), ಅಖಿಲ ಕರ್ನಾಟಕ ಜೇನು ಸಾಕುವವರ ಸಂಘ ಮಡಿಕೇರಿ (1984), ಕೊಡಗು ಇಲೆಕ್ಟ್ರಿಕಲ್ ಗುತ್ತಿಗೆದಾರರ ಸಂಘ, ಗೋಣಿಕೊಪ್ಪಲು (1985), ಸೋಮವಾರಪೇಟೆ ತಾಲೂಕು ಸೌದೆ ಸಣ್ಣ ವ್ಯಾಪಾರಸ್ಥರ ಸಂಘ, ಸೋಮವಾರಪೇಟೆ (1989). ಕೊಡಗು ಜಿಲ್ಲಾ ಮರ ಮಾರಾಟಗಾರರ ಸಂಘ, ಮಡಿಕೇರಿ (1989). ಈ ಮೇಲಿನ ನೋಂದಾಯಿತ ಸಂಘಗಳಲ್ಲದೇ ಮಡಿಕೇರಿಯಲ್ಲಿ ಈ ಕೆಳಕಂಡ ವ್ಯಾಪಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿರುವವು.

ಕೊಡಗು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್, ಕೊಡಗು ಪ್ಲಾಂಟರ್ಸ್ ಸಂಘ, ಏಲಕ್ಕಿ ಮಾರಾಟಗಾರರ ಸಂಘ, ಚಿನ್ನ-ಬೆಳ್ಳಿ ವ್ಯಾಪಾರಸ್ಥರ ಸಂಘ, ಹೋಟೆಲ್ ಮಾಲಿಕರ ಸಂಘ, ಔಷಧಿ ಮಾರಾಟಗಾರರ ಸಂಘ, ಬಸ್ ಮಾಲಿಕರ ಸಂಘ, ಮದ್ಯ ಮಾರಾಟಗಾರರ ಸಂಘ, ಪಿ.ಡಬ್ಲ್ಯು.ಡಿ. ಗುತ್ತಿಗೆದಾರರ ನೌಕರರ ಸಂಘ ಮುಂತಾದವುಗಳು.

**ಕೊಡಗು ಬೆಳೆಗಾರರ ಸಂಘ, ಮಡಿಕೇರಿ**

ಮಡಿಕೇರಿಯ ಕೊಡಗು ಬೆಳೆಗಾರರ ಸಂಘವು ರಾಜ್ಯದ ಕೆಲವೇ ಕೆಲವು ತೋಟದ ಬೆಳೆಗಾರರ ಸಂಘಟನೆಗಳಲ್ಲಿ ಒಂದಾಗಿದ್ದು, ಜಿಲ್ಲೆಯ ಅತ್ಯಂತ ಹಳೆಯ ತೋಟದ ಬೆಳೆಗಾರರ ಸಂಸ್ಥೆ ಎಂದು ಹೇಳಬಹುದು. ಇದರ ಆರಂಭದ ವರ್ಷ 1879. ಅಂದಿನ ಯೂರೋಪಿಯನ್ ತೋಟದ ಬೆಳೆಗಾರರಿಂದ ಪ್ರಾರಂಭವಾದ ಈ ಸಂಘವು ಇಂದಿಗೂ ನಡೆದುಕೊಂಡು ಬರುತ್ತಿದೆ. ಈ ಸಂಘವು ಯಾವುದೇ ಕಾನೂನಿನನ್ವಯ ನೋಂದಾಯಿಸಲ್ಪಟ್ಟಿರುವುದಿಲ್ಲ. ಸಂಘದ ಹಲವಾರು ಧ್ಯೆಯೋದ್ದೇಶಗಳಲ್ಲಿ ಅತಿ ಮುಖ್ಯವಾದದ್ದು ಸದಸ್ಯ, ತೋಟದ ಬೆಳೆಗಾರರ ಆರ್ಥಿಕ, ಸಾಮಾಜಿಕ ಹಿತ ಸಾಧನೆ, ತನ್ಮೂಲಕ ಕೊಡಗು ಜಿಲ್ಲೆಯಲ್ಲಿ ತೋಟದ ಬೆಳೆಗಳ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವುದು ಮತ್ತು ಬೆಳೆಗಾರರಿಗೆ ಸೂಕ್ತವಾದ ತಾಂತ್ರಿಕ ಮತ್ತು ಇತರ ನೆರವನ್ನು ಒದಗಿಸುವುದು. ಸಂಘವು ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಲು ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಸಂಘವು ತನ್ನ ಸದಸ್ಯರಿಗೆ ಕಾರ್ಮಿಕ ವಿವಾದಗಳನ್ನು ಬಗೆಹರಿಸುವಲ್ಲಿ ತಜ್ಞ ವಕೀಲರ ನೆರವು ನೀಡುವುದು. ಕಾಫಿ ಬೆಳೆಯ ಬಗ್ಗೆ ಸದಸ್ಯರ ತಿಳುವಳಿಕೆಯನ್ನು ಹೆಚ್ಚಿಸಲು ಕಾಲಕಾಲಕ್ಕೆ ಕಾರ್ಯಾಗಾರ ಮತ್ತು ತಜ್ಞರ ವಿಚಾರ ಸಂಕೀರ್ಣಗಳನ್ನು ವ್ಯವಸ್ಥೆ ಮಾಡುವುದು. ಸಂಘವು ತನ್ನದೇ ಆದ ತ್ರೈಮಾಸಿಕ 'ನ್ಯೂಸ್‌ಲೆಟರ್' ಎಂಬ ನಿಯತಕಾಲಿಕವನ್ನು ಹೊಂದಿರುವುದು. ತೋಟದ ಕಾರ್ಮಿಕರು ಮತ್ತು ಮಾಲೀಕರ ನಡುವೆ ಸುಮಧುರ ಬಾಂಧವ್ಯ ಕಾಯ್ದುಕೊಂಡು ಹೋಗಲು ಸಂಘವು ಕಾರ್ಮಿಕರ ಹಿತರಕ್ಷಣೆಗೂ ಆದ್ಯ ಗಮನಹರಿಸುವುದು. ಕೇಂದ್ರ ಸರ್ಕಾರದ 'ಕಾರ್ಮಿಕ ಶಿಕ್ಷಣ' ಯೋಜನೆಯ ಅನ್ವಯ ಹಲವಾರು ಕಾರ್ಯಕ್ರಮಗಳನ್ನು ಸಂಘ ನಡೆಸುವುದು. ಪ್ರತೀ ವರ್ಷ ಕಾರ್ಮಿಕ ದಿನಾಚರಣೆ ಆಚರಿಸುವುದಲ್ಲದೇ ಜಿಲ್ಲಾ ಮಟ್ಟದಲ್ಲಿ ಕಾರ್ಮಿಕರ ಪಂದ್ಯಾವಳಿ, ಸಾಂಸ್ಕೃತಿಕ ಕಾರ್ಯಕ್ರಮ ಮುಂತಾದವುಗಳನ್ನು ನಡೆಸುವುದು.

ಸಂಘವು ರಾಜ್ಯಮಟ್ಟದಲ್ಲಿ ತೋಟದ ಬೆಳೆಗಾರರ ಶೃಂಗ ಸಂಸ್ಥೆಯಾದ ಕರ್ನಾಟಕ ತೋಟದ ಬೆಳೆಗಾರರ ಸಂಘ, ಚಿಕ್ಕಮಗಳೂರು(1958), ದಕ್ಷಿಣ ಭಾರತದ ತೋಟದ ಬೆಳೆಗಾರರ ಸಂಘ (ಯುನೈಟೆಡ್ ಪ್ಲಾಂಟರ್ಸ್ ಅಸೋಸಿಯೇಶನ್) ಕೂನೂರು, ನೀಲಗಿರಿ ಜಿಲ್ಲೆಗಳೊಂದಿಗೆ ಸಂಯೋಜಿತವಾಗಿದೆ. ಸಂಘವು ಕಂಪನಿಗಳು, ದೊಡ್ಡ ಬೆಳೆಗಾರರು, ಚಿಕ್ಕ ಬೆಳೆಗಾರರು ಮುಂತಾದ ಐದು ವಿಧವಾದ ಸದಸ್ಯತ್ವವನ್ನು ಹೊಂದಿದ್ದು ಸಂಘದ ಚಟುವಟಿಕೆಗಳು ಕೇವಲ ಕೊಡಗು ಜಿಲ್ಲೆಗೆ ಮಾತ್ರ ಸೀಮಿತವಾಗಿರುವವು.

1990–91ನೇ ಸಾಲಿನಲ್ಲಿ ಸಂಘದ ಒಟ್ಟು ಸದಸ್ಯತ್ವ 573 ಆಗಿದ್ದು ಅದರಲ್ಲಿ 317 ಚಿಕ್ಕಬೆಳೆಗಾರರು (10 ಹೆಕ್ಟೇರ್‌ಗಿಂತ ಕಡಿಮೆ ಹಿಡುವಳಿದಾರರು), 214 ದೊಡ್ಡ ಬೆಳೆಗಾರರು (10 ಹೆಕ್ಟೇರ್‌ಗಿಂತ ಹೆಚ್ಚು ಹಿಡುವಳಿ ಹೊಂದಿದವರು), ಮತ್ತು 37 ಕಂಪನಿಗಳು ಸೇರಿದ್ದವು. 1981-82 ಮತ್ತು 1987–88ರಲ್ಲಿ ಸಂಘವು ಹೊಂದಿದ್ದ ಸದಸ್ಯರ ಸಂಖ್ಯೆ ಅನುಕ್ರಮವಾಗಿ 487 ಮತ್ತು 548 ಎಂದು ವರದಿ ತಿಳಿಸುವುದು.

1990–91ರಲ್ಲಿ ಸಂಘದ ಆದಾಯ ಮತ್ತು ವೆಚ್ಚಗಳು ಅನುಕ್ರಮವಾಗಿ ರೂ. 1.58 ಲಕ್ಷ ಮತ್ತು ರೂ. 1.46 ಲಕ್ಷ ಇದ್ದು, 1987–88ರಲ್ಲಿ ಆದಾಯ ವೆಚ್ಚಗಳು ಕ್ರಮವಾಗಿ ರೂ. 1.33 ಲಕ್ಷ ಮತ್ತು ರೂ. 1.08 ಲಕ್ಷ ಎಂದು ವರದಿಯಾಗಿದೆ. 1981–82ರಲ್ಲಿ ಆದಾಯ ವೆಚ್ಚಗಳು ಅನುಕ್ರಮವಾಗಿ ರೂ. 86,000 ಮತ್ತು ರೂ. 76,000 ಎಂದು ತಿಳಿದುಬರುವುದು. ಸಂಘದ ಆಡಳಿತವು ಕಂಪನಿ ಮತ್ತು ಬೆಳೆಗಾರ ಸದಸ್ಯರಿಂದ ಆರಿಸಲ್ಪಟ್ಟ 13 ಜನ ಕಾರ್ಯಕಾರಿ ಸಮಿತಿಯಿಂದ ನಡೆಸಲ್ಪಡುವುದು. ಸಂಘವು ತನ್ನ ಶತಮಾನೋತ್ಸವವನ್ನು 1979ರಲ್ಲಿ ಆಚರಿಸಿತು.

**ಕೊಡಗು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್, ಮಡಿಕೇರಿ**

ಕೊಡಗು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಎಂಬ ಹೆಸರಿನಿಂದ 1964ರಲ್ಲಿ ನೋಂದಾಯಿತವಾದ ಈ ವ್ಯಾಪಾರಿಗಳ ಸಂಘವು ಜಿಲ್ಲೆಯಾದ್ಯಂತ ಸುಮಾರು 1,100 ಜನ ಸದಸ್ಯರನ್ನು ಹೊಂದಿರುವುದು (1991). ಸಂಘವು ವಿವಿಧ ವ್ಯಾಪಾರಿ ವರ್ಗಗಳ ಸದಸ್ಯರ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನ ಪಡುವುದಲ್ಲದೇ ವಿವಿಧ ತೆರಿಗೆ ಕಾನೂನುಗಳ ಬಗ್ಗೆ ಸದಸ್ಯರಿಗೆ ಮಾರ್ಗದರ್ಶನ ನೀಡುವುದು. ಸಂಘವು ಜಿಲ್ಲೆಯ ನಗರ ಪ್ರದೇಶಗಳಲ್ಲಿ ಸ್ಥಳೀಯ ಸಮಿತಿಗಳನ್ನು ಹೊಂದಿರುವುದು. ಕೊಡಗು ಜಿಲ್ಲೆಯನ್ನು ಆರ್ಥಿಕವಾಗಿ, ವಾಣಿಜ್ಯ ದೃಷ್ಟಿಯಿಂದ, ಕೈಗಾರಿಕೆ ಮತ್ತು ಪ್ರವಾಸೋದ್ಯಮ ದೃಷ್ಟಿಯಿಂದ ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರದ ಗಮನ ಸೆಳೆಯಲು ಈ ವಾಣಿಜ್ಯ ಸಂಸ್ಥೆಯು ಸಕ್ರೀಯವಾಗಿ ಕೆಲಸ ಮಾಡುತ್ತಿದೆ. 1989ರಲ್ಲಿ ಪುನರ್ರಚನೆಗೊಂಡ ನಂತರ ಸಂಘದ ಕಾರ್ಯಚಟುವಟಿಕೆಗಳು ಹೆಚ್ಚು ವ್ಯಾಪಕಗೊಂಡಿವೆ. ಸಂಘವು ಬೆಂಗಳೂರಿನ ರಾಜ್ಯಮಟ್ಟದ ಕರ್ನಾಟಕ ವಾಣಿಜ್ಯೋದ್ಯಮ ಸಂಘಕ್ಕೆ ಸಂಯೋಜಿತವಾಗಿದೆ. ಸಂಘದ ಬೆಳ್ಳಿಹಬ್ಬವನ್ನು 1992ರಲ್ಲಿ ಆಚರಿಸಲಾಯಿತು.

**ಆಹಾರ ಮತ್ತು ನಾಗರಿಕ ಸರಬರಾಜು**

ಜೀವನಾವಶ್ಯಕ ವಸ್ತುಗಳ ಬೇಡಿಕೆ ಮತ್ತು ಪೂರೈಕೆಗೆ ಇರುವ ಅಂತರವನ್ನು ಗಮನಿಸಿ ಸರ್ಕಾರವು ಜೀವನಾವಶ್ಯಕ ವಸ್ತುಗಳ ಸರಬರಾಜು ಮತ್ತು ಹಂಚಿಕೆಯನ್ನು ನಿಯಂತ್ರಿಸುತ್ತಾ ಬಂದಿರುವುದು. ವಿಶೇಷವಾಗಿ ಆಹಾರ ಧಾನ್ಯಗಳ ನಿಯಂತ್ರಣವನ್ನು ಎರಡನೇಯ ಮಹಾಯುದ್ಧದ ನಂತರ ಜಾರಿಗೊಳಿಸಲಾಯಿತು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಜೀವನಾವಶ್ಯಕ ವಸ್ತುಗಳ ಕಾಯಿದೆ 1965ರ ಅನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ರೂಪಿಸಲ್ಪಟ್ಟ 28 ವಿವಿಧ ಆಜ್ಞೆಗಳನ್ನು ನಿರ್ವಹಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಇಲಾಖೆಯ ಕಾರ್ಯವ್ಯಾಪ್ತಿಯು ಹೆಚ್ಚು ವಿಸ್ತಾರಗೊಂಡಿದೆ. ಜೀವನಾವಶ್ಯಕ ವಸ್ತುಗಳ ನ್ಯಾಯ ಸಮ್ಮತ ಹಂಚಿಕೆ ಹಾಗೂ ಬೆಲೆಗಳ ಸ್ಥಿರತೆಯನ್ನು ಕಾಯ್ದುಕೊಳ್ಳುವ ಬಗ್ಗೆ ರಚಿಸಲಾದ ವಿವಿಧ ನಿಯಂತ್ರಣ ಕಾಯಿದೆಗಳ ಅನುಷ್ಠಾನ ಮತ್ತು ಅನೌಪಚಾರಿಕ ಪಡಿತರ ಪದ್ಧತಿಯ ಕಾರ್ಯಾಚರಣೆ ಇವೇ ಮುಂತಾದವುಗಳು ಇಲಾಖೆಯ ಪ್ರಮುಖ ಕಾರ್ಯಗಳು.

**ಲೆವಿ ಎತ್ತುವಳಿ**

ಬತ್ತ, ಅಕ್ಕಿ, ಜೋಳ, ಇತ್ಯಾದಿ ಆಹಾರ ಧಾನ್ಯಗಳ ಸಂಗ್ರಹಣೆಯು 1966 ರ ಕರ್ನಾಟಕದ ಲೆವಿ ಆಜ್ಞೆಯ ಪ್ರಕಾರ ಸರಕಾರದಿಂದ ನಡೆಯುತ್ತದೆ. 1973ರ ವರೆಗೆ ಭಾರತೀಯ ಆಹಾರ ನಿಗಮದ ಮೂಲಕ (ಫುಡ್ ಕಾರ್ಪೊರೇಷನ್ ಆಫ್ ಇಂಡಿಯ) ಇಲಾಖೆಯು ಧಾನ್ಯ ಸಂಗ್ರಹಣೆಯನ್ನು ಮಾಡುತ್ತಿತ್ತು. 1973 ರಿಂದ 1984–85ರ ವರೆಗೆ, ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ (ಬೆಂಗಳೂರು) ಈ ಸಂಸ್ಥೆಯು ನೇರವಾಗಿ ಮತ್ತು ತಾಲೂಕು ವ್ಯವಸಾಯ ಸಹಕಾರಿ ಮಾರುಕಟ್ಟೆಗಳ ಮೂಲಕ ಸಂಗ್ರಹಿಸಲಾಗುತ್ತಿತ್ತು. 1981–82 ರಿಂದ ಲೇವಿ ಬತ್ತವನ್ನು (ಶೇ. 50 ಪ್ರಮಾಣದಲ್ಲಿ) ಅಕ್ಕಿ ಗಿರಣಿಯಿಂದ ಮತ್ತು ವ್ಯಾಪಾರಸ್ಥರಿಂದ ಸಂಗ್ರಹಿಸಲಾಗುವುದು. ಅಕ್ಕಿಯನ್ನು ಲೇವಿ ರೂಪದಲ್ಲಿ 1985-86 ರಿಂದ ಸಂಗ್ರಹಿಸಲಾಗುತ್ತಿದೆ.

1989–90ರ ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಲೆವಿ ಬತ್ತ ಸಂಗ್ರಹಿಸಬೇಕಾದ ಗುರಿ 700 ಮೆ. ಟನ್ ಆಗಿದ್ದರೆ ಸಾಧನೆ 684 ಮೆ.ಟನ್ ಆಗಿತ್ತು (ಶೇ. 97). ಅದರ ಹಿಂದಿನ ವರ್ಷ (88–89) ಸಂಗ್ರಹಣಾಗುರಿ ಮತ್ತು ಸಾಧನೆ ಕ್ರಮವಾಗಿ 1,000 ಮೆ.ಟ. ಮತ್ತು 688 ಮೆ.ಟ. (ಶೇ.68) ಆಗಿತ್ತು. 1989–90 ರಲ್ಲಿ ಸರ್ಕಾರ ನಿಗದಿ ಮಾಡಿದ ಪರಿಷ್ಕರಿಸಿದ ಪ್ರತೀ ಕ್ವಿಂಟಾಲ್ ಅಕ್ಕಿಯ ಬೆಲೆಗಳು ಈ ರೀತಿ ಇದ್ದವು : ಅತ್ಯುತ್ತಮ (ರೂ. 319.35), ಉತ್ತಮ (ರೂ. 304.35) ಮಧ್ಯಮ ದರ್ಜೆ (ರೂ. 289.40). ಅದರ ಹಿಂದಿನ ವರ್ಷದ ಬೆಲೆಗಳು ಕ್ರಮವಾಗಿ ಈ ರೀತಿ ಇದ್ದವು : ರೂ. 280.80, ರೂ. 265.85 ಮತ್ತು ರೂ. 250.80.

**ಸಾರ್ವಜನಿಕ ವಿತರಣಾ ವ್ಯವಸ್ಥೆ**

ಕರ್ನಾಟಕದಲ್ಲಿ ಜೀವನಾವಶ್ಯಕ ಆಹಾರ ಧಾನ್ಯಗಳನ್ನು ಮತ್ತು ಇತರೇ ವಸ್ತುಗಳನ್ನು ಪಡಿತರ ವ್ಯವಸ್ಥೆಯ ಮೂಲಕ ಸಾರ್ವಜನಿಕರಿಗೆ ಹಂಚುವ ವ್ಯವಸ್ಥೆಯು 1944 ರಲ್ಲಿ ಮೊದಲಿಗೆ ಕೆಲವು ಆಯ್ದ ನಗರಗಳಲ್ಲಿ ಪ್ರಾರಂಭವಾಯಿತು. 1978ರಲ್ಲಿ ಅನೌಪಚಾರಿಕ ಪಡಿತರ ಪದ್ಧತಿಯನ್ನು ರಾಜ್ಯದಾದ್ಯಂತ 40 ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ನಗರ/ಪಟ್ಟಣ ಪ್ರದೇಶಗಳಿಗೆ ವಿಸ್ತರಿಸಲಾಯಿತು. ಈ ಜಿಲ್ಲೆಯಲ್ಲಿ ಯಾವ ನಗರ ಪ್ರದೇಶವೂ ಅನೌಪಚಾರಿಕ ಪಡಿತರ ವ್ಯವಸ್ಥೆಗೆ ಒಳಗಾಗಿಲ್ಲ.

1990ರ ಮಾರ್ಚ್ ಕೊನೆಯಲ್ಲಿ ಜಿಲ್ಲೆಯಾದ್ಯಂತ ಇದ್ದ ನ್ಯಾಯ ಬೆಲೆಯ ಅಂಗಡಿಗಳ ಸಂಖ್ಯೆ 238. ಅವುಗಳ ತಾಲೂಕುವಾರು ಹಂಚಿಕೆ ಈ ರೀತಿ ಇತ್ತು : ಮಡಿಕೇರಿ 63, ವೀರರಾಜಪೇಟೆ 85 ಮತ್ತು ಸೋಮವಾರಪೇಟೆ 90. ಮಡಿಕೇರಿ ನಗರದಲ್ಲಿರುವ ನ್ಯಾಯ ಬೆಲೆಯ ಅಂಗಡಿಗಳ ಸಂಖ್ಯೆ ಹತ್ತು. ನ್ಯಾಯ ಬೆಲೆಯ ಅಂಗಡಿಗಳಲ್ಲಿ ಬಹುಪಾಲು ಸಹಕಾರಿ ಸಂಘಗಳಿಂದ ನಿರ್ವಹಿಸಲ್ಪಡುವವು (168). ಮಹಿಳೆಯರೇ ನಿರ್ವಹಿಸುತ್ತಿರುವ ಅಂಗಡಿಗಳ ಸಂಖ್ಯೆ 10.

**ಹಸಿರು ಕಾರ್ಡು ಯೋಜನೆ**

ಹಸಿರು ಪಡಿತರ ಚೀಟಿ ಯೋಜನೆಯು 20 ಸಾವಿರ ಜನಸಂಖ್ಯೆ ಮೀರದ ಪಟ್ಟಣ ಪ್ರದೇಶಗಳಿಗೆ ಮತ್ತು ಗ್ರಾಮೀಣ ಪ್ರದೇಶಗಳಿಗೆ ಸೀಮಿತವಾಗಿದ್ದು ಫಲಾನುಭವಿ ಕುಟುಂಬದ ಆದಾಯ ರೂ. 3,500 ಮೀರಕೂಡದು. ಅಂತಹ ಕುಟುಂಬಗಳಿಗೆ ಅಕ್ಕಿ, ರಾಗಿ, ಅಥವಾ ಗೋಧಿ ಮುಂತಾದವುಗಳನ್ನು ಕೆಲವೊಂದು ಪರಿಮಾಣದವರೆಗೆ ರಿಯಾಯಿತಿ ದರದಲ್ಲಿ ಒದಗಿಸಲಾಗುವುದು. ಜಿಲ್ಲೆಯಾದ್ಯಂತ 1990ರ ಮಾರ್ಚ್ ಕೊನೆಯಲ್ಲಿ ಹಸಿರು ಕಾರ್ಡು ಹೊಂದಿದ್ದ ಕುಟುಂಬಗಳ ಸಂಖ್ಯೆ 55,484. ಅವುಗಳ ತಾಲೂಕುವಾರು ಹಂಚಿಕೆ ಈ ರೀತಿ ಇರುವುದು : ವೀರರಾಜಪೇಟೆ 25,162, ಸೋಮ

ವಾರಪೇಟೆ 21,818, ಮಡಿಕೇರಿ (8,504) ಎಂದು ವರದಿ ತಿಳಿಸುವುದು.

**ಸಂತೆಗಳು**

ಹಿಂದಿನ ಕಾಲದಲ್ಲಿ ಸಂತೆ ಪದ್ಧತಿಯು ವಸ್ತುಗಳ ವಿನಿಮಯ ವ್ಯವಹಾರಗಳಿಗೆ ಅನುಕೂಲ ಮಾಡಿಕೊಟ್ಟಿತ್ತು. ವಾರದ ಸಂತೆಗಳು ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಇಂದಿಗೂ ನಡೆದು ಕೊಂಡು ಬರುತ್ತಿವೆ. ಹಿಂದಿನ ಕಾಲದಲ್ಲಿ ಆಳರಸರ ಆದೇಶ ದಂತೆ ಅಥವಾ ಸ್ಥಳೀಯ ಸಂಸ್ಥೆಗಳ ತೀರ್ಮಾನದಂತೆ ಇಂತಹ ಸಂತೆಗಳನ್ನು ನಡೆಸಲು ಆರಂಭಿಸಿದ ಉದಾಹರಣೆಗಳಿವೆ. ಈ ಜಿಲ್ಲೆಯಲ್ಲಿ ಅನೇಕ ಪಟ್ಟಣಗಳು ತಮ್ಮ ಹೆಸರನ್ನು ಸಂತೆ ನಡೆಯುವ ದಿನದೊಂದಿಗೆ ಮೇಳೈಸಿಕೊಂಡಿರುವುದನ್ನು ಕಾಣ ಬಹುದು. (ಉದಾ : ಸೋಮವಾರಪೇಟೆ, ಶನಿವಾರಸಂತೆ). ಮಡಿಕೇರಿಯ ಸಂತೆ ಶುಕ್ರವಾರ ನಡೆಯುವುದು. ಆದ್ದರಿಂದ ಇದರ ಹೆಸರನ್ನು ಕೆಲವು ದಿವಸ 'ಶುಕ್ರವಾರ ಸಂತೆ' ಎಂದು ಕರೆಯಲಾಯಿತು ಎಂದು ಹೇಳುವುದೂ ಉಂಟು. ಕೆಲವು ಸಂದರ್ಭಗಳಲ್ಲಿ ಹಳ್ಳಿಯ ಗ್ರಾಮ ದೇವತೆಯ ವಾರದ ದಿನ ದಂದು ಆ ಸ್ಥಳದ ಸಂತೆ ನಡೆಯುವುದು. ಸಂತೆಗಳು ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಟ್ಟು ಅವುಗಳಿಗೆ ಒಳ್ಳೆಯ ಆದಾಯ ವನ್ನು ತರುತ್ತಿವೆ. ಸಂತೆಗಳು ಸ್ಥಳೀಯ ಸರಕುಗಳು ಅಥವಾ ಉತ್ಪನ್ನಗಳಿಗೆ ಪ್ರಾಥಮಿಕ ಮಾರುಕಟ್ಟೆಗಳ ಅವಶ್ಯಕತೆಯನ್ನು ಪೂರೈಸುತ್ತ ಆಧುನಿಕ ದಿನಗಳಲ್ಲಿಯೂ ಕೂಡ ಉಪಯುಕ್ತ ಉದ್ದೇಶಗಳನ್ನು ಸಾಧಿಸುತ್ತಿವೆ. ಈ ಸಂತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಗಾರರು ಮತ್ತು ಉತ್ಪಾದಕರನ್ನೊಳಗೊಂಡು ಸಣ್ಣ ಪ್ರಮಾಣದ ಚಿಲ್ಲರೆ ವರ್ತಕರು ತಮ್ಮ ಸರಕುಗಳನು ಮಾರಾಟಕ್ಕೆ ಇಡುತ್ತಾರೆ. ಸಣ್ಣ ಪ್ರಮಾಣದ ಬೇಸಾಯ ಗಾರರಿಗೆ ಮತ್ತು ವಿವಿಧ ಕುಶಲ ಕರ್ಮಿಗಳನ್ನೊಳಗೊಂಡ ಸಣ್ಣ ಪ್ರಮಾಣದ ಉತ್ಪಾದಕರಿಗೆ ಇಂತಹ ಮಾರುಕಟ್ಟೆಗಳು ಸಿದ್ಧಪಡಿಸಿದ ಮಾರುಕಟ್ಟೆಯಂತೆ ಸಹಾಯಕವಾಗುವವು. ವ್ಯವಸಾಯ ಕಾರ್ಮಿಕರು, ಗಿರಿಜನರು, ತೋಟಗಳಲ್ಲಿ ಕೆಲಸ ಮಾಡುವ ಕೂಲಿಯವರು ಮತ್ತು ಇತರ ದುರ್ಬಲ ವರ್ಗ ದವರಿಗೆ ಈ ಮಾರುಕಟ್ಟೆಗಳು ತುಂಬಾ ಅನುಕೂಲವಾಗಿವೆ. ಪ್ರತೀ ರವಿವಾರ ನಡೆಯುವ ಸುಂಟಿಕೊಪ್ಪದ ಸಂತೆಯು ಕಾಫಿ ತೋಟದ ಕಾರ್ಮಿಕರನ್ನು ವಿಶೇಷವಾಗಿ ಆಕರ್ಷಿಸು ವುದು. ವಾರದ ಸಂತೆಗಳಲ್ಲಿ ಚಿಕ್ಕ ಪುಟ್ಟ ಸಂಚಾರೀ ವ್ಯಾಪಾರಿಗಳು (ಹೊತ್ತು ಮಾರುವವರು), ದಾರಿ ಬದಿಯ ಅಂಗಡಿಯವರು, ಗುಜರಿ ವ್ಯಾಪಾರದವರು, ಅಲ್ಲದೇ ಅಗ್ಗದ ಬೆಲೆಯ ಸರಕು ವ್ಯಾಪಾರದವರು, ಕಡಿಮೆ ವರಮಾನದ ಗ್ರಾಹಕರನ್ನು ಹೆಚ್ಚಾಗಿ ಆಕರ್ಷಿಸುತ್ತಾ ಇರುವುದು ಸಾಮಾನ್ಯ ವಾಗಿ ಕಂಡುಬರುವುದು.

ಜಿಲ್ಲೆಯ ಪ್ರಮುಖ ಸಂತೆ/ಮಾರುಕಟ್ಟೆಗಳ ವಿಷಯವಾಗಿ ಕ್ರಿ.ಶ. 1811ರ 'ಹುಕುಂನಾಮೆ'ಯಲ್ಲಿ ತಿಳಿಸಿರುವಂತೆ ವೀರ ರಾಜಪೇಟೆ ಮತ್ತು ಸೋಮವಾರಪೇಟೆಗಳು ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. 1817ರಲ್ಲಿ ಈ ಮುಂದೆ ಸೂಚಿಸಿದ ಸ್ಥಳಗಳಲ್ಲಿ ಪ್ರಮುಖ ಸಂತೆಗಳು ನಡೆಯುತ್ತಿದ್ದವು: ಕೊಡ್ಲಿಪೇಟೆ (ಭಾನುವಾರ), ಶನಿವಾರಸಂತೆ (ಶನಿವಾರ), ರಾಮಸ್ವಾಮಿಕಣಿವೆ (ಬುಧವಾರ), ಸೋಮವಾರಪೇಟೆ (ಸೋಮವಾರ), ಮಡಿಕೇರಿ ಮತ್ತು ವೀರರಾಜಪೇಟೆ (ಶುಕ್ರ ವಾರ). 1880ರ ಸುಮಾರಿಗೆ ಜಿಲ್ಲೆಯ ಇತರೇ ಸ್ಥಳಗಳಲ್ಲಿ ಸಂತೆಗಳು ಪ್ರಾರಂಭವಾದ ಬಗ್ಗೆ ಮಾಹಿತಿ ದೊರೆ ಯುವುದು. ಗೋಣಿಕೊಪ್ಪಲು (ಭಾನುವಾರ), ಪೊನ್ನಂಪೇಟೆ (ಸೋಮವಾರ), ಸಿದ್ಧಾಪುರ (ಭಾನುವಾರ), ಅಮ್ಮತ್ತಿ (ಮಂಗಳವಾರ), ಸುಂಟಿಕೊಪ್ಪ (ಭಾನುವಾರ), ಮೂರ್ನಾಡು (ಗುರುವಾರ), ಕುಶಾಲನಗರ (ಮಂಗಳವಾರ), ಜಂಬೂರು (ಗುರುವಾರ). ನಾಪೋಕ್ಲುವಿನಲ್ಲಿ 1885ರಲ್ಲಿ ಪ್ರಾರಂಭಿಸ ಲಾದ ಸಂತೆಯು 1892ರ ಸುಮಾರಿಗೆ ನಿಲ್ಲಿಸಲಾಯಿತು ಎಂದುಕಂಡುಬರುವುದು. ಅಂದಿನ ದಿನಗಳಲ್ಲಿ ಈ ಮೇಲಿನ ಸ್ಥಳಗಳಲ್ಲಿ ನಡೆಯುತ್ತಿದ್ದ ಸಂತೆಗಳಲ್ಲಿ ರಾಗಿ, ಬೇಳೆ, ಉಪ್ಪು, ಮೀನು, ತರಕಾರಿ, ಹಣ್ಣು, ಮಸಾಲೆ, ಗಾಜಿನ ಬಳೆಗಳು, ಬಟ್ಟೆ ಮುಂತಾದ ವಸ್ತುಗಳು ಮಾರಾಟವಾಗುತ್ತಿದ್ದವು. ಆದರೆ ಈ ಸಂತೆಗಳು ವ್ಯವಸಾಯಗಾರರ ಹೆಚ್ಚುವರಿ ಉತ್ಪನ್ನ ಗಳನ್ನು ಮಾರಾಟ ಮಾಡಲು ಯಾವುದೇ ರೀತಿಯಿಂದ ಸಹಾಯಕವಾಗಿರಲಿಲ್ಲ ಎಂದು ವರದಿ ತಿಳಿಸುವುದು. ಆದರೆ ಇವುಗಳು ತೋಟದ ಕೂಲಿ ಆಳುಗಳಿಗೆ ತಮ್ಮ ದಿನಸೀ ಸಾಮಾನು ಕೊಳ್ಳಲು ಸಹಾಯಕವಾಗಿದ್ದವು. ವ್ಯವಸಾಯ ಗಾರರಿಗೆ ಉಪಯೋಗವಾಗಿದ್ದ ಅಂದಿನ ಪ್ರಮುಖ ಸಂತೆ ಗಳೆಂದರೆ ಗೋಣಿಕೊಪ್ಪಲು ಮತ್ತು ಸಿದ್ಧಾಪುರಗಳಲ್ಲಿ ನಡೆ ಯುತ್ತಿದ್ದ ಬೇಸಾಯಕ್ಕೆ ಉಪಯೋಗಿಸುತ್ತಿದ್ದ ಜಾನುವಾರು ಗಳ ಸಂತೆ ಎಂದು ತಿಳಿದು ಬರುವುದು.

ಸಂತೆಯಲ್ಲಿ ಅಲ್ಲದೇ ಜಿಲ್ಲೆಯಲ್ಲಿ ನಡೆಯುವ ಪ್ರಮುಖ ಜಾತ್ರೆಗಳಲ್ಲಿಯೂ ಸಹ ಕೆಲವೊಂದು ವಿಶೇಷ ವಸ್ತುಗಳ ವ್ಯಾಪಾರ ಜಾತ್ರೆಯ ದಿನಗಳಲ್ಲಿ ನಡೆಯುವುದು. ಉದಾ : ತುಲಾಸಂಕ್ರಮಣದಲ್ಲಿ ಮೂರು–ನಾಲ್ಕು ದಿವಸ ನಡೆಯುವ ಸುಪ್ರಸಿದ್ಧ ಕಾವೇರಿ ಜಾತ್ರೆಯಲ್ಲಿ ಮೈಸೂರು, ಮಂಗಳೂರು

ಮತ್ತು ಮಲಬಾರಿನ ಸಂಚಾರಿ ವ್ಯಾಪಾರಸ್ಥರು ತಮ್ಮ ಮಳಿಗೆಗಳನ್ನು ಸ್ಥಾಪಿಸುವರು. ಈ ಜಾತ್ರೆಯಲ್ಲಿ ನಿತ್ಯ ಉಪಯೋಗಿ ವಸ್ತುಗಳಲ್ಲದೇ ಹಲವಾರು ಸುಖಭೋಗದ ವಸ್ತುಗಳೂ ಮಾರಾಟವಾಗುವುವು. ಈ ಜಾತ್ರೆಯಲ್ಲಿ ಮಾರಾಟವಾಗುವ ಪ್ರಮುಖ ವಸ್ತುಗಳೆಂದರೆ ಸಿದ್ಧಪಡಿಸಿದ ಉಡುಪುಗಳು, ಕೈಮಗ್ಗದ ಬಟ್ಟೆಗಳು, ತಾಮ್ರ, ಹಿತ್ತಾಳೆ, ಕಂಚು, ಉಕ್ಕು ಮತ್ತು ಅಲ್ಯುಮಿನಿಯಂನಿಂದ ಮಾಡಿದ ಪಾತ್ರೆಗಳು, ಮೀನಿನ ಬಲೆಗಳು, ಹಗ್ಗ ಮತ್ತು ನಾರಿನ ವಸ್ತುಗಳು ಮುಂತಾದವುಗಳು. ಕಾವೇರಿಯಂತೆ ಕೊಡವರ ಅಧಿದೇವತೆ ಪಾಡಿಯಾಇಗ್ಗುತಪ್ಪ ಜಾತ್ರೆಯು ಮಾರ್ಚ್ ತಿಂಗಳಲ್ಲಿ ನಡೆಯುವುದು. (ಜಾತ್ರೆಗಳ ಬಗ್ಗೆ ಅಧ್ಯಾಯ ಮೂರನ್ನು ಗಮನಿಸುವುದು).

ಈ ಕೆಳಗಿನ ಕೋಷ್ಟಕದಲ್ಲಿ ಆಯಾ ತಾಲೂಕುಗಳಲ್ಲಿ ನಡೆಯುವ ಪ್ರಮುಖ ಸಂತೆಗಳ ವಿವರವನ್ನು ಕೊಡಲಾಗಿದೆ.

| ಸಂತೆಯ ಸ್ಥಳ | ಸಂತೆ ನಡೆಯುವ ದಿವಸ | ಸೇರುವ ಜನಸಂಖ್ಯೆ (ಅಂದಾಜು) ಪ್ರಮುಖ ವಸ್ತುಗಳ ಮಾರಾಟ |
|---|---|---|
| **ಮಡಿಕೇರಿ ತಾಲೂಕು** | | |
| ಮಡಿಕೇರಿ | ಶುಕ್ರವಾರ | (5,000–6,000) ಅಕ್ಕಿ, ತೆಂಗಿನಕಾಯಿ, |
| ಮೂರ್ನಾಡು | ಗುರುವಾರ | 1,500–2,000 ತರಕಾರಿ |
| ನಾಪೋಕ್ಲು | ಸೋಮವಾರ | ತರಕಾರಿ |
| **ವೀರರಾಜಪೇಟೆ ತಾಲೂಕು** | | |
| ವೀರರಾಜಪೇಟೆ | ಬುಧವಾರ | (3,000–4,000) ದಿನಸಿ, ತರಕಾರಿ, ಮಳೆಗಾಲದಲ್ಲಿ ತೆಂಗು |
| ಸಿದ್ದಾಪುರ | ಭಾನುವಾರ | (1,000) ದಿನಸಿ ಪದಾರ್ಥಗಳು |
| ಗೋಣಿಕೊಪ್ಪಲು | ಭಾನುವಾರ | (2,000–3,000) ತರಕಾರಿ, ದಿನಸಿ ಇತ್ಯಾದಿ |
| ಕುಟ್ಟ | ಮಂಗಳವಾರ | (3,000) ತರಕಾರಿ, ದಿನಸಿ, ಬಟ್ಟೆ, ಮಾಂಸ, ಮೀನು |
| ಪೊನ್ನಂಪೇಟೆ | ಭಾನುವಾರ | — |
| ಬಾಳೆಲೆ | ಸೋಮವಾರ | (500–800) ತರಕಾರಿ, ದಿನಸಿ, ಬಟ್ಟೆ |
| ಶ್ರೀಮಂಗಲ | ಸೋಮವಾರ | (500) ದಿನಸಿ, ತರಕಾರಿ, ಬಟ್ಟೆ, ಮೀನು, ಮಾಂಸ |
| ಹುದಿಕೇರಿ | ಸೋಮವಾರ | (300) ದಿನಸಿ, ತರಕಾರಿ, ಬಟ್ಟೆ |
| **ಸೋಮವಾರಪೇಟೆ ತಾಲೂಕು** | | |
| ಸೋಮವಾರಪೇಟೆ | ಸೋಮವಾರ | (15,000) ತರಕಾರಿ, ಅಕ್ಕಿ, ರಾಗಿ, ಬೆಲ್ಲ, ತೆಂಗಿನಕಾಯಿ, ಎಣ್ಣೆ, ಬಟ್ಟೆ |
| ಶನಿವಾರಸಂತೆ | ಶನಿವಾರ | (14,000) " |
| ಕುಶಾಲನಗರ | ಮಂಗಳವಾರ | (15,000) " |
| ಸುಂಟಿಕೊಪ್ಪ | ಭಾನುವಾರ | (15,000) " |
| ಕೊಡ್ಲಿಪೇಟೆ | ಭಾನುವಾರ | (10,000) " |
| ಮಾದಾಪುರ | ಶನಿವಾರ | (8,000) " |
| ಚೆಟ್ಟಳ್ಳಿ | ಶನಿವಾರ | (5,000) " |

**ಜಾನುವಾರು ಸಂತೆಗಳು**

ವ್ಯವಸಾಯ ಉತ್ಪನ್ನಗಳು ಮಾರಾಟದ ನಿಯಂತ್ರಣಕ್ಕೆ ಒಳಪಟ್ಟಂತೆ ಇತ್ತೀಚೆಗೆ ಜಾನುವಾರುಗಳ ಮಾರಾಟವೂ ನಿಯಂತ್ರಿತ ಮಾರುಕಟ್ಟೆಗಳ ಸುಪರ್ದಿಯಲ್ಲಿ ನಡೆಯುವುದು. ಜಾನುವಾರು ಮಾರುಕಟ್ಟೆಗಳ ಅಂತರ್ಗತ ಜಾನುವಾರು, ಕುರಿ, ಮೇಕೆಗಳು ನಿಯಂತ್ರಿಸಲ್ಪಟ್ಟಿವೆ. ಹೆಚ್ಚಿನ ಸಂಖ್ಯೆಯ ಜಾನುವಾರುಗಳು, ಕುರಿ ಮತ್ತು ಮೇಕೆಗಳು ಹರಾಜು ಅಥವಾ ಟೆಂಡರ್ ವ್ಯವಸ್ಥೆಯ ಮಾರಾಟಕ್ಕೆ ಬದಲಾಗಿ ಬಹಿರಂಗ ಒಡಂಬಡಿಕೆಯ ಮೂಲಕ ಮಾರಲ್ಪಡುತ್ತವೆ. ಕದ್ದ ಪ್ರಾಣಿಗಳ ಮಾರಾಟವನ್ನು ತಡೆಯಲು ಪ್ರಾಣಿಗಳ ದಾಖಲಾತಿಯು ಆಚರಣೆಯಲ್ಲಿದೆ. ಪ್ರತಿವಾರವೂ ನಿಗದಿತ ದಿನದಲ್ಲಿ ಅಥವಾ ಸಂತೆಯ ದಿವಸವೇ ನಡೆಯುವ ಜಾನುವಾರುಗಳ ಸಂತೆಯಲ್ಲದೇ, ಹಲವು ವಿಶೇಷ ಸಂದರ್ಭಗಳಲ್ಲಿ ಅಂದರೆ ಜಾತ್ರೆ, ಉತ್ಸವ, ದನಗಳ ಪ್ರದರ್ಶನ ಮುಂತಾದ ಸಂದರ್ಭಗಳಲ್ಲಿ ಜಾನುವಾರುಗಳ ವಿಶೇಷ ಮಾರಾಟ ನಡೆಯುವುದು. ಉದಾ : ಕುಶಾಲನಗರದ ಗಣಪತಿ ಜಾನುವಾರು ಜಾತ್ರೆ. ಈ ಜಾತ್ರೆಯು ಅಕ್ಟೋಬರ್‌ನಲ್ಲಿ ಸುಮಾರು 10 ದಿನಗಳ ಕಾಲ ನಡೆಯುವುದು ಮತ್ತು ಸರಾಸರಿ 3,000 ಜಾನುವಾರು ಜಾತ್ರೆಗೆ ಸೇರುವವು. ಶನಿವಾರ ಸಂತೆಯಲ್ಲಿ ಡಿಸೆಂಬರ್‌ನಲ್ಲಿ ಒಂದು ವಾರ ನಡೆಯುವ ಗುಡುಗಳಲೆ ಜಯದೇವರ ಜಾನುವಾರ ಜಾತ್ರೆ, ಕೊಡಗಿನ ಬಹುದೊಡ್ಡ ಜಾನುವಾರು ಜಾತ್ರೆ ಎಂದು ಪ್ರಸಿದ್ಧವಾಗಿದೆ. ಈ ಜಾತ್ರೆಗೆ ಸುಮಾರು 8,000 ಜಾನುವಾರುಗಳು ಸೇರುವವು. ಕೊಡಲಿಪೇಟೆಯಲ್ಲಿ ಪ್ರತೀ ವರ್ಷ ಜನವರಿಯಲ್ಲಿ 3-4 ದಿವಸ ನಡೆಯುವ ನಂದೀಶ್ವರ ಜಾತ್ರೆಯಲ್ಲಿಯೂ ದನಗಳ ಮಾರಾಟ ನಡೆಯುವುದು. ಸುಮಾರು 3,000 ದನಗಳು ಜಾತ್ರೆಗೆ ಸೇರುವವು. ಅದರಂತೆ ಸುಮಾರು 10 ದಿವಸ ನಡೆಯುವ ಸೋಮವಾರಪೇಟೆಯ ಸೋಮೇಶ್ವರ ಜಾತ್ರೆಯ ಸಮಯದಲ್ಲಿ (ಮಾರ್ಚ್ ಎರಡನೇಯ ವಾರ) ಸುಮಾರು ಮೂರು ಸಾವಿರ ದನಗಳು ಸೇರುವವು. ಸೋಮವಾರಪೇಟೆ ತಾಲೂಕಿನ ಶಾಂತಳ್ಳಿಯಲ್ಲಿ 12 ವರ್ಷಕ್ಕೆ ಒಮ್ಮೆ ನಡೆಯುವ ಎಮ್ಮೆ ಸುಗ್ಗಿ ಎಂಬ ಹಬ್ಬವನ್ನು ರೈತರು ಒಂದೆಡೆ ಸೇರಿ ಜಾತ್ರೆಯಂತೆ ಆಚರಿಸುವರು. ಜಿಲ್ಲೆಯಲ್ಲಿ ನಡೆಯುವ ಪ್ರಮುಖ ಜಾನುವಾರು ಸಂತೆಗಳಲ್ಲಿ ಗೋಣಿಕೊಪ್ಪಲಿನಲ್ಲಿ ಪ್ರತೀ ಭಾನುವಾರ ನಡೆಯುವ ದನಗಳ ಸಂತೆಗೆ ಸುಮಾರು 7,000 ಜಾನುವಾರುಗಳು ಸೇರುವವೆಂದು 1961 ರ ವರದಿ ತಿಳಿಸುವುದು.

**ತೂಕ ಮತ್ತು ಅಳತೆಗಳು**

ಪ್ರಮಾಣಬದ್ಧ ತೂಕ ಮತ್ತು ಅಳತೆ ಕಾಯಿದೆ, 1956, (ಮೆಟ್ರಿಕ್ ಪದ್ಧತಿ ತೂಕ ಮತ್ತು ಅಳತೆ) ಇದನ್ನು ನಮ್ಮ ರಾಜ್ಯದಲ್ಲಿ ಕೊಡಗನ್ನು ಸೇರಿದಂತೆ 1958ರಲ್ಲಿ ಜಾರಿಗೊಳಿಸಲಾಯಿತು. ಇದಕ್ಕೂ ಮೊದಲು ಕೊಡಗಿನಂತಹ ಒಂದು ಚಿಕ್ಕ ಪ್ರದೇಶದಲ್ಲಿಯೂ ತೂಕ ಮತ್ತು ಅಳತೆಗಳಲ್ಲಿ ಬಹುವಿಧವಾದ ವೈವಿಧ್ಯ ಮತ್ತು ವ್ಯತ್ಯಾಸ ಕಂಡುಬರುತ್ತಿತ್ತು. ಕೊಡಗಿನ ವಿವಿಧ ಭಾಗದಲ್ಲಿ ಅಂದರೆ ಉತ್ತರ, ದಕ್ಷಿಣ, ಘಟ್ಟದ ಕೆಳಗೆ, ಮೇಲೆ, ಮೈಸೂರಿಗೆ ಹೊಂದಿರುವ ಸೀಮೆ, ಮಲಬಾರಿಗೆ ಹೊಂದಿರುವ ಪ್ರದೇಶಗಳಲ್ಲೂ ಅಳತೆ ಮತ್ತು ತೂಕದಲ್ಲಿ ಭಿನ್ನತೆ ಇತ್ತು. ಏಳು ಸಾವಿರ ಸೀಮೆ ಪ್ರದೇಶ (ಸದ್ಯದ ಸೋಮವಾರಪೇಟೆ ತಾಲೂಕಿನ ಭಾಗ)ದಲ್ಲಿ ಅಳತೆ ತೂಕಗಳಲ್ಲಿ ಹೆಚ್ಚು ವೈವಿಧ್ಯತೆ ಕಂಡುಬರದಿದ್ದರೂ ಕೊಡಗಿನ ಉಳಿದ ಪ್ರದೇಶಗಳಲ್ಲಿ ಬಹುವಿಧ ವ್ಯತ್ಯಾಸಗಳನ್ನು ಕಾಣಬಹುದಾಗಿತ್ತು. ಕೊಡಗಿನ ಭಾಗಗಳಲ್ಲಿ ಏಕರೀತಿಯ ತೂಕ ಮತ್ತು ಅಳತೆ ಪ್ರಮಾಣವನ್ನು ಜಾರಿಗೆ ತರಲು ರಾಜರ ಕಾಲದಲ್ಲಿ ಪ್ರಯತ್ನ ಮಾಡಲಾಯಿತು.

ರಾಜರ ಆಳ್ವಿಕೆಯ ಕಾಲದಲ್ಲಿ ಮತ್ತು ಬ್ರಿಟಿಷರ ಆಡಳಿತ ವ್ಯವಸ್ಥೆಯಲ್ಲಿ ಮೂಲತಃ ಕೊಡಗಿನ ಪ್ರದೇಶದಲ್ಲಿ ದವಸಧಾನ್ಯಗಳನ್ನು ಅಳತೆ ಮಾಡಲು 'ಹಾನೆ' ಮತ್ತು 'ಬಟ್ಟಿ' ಎಂಬ ಅಳತೆ ಮಾಪಕಗಳು ಸರ್ವಸಾಮಾನ್ಯವಾಗಿದ್ದವು ಮತ್ತು ತೂಕದ ಲೆಕ್ಕಗಳನ್ನು ಇವುಗಳಲ್ಲಿಯೇ ಇಡಲಾಗುತ್ತಿತ್ತು. ಸೇರು ಅಳತೆಮಾನವನ್ನು ಅನೇಕ ಭಾಗಗಳಾಗಿ ವಿಂಗಡಿಸಲಾಗಿತ್ತು. ಸೇರು ಅಳತೆಯ ಗಾತ್ರವನ್ನು 80 ರೂ.ಗಳ (ತೊಲ) ತೂಕದ ಭಾರಕ್ಕೆ ಸರಿಸಮಾನವಾದ ಧಾನ್ಯಗಳ ರಾಶಿಯನ್ನು ಭರಿಸುವಂತ ಮಾಪನ ಎಂದು ಪರಿಗಣಿಸಲಾಗಿತ್ತು. ಧಾನ್ಯಗಳನ್ನು ಅಳೆಯುವ ಅಂದಿನ ಕೋಷ್ಟಕ ಈ ರೀತಿ ಇತ್ತು :

ಒಂದು ಮಾನ = $\frac{1}{2}$ ಪಕ್ಕಾ ಸೇರು; ಎರಡು ಮಾನ = ಒಂದು ಸೇರು; ನಾಲ್ಕುಮಾನ = 2 ಸೇರು = ಒಂದು ಹಾನೆ, 20 ಮಾನ = 10 ಸೇರು = 5 ಹಾನೆ = ಒಂದು ಚಿಕ್ಕ ಪನ್; 40 ಮಾನ = 20 ಸೇರು = 10 ಹಾನೆ = ಒಂದು ದೊಡ್ಡ ಪನ್; 160 ಮಾನ = 80 ಸೇರು = 40 ಹಾನೆ = ನಾಲ್ಕು ದೊಡ್ಡ ಪನ್ ಅಥವಾ ಒಂದು ಬಟ್ಟಿ.

ಬೆಲ್ಲ ಇತ್ಯಾದಿ ತೂಗುವ ವಸ್ತುಗಳಿಗೆ ಒಂದು ಸೇರು ತೂಕ $27\frac{1}{2}$ ರೂ. (ತೊಲ) ತೂಕಕ್ಕೆ ಸಮಾನವಾಗಿತ್ತು, ಒಂದು ಮಣಕ್ಕೆ 40 ಸೇರು, ಒಂದು ಖಂಡಿಗೆ 20 ಮಣಗಳು, ಈ

ಮೇಲಿನ ಸೇರು ಅಳತೆ ಸರ್ಕಾರದ ಸೇರು ಆಗಿತ್ತು. ಇದು ಅಲ್ಲದೇ ಕಡಿಮೆ ಅಳತೆಯ ಇನ್ನೊಂದು ಸೇರು ಬಳಕೆಯಲ್ಲಿ ಇತ್ತು.

ಘಟ್ಟದ ಕೆಳಗಿನ ಪ್ರದೇಶದಲ್ಲಿ ಸೇರಿನ ಅಳತೆ 24 ರೂ. (ತೊಲ)ಕ್ಕೆ ಸಮನಾಗಿತ್ತು. ಮೆಣಸನ್ನು ಈ ತೂಕದಲ್ಲಿ ಮಾರಾಟ ಮಾಡಲಾಗುತ್ತಿತ್ತು. ಬೇರೆ ಕೆಲವು ಪ್ರದೇಶಗಳಲ್ಲಿ ಸೇರು 26 ರೂ. (ತೊಲೆ) ತೂಕಕ್ಕೆ ಸಮಾನವಾಗಿತ್ತು. 10 ಸೇರಿನ ಅಳತೆಯನ್ನು 'ಧರಾ' ಎಂದು ಕರೆಯಲಾಗುತ್ತಿತ್ತು ; ಘಟ್ಟದ ಕೆಳಗಿನ ಪ್ರದೇಶಗಳಲ್ಲಿ 42 ಸೇರಿಗೆ–ಒಂದು 'ಮಾದನ' (ಮುಡಿ) ಮತ್ತು 42 ಮಾದನಕ್ಕೆ–ಒಂದು 'ಕೋರ್ಜಿ' ಎಂಬ ಅಳತೆಯ ಮಾನಗಳಿದ್ದವು. ಏಳು ಸಾವಿರ ಸೀಮೆ ಪ್ರದೇಶದಲ್ಲಿ ಈ ರೀತಿಯ ತೂಕಗಳು ಬಳಕೆಯಲ್ಲಿ ಇದ್ದವು :– ಎರಡು ಸೇರು = ಒಂದು ಹಾನೆ ; ಮೂರು ಹಾನೆ = ಒಂದು ಕೊಳಗ ; 20 ಕೊಳಗ = ಒಂದು ಖಂಡಿ.

1913–14ರ ತೂಕ ಮತ್ತು ಅಳತೆ ಸಮಿತಿಯ ವರದಿ (ಸಿಮ್ಲಾ ಸಮಿತಿ ವರದಿ) ತಿಳಿಸುವಂತೆ, ಕೊಡಗಿನಾದ್ಯಂತ ಸಾಮಾನ್ಯವಾಗಿ ಎಲ್ಲಾ ವಸ್ತುಗಳನ್ನು ತೂಗಲು ಮಣವನ್ನು ಬಳಸುತ್ತಿದ್ದರು. ಒಂದು ಮಣವು 40 ಸೇರುಗಳಿಗೆ ಸಮನಾಗಿತ್ತು ; ಒಂದು ಸೇರು 27½ ತೊಲೆಗಳಿಗೆ, ಒಂದು ಮಣವು 27½ ಪೌಂಡುಗಳಿಗೆ ಸಮನಾಗಿತ್ತು. ಒಂದು ಪೌಂಡು (ರಾತಲು) 40 ರೂಪಾಯಿ ತೂಕಕ್ಕೆ ಸಮಾನವೆಂದು ಪರಿಗಣಿಸಲಾಗುತ್ತಿತ್ತು. ಆದರೆ ವಾಡಿಕೆಯಲ್ಲಿ ಒಂದು ಮಣಕ್ಕೆ 28 ಪೌಂಡು (1088–8/9 ತೊಲೆ) ಎಂದೇ ಬಳಸಲಾಗುತ್ತಿತ್ತು.

ಚಿನ್ನ ಬೆಳ್ಳಿ, ತಾಮ್ರ, ಹಿತ್ತಾಳೆ ಮುಂತಾದ ಲೋಹಗಳ, ಚಿಲ್ಲರೆ ವ್ಯಾಪಾರದಲ್ಲಿ ಒಂದು ಸೇರು ಎಂದರೆ 24 ತೊಲೆಗಳು ಎಂದು, ಮತ್ತು ಮಾಂಸದ ವ್ಯಾಪಾರದಲ್ಲಿ ಒಂದು ಸೇರಿಗೆ 84 ತೊಲೆಗಳು ಎಂದು ಗ್ರಹಿಕೆ ಆಗಿತ್ತು. ಕಾಫಿ ಮಾರಾಟದಲ್ಲಿ ಮಲಬಾರ ಜಿಲ್ಲೆಯಲ್ಲಿ ಬಳಕೆಯಲ್ಲಿ ಇದ್ದ ಒಂದು ಮಣಕ್ಕೆ 50 ಸೇರಿನ ಅಂದರೆ 1¼ ಮಣದ ಹೊಸ ತೂಕವನ್ನು ಇಲ್ಲಿಯೂ ಅಳವಡಿಸಿಕೊಳ್ಳಲಾಯಿತು.

ಚಿನ್ನಾಭರಣ ವ್ಯಾಪಾರಸ್ಥರು ಈ ಮುಂದಿನ ಕೋಷ್ಟಕವನ್ನು ತಮ್ಮ ವ್ಯವಹಾರಗಳಲ್ಲಿ ಉಪಯೋಗಿಸುತ್ತಿದ್ದರು : 6 ಗ್ರೇನ್ಸ್ = ಒಂದು ಹಣ ; 9 ಹಣ = ಒಂಪು ವರಹ ; 3 1/3 ವರಹ = ಒಂದು ತೊಲ ; 80 ವರಹ = ಒಂದು ಸೇರು ; ವೀರರಾಜಪೇಟೆಯ ಚಿನ್ನಬೆಳ್ಳಿ ವ್ಯಾಪಾರಸ್ಥರು ವ್ಯವಹರಿಸುತ್ತಿದ್ದ ಕೋಷ್ಟಕ ಈ ರೀತಿ ಇತ್ತು : 4 ಗುಂಜಿ = ಒಂದು ಹಣ ; 9ಹಣ = ಒಂದು ವರಹ ; 3 1/3 ವರಹ = ಒಂದು ತೊಲೆ.

### ಉದ್ದದ ಅಳತೆ

ಮಾರ್ಗದ ಉದ್ದ, ಬಟ್ಟೆಯ ಉದ್ದ ಮುಂತಾದವುಗಳನ್ನು ಅಳೆಯಲು ಉದ್ದದ ಅಳತೆಯ ಕಾನೂನು 1889ರ ಅನ್ವಯ ಬ್ರಿಟಿಷರ ಅಳತೆ ವಿಧಾನಗಳನ್ನು ಬಳಸುವುದು ರೂಢಿಯಲ್ಲಿ ಇತ್ತು ಎಂದು ವರದಿ ತಿಳಿಸುವುದು. 'ಫೂಟ್'ನ್ನು 'ಅಡಿ' ಎಂದು, 'ಯಾರ್ಡ್'ನ್ನು 'ಗಜ' ಎಂದು, ಅರ್ಧ ಯಾರ್ಡನ್ನು 'ಮೊಳ' ಎಂದು, ಎರಡು ಯಾರ್ಡ್ ಉದ್ದವನ್ನು 'ಮಾರು' ಎಂದು ಸ್ಥಳೀಯವಾಗಿ ಕರೆಯಲಾಗುತ್ತಿತ್ತು.

ಆದರೆ ಬಹು ಹಿಂದಿನ ಕಾಲದಲ್ಲಿ ಎರಡು ಸ್ಥಳಗಳ ನಡುವಿನ ದೂರವನ್ನು ಮಾರ್ಗಮಧ್ಯದ ಭೌಗೋಳಿಕ ಅಡೆತಡೆಗಳು, ಮಾರ್ಗ ಕ್ರಮಿಸಲು ಬೇಕಾದ ಸಮಯ ಮುಂತಾದವುಗಳನ್ನು ಪರಿಗಣಿಸಿ ಅಳೆಯಲಾಗುತ್ತಿತ್ತು. ಕೂಗಳತೆಯ ವಿಧಾನದಿಂದಲೂ ದೂರವನ್ನು ನಿರ್ಧರಿಸಲಾಗುತ್ತಿತ್ತು. 'ಕೊಂಬು' ಎಂಬ ಕಲ್ಪನೆಯೂ ರೂಢಿಯಲ್ಲಿತ್ತು. ಈ ಅಳತೆ ವಿಧಾನಗಳು ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿರುತ್ತಿದ್ದವು. ಹೆಚ್ಚು ಸಮಮಟ್ಟದ ಪ್ರದೇಶಗಳಲ್ಲಿ ಸುಮಾರು ಮೂರು ಮೈಲುಗಳ ಅಂತರವನ್ನು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಸುಮಾರು ಎರಡು ಮೈಲಿಗಿಂತ ಸ್ವಲ್ಪ ಹೆಚ್ಚಿನ ದೂರವನ್ನು ಒಂದು ಕೋಸ್ ಎಂದು ಕರೆಯುವುದು ವಾಡಿಕೆಯಲ್ಲಿ ಇತ್ತು. ಮೆಟ್ರಿಕ್ ಉದ್ದಮಾನ ರೂಢಿಯಲ್ಲಿ ಬರುವ ಪೂರ್ವದಲ್ಲಿ ಒಂದು ಮೈಲಿಗೆ ಎಂಟು ಫರ್ಲಾಂಗುಗಳು, ಒಂದು ಫರ್ಲಾಂಗಿಗೆ 220 ಪ್ರಮಾಣ ಬದ್ಧ ಯಾರ್ಡ್ (ಗಜ)ಗಳು, ಒಂದು ಎಕರೆಗೆ 4,840 ಚದರ ಗಜಗಳು ಮುಂತಾಗಿ ಕೋಷ್ಟಕ ವಿವರಿಸುವುದು. ಮೂರು ಮೈಲು ಒಂದು ಹರದಾರಿಗೆ, 4 ಹರದಾರಿಗಳು ಒಂದು ಗಾವುದಕ್ಕೆ ಸಮನಾಗಿದ್ದವು. ಮಲೆಯಾಳಿಗಳೊಂದಿಗೆ ವ್ಯವಹರಿಸುವಾಗ್ಗೆ ಮರ ಮುಟ್ಟುಗಳ ಉದ್ದವನ್ನು 28 ಅಂಗುಲದ 'ಕೋಲು' ಮೂಲಕ ಅಳೆಯಲಾಗುತ್ತಿತ್ತು.

### ಕ್ಷೇತ್ರ ಅಳತೆ

1910 ರ ಸೆಟ್ಲಮೆಂಟ್ ವರದಿ ತಿಳಿಸುವಂತೆ ಕೊಡಗಿನ

ಅರಸರ ಕಾಲದಲ್ಲಿ (ವೀರರಾಜೇಂದ್ರ ಮತ್ತು ಲಿಂಗರಾಜೇಂದ್ರ) ಒಂದು ಯಾರ್ಡ್ (ಗಜ)ಗೆ ವೀರರಾಜೇಂದ್ರನ ಕಾಲದಲ್ಲಿ 28 ಅಂಗುಲುಗಳಾಗಿದ್ದರೆ ಲಿಂಗರಾಜೇಂದ್ರನ ಕಾಲದಲ್ಲಿ 24 ಅಂಗುಲಗಳಾಗಿದ್ದವು. 'ರಾಜೇಂದ್ರನಾಮೆ'ಯಲ್ಲಿ ಪ್ರಸ್ತಾಪಿಸಿದಂತೆ ಲಿಂಗರಾಜನು (1811-1820) ಲಿಂಗರಾಜಕೋಲು (ಇದರ ಉದ್ದ 16 ಅಡಿ ಇರುತ್ತಿತ್ತು) ಎಂಬ ಅಳತೆ ಕೋಲಿನಿಂದ ಅಳತೆ ಮಾಡಿಸಿ ಮಣ್ಣಿನ ಗುಣಕ್ಕೆ ಸರಿಯಾಗಿ ಕಂದಾಯವನ್ನು ನಿಗದಿ ಮಾಡಲಾಗುತ್ತಿತ್ತು. 16 ಅಡಿ ಚೌಕದ ವ್ಯಾಪ್ತಿಯ ಪ್ರದೇಶವನ್ನು 'ಸಾಲೇಕೋಲು' ಅಳತೆ ಎಂದು ಕರೆಯಲಾಗುತ್ತಿತ್ತು. ಈ ಅಳತೆಯು ಎಕರೆಯ ಸುಮಾರು 1/170 ಭಾಗಕ್ಕೆ ಸಮಾನವಾಗಿರುತ್ತಿತ್ತು. ಈ ವ್ಯವಸ್ಥೆಗೆ ಲಿಂಗರಾಜನ ಸಿಸ್ತು ಎಂದು ಕರೆಯುತ್ತಿದ್ದರು. ಮುಂದೆ, ಬ್ರಿಟಿಷರ ಕಾಲದಲ್ಲಿ ಒಂದು ಪ್ರದೇಶದ ವಿಸ್ತೀರ್ಣವನ್ನು ಎಕರೆ ಮತ್ತು 'ಸೆಂಟ್'ಗಳಲ್ಲಿ ಅಳೆಯಲಾಗುತ್ತಿತ್ತು. ಒಂದು ಎಕರೆಗೆ ನೂರು ಸೆಂಟುಗಳು. ರಾಜರ ಕಾಲದಲ್ಲಿ ಮತ್ತು ಅದಕ್ಕೂ ಪೂರ್ವದಲ್ಲಿ ವ್ಯವಸಾಯ ಪ್ರದೇಶಗಳ ವಿಸ್ತೀರ್ಣವನ್ನು 'ಬಟ್ಟಿ' ಮೂಲಕ ಅಳೆಯಲಾಗುತ್ತಿತ್ತು. ಸಾಮಾನ್ಯವಾಗಿ 80 ಸೇರು ಬತ್ತ ಬಿತ್ತನೆಯ (ಬೀಜವರಿ) ವಿಸ್ತೀರ್ಣ ಪ್ರದೇಶವನ್ನು ಒಂದು ಬಟ್ಟಿ ಎಂದು ಹೇಳುತ್ತಿದ್ದರು. ಸಾಮಾನ್ಯವಾಗಿ ಮೂರು ಎಕರೆ ಪ್ರದೇಶ ಒಂದು ನೂರು ಬಟ್ಟಿಗೆ ಸಮಾನವಾಗಿರುತ್ತಿತ್ತು. (33 ಬಟ್ಟಿಗೆ ಒಂದು ಎಕರೆ). ರಾಜರ ಕಾಲದಲ್ಲಿ ಬತ್ತ ಬೆಳೆಯುವ ಕೊಳ್ಳ ಪ್ರದೇಶಗಳನ್ನು 'ಕೋವಾ' ಎಂದು ಕರೆಯಲಾಗುತ್ತಿತ್ತು. ಆ ಪ್ರದೇಶಗಳನ್ನು ಸರಾಸರಿ ಒಂದೂವರೆ ಎಕರೆ ವಿಸ್ತೀರ್ಣದ ಪ್ಲಾಟುಗಳನ್ನಾಗಿ ವಿಂಗಡಿಸಲಾಗುತ್ತಿತ್ತು. ಸದರಿ ಪ್ಲಾಟುಗಳನ್ನು 'ವರ್ಗ' ಎಂದು ಕರೆಯಲಾಗುತ್ತಿತ್ತು. ಆದರೆ ಏಳು ಸಾವಿರ ಸೀಮೆ ಪ್ರದೇಶ ಮತ್ತು ಘಟ್ಟದ ಕೆಳಗಿನ ಕೆಲವು ಪ್ರದೇಶಗಳಲ್ಲಿ ಭೂಮಿಯ ವಿಸ್ತರಣೆಯನ್ನು 'ಚಂಡಿಕರ' ಮತ್ತು 'ಮುಡಿ' ಎಂಬ ಮಾನದಿಂದ ಅಳೆಯುತ್ತಿದ್ದರು.

**ಅಳತೆ ಮಾಪನಗಳು**

'ರಾಜೇಂದ್ರನಾಮೆ'ಯಲ್ಲಿ ವರದಿಯಾಗಿರುವಂತೆ (1807) ಒಂದು ಬಟ್ಟಿ ಎಂದರೆ ಅರವತ್ತು ಸೇರು, ಒಂದು ಸೇರು= ಎರಡು ರಾತಲು ಎಂದು ಕಂಡುಬರುವುದು. ಆದರೆ ಇನ್ನೊಂದು ವರದಿ ತಿಳಿಸಿರುವಂತೆ (1835), ಬತ್ತದ ಸಗಟು ವ್ಯಾಪಾರದಲ್ಲಿ ಪ್ರಮಾಣಬದ್ಧ ಅಳತೆಯ ಮೂಲಮಾನ ಬಟ್ಟಿಯಾಗಿತ್ತು. ಒಂದು ಬಟ್ಟಿಗೆ 80 ಸೇರು, ಒಂದು ಸೇರಿಗೆ 42 ತೊಲಾ ಅಕ್ಕಿಯ ತೂಕ, ಅಥವಾ 18 ತೊಲಾ ಬತ್ತದ ತೂಕ ; ಒಂದು ಬಟ್ಟಿ ಬತ್ತದ ತೂಕ (80X42) 3,360 ತೊಲಾ ಅಕ್ಕಿ ಎಂದು ನಿರೂಪಿಸಲಾಗಿದೆ. ಒಣಧಾನ್ಯಗಳನ್ನು 'ಸೇರು' ಮೂಲ ಮಾಪನದಿಂದ ಅಳೆಯಲಾಗುತ್ತಿತ್ತು. ಅದರ ಕೋಷ್ಟಕ ಈ ರೀತಿ ಇತ್ತು : 16 ಚಟಾಕು = ಒಂದು ಸೇರು; 2 ಸೇರು = ಒಂದು ಹಾನೆ; 80 ಸೇರು = ಒಂದು ಬಾಲಟಿ; 100 ಸೇರು = ಒಂದು ಪಲ್ಲ; 120 ಅಥವಾ 160 ಸೇರು = ಒಂದು ಖಂಡುಗ. ವರದಿಯಲ್ಲಿ ಎರಡು ಬಗೆಯ 'ಸೇರು'ಗಳನ್ನು ಕುರಿತು ವ್ಯಾಖ್ಯೆ ನೀಡಲಾಗಿದೆ. 1) ಎಂಬತ್ತು ತೊಲಾ ತೂಕಕ್ಕೆ ಸಮನಾದ ಎರಡನೇ ದರ್ಜೆಯ ಅಕ್ಕಿಯನ್ನು ಪೂರ್ತಿ ಭರಿಸುವಷ್ಟು (ತಲೆ ಒಡೆಯದೆ) ಅಳತೆಮಾಪನ. 2) ಎಂಬತ್ತು ತೊಲಾ ತೂಕಕ್ಕೆ ಸಮನಾದ ಸಮ ಪ್ರಮಾಣದಲ್ಲಿ ಬೆರೆಸಿದ ನವಧಾನ್ಯಗಳ ಮಿಶ್ರಣವನ್ನು ಪೂರ್ತಿ ಭರಿಸುವ ಅಳತೆಯ ಮಾಪನ.

ಆದರೆ ಈ ಎರಡೂ ಬಗೆಯ ಸೇರುಗಳ ವ್ಯಾಖ್ಯೆ ಅಸಮರ್ಪಕ ಮತ್ತು ಗೊಂದಲಮಯವಾಗಿದ್ದು ಪ್ರಾಯೋಗಿಕವಾಗಿ ಪರೀಕ್ಷಿಸಿದಾಗ ಒಂದು ಅಳತೆಯ ಸೇರು $83\frac{1}{2}$ ತೊಲಾ ಎರಡನೇಯ ದರ್ಜೆಯ ಅಕ್ಕಿಯನ್ನು ಭರಿಸುತ್ತಿತ್ತು ಎಂದು ಕೊಡಗಿನ ಸಹಾಯಕ ಕಮಿಶನರ್ ವರದಿ ಮಾಡಿರುವರು.

ಚೆರ್ರಿ ಕಾಫಿ ಮತ್ತು ಬತ್ತವನ್ನು ಅಳತೆ ಮಾಡಲು ಮಲಬಾರಿನ 'ಪರಾ' ಎಂಬ ಅಳತೆಯನ್ನು ಉಪಯೋಗಿಸುತ್ತಿದ್ದಾಗಿ ವರದಿ ಸೂಚಿಸುವುದು. ಒಂದು ಪರಾ ತೂಕವು 8 ರಿಂದ 12 ಸೇರುಗಳಿಗೆ ಸಮನಾಗಿತ್ತು ಎಂದು ಕಂಡುಬರುವುದು. ಆದರೆ ಕೊಡಗಿನ ಪರಾ ಹತ್ತು ಸೇರುಗಳಿಗೆ ಸಮಾನವಾಗಿತ್ತು. ಒಂದು ಬಟ್ಟಿಯು 8 ಪರಾಗಳಿಗೆ ಸಮಾನವಾಗಿತ್ತು. ಒಂದು ಭರ್ತಿ ಎತ್ತಿನ ಗಾಡಿಯ ತೂಕವು 15 ಬಟ್ಟಿಗಳಿಗೆ ಸಮಾನವಾಗಿರುತ್ತಿತ್ತು. ದ್ರವ ವಸ್ತುಗಳಾದ ಖಾದ್ಯತೈಲ, ತುಪ್ಪ, ಹಾಲು, ಜೇನು, ಹೆಂಡ ಮುಂತಾದವುಗಳನ್ನು ಅಳೆಯಲು 'ಸೇರು' ಮೂಲಮಾನವನ್ನು ಬಳಸಲಾಗುತ್ತಿತ್ತು. ಧಾನ್ಯಗಳನ್ನು ಅಳೆಯಲು ಬಳಸುತ್ತಿದ್ದ 80 ತೊಲಾ ತೂಕದ ಎರಡನೇಯ ದರ್ಜೆಯ ಅಕ್ಕಿಯನ್ನು ಪೂರ್ತಿ ಭರಿಸುತ್ತಿದ್ದ ಮಾಪನವೇ ಈ 'ಸೇರು' ಆಗಿತ್ತು. ಸಾರಾಯಿ ಮತ್ತು ಇತರ ಮಾದಕ ಪೇಯಗಳನ್ನು ಇಂಗ್ಲಿಷ್ ಮೂಲಮಾಪನದಿಂದ ಅಳೆದರೆ, ಸೀಮೆಎಣ್ಣೆ ಮುಂತಾದವುಗಳನ್ನು ಗ್ಯಾಲನ್ ಮತ್ತು ಬಾಟಲಿ ಮೂಲಕ ಅಳೆಯಲಾಗುತ್ತಿತ್ತು. ಮರದ ದಿಮ್ಮಿ ಮುಂತಾದವುಗಳನ್ನು ಘನ ಅಡಿಗಳಲ್ಲಿ ಅಳೆಯಲಾಗುತ್ತಿತ್ತು.

ಈ ಮೇಲಿನ ವೈವಿಧ್ಯಮಯ ತೂಕ–ಅಳತೆಯ ಗೊಂದಲವನ್ನು ನಿವಾರಿಸುವ ಕ್ರಮವಾಗಿ 1931ರಲ್ಲಿ ಕೊಡಗಿನ ಶಾಸನ

ಪರಿಷತ್ತು ತೂಕ ಮತ್ತು ಅಳತೆಯ ಮಾಪನಗಳ ಬಳಕೆಯ ನಿಯಂತ್ರಣ ಕಾಯಿದೆಯನ್ನು ಜಾರಿಯಲ್ಲಿ ತಂದು ಕೊಡಗಿನಲ್ಲಿ ಸಾಂಪ್ರದಾಯಿಕವಾಗಿ ಬಳಕೆಯಲ್ಲಿದ್ದ ತೂಕ ಮತ್ತು ಅಳತೆಯ ಮಾಪನ ಮತ್ತು ಬಟ್ಟುಗಳನ್ನು ಸೂಕ್ತ ವಿವರಣೆಗಳೊಂದಿಗೆ ಪ್ರಮಾಣಬದ್ಧಗೊಳಿಸಿತು.

ಆದರೆ ಅದುವರೆಗೆ ರೂಢಿಯಲ್ಲಿದ್ದ ತೂಕ-ಅಳತೆ ಮಾಪನಗಳನ್ನು ಒಮ್ಮೆಲೆ ತೆಗೆದುಹಾಕಲಿಲ್ಲ. ಪ್ರಮಾಣಬದ್ಧ ತೂಕ-ಅಳತೆ ಮಾಪನಗಳ ಸಂಗಡ ಹಳೆಯವು ಕೆಲವು ಕಾಲ ಮುಂದುವರಿದವು. ಹೊಸ ಪ್ರಮಾಣಬದ್ಧ ತೂಕ-ಅಳತೆ ಮಾಪನಗಳ ಮೇಲೆ ಅವುಗಳ ಪೂರ್ಣವಿವರಗಳ ಮುದ್ರೆಯನ್ನು ಹಾಕುವುದನ್ನು ಕಡ್ಡಾಯಗೊಳಿಸಲಾಯಿತು. ಆದರೆ 1931ರ ಕಾನೂನನ್ನು ಉದ್ದ, ವಿಸ್ತೀರ್ಣ, ಚಿನ್ನ, ಬೆಳ್ಳಿ ಮುಂತಾದವುಗಳ ಅಳತೆ ಮತ್ತು ತೂಕಕ್ಕೆ ಅನ್ವಯಗೊಳಿಸಲಾಗಲಿಲ್ಲ. (ಅವುಗಳು ಈ ಮೊದಲೇ ಪ್ರಮಾಣಬದ್ಧಗೊಳಿಸಲ್ಪಟ್ಟಿದ್ದವು). ಈ ಮೇಲಿನ ಕಾಯಿದೆಯನ್ನು 'ಮದ್ರಾಸ್ ಪ್ರಾಂತೀಯ ಬ್ಯಾಂಕಿಂಗ್ ವಿಚಾರಣಾ ಆಯೋಗ' ಕೊಡಗು ಉಪಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ಮಾಡಲಾಗಿತ್ತು. ಕಾರಣ ಸುಸಂಬದ್ಧ ಮತ್ತು ಮುಕ್ತ ನಿತ್ಯ ವ್ಯಾಪಾರ ವಾಣಿಜ್ಯ ವ್ಯವಹಾರಕ್ಕೆ ಅದರ ಅವಶ್ಯಕತೆ ಹೆಚ್ಚಾಗಿತ್ತು. ನಂತರ 1939 ರಲ್ಲಿ 'ಪ್ರಮಾಣಬದ್ಧ ತೂಕ ಕಾನೂನು 1939'ರ (ಕೇಂದ್ರ ಕಾನೂನು) ತರಲಾಯಿತು. ಸದರಿ ಕಾನೂನು 1942ರಲ್ಲಿ ಜಾರಿಯಲ್ಲಿ ಬಂದಿತು.

### ಮೆಟ್ರಿಕ್ ಪದ್ಧತಿಯ ಆಚರಣೆ

ಪ್ರಮಾಣಬದ್ಧ ತೂಕ ಮತ್ತು ಅಳತೆ ಅಧಿನಿಯಮ 1956ರ ಅನ್ವಯ ರಚಿಸಲಾದ ಕರ್ನಾಟಕ ತೂಕ ಮತ್ತು ಅಳತೆ (ನಿಬಂಧನೆ) ಅಧಿನಿಯಮ 1958ನ್ನು ಈ ಜಿಲ್ಲೆಯಲ್ಲಿ 1962ರಲ್ಲಿ ಜಾರಿಗೆ ತರಲಾಯಿತು. ತೂಕ ಮತ್ತು ಅಳತೆ ಇಲಾಖೆಯು ತೂಕ ಮತ್ತು ಅಳತೆಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಾವಳಿಗಳನ್ನು ಪರಿಪೂರ್ಣವಾಗಿ ಕಾರ್ಯರೂಪಕ್ಕೆ ತರಲು ಹಲವಾರು ಕ್ರಮಗಳನ್ನು ಕೈಗೊಳ್ಳುವುದು. ಈ ಇಲಾಖೆಯು ವ್ಯಾಪಾರದಲ್ಲಿ ಉಪಯೋಗಿಸುವ ತೂಕ ಮತ್ತು ಅಳತೆಯ ಉಪಕರಣಗಳನ್ನು ಪ್ರತೀವರ್ಷ ಪರೀಕ್ಷಿಸುವುದರ ಜೊತೆಗೆ ಸರ್ಕಾರದಿಂದ ಅಂಗೀಕೃತವಾದ ಮುದ್ರೆಯನ್ನು ಉಪಕರಣಗಳ ಮೇಲೆ ಮುದ್ರಿಸುತ್ತದೆ. ಈ ಇಲಾಖೆಯು ತೂಕ ಮತ್ತು ಅಳತೆ ಪ್ರಮಾಣಗಳ ಅಧಿನಿಯಮ (ಪ್ಯಾಕ್ ಮಾಡಿದ ವಸ್ತುಗಳ) ನಿಯಮಗಳು 1977ನ್ನು ಕಾನೂನುಬದ್ಧವಾಗಿ ಜಾರಿಗೆ ತರುತ್ತಿದೆ. ಅದಕ್ಕೆ ಅನುಗುಣವಾಗಿ ಪ್ರತೀ ಒಬ್ಬ ತಯಾರಕನು ಮತ್ತು ಭಾಂಗಿ (ಪೊಟ್ಟಣ) ಕಟ್ಟುವವನು ಭಾಂಗಿಯ ಮೇಲೆ ತಯಾರಕನ ಹೆಸರು, ಪ್ಯಾಕ್ ಮಾಡುವವನ ಹೆಸರು, ಪ್ಯಾಕ್ ಮಾಡಿದ ದಿನಾಂಕ, ವಸ್ತು ವಿನಾ ನಿವ್ವಳ ತೂಕ ಮತ್ತು ಬೆಲೆ ಇವುಗಳನ್ನು ಸೂಚಿಸುವುದು ಶಾಸನರೀತ್ಯ ಕಡ್ಡಾಯ ಮಾಡಲಾಗಿದೆ. ಜಿಲ್ಲೆಯಲ್ಲಿ ಇಲಾಖೆಯ ಆಡಳಿತವನ್ನು ನೋಡಿಕೊಳ್ಳಲು 1962ರಲ್ಲಿ ಸಹಾಯಕ ನಿಯಂತ್ರಣಾಧಿಕಾರಿಗಳು, ತೂಕ ಮತ್ತು ಅಳತೆ ಇವರ ಕಚೇರಿಯನ್ನು ಪ್ರಾರಂಭಿಸಲಾಯಿತು. 1990ರಿಂದ ಕಚೇರಿಯ ಹೆಸರನ್ನು ಸಹಾಯಕ ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಎಂದು ಬದಲಾಯಿಸಲಾಗಿದೆ.

ಸಹಾಯಕ ನಿಯಂತ್ರಕರು ಕಾನೂನು ಮಾಪನ ಶಾಸ್ತ್ರ ಇವರು ವರದಿ ಮಾಡಿರುವಂತೆ 1989-90ರಲ್ಲಿ ಜಿಲ್ಲೆಯಲ್ಲಿ ಇಲಾಖೆಯ ನಿಯಂತ್ರಣಕ್ಕೆ ಒಳಪಡುವ ವ್ಯಾಪಾರಸ್ಥರ ಸಂಖ್ಯೆ 5,454; ಕೈಗಾರಿಕೆಗಳ ಸಂಖ್ಯೆ 10; ಪೆಟ್ರೋಲ್ ಬಂಕ್‌ಗಳ ಸಂಖ್ಯೆ 52; ಹಾಗೂ ಸರ್ಕಾರಿ ಸಂಸ್ಥೆಗಳ ಸಂಖ್ಯೆ 16. ಇದೇ ವರ್ಷದಲ್ಲಿ ಇಲಾಖೆಯ ಪರೀಕ್ಷೆಗೆ ಒಳಪಟ್ಟ, ಮುದ್ರೆ ಹಾಕಲ್ಪಟ್ಟ ಅಳತೆ ಮತ್ತು ತೂಕದ ಮಾಪನಗಳ ವಿವರ ಈ ರೀತಿ ಇರುವುದು: ತೂಕದ ಬಟ್ಟುಗಳು-31,483; ತೂಕದ ಉಪಕರಣಗಳು – 7,503; ಮತ್ತು ಅಳೆಯುವ ಉಪಕರಣಗಳು 11,978. ಇಲಾಖೆಯು 1987-88, 88-89, 89-90ರಲ್ಲಿ ಸಂಗ್ರಹಿಸಿದ ತಪಾಸಣಾ ಶುಲ್ಕ ಅನುಕ್ರಮವಾಗಿ ರೂ. 2.18 ಲಕ್ಷ, ರೂ. 2.34 ಲಕ್ಷ ಮತ್ತು ರೂ.2.08 ಲಕ್ಷ ಎಂದು ಕಂಡು ಬರುವುದು. ಕೊನೆಯ ವರ್ಷದಲ್ಲಿ (89-90) ನೆರೆಯ ದಕ್ಷಿಣ ಕನ್ನಡದ ಸುಳ್ಯ ತಾಲೂಕನ್ನು ಕೊಡಗಿನಲ್ಲಿರುವ ಕಚೇರಿಯಿಂದ ಪುತ್ತೂರು ಕಚೇರಿಗೆ ವರ್ಗಾಯಿಸಿದ್ದರಿಂದ ಶುಲ್ಕ ಕಡಿಮೆ ಆಯಿತು, ಎಂದು ವರದಿಯಾಗಿದೆ. ಕಾನೂನು ಮಾಪನ ಇಲಾಖೆಯು ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ತೂಕ ಮತ್ತು ಅಳತೆ ಅಧಿನಿಯಮವನ್ನು, ನಿಯಮಾವಳಿಗಳನ್ನು ಪರಿಪಾಲಿಸದ ಮತ್ತು ತೂಕ ಮತ್ತು ಅಳತೆ ಪ್ರಮಾಣ ಕಾಯಿದೆ (ಪ್ಯಾಕ್ ಮಾಡಿದ ವಸ್ತುಗಳು) 1977ರ ನಿಯಮಾವಳಿಗಳನ್ನು ಉಲ್ಲಂಘಿಸಿದ ತಪ್ಪಿತಸ್ಥರ ವಿರುದ್ಧ ಹೂಡಲಾದ ದಾವೆಗಳ ಸಂಖ್ಯೆ, ಸಂಗ್ರಹಿಸಿದ ದಂಡದ ಹಣ ಈ ರೀತಿ ಇರುವುದು :

1987-88—254 ದಾವೆಗಳ ಸಂಖ್ಯೆ (16,230 ರೂ. ದಂಡದ ಹಣ);1988-89—187 ದಾವೆಗಳ ಸಂಖ್ಯೆ

(14,850 ರೂ. ದಂಡದ ಹಣ); ಮತ್ತು 1989–90– 300 ದಾವೆಗಳ ಸಂಖ್ಯೆ (26,620 ರೂ. ದಂಡದ ಹಣ).

ತೂಕ ಮತ್ತು ಅಳತೆ ಪ್ರಮಾಣಗಳ ಕಾಯಿದೆ (ಪ್ಯಾಕ್ ಮಾಡಿದ ವಸ್ತುಗಳ ನಿಯಮ) : 1987–88 = 53 ದಾವೆಗಳ ಸಂಖ್ಯೆ ; ರೂ. 6,590 ದಂಡದ ಹಣ; 1988-89 = 117 ದಾವೆಗಳ ಸಂಖ್ಯೆ ; ರೂ. 18,350 ದಂಡದ ಹಣ; ಮತ್ತು 1989-90 = 75 ದಾವೆಗಳ ಸಂಖ್ಯೆ. ರೂ. 8,075 ದಂಡದ ಹಣ.

**ಗ್ರಾಹಕರ ವೇದಿಕೆ**

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಗ್ರಾಹಕರ ಕುಂದು ಕೊರತೆ ಮತ್ತು ಗ್ರಾಹಕ ಮಾರಾಟಗಾರರ ಮಧ್ಯದ ಅನೇಕ ಬಗೆಯ ವಿವಾದಗಳನ್ನು ಪರಿಹರಿಸಲು ಮತ್ತು ಗ್ರಾಹಕರಿಗೆ ಉಂಟಾದ ನಷ್ಟವನ್ನು ತುಂಬಿಕೊಡಲು ಗ್ರಾಹಕರ ವಿವಾದಗಳ ಪರಿಹಾರ ವೇದಿಕೆಗಳನ್ನು ವಿಭಾಗೀಯ ಮಟ್ಟದಲ್ಲಿ ರಚಿಸಲಾಗಿತ್ತು(1990). ಕೊಡಗು ಜಿಲ್ಲೆಗೆ ಸೀಮಿತವಾದಂತೆ ಪ್ರತ್ಯೇಕವಾದ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆಯು 1992ರ ಜನವರಿಯಲ್ಲಿ ಮಡಿಕೇರಿಯಲ್ಲಿ ರಚನೆಗೊಂಡಿದೆ. ಪ್ರಾರಂಭದಿಂದ (1990) 1992ರ ಮೇ ಕೊನೆಯವರೆಗೆ ವರದಿಯಾದಂತೆ ಜಿಲ್ಲೆಯಾದ್ಯಂತ ದಾಖಲಾದ ವಿವಾದಗಳ ಸಂಖ್ಯೆ 100. (ಇದರಲ್ಲಿ ಮೈಸೂರಿನಿಂದ ವರ್ಗಾವಣೆಯಾದ ವಿವಾದಗಳ ಸಂಖ್ಯೆ 52). 1992 ಮೇ ಕೊನೆಯವರೆಗೆ ತೀರ್ಮಾನಗೊಂಡ ವಿವಾದಗಳ ಸಂಖ್ಯೆ 48 ಎಂದು ವರದಿಯಾಗಿದೆ.

**ಉಗ್ರಾಣ ವ್ಯವಸ್ಥೆ**

ಸ್ಥಳೀಯ ಪರಿಸರಕ್ಕೆ ಅನುಗುಣವಾಗಿ ವಿವಿಧ ರೀತಿಯ ಆಹಾರ ಧಾನ್ಯಗಳನ್ನು ಕೆಡದಂತೆ ಅವುಗಳನ್ನು ಶೇಖರಿಸಿ ಇಡುವ ಕ್ರಮಗಳು ಬಹು ಹಿಂದಿನಿಂದಲೂ ವಿಶೇಷವಾಗಿ ವ್ಯವಸಾಯಗಾರರಲ್ಲಿ ಮತ್ತು ವರ್ತಕರಲ್ಲಿ ರೂಢಿಯಲ್ಲಿವೆ. ಸಾರ್ವಜನಿಕ ದಾಸ್ತಾನು ಮಳಿಗೆಯ ವ್ಯವಸ್ಥೆ ಇಂದಿನ ವಿಚಾರವಾಗಿದ್ದರೂ ಪ್ರಾಚೀನ ಕಾಲದಲ್ಲಿ ದೇವಾಲಯಗಳು ಸಾರ್ವಜನಿಕ ಗೋದಾಮುಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಅಲ್ಲದೇ ಭೂಕಂದಾಯವನ್ನು ವ್ಯವಸಾಯೋತ್ಪನ್ನಗಳ ರೂಪದಲ್ಲಿ ಸರ್ಕಾರ ವಸೂಲಿ ಮಾಡುತ್ತಿದ್ದಾಗ ಬೇರೆ ಬೇರೆ ಕೇಂದ್ರಗಳಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಉಗ್ರಾಣಗಳನ್ನು ಬಳಸುತ್ತಿದ್ದರು. 1928ರ ರಾಯಲ್ ಆಯೋಗದಿಂದ 1954ರ ವರೆಗಿನ ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷಾ ವರದಿ ಮುಂತಾದವುಗಳು ವ್ಯವಸಾಯ ಉತ್ಪನ್ನಗಳನ್ನು ಸುರಕ್ಷಿತವಾಗಿ ಶೇಖರಿಸಿಡಲು ಬೇಕಾಗುವ ಉಗ್ರಾಣ ವ್ಯವಸ್ಥೆ ಮತ್ತು ಅವುಗಳಿಗೆ ಸಂಬಂಧಿಸಿದ ಸ್ವಾಮಿತ್ವ ವರ್ಗಾವಣೆ ಪತ್ರಗಳ (ವೇರ್‌ಹೌಸ್ ರಸೀದಿಗಳು) ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರೂ ಅವುಗಳು ಕಾರ್ಯರೂಪಕ್ಕೆ ಬಂದದ್ದು ಇತ್ತೀಚೆಗೆ. 1956ರಲ್ಲಿ ವ್ಯವಸಾಯ ಉತ್ಪನ್ನ (ಅಭಿವೃದ್ಧಿ ಮತ್ತು ಉಗ್ರಾಣಗಳು) ನಿಗಮಗಳ ಅಧಿನಿಯಮ, (1962ರ ನಂತರ ಉಗ್ರಾಣ ನಿಗಮದ ಅಧಿನಿಯಮ) ಜಾರಿಗೆ ಬರುವಂತೆ ಮಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಆದ ಉಗ್ರಾಣಗಳ ನಿಗಮ ಸ್ಥಾಪನೆಗೆ ದಾರಿ ಮಾಡಿಕೊಟ್ಟವು.

ಉತ್ಪಾದಕರು ಮತ್ತು ವ್ಯಾಪಾರಸ್ಥರು ಹಣದ ತೊಂದರೆಯಲ್ಲಿದ್ದಾಗ ನಷ್ಟ ಮಾಡಿಕೊಂಡು ತಮ್ಮ ಫಸಲು/ಸಂಗ್ರಹವನ್ನು ಮಾರುವ ಬದಲಿಗೆ ಕೆಲವು ಕಾಲ ಉಗ್ರಾಣಗಳಲ್ಲಿ ಇಟ್ಟು ಆ ಬಗ್ಗೆ ಪಾವತಿ ಪಡೆದು (ವೇರ್‌ಹೌಸ್ ರಸೀದಿಗಳು) ಆ ಪಾವತಿಗಳನ್ನು ಅಡಮಾನವಾಗಿಟ್ಟು ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಬಹುದು. ಉಗ್ರಾಣಗಳಲ್ಲಿ ದಾಸ್ತಾನು ಇಟ್ಟ ಸರಕುಗಳ ಬಗ್ಗೆ ನಿಗಮವು ಕೊಡುವ ಪಾವತಿಯನ್ನು ಆಸ್ತಿ ವರ್ಗಾವಣಾ ಪತ್ರವಾಗಿ ಬಳಸಬಹುದು. ಈಗ ಉಗ್ರಾಣಗಳಲ್ಲಿ ಶೇಖರಿಸಲು ಸುಮಾರು 200 ವಿವಿಧ ಸರಕುಗಳು ಅಂಗೀಕೃತವಾಗಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು, ಹತ್ತಿ, ಸೆಣಬು, ಖಾದ್ಯ ಎಣ್ಣೆಗಳು, ಎಣ್ಣೆಕಾಳುಗಳು, ಗೊಬ್ಬರಗಳು, ವ್ಯವಸಾಯ ಸಲಕರಣೆಗಳು ಮತ್ತು ಇತರ ಅಂಗೀಕೃತ ಸರಕುಗಳು. ಗ್ರಾಮಾಂತರ ಸಹಕಾರಿ ಸಂಘಗಳಿಂದ ಅಥವಾ ವಾಣಿಜ್ಯ ಬ್ಯಾಂಕುಗಳಿಂದ ಬೆಳೆ ಸಾಲ ಪಡೆದ ಸಹಕಾರಿ ಸಂಘಗಳ ಸದಸ್ಯರು ತಮ್ಮ ಉತ್ಪನ್ನಗಳನ್ನು ಗ್ರಾಮೀಣ ಉಗ್ರಾಣಗಳಲ್ಲಿ ದಾಸ್ತಾನಾಗಿಟ್ಟು ಪಡೆದ ಪಾವತಿಯ ಆಧಾರದ ಮೇಲೆ ಮುಂಗಡಸಾಲ ಪಡೆದು ಬೆಳೆಸಾಲಗಳನ್ನು ಪಾವತಿ ಮಾಡಲು ಅವಕಾಶ ಇದೆ.

**ಸಹಕಾರಿ ಉಗ್ರಾಣಗಳು**

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉಗ್ರಾಣ ನಿಗಮಗಳಲ್ಲದೇ ಸಹಕಾರಿ ವಲಯದಲ್ಲಿ ವಿವಿಧ ಮಾರಾಟ ಮತ್ತು

ಸೇವಾ ನಿರತ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಸಮರ್ಪಕವಾದ ದಾಸ್ತಾನು ವ್ಯವಸ್ಥೆಯ ಸೌಕರ್ಯವನ್ನು ಒದಗಿಸುತ್ತಾ ಇವೆ. ಸಹಕಾರಿ ಸಂಘಗಳು ತಮ್ಮದೇ ಆದ ಉಗ್ರಾಣ ನಿರ್ಮಿಸಲು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಮತ್ತು ವ್ಯವಸಾಯೋತ್ಪನ್ನಗಳ ಮರು ಹಣಕಾಸಿನ ಅಭಿವೃದ್ಧಿ ನಿಗಮ ಸಂಸ್ಥೆಗಳು ಸಾಲದ ರೂಪದಲ್ಲಿ ಧನ ಸಹಾಯ ನೀಡುತ್ತವೆ.

ಕೊಡಗು ಜಿಲ್ಲೆಯಾದ್ಯಂತ 1990ರ ಕೊನೆಯಲ್ಲಿ ಇದ್ದಂತೆ ಮಂಜೂರಾದ ಗೋದಾಮುಗಳ ಸಂಖ್ಯೆ 176. ಆ ಪೈಕಿ 160 ಗೋದಾಮುಗಳ ಕೆಲಸ ಪೂರೈಸಲಾಗಿದೆ. ಮತ್ತು ಇವುಗಳು ಸಂಗ್ರಹಣಾ ಸಾಮರ್ಥ್ಯ 32,200 ಮೆ. ಟನ್ನುಗಳು ಎಂದು ವರದಿ ತಿಳಿಸುವುದು. ಗ್ರಾಮೀಣ ಗೋದಾಮುಗಳ ನಿರ್ಮಾಣಕ್ಕೆ ಪ್ರಾರಂಭದಿಂದ ಇದುವರೆಗೆ ಸಂದಾಯವಾದ ವೆಚ್ಚ ರೂ. 69.69 ಲಕ್ಷ. ಆದರಲ್ಲಿ ರೂ. 49.78 ಲಕ್ಷ ಸಾಲವಾಗಿದ್ದರೆ ಉಳಿದ ರೂ. 19.91 ಲಕ್ಷ ಸಹಾಯಧನ ವರದಿಯಾಗಿದೆ.